

ರಕ್ಷಾಪುಟ ಮೂರರಲ್ಲಿ
ಪಿ. ಆರ್. ತಿಪ್ಪೇಸ್ವಾಮಿಯವರ
ವರ್ಣ ಚಿತ್ರಗಳು

ಹೊಸತು

ನೆನ್ನೆದಿಯ ನಾಳೆ ನಮ್ಮದು

ಜೂನ್ ೨೦೦೦
ಬೆಲೆ : ರೂ. ೧೦



ವಿಶ್ವ ಪರಿಸರ ದಿನ ಜೂನ್ - ೫

ಹೊಸತು

ಒಳಗೇನಿದೆ.....

ಚಿತ್ರಗಳು : ಗುಜ್ಜಾರ್, ರವಿಕುಮಾರ್ ಅಜ್ಜೀಪುರ, ಹರಿಣಿ
ಮುಖಪುಟದ ಛಾಯಾಚಿತ್ರ : ಕೆ.ಪಿ. ಸ್ವಾಮಿ
ವಿನ್ಯಾಸ : ನವಕರ್ನಾಟಕ ವಿನ್ಯಾಸ ಕಚೇರಿ ಸಹಕಾರ : ಜಿ. ವಿ. ತೇಜೋವತಿ

ಶಿಕ್ಷಣವು ಅಗತ್ಯ ಸೇವೆಯೆಂಬುದನ್ನು ಕರ್ನಾಟಕದ ಕೃಷ್ಣ ಸರ್ಕಾರವು ಸಿದ್ಧಪಡಿಸಿದೆ. ಹೆಚ್ಚಿನ ಆದ್ಯತೆ ಕೊಟ್ಟು ಸೌಲಭ್ಯಗಳನ್ನು ಕಲ್ಪಿಸಿಕೊಡುವ ಮುಖಾಂತರ ಅಲ್ಲ; ಯಾವ ಜವಾಬ್ದಾರಿ ಸರ್ಕಾರವೂ ಹೋಗದ ನೀಚಮಟ್ಟಕ್ಕೆ ಇಳಿದು ಪ್ರೀ-ಯೂನಿವರ್ಸಿಟಿ ಹಂತದ ಶಿಕ್ಷಕರನ್ನು ಬಂಧಿಸಿ ಜೈಲಿಗೆ ತಳ್ಳುವುದರಿಂದ! ಈ ಘೋರ ಪಾತಕಕ್ಕೆ ಕೃಷ್ಣ-ವಿಶ್ವನಾಥ-ಹರೀಶಗೌಡ ದುಷ್ಟಕೂಟವು ತೀವ್ರವಾದ ಖಂಡನೆಗೆ ಅರ್ಹವಾಗಿದೆ. ಸರ್ವಾಧಿಕಾರಿ ಮನೋಭಾವ, ದುರಹಂಕಾರ, ಅಸಹನೆ ಮತ್ತು ಮೂರ್ಖತನಗಳು ಈ ತಿಂಗಳು ಜಾರಿಗೆ ತರಲಾದ ಅಗತ್ಯ ಸೇವಾ ಕಾಯಿದೆಯ ಹಿಂದೆ ತುಂಬಿಕೊಂಡಿವೆ. ಪ್ರಜಾಪ್ರಭುತ್ವ ಮಾದರಿಯ ಚಿಂತನೆ ಮತ್ತು ಕ್ರಿಯೆಗೆ ಕೃಷ್ಣ ಮಾನಸಿಕವಾಗಿ ಅಸಮರ್ಥರೆಂಬುದಕ್ಕೆ ಇದು ದೊಡ್ಡ ನಿದರ್ಶನ.

ಹಿಂದೆಂದೂ ನಮ್ಮ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಅಧ್ಯಾಪಕರು ಮುಷ್ಕರ ನಡೆಸಲಿಲ್ಲ ಅಥವಾ ಪರೀಕ್ಷೆಯ ಮೌಲ್ಯಮಾಪನಕ್ಕೆ ಬಹಿಷ್ಕಾರ ಹಾಕಲಿಲ್ಲವೆಂದು ಕೃಷ್ಣ ಭಾವಿಸಿದಂತಿದೆ. ಅವರ ಅಜ್ಞಾನಕ್ಕೆ ಕನಿಕರ ಪಡಬೇಕಾಗಿಲ್ಲ, ಅದಕ್ಕೆ ಛೀಮಾರಿ ಹಾಕಬೇಕು. ಹಿಂದೆಲ್ಲಾ ಅಂತಹ ಸಂದರ್ಭಗಳಲ್ಲಿ ಮಾತುಕತೆಗಳು ಜರುಗಿ ಸಮಸ್ಯೆಗಳು ಇತ್ಯರ್ಥವಾಗಿದ್ದುವು. ಒಂದು ಅಧ್ಯಾಪಕ ಸಂಘದೊಡನೆ ಸಂಧಾನ ನಡೆಸಲೊಲ್ಲದ ರಾಜಕೀಯ ನಾಯಕನ ಕಾರ್ಯವೈಖರಿ ಖಂಡಿತ ನಮ್ಮ ರಾಜ್ಯಕ್ಕೆ ಗೌರವ ತರುವುದಿಲ್ಲ, ಅದು ಅಯೋಗ್ಯ ಸರ್ಕಾರ ಎನಿಸಿಕೊಳ್ಳುತ್ತದೆ.

ಯಾವಾಗ ಮುಷ್ಕರ ನಡೆದರೂ ಪೋಷಕರು, ಮಾಧ್ಯಮಗಳು ಮತ್ತು ಸಮಾಜದ ಕೆಲವು ಹಿರಿಯ ಪ್ರಜ್ಞಾವಂತರು ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ತೊಂದರೆಯತ್ತ ಗಮನ ಸೆಳೆದು ಅಧ್ಯಾಪಕರನ್ನು ಟೀಕಿಸುತ್ತಾರೆ ಮತ್ತು ಬುದ್ಧಿ ಹೇಳುತ್ತಾರೆ. ಇದು ಅಪಥ್ಯವಲ್ಲ. ಆದರೆ ಆ ಒಂದು ಸಂಧಿಕಾಲ ಕಳೆದರೆ ಇವರೆಲ್ಲಾ ಮತ್ತೆ ಸಮಸ್ಯೆಯ ಬಗ್ಗೆ ಯಾವ ಆಸಕ್ತಿಯನ್ನೂ ತೋರುವುದಿಲ್ಲ, ಸರ್ಕಾರದ ಮೇಲೆ ಒತ್ತಾಯ ತರುವುದಿಲ್ಲ ಮತ್ತು ಅಧಿಕಾರಿಗಳ ಅಟ್ಟಹಾಸವನ್ನು ವಿಮರ್ಶಿಸುವುದಿಲ್ಲ. ಆದ್ದರಿಂದ ಅಧ್ಯಾಪಕರ ಮುಷ್ಕರವು ಮಾಮೂಲಾಗಿರುವಂತೆ ಈ ಪ್ರಜ್ಞಾವಲಯದ ಕಾಳಜಿಯೂ ಕೇವಲ ಮಾಮೂಲಿನ ಸಂಗತಿಯಾಗಿದೆ. ಅವರ ಮಧ್ಯಪ್ರವೇಶ ನಿರರ್ಥಕವಾಗದಿರಬೇಕಾದರೆ ಮೊದಲು ಅವರು ಸಮಸ್ಯೆ ಬೆಳೆದುಬಂದ ರೀತಿಯನ್ನು ಗುರುತಿಸಬೇಕು, ಪರಿಹಾರಕ್ಕೆ ನಿರಂತರವಾಗಿ ಕೆಲಸ ಮಾಡಬೇಕು.

ಪ್ರಸಕ್ತ ಸನ್ನಿವೇಶವು ಏಕಾಏಕಿ ಉದ್ಭವವಾದುದಲ್ಲ. ಅದಕ್ಕೆ ನಾಲ್ಕಾರು ವರ್ಷಗಳ ಹಿನ್ನೆಲೆಯಿದೆ. ಎರಡು ವರ್ಷಗಳ ಹಿಂದೆ ಇದೇ ರೀತಿ ಮೌಲ್ಯಮಾಪನ ಬಹಿಷ್ಕಾರ ಜಾರಿಗೆ ಬಂದಿದ್ದಾಗ ಸರ್ಕಾರವು ಸಮಸ್ಯೆಯ ಪರಿಹಾರ ಕಂಡುಹಿಡಿಯುವ ಆಶ್ವಾಸನೆ ನೀಡಿದ್ದಿತು. ಎರಡು ವರ್ಷ ಸರ್ಕಾರದ ಸಚಿವರು, ಅಧಿಕಾರಿಗಳು ಮತ್ತು ಸಮಾಜದ ಪ್ರಜ್ಞಾವಂತರು ಮಾಡಿದ್ದೇನು? ಯಾರೂ ದೊಣ್ಣೆ ಬೀಸುತ್ತಿಲ್ಲವೆಂದು ಗುಡುಂ ಎಂದು ಕೂತಿದ್ದರು. ಮುಖ್ಯಮಂತ್ರಿ ಕೃಷ್ಣ ಮಾಡಿದ್ದೇನು? ಹಿಂದಿನ ಒಂದು ಸಮಿತಿಯನ್ನು ಅನಾಯಾಸವಾಗಿ, ಏಕಪಕ್ಷೀಯವಾಗಿ ವಿಸರ್ಜಿಸಿದರು. ಅಧ್ಯಾಪಕರನ್ನು ಮಾತನಾಡಿಸಲಿಲ್ಲ. ಮಾತನಾಡಲು ಹೋದರೆ ಅನಾದರ ತೋರಿದರು. ಹೋಗಲಿ, ಎರಡು ವರ್ಷ ಆ ಸಮಿತಿ ಮಾಡಿದ್ದೇನು? ಒಮ್ಮೆಯೂ ಸಭೆ ಸೇರಲಿಲ್ಲ, ಸಮಸ್ಯೆಯನ್ನು ಚರ್ಚಿಸಲಿಲ್ಲ. ಅಲ್ಲಿ ದೊಡ್ಡ ಐ.ಎ.ಎಸ್. ತಿಮಿಂಗಲಗಳಿದ್ದುವು. ಅವರು ಹೇಗೂ ಸರ್ವಜ್ಞರು! ಅವರಿಂದ ಒಂದು ಚಿಕ್ಕ ಕೆಲಸ ಮಾಡಿಸಿಕೊಳ್ಳುವಷ್ಟು ಸಾಮರ್ಥ್ಯ ಕೃಷ್ಣ-ವಿಶ್ವನಾಥರಿಗೆ ಎಳ್ಳಷ್ಟೂ ಇಲ್ಲ. ಇವರು ಜನಪ್ರತಿನಿಧಿಗಳು, ರಾಜಕೀಯ ನಾಯಕರು! ಆ ಐ.ಎ.ಎಸ್.ನವರ ಪೈಕಿ ಕಚೇರಿಯಲ್ಲಿ ಕತೆ ಪುಸ್ತಕ ಓದುವ ಅಚಲರಿದ್ದಾರೆ, ಮೀಸೆ ಹುರಿ ಮಾಡಿಕೊಂಡು ಅಧ್ಯಾಪಕರನ್ನು ಅಮಾನತ್ತಿನಲ್ಲಿರಿಸುವ ಹಠಮಾರಿಗಳಿದ್ದಾರೆ, ಖಾಸಗಿ ಶಿಕ್ಷಣ ಸಂಸ್ಥೆಗಳ ಗುಲಾಮರಿದ್ದಾರೆ. ನಮ್ಮ ಮಂತ್ರಿಗಳಿಗೆ ಅವರನ್ನು ಕರೆಸಿ ನಿರ್ದೇಶನ ನೀಡುವ ಯೋಗ್ಯತೆಯೇ ಇಲ್ಲ. ಅಧ್ಯಾಪಕರನ್ನಾದರೆ ಜೈಲಿಗೆ ಕಳಿಸುವ ವೀರರು ಇವರು.

ಅಧ್ಯಾಪಕರು ಕೇಳಿದ್ದನ್ನೆಲ್ಲಾ ಸರ್ಕಾರ ಕೊಡಲೇಬೇಕೆಂದು ಇದರರ್ಥವಲ್ಲ. ಕೊಡಬೇಕಾದ್ದನ್ನು ಕೊಟ್ಟು, ಕೊಡಲಾಗದಿದ್ದುದಕ್ಕೆ ಕಾರಣ ಸಹಿತ ವಿವರಣೆ ನೀಡಬೇಕು. ಅಧ್ಯಾಪಕರನ್ನು ಕಸವೆಂದು ಕಾಣುವ ಐ.ಎ.ಎಸ್. ಅಧಿಕಾರಿಗಳು ಸರ್ಕಾರ ನಡೆಸುತ್ತಾರೋ, ಜನರಿಂದ ಆಯ್ಕೆಯಾದ ರಾಜಕೀಯ ವ್ಯಕ್ತಿಗಳು ಸರ್ಕಾರ ನಡೆಸುತ್ತಾರೋ? ಮಾಡಬೇಕಾದ ಕೆಲಸವನ್ನು ಸಕಾಲದಲ್ಲಿ ಮಾಡದೆ ಅಧ್ಯಾಪಕರನ್ನು ಮುಷ್ಕರಕ್ಕೆ ತಳ್ಳುವವರೇ ಸಚಿವರು ಮತ್ತು ಅಧಿಕಾರಿಗಳು. ಅದಕ್ಕೆ ಅವರಿಗೆ ಸಾರ್ವಜನಿಕರ ಬೆಂಬಲ, ಅಗತ್ಯ ಸೇವಾ ಕಾಯ್ದೆಯ ಜಾರಿ, ಅಧ್ಯಾಪಕರ ದಸ್ತಗಿರಿ, ಇತ್ಯಾದಿ! ಇದು ಕೇವಲ ಅಧ್ಯಾಪಕರ ಅಪನಿಂದೆಯಲ್ಲ, ಪ್ರಜಾಪ್ರಭುತ್ವವಾದಿ ಕ್ರಮದ ಬಗ್ಗೆ ತಾತ್ಸಾರದ ಧೋರಣೆ ಮತ್ತು ದುರ್ನಡತೆ. ಎಸ್ಮಾ ಜಾರಿಗೆ ತಂದವರು ಎಷ್ಟರಮಟ್ಟಿನವರು ಎಂಬುದು ಮುಚ್ಚಿಟ್ಟ ತಿಳಿವಳಿಕೆಯೇನಲ್ಲ. ಅಧ್ಯಾಪಕರು ಸಹ ಅಧಿಕಾರಿಗಳ ಚಮಚಾಗಿರಿಗೆ ಅವಕಾಶ ನೀಡದೆ ಪ್ರಜಾಪ್ರಭುತ್ವವಾದಿ ದಾರಿಯಲ್ಲಿ ಸಾಗಬೇಕಾಗಿದೆ, ಎಸ್ಮಾದಂತಹ ಆಳುವ ವರ್ಗದ ಆಯುಧಗಳನ್ನು ಬೂದಿ ಮಾಡಬೇಕಾಗಿದೆ.



ಸಂಪುಟ-೧ ಸಂಚಿಕೆ - ೧೧ ಜೂನ್ ೨೦೦೦

ಮುದ್ರಕ-ಪ್ರಕಾಶಕ

ಆರ್. ಎಸ್. ರಾಜಾರಾಮ್
ವ್ಯವಸ್ಥಾಪಕ ನಿರ್ದೇಶಕ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ.

ಮುದ್ರಣ

ನವಕರ್ನಾಟಕ ಪ್ರಿಂಟರ್ಸ್
೧೬೭ ಮತ್ತು ೧೬೮, ೧೦ನೇ ಮುಖ್ಯ ರಸ್ತೆ
೩ನೇ ಫೇಸ್, ಪೀಣ್ಯ ಕೈಗಾರಿಕಾ ಪ್ರದೇಶ
ಬೆಂಗಳೂರು - ೫೬೦ ೦೫೮
ದೂರವಾಣಿ : ೮೩೯೭೪೮೨೬

ಹೊಸತು ಕಚೇರಿಯ ವಿಳಾಸ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
೧೫, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಅಂ. ಪೆ. ೫೧೯೫
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು - ೫೬೦ ೦೦೧
ದೂರವಾಣಿ / ಫ್ಯಾಕ್ಸ್ : ೨೨೦೩೫೮೦ / ೮೧ / ೮೨
e-mail : nkp@bgl.vsnl.net.in

ವಿಶ್ವ ಪರಿಸರ ದಿನಾಚರಣೆ - ಜೂನ್ ೫

ಜಾಗತಿಕ ಪರಿಸರದ ಬಗ್ಗೆ ತೀವ್ರವಾದ ಕಾಳಜಿ ಮತ್ತು ಪ್ರಜ್ಞೆ ಸುಮಾರು ಮೂರು ದಶಕಗಳಿಂದ ಪ್ರಬಲವಾಗಿ ಬೆಳೆದಿದೆಯಷ್ಟೆ. ವಾಯುಮಾಲಿನ್ಯ, ಜಲಮಾಲಿನ್ಯ, ಹಸಿರುಮನೆ ಪರಿಣಾಮದಿಂದ ಭೂಮಿಯ ಉಷ್ಣತೆಯ ಏರಿಕೆ, ನೇರಳಾತೀತ ಕಿರಣಗಳನ್ನು ತಡೆಗಟ್ಟುವ ಓಜೋನ್ ಪದರದ ಬಿರುಕು - ಇವೇ ಮುಂತಾದ ಸಮಸ್ಯೆಗಳನ್ನು ಕುರಿತು ಗಂಭೀರವಾದ ಚಿಂತನೆ ಆರಂಭವಾಗಿದೆ. ೧೯೭೨ರಲ್ಲಿ ಸ್ಟಾಕ್‌ಹೋಮ್‌ನಲ್ಲಿ ವಿಶ್ವರಾಷ್ಟ್ರ ಸಂಸ್ಥೆ ಸಭೆ ಸೇರಿ ಪರಿಸರ ಸಂಬಂಧದ ವಿಷಯಗಳನ್ನು ಕುರಿತು ಸಮಾಲೋಚಿಸಿ ಪರಿಸರ ಸ್ಥಿತಿಯನ್ನು ಗಮನಿಸಿ ಸೂಕ್ತ ಯೋಜನೆಗಳನ್ನು ಹಮ್ಮಿಕೊಳ್ಳಲು ಪ್ರತ್ಯೇಕವಾದ ವ್ಯವಸ್ಥೆಯನ್ನೇ ಹುಟ್ಟುಹಾಕಿತು. ಇದೇ ವಿಶ್ವ ರಾಷ್ಟ್ರ ಸಂಸ್ಥೆಯ ಪರಿಸರ ಕಾರ್ಯಕ್ರಮ. ಈ ಸಂಸ್ಥೆ ಪ್ರತಿವರ್ಷ ಜೂನ್ ೫ರಂದು ಪರಿಸರ ದಿನಾಚರಣೆಗೆ ಕರೆಕೊಟ್ಟಿದೆ. ಅಲ್ಲದೆ, ಪ್ರತಿ ವರ್ಷವೂ ಪ್ರತ್ಯೇಕವಾದ ಘೋಷಣೆಯನ್ನು ನೀಡಿ ಕಾರ್ಯಕ್ರಮಗಳನ್ನು ರೂಪಿಸಲು ಸಹಾಯ ಮಾಡುತ್ತಿದೆ.

ಪರಿಸರದ ಸಮಸ್ಯೆಗಳು ಹತ್ತಾರು: ಬೆಳೆಯುತ್ತಿರುವ ಜನಸಂಖ್ಯೆಗೆ ಅಗತ್ಯವಾದ ವಸ್ತುಗಳನ್ನು ತಯಾರಿಸಲು ಕೈಗಾರಿಕಾ ಘಟಕಗಳು ಅವಶ್ಯಕ. ಅಣೆಕಟ್ಟುಗಳ ನಿರ್ಮಾಣವು ಶಕ್ತಿಯ ಉತ್ಪಾದನೆ ಹಾಗೂ ನೀರಾವರಿಗೆ ಅಗತ್ಯ. ಬೃಹತ್ ಯೋಜನೆಗಳನ್ನು ಹಮ್ಮಿಕೊಂಡಾಗ ಮುಳುಗಡೆ ಪ್ರದೇಶದ ಜನತೆಗೆ ಪುನರ್ವಸತಿ ಮತ್ತು ಉದ್ಯೋಗ ನಿರ್ಮಾಣಗಳಿಗೆ ತಂತ್ರಜ್ಞಾನದ ಅವಶ್ಯಕತೆ ಇರುವುದು ಸಹಜ. ಬೃಹತ್ ನೀರಾವರಿ, ವಿದ್ಯುದುತ್ಪಾದನೆ, ಬಂದರು ನಿರ್ಮಾಣ, ಮತ್ತಿತರ ಭಾರಿ ಯೋಜನೆಗಳ 'ಪರಿಸರ ಮೌಲ್ಯಮಾಪನ' ನಮ್ಮ ದೇಶದಲ್ಲಿ ಸುಮಾರು ೧೦ ವರ್ಷಗಳಿಂದ ನಡೆಯುತ್ತಿದೆ. ಈ ಮಾಪನ ಸರಿಯಾಗಿ ನಡೆಯಬೇಕಾದರೆ ಜವಾಬ್ದಾರಿಯನ್ನು ಸ್ವತಂತ್ರವಾಗಿರುವ ಸಂಸ್ಥೆಗಳಿಗೆ ವಹಿಸಬೇಕು.

ಪರಿಸರದ ಅವನತಿಯಿಂದ ಹೆಚ್ಚು ಹಾನಿಗೊಳಗಾಗುವವರು ಬಡಜನರೇ; ಶ್ರೀಮಂತರು ತಮ್ಮ ಹಣದ ಪ್ರಭಾವದಿಂದ ಸ್ವಲ್ಪಮಟ್ಟಿಗೆ ಮಾಲಿನ್ಯದ ಪರಿಣಾಮಗಳನ್ನು ನಿಭಾಯಿಸಿಕೊಳ್ಳುತ್ತಾರೆ. ಪರಿಸರ ಮಲಿನತೆಯಿಂದ ಉದ್ಭವಿಸುವ ಕಾಯಿಲೆಗಳಿಗೆ ತುತ್ತಾಗುವವರಲ್ಲಿ ಬಡವರೇ ಹೆಚ್ಚು. ಅರಣ್ಯನಾಶದಿಂದ, ಗಿಡಮರಗಳನ್ನು ಕಡಿಯುವುದರಿಂದ ಅಂತರ್ಜಲ ನಶಿಸಿದಾಗ ನೀರಿಗಾಗಿ ಪರದಾಡುವವರು ಈ ವರ್ಗದ ಜನರೇ. ಕುಡಿಯುವ ನೀರಿಗಾಗಿ ಅವರು ದೂರ ದೂರ ಕ್ರಮಿಸುವುದನ್ನು ನಾವು ನೋಡುತ್ತಿದ್ದೇವೆ. ಪರಿಸರ ಮಾಲಿನ್ಯದಿಂದ ತುಂಬಲಾರದ ನಷ್ಟವನ್ನು ಈ ವರ್ಗದ ಜನತೆ ಅನುಭವಿಸುತ್ತಾರೆ. ಅಂದಮೇಲೆ, ಪರಿಸರ ಸಂರಕ್ಷಣೆ ಆಂದೋಲನವನ್ನು ನಡೆಸಬೇಕಾದ್ದು ಈ ವರ್ಗ. ಪರಿಸರದ ಬಗ್ಗೆ ಕಾಳಜಿ ಕೇವಲ ಶ್ರೀಮಂತರ ಹವ್ಯಾಸವಾಗಬಾರದು; ಪರಿಸರ ಚಳುವಳಿ ಜನತಾ ಚಳುವಳಿಯಾಗಬೇಕು.

ಕೆಲವು ವರ್ಷಗಳ ಹಿಂದೆ ಯೂನೆಪ್ 'ವಿನಾಶವಿಲ್ಲದ ಅಭಿವೃದ್ಧಿ' ಎಂಬ ಘೋಷಣೆಯನ್ನು ಸಾರಿತು. ಪರಿಸರ ನಾಶವಾಗದಂತೆ ಅಭಿವೃದ್ಧಿಯನ್ನು ಸಾಧಿಸುವ ಮಾರ್ಗೋಪಾಯಗಳನ್ನು ಅನುಸರಿಸಬೇಕೆಂಬುದು ಈ ಘೋಷಣೆಯ ಅರ್ಥ. ಇತ್ತೀಚಿನ ದಿನಗಳಲ್ಲಿ ಪರಿಸರವಾದಿಗಳು ಮತ್ತು ಅಭಿವೃದ್ಧಿ ತಜ್ಞರು ತಿಕ್ಕಾಟದಲ್ಲಿ ತೊಡಗಿರುವುದು ದಿನನಿತ್ಯದ ಸಂಗತಿಯಾಗಿದೆ. ಪರಿಸರವಾದಿಗಳು ಯೋಜನೆಗಳಿಗೆ ಅಡ್ಡಿಮಾಡಿ ತಡೆಯೊಡ್ಡುತ್ತಾರೆಂದು ಅಭಿವೃದ್ಧಿ ಪರಿಣತರು ದೂಷಿಸುವುದುಂಟು. ಅಭಿವೃದ್ಧಿ ಯೋಜನೆಗಳಿಂದ ಪರಿಸರ ನಾಶವಾಗುತ್ತಿದೆಯೆಂದು ಪರಿಸರವಾದಿಗಳ ಕೂಗು ಹಾಗೂ ಚಳುವಳಿ. ಅಭಿವೃದ್ಧಿ ಮತ್ತು ಪರಿಸರ ಪರಸ್ಪರ ವಿರೋಧಿಗಳೇ? ಪರಿಸರ ಸಂರಕ್ಷಣೆಯೂ ಆಗಬೇಕು, ಅಭಿವೃದ್ಧಿಯೂ ಆಗಬೇಕು. ಇದು ಹೇಗೆ ಸಾಧ್ಯ? ಈ ಎರಡೂ ಬಣದ ಉತ್ಸಾಹಿಗಳು ಸಮಾಜದ ಹಿತದೃಷ್ಟಿಯಿಂದಲೇ ಪ್ರೇರೇಪಿತರೆಂದು ಭಾವಿಸೋಣ. ಪರಿಸರದ ನಾಶವಿಲ್ಲದೆ ಅಭಿವೃದ್ಧಿಯನ್ನು ತರುವುದು ಸಾಧ್ಯವೆ? ಯಾವುದೇ ಬೃಹತ್ ಯೋಜನೆಯಿಂದ ಸ್ವಲ್ಪಮಟ್ಟಿಗೆ ಪರಿಸರ ಬದಲಾವಣೆಯಾಗುವುದು ನಿಜ. ಸಾಧ್ಯವಾದಷ್ಟು ಘರ್ಷಣೆಯನ್ನು ತಪ್ಪಿಸಲು ಹಲವೊಂದು ಮಾರ್ಗಗಳನ್ನು ರೂಪಿಸಬೇಕಾಗುತ್ತದೆ. 'ಅಭಿವೃದ್ಧಿ' ಎಂದರೇನು? ಹಾಗೆಂದರೆ ಕೇವಲ ಆರ್ಥಿಕ ಉತ್ಪಾದನೆಯೆಂದು ಪರಿಗಣಿಸುವುದೇ ಈ ಘರ್ಷಣೆಗೆ ಮೂಲ. ಉತ್ಪಾದನೆ ಅಧಿಕವಾದರೆ ಅದರ ಲಾಭ ಎಲ್ಲ ಜನರಿಗೂ ಲಭಿಸುತ್ತದೆಯೆಂಬುದು ಹಳೆಯ ಸವಕಲಾದ ಆರ್ಥಿಕ ವಾದ. ಕರ್ನಾಟಕದ ವಿದ್ಯುಚ್ಛಕ್ತಿ ಉತ್ಪಾದನೆಯ ಉದಾಹರಣೆಯನ್ನು ತೆಗೆದುಕೊಳ್ಳೋಣ. ಹಲವು ವರ್ಷಗಳ ಹಿಂದೆ ಸಮೀಕ್ಷೆ ನಡೆಸಿದಾಗ ಕೇವಲ ಶೇಕಡಾ ೧೦ರಷ್ಟು ವಿದ್ಯುಚ್ಛಕ್ತಿ ಮಾತ್ರ ಗ್ರಾಮೀಣ ಪ್ರದೇಶಗಳಲ್ಲಿ ಬಳಕೆಯಾಗುತ್ತಿದ್ದುದು ಕಂಡುಬಂದಿತು. ಅಧಿಕ ಉತ್ಪಾದನೆಯಿಂದ ಗ್ರಾಮೀಣ ಜನತೆಗೆ ವಿದ್ಯುಚ್ಛಕ್ತಿ ಸೌಲಭ್ಯ ಹೆಚ್ಚಾಗಿ ದೊರಕುವುದೆಂದು ಹೇಳಲು ಸಾಧ್ಯವೇ? ಅಧಿಕ ವಿದ್ಯುಚ್ಛಕ್ತಿಯ ಉತ್ಪಾದನೆ ಐಷಾರಾಮಿನ ಜೀವನ ನಡೆಸುವ ನಗರವಾಸಿ ಶ್ರೀಮಂತರ ಪಾಲಾಗುವುದಿಲ್ಲವೆಂದು ಹೇಗೆ ಹೇಳುವುದು? ಪರಿಸರವಾದಿಗಳ ಮತ್ತು ಅಭಿವೃದ್ಧಿ ಪರಿಣತರ ನಡುವಿನ ವೈಷಮ್ಯವನ್ನು ಕಡಿಮೆಯಾಗಿಸಲು ಹಲವು ಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಬಹುದು. ಬೃಹತ್ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಮುನ್ನ ಯೋಜನೆಗಳ ಸಂಪೂರ್ಣ ಸಾಮಾಜಿಕ ಲಾಭ-ನಷ್ಟಗಳನ್ನು ಕುರಿತು ಆ ಪ್ರದೇಶದ ಜನತೆಗೆ ಮಾಹಿತಿ ನೀಡಬೇಕು. ಅದೇ ಫಲವನ್ನು ಚಿಕ್ಕ ಚಿಕ್ಕ ಯೋಜನೆಗಳಿಂದ ಪಡೆಯಬಹುದೇ ಎಂಬ ಬದಲಿ ವ್ಯವಸ್ಥೆಯೂ ಬೇಕು. ಬೃಹತ್ ವಿದ್ಯುತ್ ಉತ್ಪಾದನಾ ಕೇಂದ್ರಗಳ ಬದಲು ಸಣ್ಣ ಪ್ರಮಾಣದ ತಯಾರಿಕಾ ಘಟಕಗಳ ಉಪಯುಕ್ತತೆಯನ್ನು ಪರಿಶೀಲಿಸಬಹುದು. ಬೃಹತ್ ಯೋಜನೆಗೆ ಪರ್ಯಾಯವಾಗಿ ಸಣ್ಣ ಪ್ರಮಾಣದ ಯೋಜನೆಗಳನ್ನು ಕುರಿತು ಕೂಲಂಕಷವಾದ ಅಧ್ಯಯನವನ್ನು ಕೈಗೆತ್ತಿಕೊಳ್ಳುವುದು ಆರಂಭವಾಗಬೇಕು. ಈ ಎರಡು ವಿಭಿನ್ನ ಮಾರ್ಗಗಳಲ್ಲಿ ತಗಲುವ ಖರ್ಚುವೆಚ್ಚಗಳು, ಫಲಿಸುವ ಲಾಭ-ನಷ್ಟಗಳು, ಸಂತ್ರಸ್ತ ಜನರಿಗೆ ಲಭಿಸಬಹುದಾದ ಅನುಕೂಲ-ಅನಾನುಕೂಲಗಳು, ಮರುವಸತಿಗೆ ಅಗತ್ಯವಾದ ಖರ್ಚು - ಇವುಗಳನ್ನು ಯೋಜನೆಯ ಅನುಷ್ಠಾನಕ್ಕೆ ಮೊದಲೇ ಆ ಪ್ರದೇಶದ ಜನರೊಡನೆ ವಿಪುಲವಾಗಿ ಚರ್ಚಿಸಿ ಅವರ ಮನವೊಲಿಸಿಕೊಳ್ಳಬೇಕು.

ಇನ್ನು ಜಾಗತಿಕ ಸನ್ನಿವೇಶದಲ್ಲಿ ಪರಿಸರದ ಸಮಸ್ಯೆಗಳನ್ನು ಗಮನಿಸೋಣ. ಈ ವಿಷಯವಾಗಿ ಬ್ರೆಜಿಲ್ ದೇಶದ ರಿಯೊ ಡಿ ಜೆನಿರೊದಲ್ಲಿ ಭೂ ಶೃಂಗ ಸಭೆ ನಡೆದು ಹಲವು ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು. ೧೭೮ ರಾಷ್ಟ್ರಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಪಾಲ್ಗೊಂಡವು. ಸಮಾವೇಶದಲ್ಲಿ ವಿಭಿನ್ನ ಧೋರಣೆ ತಾಳಿದ ಎರಡು ರಾಷ್ಟ್ರಗಳ ಗುಂಪು ಕಂಡವು; ಉತ್ತರ ಗೋಲಾರ್ಧದಲ್ಲಿ ಹರಡಿದ್ದು ತಂತ್ರಜ್ಞಾನದಲ್ಲಿ ಮುಂದುವರಿದ ಶ್ರೀಮಂತ ರಾಷ್ಟ್ರಗಳು ಮತ್ತು ದಕ್ಷಿಣ ಭಾಗದಲ್ಲಿ ನೆಲೆಸಿರುವ,

ತಂತ್ರಜ್ಞಾನದಲ್ಲಿ ಅಷ್ಟೊಂದು ಮುಂದುವರಿಯದ ಬಡರಾಷ್ಟ್ರಗಳು. ಪರಿಸರವನ್ನು ಹಾಳುಗೆಡವುದರಲ್ಲಿ ಈ ಎರಡು ಗುಂಪುಗಳ ಪಾಲು ಭಿನ್ನವಾದುದು. ಶ್ರೀಮಂತ ರಾಷ್ಟ್ರಗಳ ಜನತೆ ಐಷಾರಾಮಿನ ಜೀವನ ನಡೆಸಿ ಮಾಲಿನ್ಯವನ್ನೂ ವಾಯುಗುಣ ಬದಲಾವಣೆಯನ್ನೂ ಹೆಚ್ಚಿಸಿದೆ. ಶ್ರೀಮಂತ ರಾಷ್ಟ್ರಗಳಿಗೆ, ಅದರಲ್ಲೂ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ದಕ್ಷಿಣದ ರಾಷ್ಟ್ರಗಳ ಸಂಪನ್ಮೂಲಗಳ ಮೇಲೆ ಕಣ್ಣು. ಇದಲ್ಲದೆ ವಾಯುಗುಣ ಹಾಳಾಗದಂತೆ ನೋಡಿಕೊಳ್ಳಲು ರಿಯೊ ಅಧಿವೇಶನದಲ್ಲಿ ಕಠಿಣ ಷರತ್ತುಗಳನ್ನೊಳಗೊಂಡ ಒಪ್ಪಂದವನ್ನು ಮಂಡಿಸಲಾಯಿತು. ಅಭಿವೃದ್ಧಿಶೀಲ ರಾಷ್ಟ್ರಗಳು ಈ ಒಪ್ಪಂದಕ್ಕೆ ಅಸ್ತು ಎಂದರೂ ಅಮೆರಿಕಾ ದೇಶದ ಪ್ರತಿನಿಧಿಗಳು ಒಪ್ಪಲಿಲ್ಲ. ಇಂಥ ಒಪ್ಪಂದಗಳಿಂದ ತಮ್ಮ ಜೀವನ ಶೈಲಿಗೆ ಧಕ್ಕೆಯುಂಟಾಗುತ್ತದೆಯೆಂಬುದು ಅಮೆರಿಕನ್ನರ ನಿಲುವಾಗಿತ್ತು. ಹೀಗಾಗಿ, ಜಾಗತಿಕ ಮಟ್ಟದಲ್ಲಿ ರಾಷ್ಟ್ರಗಳ ನಡುವೆ ಜೀವವೈವಿಧ್ಯವನ್ನು ಕಾಪಾಡಿಕೊಂಡು ಬರುವ, ವಾಯುಮಾಲಿನ್ಯವನ್ನು ತಡೆಗಟ್ಟುವ ಕ್ರಮಗಳನ್ನು ಹಮ್ಮಿಕೊಳ್ಳಲು ಒಮ್ಮತವೇರ್ಪಟ್ಟಿಲ್ಲದಿರುವುದು ಶೋಚನೀಯ. ಪರಿಸ್ಥಿತಿ ಬದಲಾಗಬಹುದು. ಅಭಿವೃದ್ಧಿಶೀಲ ರಾಷ್ಟ್ರಗಳು ಸಾಕಷ್ಟು ಒತ್ತಾಯಿಸಿದರೆ ಉತ್ತರದ ರಾಷ್ಟ್ರಗಳು ಒಪ್ಪಂದಗಳಿಗೆ ಸಹಿ ಹಾಕಬಹುದು.

– ಎಂ. ಎ. ಸೇತುರಾವ್

ಎಲ್ಲರೂ ಸಭ್ಯರೇ, ಆದರೆ.......

ಕ್ರಿಕೆಟ್ ಲೋಕದ ಅವ್ಯವಹಾರಗಳು ಪತ್ರಿಕೆಗಳ ಸಂಪಾದಕೀಯ ಲೇಖನಗಳಿಗೆ ವಸ್ತುವಾಗಬಹುದೆಂಬ ನಿರೀಕ್ಷೆ ಬಹುಮಟ್ಟಿಗೆ ಇರಲಿಲ್ಲ. ಹೆಚ್ಚು ಕಡಿಮೆ ಎಲ್ಲ ದೇಶಗಳ ಆಟಗಾರರಲ್ಲೂ ಕರಿಹುಳುಗಳು ಹುಟ್ಟಿಕೊಂಡಿರುವುದು ಆಟೋಟದ ಸಾಮ್ರಾಜ್ಯದ ವ್ಯಾಪಾರೀಕರಣದ ಪ್ರಭಾವ. ಎಷ್ಟೋ ದಶಕಗಳಿಂದ ಕಾಲ್ಚೆಂಡು, ಹಾಕಿ, ರಗ್ಬಿ, ಬ್ಯಾಸ್ಕೆಟ್‌ಬಾಲ್, ಮುಂತಾದ ಆಟಗಳಲ್ಲಿ ತೀವ್ರವಾದ ಸೆಣಸಾಟಗಳು ನಡೆಯುತ್ತಾ ಬಂದಿವೆ. ಅಲ್ಲಿಯೂ ಜೂಜಿನ ಪ್ರಸಂಗಗಳು ಇದ್ದದ್ದೇ. ಆದರೆ ಗೆಲ್ಲುವ ಬದಲು ಸೋಲಲು ಆಟಗಾರರು ಹಣ ಪಡೆಯಲು ಆರಂಭಿಸಿದ್ದು ಕ್ರಿಕೆಟ್ಟಿನ ಮಹಾನ್ ಕಾಣಿಕೆ! ಹಿಂದೆಂದೋ ಬಾಕ್ಸಿಂಗ್‌ನಲ್ಲಿ ಇಂತಹ ಕುಪದ್ಧತಿ ಇತ್ತೆಂದು ಹೇಳುತ್ತಾರೆ. ಆದರೆ ''ಜೆಂಟಲ್‌ಮನ್''ಗಳೇ ಆಡುತ್ತಾರೆಂದು ಪ್ರತೀತಿ ಇರುವ ಕ್ರಿಕೆಟ್ಟಿನಲ್ಲಿ ಈ ಪಿಡುಗು ಸಾರ್ವತ್ರಿಕವಾದಂತಿದೆ.

ಸಿನಿಮಾ ಸ್ಟಾರುಗಳಂತೆ ಕ್ರಿಕೆಟ್ಟಿಗರೂ ಬಟ್ಟೆ, ಸೋಪು, ಸುಗಂಧ ದ್ರವ್ಯ, ಮಾದಕ ಪಾನೀಯ ಮುಂತಾದುವಕ್ಕೆ ಜಾಹಿರಾತು ಪಟುಗಳಾಗಿದ್ದಾರೆ. ಆ ಸ್ಟಾರುಗಳು ಕಪ್ಪುಹಣ ತುಂಬಿಕೊಂಡರೆ ಇವರೇಕೆ ಮಾಡಬಾರದು? ಸಿನಿಮಾ ಸ್ಟಾರುಗಳು ದಾವೂದ್ ಇಬ್ರಾಹಿಂ ಮುಂದೆ ಕುಣಿಯಲು ದುಬೈನಲ್ಲಿ ಧುಮುಕುತ್ತಾರೆ, ನಜರು ಒಪ್ಪಿಸಿ ಹಿಂದಿರುಗುತ್ತಾರೆ. ಭೂಗತ ಪ್ರಪಂಚದ ದೊರೆಗಳು ತಮ್ಮ ಮಾರಕಾಸ್ತ್ರಗಳನ್ನು ಸಂಭಾವಿತ ಸಿನಿಮಾ ಸ್ಟಾರುಗಳ ಮನೆಗಳಲ್ಲಿ ಮುಚ್ಚಿಡುತ್ತಾರೆ. ಸಿಕ್ಕಿಹಾಕಿಕೊಂಡಾಗ ತಾವು ಸುಸಂಸ್ಕೃತರೆಂದು ಜನರ ಬಳಿ ಅಂಗಲಾಚುತ್ತಾರೆ. ನಮ್ಮ ಕ್ರಿಕೆಟ್ ಲೋಕದ ವಿದ್ಯಮಾನವೂ ಇದರ ಹತ್ತಿರಕ್ಕೆ ಬರುತ್ತಿರುವುದು ಶೋಚನೀಯ.

ಕಪಿಲ್‌ದೇವನಂತಹ ಪಟು ತಾನೇನೂ ಮಾಡಿಲ್ಲವೆಂದು ಹೇಳಿಕೊಳ್ಳುವ ಪರಿ ನೋಡಿದರೆ ಶೇಕ್ಸ್‌ಪಿಯರ್ ಹ್ಯಾಮ್ಲೆಟ್‌ನ ಅಮ್ಮನ ಬಗ್ಗೆ ಹೇಳಿದ್ದ ಮಾತು ನೆನಪಿಗೆ ಬರುತ್ತದೆ: ಓ, ಈಕೆ ಏಕೋ ಏನೋ ವಿಪರೀತವಾಗಿ ತನ್ನ ಸಭ್ಯತೆಯ ಬಗ್ಗೆ ಹೇಳಿಕೊಳ್ಳುತ್ತಿದ್ದಾಳೆ! (ಅಂದರೆ, ಈಕೆಯನ್ನು ಗುಮಾನಿಯಿಂದ ನೋಡುವುದು ಅನಿವಾರ್ಯವಾಗಿದೆ). ಕಪಿಲ್ ಪರವಾಗಿ ವಿವಿಧ ಮತಧರ್ಮಗಳ ಗುರುಗಳು ಒಟ್ಟಾಗಿ ಸೇರಿ ದೆಹಲಿಯಲ್ಲಿ ಒಂದು ಮೆರವಣಿಗೆ ತೆಗೆದಿದ್ದಾರೆಂದರೆ ನಮ್ಮ ಕ್ರಿಕೆಟ್ ಪಟುಗಳ ಸಂಘಟನಾ ಚಾತುರ್ಯವನ್ನು ಮೆಚ್ಚಲೇಬೇಕು. ಮತೀಯ ಗಲಭೆಗಳಾದಾಗ ಕೂಡ ಈ ಗುರುಗಳೆಲ್ಲಾ ಒಟ್ಟಾಗಿ ಸೇರಿ ಮಾನವೀಯ ಸದ್ಗುಣಗಳ ಪರವಾಗಿ ಮನವಿ ನೀಡಿದ್ದು ಕಡಿಮೆ! ಬೇರೆಲ್ಲಾ ಹಣದ ಜೊತೆಗೆ ಇನ್ನೊಂದು ರೀತಿಯ ಆದಾಯವನ್ನು ಗಳಿಸುವ ಹುನ್ನಾರದಲ್ಲಿರುವ ಆಟಗಾರರನ್ನು ಕಳೆದ ದಶಕದಲ್ಲಷ್ಟೇ ನೋಡಲಾರಂಭಿಸಿದ್ದೇವೆ. ಬೆಂಗಳೂರು ಮಹಾನಗರಪಾಲಿಕೆಯ ನೌಕರ ಮತ್ತು ಆತನಂತಹ ಉದ್ಯೋಗಿಗಳಿಗೆ ಇಲ್ಲದ ನಿಯತ್ತು ತನಗೇಕೆ ಬೇಕೆಂದು ಕ್ರಿಕೆಟ್ಟಿನ ಗಟ್ಟಿಗರು ತೀರ್ಮಾನಿಸಿದ್ದರೆ ಆಶ್ಚರ್ಯವೇನಿಲ್ಲ. ಇದರಲ್ಲಿ ದೇಶದ ಪ್ರಶ್ನೆ, ರಾಷ್ಟ್ರದ ಪ್ರತಿನಿಧಿಯಾಗಿ ಹೆಮ್ಮೆ ಇತ್ಯಾದಿಗಳೆಲ್ಲಾ ಗೌಣ. ನಿಷ್ಠೆ ಇರುವುದು ಪಾಪಿ ಪೆಪ್ಸಿಗೆ, ಕುತ್ಸಿತ ಕೋಲಾಕ್ಕೆ, ವಿಷದ ವಿಲ್ಸ್‌ಗೆ, ತುಟ್ಟಿಯಾದ ನೈಕ್‌ಗೆ ಮತ್ತು ಕುತ್ತು ತರುವ ಕಿಂಗ್‌ಫಿಶರ್‌ಗೆ. ರಾಷ್ಟ್ರವನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೆ ಮಾರಿಬಿಡುವ ತರಾತುರಿಯಲ್ಲಿರುವ ರಾಷ್ಟ್ರೀಯ ನಾಯಕರ ಸಾಲಿನಲ್ಲಿ ನಮ್ಮ ಕ್ರಿಕೆಟ್ಟಿಗರೂ ರಂಜಿಸಲು ಹಾತೊರೆದರೆ ಅದು ಸ್ವಾಭಾವಿಕವೇನೋ!

ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಅಗ್ರಸ್ಥಾನವನ್ನು ಪಡೆಯುವ ಬಹುಮುಖ ಪ್ರತಿಭೆಯ ಒಬ್ಬಾಕೆ ಇದ್ದಾಳೆ. ಅಮೆರಿಕಾದವಳು. ಆಫ್ರಿಕನ್-ಅಮೆರಿಕನ್ ಎಂದು ಕರೆಸಿಕೊಳ್ಳುವ ಕಪ್ಪು ಜನಾಂಗದವಳು. ಒಲಿಂಪಿಕ್ಸ್‌ನಂತಹ ಕ್ರೀಡೆಗಳಲ್ಲಿ ಆಕೆ ಪ್ರಥಮ ಸ್ಥಾನ ಪಡೆದು ಪದಕ ಗಿಟ್ಟಿಸಿದಾಗೆಲ್ಲಾ ಆಕೆಯ ರಾಷ್ಟ್ರದ ದೊಡ್ಡ ಧ್ವಜವನ್ನು ಹಿಡಿದು ಕ್ರೀಡಾಂಗಣದ ಸುತ್ತ ಓಡುವುದು ಆಕೆಯ ಪದ್ಧತಿ. ಅದನ್ನು ಕಂಡು ಎಷ್ಟೋ ಜನ ಆಕೆಯನ್ನು ಶ್ಲಾಘಿಸುತ್ತಾರೆ: ಅಬ್ಬಾ, ಎಂತಹ ದೇಶಾಭಿಮಾನ! ಇದಲ್ಲವೇ ದೇಶದ ಬಗೆಗಿನ ಹೆಮ್ಮೆ, ಎಂದು. ಆದರೆ ಎಲ್ಲರಿಗೂ ತಿಳಿಯದ ಒಂದು ಕುತೂಹಲಕಾರಿ ಸಂಗತಿಯಿದೆ. ಅದೇನೆಂದರೆ, ಬಾವುಟ ಹಿಡಿದು ಒಂದು ಸುತ್ತು ಓಡಿದರೆ ಇಂತಿಷ್ಟು ಲಕ್ಷ ಡಾಲರುಗಳನ್ನು ನಿನಗೆ ಕೊಡುತ್ತೇವೆಂದು ಮೊದಲೇ ಯಾವುದೋ ಕಂಪೆನಿ ಆಕೆಯೊಡನೆ ಒಪ್ಪಂದ ಮಾಡಿಕೊಂಡಿರುತ್ತದೆ. ಆಕೆ ಗೆದ್ದು ಹಣ ಗಳಿಸಿದರೆ ನಮ್ಮ ಕ್ರಿಕೆಟಿಗರು ಸೋಲಲು ಒಪ್ಪಂದ ಮಾಡಿಕೊಳ್ಳುತ್ತಾರೆಂದು ತೋರುತ್ತದೆ. ಆ ಕಾರಣಕ್ಕೆ ಇವರಿಗೆ ಹಣ ಕೊಡಲು ಮುಂದಾಗುವವರು ಎಂತಹ ದಡ್ಡ ಜೂಜುಕಾರರೆಂದು ಅಚ್ಚರಿಯಾಗುತ್ತದೆ. ಹೇಗೂ ಸೋಲುವ ಸ್ವಶಕ್ತಿ ಇರುವವರಿಗೂ ಪ್ರೇರಣೆಯ ಧನ ಏಕೆ?

ಇದಕ್ಕೆ ಪರ್ಯಾಯವಾಗಿ ಉದಾತ್ತ ಘಟನೆಗಳೂ ಇವೆ. ಅಲ್ಲಿ ಹಣದ ಮಾತೇ ಇಲ್ಲ. ಧ್ಯಾನ್‌ಚಂದ್ ನಮ್ಮ ಹಾಕಿ ಮಾಂತ್ರಿಕನಾಗಿ ಮಾಡಿದ ಖಾಸಗಿ ಆಸ್ತಿ ಎಷ್ಟು? ಆದರೆ ಆಗ ''ಮೂರ್ಖಪೆಟ್ಟಿಗೆ'' (ದುರ್ದರ್ಶನ ಅಥವಾ ಟಿ.ವಿ.) ಇರಲಿಲ್ಲ, ಪೆಪ್ಸಿ-ಬೆಪ್ಸಿಗಳ ದಾಂಧಲೆ ಇರಲಿಲ್ಲ, ಎನ್ನುವ ಬುದ್ಧಿವಂತ ವಿಮರ್ಶಕರಿದ್ದಾರೆ. ಇರಬಹುದು, ಆದರೆ ಗೆಲ್ಲುವ ಛಾತಿ ಇತ್ತು, ತಂತ್ರವಿತ್ತು, ಹುಮ್ಮಸ್ಸಿತ್ತು. ಪಗಡೆಯಿಂದ ಹಿಡಿದು ಯಾವ ಆಟದಲ್ಲಾದರೂ ಜೂಜಿಗೆ ಅವಕಾಶವಿದೆ; ಆದರೆ ಅದೇ ಪ್ರಮುಖವಾಗುವುದು ಇಂದಿನ ಕ್ರಿಕೆಟ್ಟಿನ ವಿಪರ್ಯಾಸ. ಡ್ರಗ್ಸ್ ತೆಗೆದುಕೊಂಡು ಗೆಲ್ಲುವವರಿರುವಾಗ ದುಡ್ಡು ತೆಗೆದುಕೊಂಡು ನಾವು ಸೋಲಬಾರದೇಕೆ, ಎನ್ನುವ ಆಟಗಾರರೂ ಕ್ಷಮಾರ್ಹರೇ ಇರಬೇಕು. ಇಲ್ಲದಿದ್ದರೆ ಅವರ ಪರವಾಗಿ ಮೆರವಣಿಗೆಗಳು ಏಕಾಗುತ್ತಿದ್ದವು!

ತಿಂಗಳ ಪತ್ರಿಕೆ
ಹೊಸತು
ನೆಮ್ಮದಿಯ ನಾಳೆ ನಮ್ಮದು
ನವಕರ್ನಾಟಕ ಪ್ರಕಾಶನ

ಚಂದಾ ವಿವರಗಳು

ಬಿಡಿ ಸಂಚಿಕೆ	ರೂ. ೧೦/-
ವಾರ್ಷಿಕ ಚಂದಾ	ರೂ. ೧೦೦/-
ಎರಡು ವರ್ಷಗಳಿಗೆ	ರೂ. ೧೮೦/-
ಮೂರು ವರ್ಷಗಳಿಗೆ	ರೂ. ೨೫೦/-

ನವಕರ್ನಾಟಕ ಶಾಖೆಗಳು

೫ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು-೫೬೦ ೦೦೯ ☏ : ೨೨೫೧೩೮೨
ಕೆಂಪೇಗೌಡ ವೃತ್ತದ ಬಳಿ
ಬೆಂಗಳೂರು - ೫೬೦ ೦೦೯ ☏ : ೨೮೭೨೩೮೫
ಕೆ. ಎಸ್. ಆರ್. ರಸ್ತೆ
ಮಂಗಳೂರು - ೫೭೫೦೦೧ ☏ : ೪೪೧೦೧೬
ರಾಮಸ್ವಾಮಿ ವೃತ್ತ
ಮೈಸೂರು - ೫೭೦೦೨೪ ☏ : ೪೨೪೦೯೪
ಸ್ಟೇಷನ್ ರಸ್ತೆ
ಗುಲ್ಬರ್ಗಾ - ೫೮೫೧೦೨ ☏ : ೨೪೩೭೨

ಮಾರ್ಮಿಕ ಲೇಖನ

ಮೇ ತಿಂಗಳ ಸಂಚಿಕೆಯಲ್ಲಿ ಬಿ. ಆರ್. ಪೋಲಿಸ್ ಪಾಟೀಲ ಅವರು ಬರೆದ ''ಕಲ್ಯಾಣ ಬಸವಣ್ಣ'' ಲೇಖನ ಮಾರ್ಮಿಕವಾಗಿತ್ತು. ಬಸವಣ್ಣರ ವಚನಗಳನ್ನು ಸಾರುತ್ತಾ ಲೇಖನವನ್ನು ಮುಂದೋಡಿಸುತ್ತಾ ಹೋಗಿದ್ದು ಉತ್ತಮವಾಗಿ ಓದಿಸಿಕೊಂಡಿತು. ಹಾಗೂ ಸಿ.ಪಿ.ಕೆ.ಯವರ ಹನಿಗವಿತೆಗಳು ತುಂಬಾ ಆಕರ್ಷಕವಾಗಿದ್ದವು. ಪತ್ರಿಕೆಯ ಮೆರಗು ಹೆಚ್ಚಿಸುವಲ್ಲಿ ಇಂತಹ ಹನಿಗವಿತೆಗಳು ಅತ್ಯಗತ್ಯ. ಪ್ರಕಟಿಸಿದ ಸಂಪಾದಕರಿಗೆ ಧನ್ಯವಾದಗಳು.

ಗುಳೇದಗುಡ್ಡ **ಮಲ್ಲಿಕಾರ್ಜುನ ಯೋ. ರಾಜನಾಳ**

ಸಕಾಲಿಕ

ಮೇ ೨೦೦೦ ಸಂಚಿಕೆಯ ''ಹೊಸತು''ವಿನ ಚರ್ಚೆ ಅಂಕಣದಲ್ಲಿ ಪ್ರಕಟವಾದ 'ಆತಂಕದ ನೆರಳಿನಲ್ಲಿ ಇಪ್ಪತ್ತೊಂದನೇ ಶತಮಾನದತ್ತ ಕರ್ನಾಟಕ' ಎಂಬ ರಾ.ನಂ. ಚಂದ್ರಶೇಖರ ಅವರ ಲೇಖನ ಸಕಾಲಿಕ ಮತ್ತು ವಾಸ್ತವಿಕವಾಗಿದೆ.

ಈ ಸಂಚಿಕೆಯ ಎಲ್ಲಾ ಬರವಣಿಗೆಗಳೂ ಚಿಂತನೆಗೆ ಹಚ್ಚುವಲ್ಲಿ ಯಶಸ್ವಿಯಾಗಿವೆ. ಕತೆ-ಕವನ-ಚುಟುಕು ವಿಚಾರ ಪ್ರಚೋದಕ.

ಸೇಡಂ **ಅಣ್ಣಾಸಾಗರ ಭೀಮಶಪ್ಪ**

ಪ್ರತಿಮೆಗಳು

ಮೇ ತಿಂಗಳ ''ಹೊಸತು''ವಿನ ಕೊನೆ ಪುಟದಲ್ಲಿ ಪ್ರಕಟವಾದ 'ಪ್ರತಿಮೆಗಳು' ಲೇಖನ ಚಿಕ್ಕದಾದರೂ ಚೊಕ್ಕವಾಗಿತ್ತು. ಡುಂಡಿರಾಜರ ಕವನವೂ ಅದಕ್ಕೆ ಸರಿ ಹೊಂದುವಂತಿತ್ತು. ಇವತ್ತು ಹೆಚ್ಚಿನ ಪ್ರತಿಮೆಗಳು ಆಯಾಯ ಜಾತಿಗೆ ಸೀಮಿತವಾಗಿರುವುದರಿಂದಲೇ ಗಲಭೆಗಳಾಗಲು ಕಾರಣ. ಬಸವಣ್ಣನವರನ್ನಾಗಲೀ ಅಂಬೇಡ್ಕರರನ್ನಾಗಲೀ ಎಲ್ಲರೂ ಪ್ರೀತಿಸುವಂತಾಗಬೇಕು. ಆಗಲೇ ಆ ಪ್ರತಿಮೆಗಳನ್ನು ನಿಲ್ಲಿಸಿದ್ದಕ್ಕೊಂದು ಅರ್ಥ ಬರುವುದು.


ಬೋಳೂರು **ಗಣೇಶ್ ಕುಮಾರ**

ದಲಿತ ಸಂಘಟನೆಗಳು ವೈಷಮ್ಯ ಮರೆಯಲಿ

ಮೇ ತಿಂಗಳ ಸಂಚಿಕೆಯಲ್ಲಿ 'ಕಂಬಾಲಪಲ್ಲಿ ದೌರ್ಜನ್ಯ'ದ ಬಗ್ಗೆ ತಾರಾನಾಥರ ಲೇಖನ ಓದಿದೆ. ದಲಿತರ ಮೇಲೆ ದಬ್ಬಾಳಿಕೆ ನಡೆಯುವಾಗ ಅವರೂ ನಮ್ಮ ಹಿಂದೂ ಸಮಾಜದ ಒಂದು ಅಂಗ ಎಂದು ಮರೆತಿರುವ ಈ ನಮ್ಮ ಪವಿತ್ರ ಹಿಂದೂ ಸಮಾಜವನ್ನು ಗುತ್ತಿಗೆ ಹಿಡಿದಿರುವ ಜನಗಳು ದಲಿತರೇನಾದರೂ ಮತಾಂತರ ವಾಗುವುದಾದರೆ ಕೂಡಲೇ ಎಚ್ಚೆತ್ತುಕೊಳ್ಳುತ್ತಾರೆ. ಈಗಿರುವ ಒಂದೇ ದಾರಿ ಏನೆಂದರೆ ದಲಿತ ಸಂಘಟನೆಗಳು ತಮ್ಮೊಳಗಿನ ವೈಷಮ್ಯ ಮರೆತು ಒಗ್ಗಟ್ಟಾಗಿರುವುದು.

ಬೈಕಂಪಾಡಿ **ಆಶಾ. ಜಿ**

ವಿಶ್ವ ಆರೋಗ್ಯ ಸಂಸ್ಥೆಯಲ್ಲಿ ಅಮರ್ತ್ಯ ಸೇನರ ಭಾಷಣವನ್ನು ಡಾ|| ಪ್ರಕಾಶ್ ಸಿ. ರಾವ್ ಅವರು ಲೇಖನರೂಪದಲ್ಲಿ ಸಿದ್ಧಗೊಳಿಸಿ ಕೊಟ್ಟಿದ್ದಾರೆ. ಸ್ಥಳಸಂಕೋಚದಿಂದಾಗಿ ಅದನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತಿಲ್ಲ, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. -ಸಂ



ಕಳೆದ ಸಂಚಿಕೆಯಲ್ಲಿ ಪ್ರಕಟವಾದ ''ಯಾರ ಹಿತಕ್ಕಾಗಿ ಬ್ಯಾಂಕ್ ಖಾಸಗೀಕರಣ''? ಎಂಬ ಲೇಖನದಲ್ಲಿ ನಷ್ಟದಲ್ಲಿರುವ ಬ್ಯಾಂಕುಗಳ ಪೈಕಿ 'ಇಂಡಿಯನ್ ಓವರ್ಸೀಸ್ ಬ್ಯಾಂಕ್'ನ್ನು ಉಲ್ಲೇಖಿಸಲಾಗಿದೆ. (ಪು. ೩೦). ಅದು ''ಇಂಡಿಯನ್ ಬ್ಯಾಂಕ್'' ಎಂದಿರಬೇಕು. ಈ ತಪ್ಪಿಗಾಗಿ ವಿಷಾದಿಸುತ್ತೇವೆ. **– ಸಂಪಾದಕ**

ಭಾಷೆ ಪ್ರೌಢವಾಗಿದೆ

''ಹೊಸತು'' ಮಾಸಪತ್ರಿಕೆಯನ್ನು ಆರಂಭದಿಂದಲೂ ಓದುತ್ತಾ ಇದ್ದೇನೆ. ಮುದ್ರಣ, ಕಾಗದ, ಮುಖಪುಟ, ವಿನ್ಯಾಸ ಎಲ್ಲವೂ ಅತ್ಯುತ್ತಮವಾಗಿವೆ. ಆದರೆ ಲೇಖನಗಳ ಭಾಷೆ, ಶೈಲಿ ಅತೀವ ಪ್ರೌಢವಾಗಿದ್ದು ಜನಸಾಮಾನ್ಯರಿಗೆ ತುಸು ಕಠಿಣವೆನಿಸಬಹುದೋ, ಏನೋ!

ಬೆಂಗಳೂರು **ಎಂ. ವಿ. ಭಟ್**

ಜನ ಆಂದೋಲನ ಮಾಡೋಣ

ಮೇ ತಿಂಗಳ ''ಹೊಸತು''ವನ್ನು ಓದಿ ಮನ ರಂಜಿಸಿತು. 'ಈ ತಿಂಗಳು' ಅಂಕಣದಲ್ಲಿ ಧರ್ಮಸಿಂಗ್ ರವರಿಗೆ ಬರೆದ ಪತ್ರಕ್ಕೆ ತಿಂಗಳೆರಡು ಕಳೆದರೂ ಉತ್ತರವಿಲ್ಲ. ಖಂಡಿತ ಇವರು ಕುಂಭಕರ್ಣನ ಒಡಹುಟ್ಟಿದವರು. ಇವರನ್ನು ವಿಚಾರಿಸಲು ನಾವು ಪ್ರಯತ್ನಪಡಬೇಕು. ಬರುವ ತಿಂಗಳು ಉತ್ತರವಿಲ್ಲದಿದ್ದರೂ 'ಹೊಸತು' ಓದುಗರೆಲ್ಲರೂ ಕೂಡಿ ಜನ ಆಂದೋಲನ ಮಾಡುವ ತಯಾರಿ ಮಾಡೋಣ.

ಆನೆಗುಂಡಿ **ಎ. ಆರ್. ಸಾಲಿಯಾನ್**

ಲೇಖನಗಳು ಚೆನ್ನಾಗಿವೆ

ಮೇ ತಿಂಗಳ ಸಂಚಿಕೆ ಚೆನ್ನಾಗಿತ್ತು. ಸಂಚಿಕೆಯಲ್ಲಿ ಸಂಪಾದಕೀಯ ನಿಜಕ್ಕೂ ತುಂಬಾ ಚೆನ್ನಾಗಿ ಮೂಡಿವೆ. ಹಾಗೂ ಲೇಖನಗಳು ಮತ್ತು ಕವನಗಳು ಕೂಡಾ ತುಂಬಾ ಚೆನ್ನಾಗಿವೆ. ಅದರಲ್ಲಿ ಬಸವೇಶ್ವರರ ಕಾಯಕವೇ ಕೈಲಾಸ, ಮೇ ದಿನದ ಸವಾಲುಗಳು, ಕಂಬಾಲಪಲ್ಲಿ ಘಟನೆ ಇಂತಹ ಅನೇಕ ಲೇಖನಗಳು ತುಂಬಾ ಚೆನ್ನಾಗಿದ್ದು ಓದುಗರಿಗೆ ಉಪಕಾರಿಯಾಗಿವೆ.

ಕಲಬುರ್ಗಿ **ಬಿ. ಎಚ್. ನಿರಗುಡಿ**

ಮುದ್ರಣ ದೋಷ

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಮಾರ್ಗ-ದೇಸಿ: ಸಂಸ್ಕೃತಿಗೊಂದು ಆಯಾಮ' ಎಂಬ ನನ್ನ ಲೇಖನದ ಕಡೆಯ ಪ್ಯಾರಾಗ್ರಾಫ್‌ನ ಮೊದಲ ವಾಕ್ಯದಲ್ಲಿ 'ಸಂಸ್ಕೃತ ಮುಖಿಯಾದ.......' ಎಂದು ಪ್ರಕಟವಾಗಿದೆ. ಅದನ್ನು ದಯಮಾಡಿ 'ಸಂಸ್ಕೃತಿ ಮುಖಿಯಾದ.......' ಎಂದು ಓದಿಕೊಳ್ಳಬೇಕೆಂದು ಸೂಚಿಸಬಯಸುತ್ತೇನೆ.

ಒಟ್ಟು ಲೇಖನಗಳು ಅಂದವಾಗಿ ಪ್ರಕಟವಾಗಿವೆ. ಇದರೊಂದಿಗೆ ಮೌಲಿಕತೆಯೂ ಸೇರಿ ತನ್ನ ತೂಕ ಹೆಚ್ಚುತ್ತಿದೆ. ಇದು ಡಾ|| ಜಿ. ಆರ್.ರವರ ಸಾರಥ್ಯದಲ್ಲಿ ಭವಿಷ್ಯಕ್ಕೂ ವಿಸ್ತರಿಸುತ್ತದೆಂಬ ನಂಬಿಕೆ ನನ್ನದು.

ಬೆಂಗಳೂರು **ಡಾ|| ಕಾ. ವೆಂ. ಶ್ರೀನಿವಾಸ ಮೂರ್ತಿ**

ಸಮಯಯೋಚಿತ ಲೇಖನ

ಮೇ ಸಂಚಿಕೆಯ ಹೊಸತುವಿನಲ್ಲಿ ಪ್ರಕಟವಾದ 'ಕಲ್ಯಾಣ ಬಸವಣ್ಣ' ಲೇಖನ, ಬಸವ ತತ್ವಗಳಿಗೆ ಬೇಲಿ ಹಾಕುತ್ತಿದ್ದ ಭಾರತೀಯರನ್ನು ಬಡಿದೆಬ್ಬಿಸಿದಂತಿತ್ತು. ಪಾಟೀಲ್‌ರವರ ಸ್ವರಚಿತ ಲಾವಣಿ ನುಡಿಗಳು ಮತ್ತು ವಚನಗಳು ಜಗಜ್ಯೋತಿ ಬಸವನ ಕಲ್ಯಾಣ ಗುಣಗಳನ್ನು ಸಾರುತ್ತವೆ. ಅಲ್ಲದೇ, ಲೇಖಕರು ಬಸವನನ್ನು ಬಣ್ಣಿಸಿದ ಭಾಷೆಯ ಶೈಲಿ ವಿಭಿನ್ನವಾಗಿತ್ತು. ಕೊನೆಗೆ ಲೇಖನ ಇನ್ನೂ ವಿಸ್ತಾರವಾಗಿರಬೇಕಿತ್ತು.

ಸಾಸ್ವೇಹಳ್ಳಿ **ಪ್ರ. ದೈವಜ್ಞಾಚಾರ್ಯ**

ಜುಲೈ ತಿಂಗಳ ಸಂಚಿಕೆಯಲ್ಲಿ

- ಜಾಗತೀಕರಣದ ಕೆಡುಕುಗಳು -*ಫಿಡೆಲ್ ಕ್ಯಾಸ್ಟ್ರೋ*
- ಜಲಕ್ಷಾಮ, ಅಣೆಕಟ್ಟು ಹಾಗೂ ಆತಂಕಗಳು -*ಬಿ. ಎಸ್. ಭವಾನಿಶಂಕರ್*
- ಮೌನಸುಂದರಿ (ಕತೆ) *ದು. ನಿಂ. ಬೆಳಗಲಿ*
- ಎಡ್ವರ್ಡ್ ಸಯಿದ್ - ಎಸ್. ಸುರೇಂದ್ರ
- ಅಂಡಮಾನಿನ ಕಡಲಗರ್ಭದೊಳಗೆ -ಡಾ|| ರಹಮತ್ ತರೀಕೆರೆ
- ದೇಗುಲ ಸಂಸ್ಕೃತಿ -*ರಾಮಲಿಂಗಪ್ಪ ಟಿ. ಬೇಗೂರು*
- ಇತ್ಯಾದಿ

ಐಕ್ಯವೊಂದೇ ಮಂತ್ರ

ಭಾರತ ದೇಶವಿಂದು ಗಾಢವಾದ ಬಿಕ್ಕಟ್ಟಿನಲ್ಲಿ ಸಿಲುಕಿ ನರಳಾಡುತ್ತಿದೆ. ನಮ್ಮ ಭವಿಷ್ಯದ ಮುಂದೆ ಅತಿ ದೊಡ್ಡ ಪ್ರಶ್ನಾರ್ಥಕ ಚಿನ್ಹೆಗಳು ಬಂದು ನಿಂತಿವೆ. ಆರ್ಥಿಕ ಸಮಾನತೆ, ರಾಜಕೀಯ ಸ್ಥಿರತೆ, ಸಾಮಾಜಿಕ ಸಾಮರಸ್ಯ, ಇವು ಬಹುಮುಖ್ಯ ಎಂಬ ಮಾತಿನಲ್ಲಿ ಯಾವುದೇ ಸಂಶಯವಿಲ್ಲ. ಐದು ಸಾವಿರ ವರ್ಷಗಳ ಭವ್ಯ ಪರಂಪರೆಯ ಬಗ್ಗೆ ಗರ್ವ ಹೊಂದಿರುವ ವರ್ಗ ಹಾಗೂ ಆಧುನಿಕತೆಯ ಸಂರಚನೆಯನ್ನು ಮೈಗೂಡಿಸಿಕೊಂಡಿರುವ ಜನಸಮೂಹ ೨೧ನೇ ಶತಮಾನಕ್ಕೆ ಕಾತುರಾತುರವಾಗಿ ತನ್ನ ಪಾದವನ್ನಿರಿಸಿದೆ. ಈ ಸಂದರ್ಭದಲ್ಲಿ ನಮಗೆ ನೂರಾರು ಗೋಜಲಿನ, ಉತ್ತರವಿಲ್ಲದ ಪ್ರಶ್ನೆಗಳು ಧುತ್ತನೆ ಎದುರಾಗುತ್ತವೆ.

ಪೂರ್ವಾಶ್ರಮದ ಪೂರ್ವಾಗ್ರಹಗಳು ಹಾಗೂ ಆಧುನಿಕತೆಯ ಅಂಧಾನುಕರಣೆಗಳನ್ನು ತಕ್ಕಡಿ ಯಲ್ಲಿ ತೂಗು ಹಾಕದೆ ಪಕ್ಕದಲ್ಲಿರಿಸಿ, ಈ ನಾಡಿನ ಅಭ್ಯುದಯಕ್ಕೆ ಕೊಂಚವೂ ಧಕ್ಕೆಯಾಗದಂತೆ ಜೀವನ ಸವೆಸುವ ದಾರಿಯನ್ನು ಹಸನುಗೊಳಿಸಿಕೊಳ್ಳಬೇಕಾದ ಗುರುತರ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ.

ಬದುಕಿನ ದಾರಿಯ ಮಧ್ಯೆ ಎದುರಾಗುವ ವ್ಯವಸ್ಥೆಯ ವಿರುದ್ಧ ಪ್ರಶ್ನಿಸದೆ ಪ್ರಜ್ಞೆ ಬೆಳೆಯುವುದಿಲ್ಲ. ಪ್ರಜ್ಞೆ ಇಲ್ಲದವರು ವೈಚಾರಿಕತೆಯನ್ನು ಬೆಳೆಸಲಾರರು. ಅದಕ್ಕೆ ಬದಲಾಗಿ ಅವರು ಮುನ್ನುಗ್ಗುವ ಸಮಾಜವನ್ನು ಹಿಂದಕ್ಕೆ ಅಂದರೆ ಬಹುದೂರಕ್ಕೆ ಬಲವಂತವಾಗಿ ಜಗ್ಗಿ ಜಗ್ಗಿ ಕಾಲ್ತೊಡರು ಕೊಟ್ಟು ಉರುಳಿಸುತ್ತಾರೆ. ಭವ್ಯ ಭಾರತದ ಇತಿಹಾಸ ಈ ಕಾಲ್ತೊಡರಿನ ಕಣ್ಣೀರಿನ ಕರುಣ ಕಥೆ.

ಮಾನವ ಸಂಕುಲದ ಮುನ್ನಡೆಗೆ ಮಾರಕವಾಗಿರುವ ನೂರಾರು ಕಟ್ಟುಪಾಡುಗಳು, ಜೀವನ ವಿರೋಧಿ ನೀತಿ ನಿಯಮಗಳು, ಜನರ ಭಾವನೆಯನ್ನು ಕೆರಳಿಸಿ ಸಮಾಜದ ಸಾಮರಸ್ಯಕ್ಕೆ ಧಕ್ಕೆ ತರುವ ಪಟ್ಟಭದ್ರ ಹಿತಾಸಕ್ತಿಗಳು, ನಮ್ಮ ಬೆನ್ನ ಹಿಂದೆಯೇ ಭೇತಾಳನಂತೆಯೇ ಬೆನ್ನಟ್ಟಿವೆ. ಪರಸ್ಪರರಲ್ಲಿ ಮೂಡಿರುವ ವೈಷಮ್ಯಕ್ಕೆ ಕಾರಣವಾದ ದುಷ್ಟ ಶಕ್ತಿಗಳ ನಿಗ್ರಹ ೨೧ನೇ ಶತಮಾನದಲ್ಲಿ ಸಾಧ್ಯವೇ?

ಈ ಸಮಾಜದ ಸಂರಚನೆಗೆ ಸ್ವಲ್ಪಮಟ್ಟಿಗೆ ಕಾರಣರಾದ ನಮ್ಮ ಹಿರಿಯ ತಲೆಮಾರಿನವರನ್ನು ನಂಬಿ ಬೆಳೆಯುತ್ತಿರುವ ಯುವ ವಿದ್ಯಾರ್ಥಿ ಸಮೂಹ ಹಾಗೂ ನಕ್ಕು ನಲಿದಾಡುತ್ತಿರುವ ಎಳೆಯ ಮುಗ್ಧ ಕಂದಮ್ಮಗಳು ಇವರ ಕಣ್ಣಿಗೆ ಗೋಚರಿಸುವುದೇ ಇಲ್ಲವೇನು? ಹಿರಿಯರ ಅದಮ್ಯ ವಿಚಾರಧಾರೆ ಹಾಗೂ ಅವರ ಅಪಾರ ಬುದ್ಧಿಶಕ್ತಿಯ ಮುಂದೆ ಈ ಮಕ್ಕಳ ಭವಿಷ್ಯದ ಕುರಿತು ಚಿಂತನೆಗಳಿಲ್ಲವೆ?

ಮೊಟ್ಟಮೊದಲು ನಾವು ದೇಶದ ಸರ್ವಾಂಗೀಣ ಅಭಿವೃದ್ಧಿಯ ಕನಸು ಕಾಣಬೇಕಾದರೆ ಆರ್ಥಿಕ ಕ್ಷೇತ್ರದ ಬೆಳವಣಿಗೆಗೆ ಕಂಕಣಬದ್ಧರಾಗಬೇಕಾಗುತ್ತದೆ. ಸ್ವಾವಲಂಬಿ ರಾಷ್ಟ್ರದ ಪರಿಕಲ್ಪನೆಗೆ ರಹದಾರಿ ಹುಡುಕಿ ಆ ನಿಟ್ಟಿನಲ್ಲಿ ದೇಶದ ಪ್ರತಿಯೊಬ್ಬರೂ ಕಾರ್ಯನಿರತರಾದರೆ ಅದು ಖಂಡಿತ ಸಾಧ್ಯ. ಬೇರೆ ಬೇರೆ ದೇಶಗಳು ತಮ್ಮದೇ ಆದ ಆರ್ಥಿಕ ನೀತಿಗಳನ್ನು ಅವಲಂಬಿಸಿವೆ. ಪ್ರತಿಯೊಂದು ದೇಶದಲ್ಲೂ ಒಂದು ಸುನಿಶ್ಚಿತ ಚೌಕಟ್ಟಿನೊಳಗೇ ಆರ್ಥಿಕ ವ್ಯವಸ್ಥೆಯ ದಿಕ್ಸೂಚಿಯನ್ನು ರೂಪಿಸಿಕೊಂಡರೆ, ನಮ್ಮ ದೇಶದ ದಿಕ್ಸೂಚಿಯ ದಿಕ್ಕು ಬದಲಾಗಿ, ಸಾಮಾನ್ಯ ಜನರ ಬದುಕು ಬವಣೀಯಗೊಳ್ಳುತ್ತಿದೆ.

ಹೊಸ ಶತಮಾನದಲ್ಲಿ ಆರ್ಥಿಕ ಸ್ವಾವಲಂಬನೆ ಸಾಧಿಸುವತ್ತ ಹೆಜ್ಜೆ ಇಡಲೇಬೇಕು. ದೇಶದಲ್ಲಿ ವಿಪುಲವಾಗಿ ದೊರೆಯುವ ಆರ್ಥಿಕ ಸಂಪನ್ಮೂಲಗಳ ವ್ಯವಸ್ಥಿತ ಸದುಪಯೋಗದ ಹೊರತು ಬೇರಾವ ಕ್ರಮಗಳಿಂದ ಆರ್ಥಿಕಾಭಿವೃದ್ಧಿ ಅಸಾಧ್ಯ. ೧೨ನೇ ಶತಮಾನದಲ್ಲಿ ಸಮಾಜವಾದಿ ನೀತಿಗೆ ಪ್ರೇರಕರೆಂಬಂತೆ ಜನ್ಮ ತಳೆದ ಮಾನವತಾವಾದಿ ಬಸವಣ್ಣನ ಮೂಲ ಮಂತ್ರ ''ಕಾಯಕವೇ ಕೈಲಾಸ.'' ಇದು ಹೊಸ ಶತಮಾನದಲ್ಲಿ ಸಾಕಾರಗೊಂಡರೆ ದೇಶ ಸಮತೋಲನ ಕಾಯ್ದುಕೊಳ್ಳುವುದರಲ್ಲಿ ಎರಡು ಮಾತಿಲ್ಲ.

ಆರ್ಥಿಕ ಉದಾರೀಕರಣ ಹಾಗೂ ಖಾಸಗೀಕರಣದ ದುಷ್ಪರಿಣಾಮವು ಈಗಲೇ ಊಹೆಗೆ ನಿಲುಕದಷ್ಟು ಪ್ರಭಾವ ಬೀರಿದೆ. ಜೊತೆಗೆ ಭವಿಷ್ಯದ ಗಾಢಾಂಧಕಾರದ ಮುನ್ಸೂಚನೆ ನೀಡಿದೆ. ಖಾಸಗೀಕರಣವೇ ಎಲ್ಲದಕ್ಕೂ ಮದ್ದು ಎಂಬಂತೆ ಸರ್ಕಾರಗಳ ಯೋಚನೆಗಳು ಹಾಗೂ ಯೋಜನೆಗಳು ಮುಂದುವರಿಯುತ್ತಿವೆ. ಆರ್ಥಿಕವಾಗಿ ಹಿಂದುಳಿದವರಿಗಂತೂ ಇದರಿಂದ ಯಾವುದೇ ರೀತಿಯ ಲಾಭವಿಲ್ಲ. ಈ ಕ್ರಮಗಳಿಂದ ಹೆಚ್ಚಿನ ಪ್ರತಿಕೂಲ ಪರಿಣಾಮವೇ ಹೆಚ್ಚು.

ಇದನ್ನೆಲ್ಲ ಗಮನಿಸಿದರೆ, ನಮ್ಮ ದೇಶವೇನೂ ಇದಕ್ಕೆ ಹೊರತಲ್ಲ.

ಹಳೆಯ ಚಪ್ಪಲಿ ಬಿಸಾಡಿ : ಜಾತಿ, ಕೋಮುವಾದಗಳ ಹೆಸರಿನ ಸವೆದ ಹಳೆಯ ಚಪ್ಪಲಿಗಳನ್ನು ಬಿಟ್ಟು ಇಂದಿನ ಸಹಸ್ರಮಾನದಲ್ಲಿ ದೇದೀಪ್ಯಮಾನವಾದ ಜನರ ವಿಚಾರಗಳೆಡೆ ಹೋಗಬೇಕಾಗಿದೆ. ಜನಮಾನಸವನ್ನು ಸಮತಾ ಸಮಾಜವಾದದೆಡೆ ಒಯ್ಯಬೇಕೇ ವಿನಾ ಶಿಲಾಯುಗದ ಇತಿಹಾಸದೆಡೆಗಲ್ಲ. ಹಿಮ್ಮುಖ ಚಾಲನೆ ಬಹಳ ಅಪಾಯಕಾರಿ.

ಈ ಸಂದರ್ಭದಲ್ಲಿ ಡಾ|| ಅಂಬೇಡ್ಕರರ ಮಾತು ವಿಚಾರ ಯೋಗ್ಯವಾಗಿದೆ: ''ನಿಮ್ಮ ದಾಸ್ಯವನ್ನು ನೀವೇ ತೊಡೆದು ಹಾಕಿಕೊಳ್ಳಬೇಕು. ಇದಕ್ಕಾಗಿ ದೇವರನ್ನಾಗಲೀ ಅಥವಾ ಯಾವನಾದರೂ ಅತಿಮಾನವನನ್ನಾಗಲೀ ಅವಲಂಬಿಸಬೇಡಿ. ನಿಮ್ಮ ವಿಮೋಚನೆ ರಾಜಕೀಯ ಅಧಿಕಾರದಲ್ಲಿಯೇ ಹೊರತು ತೀರ್ಥಯಾತ್ರೆಗಳಿಂದಾಗಲೀ, ಉಪವಾಸಗಳಿಂದಾಗಲೀ ಖಂಡಿತ ಸಾಧ್ಯವಿಲ್ಲ. ಧರ್ಮಗ್ರಂಥಗಳನ್ನು ಅತಿಯಾಗಿ ನಂಬಿ ಕುಳಿತರೆ ಗುಲಾಮಗಿರಿಯಾಗಲೀ ಬಡತನವಾಗಲೀ ನೀಗುವುದಿಲ್ಲ. ಅನೇಕ ಪೀಳಿಗೆಗಳಿಂದ ನಿಮ್ಮ ಪೂರ್ವಜರು ಇದನ್ನೆಲ್ಲ ಮಾಡುತ್ತಾ ಬಂದಿದ್ದಾರೆ. ಆದರೂ ಪರಿಹಾರ ದೊರಕಿಲ್ಲ. ಕಷ್ಟ ಕಾರ್ಪಣ್ಯವುಳ್ಳ ನಿಮ್ಮ ಜೀವನದಲ್ಲಿ ಸ್ವಲ್ಪವೂ ವ್ಯತ್ಯಾಸವಾಗಿಲ್ಲ. ನಿಮ್ಮ ಪೂರ್ವಜರಂತೆಯೇ ನೀವೂ ಸಹ ಇತರರು ಎಸೆದ ಎಂಜಲು ತಿಂದು ಬದುಕುತ್ತಿದ್ದೀರಿ, ಅವರ ಹಾಗೆಯೇ ಕೊಳಚೆ ಪ್ರದೇಶಗಳ ಚರಂಡಿಯಲ್ಲಿ ಬಿದ್ದು ನರಳುತ್ತಿದ್ದೀರಿ. ನಿಮ್ಮ ಧಾರ್ಮಿಕ ಉಪವಾಸಗಳು, ಆಚಾರ ವಿಚಾರಗಳು, ಪ್ರಾರ್ಥನೆಗಳು ನಿಮ್ಮನ್ನು ಹೊಟ್ಟೆಗಿಲ್ಲದ ಸ್ಥಿತಿಯಿಂದ ಕಾಪಾಡಿಲ್ಲ''.

ಮಂದಿರ, ಮಸೀದಿ, ಚರ್ಚುಗಳನ್ನೊಡೆದು ಸ್ನೇಹ ಬಾಂಧವ್ಯ ರೂಪಿಸುವುದು ಅಪಹಾಸ್ಯವಾದೀತು. ಸದ್ಯದ ರಾಜಕೀಯ ಸ್ಥಿತಿಗೆ ಬಂದಾಗ ಯಾವ ಸಿದ್ಧಾಂತವನ್ನು ನೆಚ್ಚಿಕೊಂಡ ಪಕ್ಷವೇ ಇರಲಿ, ಅವರು ಈ ರಾಷ್ಟ್ರವನ್ನು ಆಳಲು ಅರ್ಹರು ಎಂದೆನ್ನಿಸಿಕೊಳ್ಳಬೇಕಾದರೆ, ಜನತಂತ್ರ ಮತ್ತು ದೇಶದ ಗರಿಮೆ ಹೆಚ್ಚಿಸಲು ಜಾತ್ಯಾತೀತ ನಿಲುವಿಗೆ ಬದ್ಧರಾಗಲೇಬೇಕಾಗುತ್ತದೆ. ತಮ್ಮ ಪೂರ್ವಾಶ್ರಮದ ಪೂರ್ವಾಗ್ರಹಗಳನ್ನು ಪಕ್ಕದಲ್ಲಿರಿಸಿ ಈ ನಾಡಿನ ಬಹುಜನರ ಉತ್ಕಟ ಆಶಯವಾದ ಜಾತ್ಯತೀತ ನಿಲುವಿಗೆ ಧಕ್ಕೆಯಾಗದಂತೆ ಎಚ್ಚರ ವಹಿಸಬೇಕಾಗುತ್ತದೆ. ಅದಕ್ಕೆ ಕುಂದುಂಟಾದರೆ ವ್ಯವಸ್ಥೆಯ ಚಲನಶೀಲ ಉಸಿರೇ ಕಟ್ಟಿದಂತಾಗುತ್ತದೆ.

ನಮ್ಮ ಶಿಕ್ಷಣ ತಜ್ಞರು ಎಂದೆಂದೂ ಮರಳಿಬಾರದ ಗತ ವೈಭವಗಳ ಕುರಿತು ಕಾಳಜಿ ವಹಿಸುವುದನ್ನು ಬಿಟ್ಟು ನಾಳೆ ನಮ್ಮ ಎಳೆಯರು ಅಂತರಿಕ್ಷದ ಇತರ ಗ್ರಹಗಳ ಜೀವಿಗಳೊಡನೆ ಹೊಂದಿ ಬಾಳುವ ಕುರಿತು ಚಿಂತಿಸಬೇಕು.

ಮೂರು ಬಿಟ್ಟು ಬದುಕುವವರ ಕಸುಬಿನಂತೆ ಒಡೆಯನ ಮುಂದೆ ಜೊಲ್ಲು ಸುರಿಸಿ, ಇತಿಹಾಸವನ್ನು ತಿರುಚಿ ಬರೆಯುವವರ ಸಂಖ್ಯೆ ಹೆಚ್ಚಾಗಿ, ಅಪಾಯಕಾರಿ ವಿಷವಸ್ತುವನ್ನು ಮೂರನೆಯ ಸಹಸ್ರಮಾನದ ನಾಗರಿಕರಾಗಿ ಬಾಳಿ ಬದುಕಬೇಕಾದ ಕನಸಿನ ಕುಡಿಗಳ ಮೆದು ಹೃದಯಕ್ಕೆ ತುಂಬಿದರೆ ಆಗಬಹುದಾದ ಪರಿಣಾಮ ಅಪ್ಪಿಷ್ಟಲ್ಲ.

ಡಿ. ೬ರಂದು ಹಾರೆ, ಡೈನಮೈಟ್ ಹಾಕಿ ಕಾವಿ ಪಡೆಯ ಕರಸೇವಕರು ಉರುಳಿಸಿದುದು ಕೇವಲ ಪುರಾತನ ಮಸೀದಿಯ ಮೂರು ಗುಮ್ಮಟಗಳನ್ನು ಮಾತ್ರವಲ್ಲ; ಅಂದು ಉರುಳಿದ್ದು ಸಂವಿಧಾನ, ಕಾನೂನು, ನ್ಯಾಯಬದ್ಧ ಆಳ್ವಿಕೆ ಎಂಬ ಮೂರು ಗಟ್ಟಿ ನಿಲುವಿನ ಗುಮ್ಮಟಗಳೆಂಬುದನ್ನು ಯಾರೂ ಮರೆಯಕೂಡದು. ಸಂವಿಧಾನ ಶಿಲ್ಪಿ, ಜಾತ್ಯತೀತ ಪರಿಕಲ್ಪನೆಯ ಮೂರ್ತಸ್ವರೂಪ, ಶೋಷಣೆ, ದಬ್ಬಾಳಿಕೆ, ಹಿಂಸೆಗಳ ಮೆಟ್ಟಿ ನಿಂತ ಧೀರೋದಾತ್ತ ಅಮರ ಜ್ಯೋತಿ ಅಂಬೇಡ್ಕರರ ಸ್ಮಾರಕ ದಿನವೂ ಆಗಿದ್ದ ದಿನವೇ ಒಂದು ಸ್ಮಾರಕವನ್ನು ಉರುಳಿಸಿ ಜಗತ್ತಿನೆದುರು ತಲೆ ತಗ್ಗಿಸುವ ಇನ್ನೊಂದು ಸ್ಮಾರಕ ನಿರ್ಮಾಣ ಮಾಡಲಾಯಿತು. ಇದೊಂದು ದುರಂತ.

ಪ್ರಾಚೀನ ಕಾಲದಿಂದಲೂ ಈ ನಾಡಿನಲ್ಲಿ ಎಲ್ಲರನ್ನೂ ಭೇದ ಭಾವವಿಲ್ಲದೆ ಸಲಹಿದ, ಇಂದಿಗೂ ಸಲಹುತ್ತಿರುವ, ಮುಂದೆಯೂ ಸಲಹುವ ಉದಾತ್ತ ಹೃದಯದ ತಾಯಿ ಭಾರತ ಮಾತೆಯ ಕಾರುಣ್ಯ ಪ್ರಸಾದ ಮುಂದೆಯೂ ದೊರೆಯುವಂತೆ ಸರ್ವರ ಪ್ರಯತ್ನ ತಗ್ಗು ಮನೋವರ್ತನೆಯಲ್ಲಿದೆ ಎಂಬುದನ್ನು ತಿಳಿಯಬೇಕಾಗಿದೆ. ಕವಿ ಕಯ್ಯಾರ ಕಿಂಞಣ್ಣ ರೈ ಪ್ರತಿಪಾದಿಸಿದಂತೆ,

ಐಕ್ಯವೊಂದೇ ಮಂತ್ರ! ಐಕ್ಯದಿಂದ ಸ್ವತಂತ್ರ
ಐಕ್ಯಗಾನದಿ ರಾಷ್ಟ್ರ ತೇಲುತಿರಲಿ
ಭಾರತದಿ ಮರುಜನ್ಮ
ಸ್ವಾತಂತ್ರ್ಯವೇ ನಿಜ ಧರ್ಮ
ಒಕ್ಕೊರಳಿನುದ್ಘೋಷ ಕೇಳುತಿರಲಿ.

೨೧ನೇ ಶತಮಾನದಲ್ಲಿ ನಡೆಯಬೇಕೆಂದಾದರೆ ಸೈದ್ಧಾಂತಿಕವಾಗಿ ಪ್ರಜಾಪ್ರಭುತ್ವ ಜನಸಾಮಾನ್ಯರ ಪ್ರಭುತ್ವವಾಗಿರಬೇಕು. ಆದರೆ ಈಗ ನೋಡಿದರೆ ಪ್ರಬಲರ ಹಾಗೂ ಮತಾಂಧರ ನಿರಂಕುಶ ಪ್ರಭುತ್ವ ತನ್ನ ಕಬಂಧ ಬಾಹುಗಳನ್ನೆಲ್ಲಾಕಡೆ ಬೀಸಿದೆ.

— ಲಕ್ಷ್ಮಣ

ಆಲಮಟ್ಟಿ ಹೋರಾಟ – ಚೈತನ್ಯದ ಜೊತೆ ಚೆಲ್ಲಾಟ

ಆಲಮಟ್ಟಿ ಹೋರಾಟ ಮುಗಿದಿದೆ. ಸುಪ್ರೀಂಕೋರ್ಟ್ ತೀರ್ಪು ಬಂದಾಗಿದೆ. ಸಮಸ್ಯೆ ಒಂದು ಹಂತಕ್ಕೆ ಪರಿಹಾರಗೊಂಡಿದೆ. ಆದರೆ ಆಲಮಟ್ಟಿ ಹೋರಾಟದ ಸಂದರ್ಭದಲ್ಲಿ ಕೆಲವು ರಾಜಕಾರಣಿಗಳು ಹಾಗೂ ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಸಂಘಟನೆಗಳು ವಿಜಾಪುರ ಜನತೆಯ ಚೈತನ್ಯದ ಜೊತೆ ಆಡಿದ ಚೆಲ್ಲಾಟ ಮಾತ್ರ ಖಂಡನೀಯ. ಮುಂಬರುವ ದಿನಗಳಲ್ಲಿ ಆ ಜಿಲ್ಲೆಯ ಜನತೆಯ ಬದುಕಿಗೆ ಅದು ಅಪಾಯಕಾರಿಯಾದದ್ದು ಕೂಡ.

ಅದು ವಿಜಾಪುರ ಜಿಲ್ಲೆ ಪಂಚನದಿಗಳ ನಾಡು. ದಕ್ಷಿಣದ ಪಂಜಾಬ್. ಒಂದು ಮಳೆಯಾದರೆ ಒಂಭತ್ತು ವರ್ಷಕ್ಕಾಗುವಷ್ಟು ಬೆಳೆವ ಫಲವತ್ತಾದ ಭೂಮಿ. ಆ ಭೂಮಿಯ ಶಕ್ತಿಯೇ ಅಂತಹದು. ಕಪ್ಪು ಮಣ್ಣಿನ ಈ ಫಲವತ್ತಾದ ನೆಲದಲ್ಲಿ ಗೋಧಿ, ಜೋಳ, ಸಜ್ಜೆ, ಕಬ್ಬು, ಹತ್ತಿ, ಎಣ್ಣೆ ಕಾಳುಗಳಾದ ಸೇಂಗಾ, ಕುಸುಬೆ, ಅಗಸೆ, ಸೂರ್ಯಪಾನ ಇಂಥ ಬೆಳೆ ಸರಿಯಾಗಿ ಬೆಳೆದರೆ ಕರ್ನಾಟಕ ರಾಜ್ಯಕ್ಕೆ 'ದಾಸೋಹ' ಮಾಡುತ್ತಾರೆ ಆ ಬಸವನಾಡಿನ ಜನ. ಆದರೆ ಸರಿಯಾಗಿ ಮಳೆಯಾಗಬೇಕು. ಬಿತ್ತಿದ ಬೆಳೆ ಜೀವ ಹಿಡಿದು ಮೇಲೇಳಲು ನೀರು ಬೇಕು. ಇತ್ತೀಚಿನ ಪ್ರಕೃತಿಯ ವೈಪರೀತ್ಯದಿಂದಾಗಿ ಆ ಜನ ಮಳೆಯಾಗದೆಯೇ ಸಾಯುತ್ತಿದ್ದಾರೆ, ಇನ್ನೊಮ್ಮೆ ವಿಪರೀತ ಮಳೆಯಿಂದಾಗಿ ಮನೆ ಮಠ ಬೆಳೆ ಕಳೆದುಕೊಂಡು ನೀರಿನಲ್ಲಿ ಕೊಚ್ಚಿ ಹೋಗಿ ಸಾಯುತ್ತಿದ್ದಾರೆ.

ಕೆಲವರ್ಷಗಳಿಂದ ಅಲ್ಲಿನ ಜನತೆಗೆ ಗೊತ್ತಿರುವುದು ಎರಡೇ ಎರಡು ಕಾಲ : ಒಂದು ಒಣ ಬರ, ಇನ್ನೊಂದು ಹಸೀ ಬರ. ಮಳೆಬಾರದೆ ನೀರಿಲ್ಲದೆ ಪಕಪಕ ಬಾಯಿ ಬಿಡುತ್ತ ಊರು ಬಿಡುತ್ತಾರೆ. ವಿಪರೀತ ಮಳೆ ಬಂದಾಗ ಮನೆ, ಗುಡಿಸಲು ಕಳೆದುಕೊಂಡು ಹೊಲ ತೋಟಗಳಲ್ಲಿ ಕೆಲಸವಿಲ್ಲದೆ ಊರು ಬಿಡುತ್ತಾರೆ. ಊರು ಬಿಟ್ಟವರು ನೇರವಾಗಿ ಸೇರುವುದು ಗೋವಾ, ಇಚಲಕರಂಜಿ, ಸೋಲಾಪುರ, ಮುಂಬೈ, ಇತ್ತೀಚೆಗೆ ಮಂಗಳೂರು, ಬೆಂಗಳೂರು. ರಾಜ್ಯಕ್ಕೇ ದಾಸೋಹ ಮಾಡಿ ಅನ್ನದಾನ ಮಾಡಬಹುದಾದ ಈ ಜಿಲ್ಲೆಯ ಬಡ ರೈತರು, ಕೂಲಿಕಾರರು ಊರು ತೊರೆದು ನಗರ ಸೇರಿ ತುತ್ತು ಅನ್ನಕ್ಕಾಗಿ ಹಗಲಿರುಳು ದುಡಿದು ಬದುಕು ಸವೆಸುತ್ತಿದ್ದಾರೆ. ಇಂಥವರ ಬದುಕಿಗೆ ಆಸರೆಯಾಗಿ ನಿಲ್ಲಬೇಕಾದ ಸರಕಾರಗಳು ಮಾತ್ರ ಅವರನ್ನು ಮೂರನೇ ದರ್ಜೆ ಪ್ರಜೆಗಳಂತೆ ನೋಡುತ್ತಿವೆ. ಇನ್ನು ಜನರಿಂದ ಚುನಾಯಿತರಾದ ಪ್ರಜಾಪತಿಗಳೋ 'ಉಚ್ಚೆಯಲ್ಲಿ ಮೀನು ಹಿಡಿವ ಧೀಮಂತರು.'

ಇತ್ತೀಚೆಗೆ ನಡೆದ ಆಲಮಟ್ಟಿ ಹೋರಾಟ ಸಂದರ್ಭದಲ್ಲಿ ರಾಜ್ಯ-ಕೇಂದ್ರ ಸರಕಾರಗಳು, ಈ ಜಿಲ್ಲೆಯ ಕೆಲವು ರಾಜಕಾರಣಿಗಳು ಈ ಜನತೆಯ ಬದುಕಿನೊಂದಿಗೆ ಆಡಿದ ಚೆಲ್ಲಾಟ ಮಾತ್ರ ಅಸಹ್ಯ ತರುವಂತಿತ್ತು. ಮೊದಮೊದಲು ರಾಜ್ಯದ ಆಳುವ ಪಕ್ಷದ ಶಾಸಕರಾದ ನಾಡಗೌಡ, ಬಿ. ಎಸ್. ಪಾಟೀಲ (ಮನಗೂಳಿ), ಬಿ. ಎಸ್. ಪಾಟೀಲ (ಸಾಸನೂರ) ಇವರೇ ಚಳುವಳಿಗೆ ಚಾಲನೆ ಕೊಟ್ಟದ್ದು. ಕಾರಣ, ಜಿಲ್ಲೆಯ ಬಹುಸಂಖ್ಯಾತ ಶಾಸಕರು ಕಾಂಗ್ರೆಸ್ಸಿನವರೇ ಆಗಿದ್ದು ಇವರಾರಿಗೂ ಮಂತ್ರಿಗಿರಿ ಸಿಕ್ಕಿರಲಿಲ್ಲ. ನಂತರ ಇವರಲ್ಲೇ ನಾಯಕತ್ವಕ್ಕೆ ಕಿತ್ತಾಟವಾಗಿ ಕೊನೆಗೆ ಯರನಾಳದ ಸಂಗನ ಬಸವ ಸ್ವಾಮೀಜಿಯವರ ನಾಯಕತ್ವದಲ್ಲಿ ಚಳುವಳಿ ಮುಂದುವರೆಯಿತು. ಅಷ್ಟರಲ್ಲಿ ಎಚ್ಚೆತ್ತುಕೊಂಡ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಕಾಂಗ್ರೆಸ್ ಶಾಸಕರನ್ನು ಸರಿಮಾಡಿದರು. ಅಲ್ಲಿಯವರೆಗೆ ಕೃಷ್ಣೆಯಂತೆ ಉಕ್ಕಿಹರಿಯುತ್ತಿದ್ದ ಈ ಕಾಂಗ್ರೆಸ್ಸಿಗರ ಜನತೆಯ ಬಗೆಗಿನ ''ಪ್ರೀತಿ'' ಚರಂಡಿ ಸೇರಿತು.

ಕೇಂದ್ರ ಸರಕಾರವನ್ನುಳಿಸಿಕೊಳ್ಳಲು ಆಂಧ್ರದ ಚಂದ್ರಬಾಬು ನಾಯ್ಡುವಿನ ಸೊಂಟ ಹಿಡಿದ 'ರಾಷ್ಟ್ರ ನಾಯಕ' ವಾಜಪೇಯಿ ವಿಜಾಪುರದ ಜನರಿಗೆ ದ್ರೋಹ ಬಗೆದರು. ಅವರ ಪಕ್ಷದ ಚಡ್ಡಿ ಪರಿವಾರ ಮುಜುಗರಗೊಂಡು ಜಿಲ್ಲೆಯ ಜನತೆಯ ಬದುಕಿಗಿಂತ ವಾಜಪೇಯಿ ನಿಷ್ಠೆ ತೋರಿ ತನ್ನ 'ರಾಷ್ಟ್ರಪ್ರೇಮ' ವ್ಯಕ್ತಪಡಿಸಿತು. ಹಿಂದೆಂದಿಗಿಂತ ಹೆಚ್ಚು ಮತ ಕೊಟ್ಟ ವಿಜಾಪುರ ಜಿಲ್ಲೆಯ ಜನತೆಗೆ ದ್ರೋಹ ಬಗೆದು ಬಿ.ಜೆ.ಪಿ. ಚಳುವಳಿಯಿಂದ ದೂರ ಉಳಿಯಿತು. ಇನ್ನು ಮತ್ತೊಬ್ಬರ ಮನೆ ಸುಡುವಾಗ ಮೈಕಾಯಿಸಿಕೊಳ್ಳುವ ಚಟದ ಎರಡು ಚಿಂದಿಗಳಾದ ಜನತಾದಳ ಈ ಹೋರಾಟವನ್ನೇ ಬಳಸಿ ಕಾಂಗ್ರೆಸ್-ಬಿಜೆಪಿಗಳನ್ನು ಹಣಿಯಲು ತುದಿಗಾಲ ಮೇಲೆ ನಿಂತವು.

ಇಷ್ಟೆಲ್ಲದರ ಮಧ್ಯೆಯೂ ಸ್ವಾಮೀಜಿಯ ನಾಯಕತ್ವದಲ್ಲಿ ವಿಜಾಪುರದ ಗಾಂಧೀಚೌಕ್ ಹತ್ತಿರದ ಟೆಂಟ್‌ನಲ್ಲಿ ಚಳುವಳಿಯ ಬಿಸಿ ಏರತೊಡಗಿತು. ಸಿ.ಪಿ.ಎಂ. ಮೊದಮೊದಲು ಚಳುವಳಿಯ ಜೊತೆಗೇ ಇದ್ದಿತು. ಇದರ ನಾಯಕರಾದ ಕಾ|| ಎನ್. ಎಲ್. ಉಪಾಧ್ಯಾಯರು ಚಳುವಳಿ ಕೊನೆ ಹಂತ ತಲುಪುವ ಸಂದರ್ಭದಲ್ಲಿ ಈ ಚಳುವಳಿಯ ಸಂವೈಧಾನಿಕ ಪ್ರಸ್ತುತೆಯನ್ನು ಪ್ರಶ್ನಿಸಿ ಹಿಂದೆ ಸರಿದರು. ಇವರೇ ಬರೆದ ಆಲಮಟ್ಟಿ ಸಮಸ್ಯೆ ಕುರಿತ ಕಿರುಹೊತ್ತಿಗೆಯನ್ನು ಇದೇ ಚಳುವಳಿಯ ಟೆಂಟ್‌ನಲ್ಲಿ ಬಿಡುಗಡೆ ಮಾಡಿಸಿದಾಗ ಅವರಿಗೆ ಈ ಹೋರಾಟ ಸಂವಿಧಾನಬದ್ಧವಾಗಿತ್ತು. ಆಮೇಲೆ ಅದೇಕೋ ದಿಕ್ಕು ಬದಲಾಯಿತು.

ಹಲವಾರು ವರ್ಷದಿಂದ ಅನಾಥಸ್ಥಿತಿಯಲ್ಲಿ ಬದುಕುತ್ತಿದ್ದ ವೈಜನಾಥ್ ಪಾಟೀಲ ಎಂಬ ಗುಲಬರ್ಗಾ ನಾಯಕ ಹಿಂಬಾಲಕರಿಲ್ಲದೇ ಬಂದು ಈ ಚಳುವಳಿ ಸೇರಿಕೊಂಡು ಮತ್ತೆ ಶಕ್ತಿಯಾಗಲು ಪ್ರಯತ್ನಿಸಿದರು. ಇನ್ನು ನಮ್ಮ ರಾಜ್ಯದ ''ಏಕೈಕ ರೈತ ಹೋರಾಟಗಾರ'' ಎಂ. ಡಿ. ನಂಜುಂಡಸ್ವಾಮಿ ಜಾತ್ರೆಗೇ ಶಿಸ್ತು ಕಲಿಸಲು ಹೊರಟ ಆಸಾಮಿ. ತಮ್ಮ ಸರ್ವಾಧಿಕಾರಿ ಮನೋಭಾವದಿಂದ ಇಡೀ ರೈತ ಚಳುವಳಿಯನ್ನೇ ಚಿಂದಿ ಚಿಂದಿ ಮಾಡಿದ ಇವರು ವಿಜಾಪುರ ಜಿಲ್ಲೆಯ ಈ ಚಳುವಳಿಗೆ ಬಂದದ್ದು ಸಮಸ್ಯೆಯನ್ನೆತ್ತಿಕೊಂಡು ಹೋರಾಟಕ್ಕಲ್ಲ; ಇದೇ ಜಾತ್ರೆಯ ಜನರನ್ನುಪಯೋಗಿಸಿಕೊಂಡು ಜಿಲ್ಲೆಯಲ್ಲಿ ರೈತ ಸಂಘ ಕಟ್ಟುವ ಎರಡನೇ ಇನಿಂಗ್ಸ್ ಆಟಕ್ಕೆ ಬಂದವರು.

ಬಾಗಲಕೋಟೆ ಪ್ರತ್ಯೇಕ ಜಿಲ್ಲೆಯಾದ ನಂತರ ಎರಡು ನದಿಗಳನ್ನೂ, ಸಂಪದ್ಭರಿತ ಗ್ರಾನೈಟ್ ಭೂಮಿಯನ್ನೂ, ಘಟಪ್ರಭೆಯ ಮೂಲಕ ನಳನಳಿಸುವ ನೀರಾವರಿ ಭೂಮಿಯನ್ನೂ ಈಗಾಗಲೇ ಕಳೆದುಕೊಂಡು ಇನ್ನೊಂದು ಇಥಿಯೋಪಿಯಾದಂತಾಗಿದೆ ವಿಜಾಪುರ ಜಿಲ್ಲೆ. ವಿಜಾಪೂರ, ಬಾಗೇವಾಡಿ, ಮುದ್ದೇಬಿಹಾಳ, ಇಂಡಿ, ಸಿಂದಗಿ, ಈ ಪಂಚ ತಾಲ್ಲೂಕುಗಳೂ ಭೂಮಿಯ ಅಂತರ್ ಜಲವೊಂದನ್ನೇ ನಂಬಿ ಬದುಕಬೇಕು. ಹಿಟ್ಟು ಬೀಸುವ ಫ್ಲೋರ್‌ಮಿಲ್ಲುಗಳೇ ಇಲ್ಲಿನ ದೊಡ್ಡ ಕೈಗಾರಿಕೆಗಳು. ಗೋಲ್‌ಗುಮ್ಮಟ, ಬಾರಾಕಮಾನ್ ಮುಂತಾದ ಆದಿಲ್‌ಶಾಹಿ ಕಾಲದ ಗೋರಿಗಳೇ ಇವರ ಭವಿಷ್ಯದ ಸ್ಮಾರಕಗಳು. ಬೇಸಿಗೆ ಬಂದರೆ ಸಾಕು, ನೀರಿಗಾಗಿ ಹಪಹಪಿಸುವ ಜನ. ತಲೆ ಮೇಲೆ ಸಂದೂಕು ಹೊತ್ತು ಗುಳೇ ಹೊರಡುವ ಜನ. ಎಂಥ ನೋವನ್ನೂ ಸಹಿಸುವ ಸಹನಾಶೀಲ ಜನ.

ಇಂಥ ಜನ ಸಹನೆಯ ಮಧ್ಯದಲ್ಲೂ ಎದೆಯೊಳಗಿನ ಕಿಚ್ಚನ್ನು ಜೀವಂತವಾಗಿಟ್ಟುಕೊಂಡವರು. ಇವರ ಒಳಗಿರುವುದು ಎರಡೇ ಗುಣ. ಬಗ್ಗಿದರೆ ಗುಲಾಮಗಿರಿ, ನಿಂತರೆ ದಾದಾಗಿರಿ. ಇಂಥ ಜನರನ್ನು ಸರಿಯಾಗಿ ಸಂಘಟಿಸಿದರೆ ಖಂಡಿತ ಇವರು ರಾಜ್ಯಕ್ಕಷ್ಟೇ ಏನು, ದೇಶಕ್ಕೇ ಮಾದರಿಯಾಗಬಲ್ಲ ಜನ. ಆದರೆ ಇಲ್ಲಿನ ಸಂಘಟಕರು, ರಾಜಕಾರಣಿಗಳು, ಪ್ರತಿ ಬಾರಿ ಇವರನ್ನು ತಮ್ಮ ತೆವಲುಗಳಿಗೆ ಬಳಸಿಕೊಂಡಿದ್ದಾರೆ, ಮೂರ್ಖರನ್ನಾಗಿಸಿದ್ದಾರೆ. ಈ ಹಿಂದೆ ಬಂಗಾರಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಮುಳುವಾಡ ಏತ ನೀರಾವರಿ ಹೋರಾಟಕ್ಕೆ ಜಿಲ್ಲೆಯ ಸ್ವಾಮಿಗಳೆಲ್ಲ ಧುಮುಕಿದಾಗ ಈ ಜಿಲ್ಲೆಯ ಜನ ಸ್ಪಂದಿಸಿದ ರೀತಿ ನೋಡಬೇಕಿತ್ತು. ಪ್ರತಿ ಗ್ರಾಮದಲ್ಲಿ ಹೋರಾಟದ ಟೆಂಟುಗಳು. ರಕ್ತ ಸುರಿಸಿಯಾದರೂ ನ್ಯಾಯ ಪಡೆಯಬೇಕೆಂಬ ಛಲ. ಆದರೆ ಅವಿವೇಕಿ ನೀಲಗುಂದ ಸ್ವಾಮಿ ಎಂಬ ಕಾವಿಧಾರಿಯ ರಾಜಕೀಯ ತೆವಲಿಗೆ ಇಡೀ ಚಳುವಳಿ ಬಲಿಯಾಯಿತು.

ಮತ್ತೊಮ್ಮೆ ಆಲಮಟ್ಟಿ ಹೋರಾಟದಲ್ಲಿ ಅದೇ ಆಗಿದೆ. ಮುಳುವಾಡ ಏತ ನೀರಾವರಿ ಹೋರಾಟದ ಆಘಾತವನ್ನು ಜನ ಮರೆತಿದ್ದರು. ಈ ಬಾರಿ ನಡೆದ ಮಾರ್ಚ್ ೨೬ರ ಹೋರಾಟಕ್ಕೆ ಮೊದಲಿನಂತೇ ಬೆಂಬಲಿಸಿದರು. ಇಡೀ ದೇಶ ತಿರುಗಿನೋಡುವಂತೆ ಮಾಡಲು ಸಿದ್ಧರಿದ್ದರು. ಆದರೆ ನಾಡಿನ ಹಿತಕ್ಕಾಗಿ ನಡೆಯಬೇಕಿದ್ದ ಈ ಚಳುವಳಿ ಅದೇ ನಾಡಿನ ಕೆಲವು ರಾಜಕಾರಣಿಗಳ, ಸಮಯ ಸಾಧಕ ಸ್ವಾರ್ಥಿಗಳ ಹಿತಾಸಕ್ತಿಗೆ ಬಲಿಯಾಯಿತು. ಇಲ್ಲಿ ಸುಪ್ರೀಂಕೋರ್ಟ್, ಸಂವಿಧಾನ, ಅಂತರ್‌ರಾಜ್ಯ ಈ ಎಲ್ಲ ವಿಷಯಗಳು ಪ್ರಧಾನವಾಗುವುದಿಲ್ಲ. ಒಂದು ನಾಡಿನ ಜನತೆಯ ಚೈತನ್ಯವನ್ನು ಬಡಿದೆಬ್ಬಿಸುವ ಹಾಗೂ ಜನತೆಯ ಹಿತಕ್ಕಾಗಿ ಸಂಘಟನಾತ್ಮಕವಾಗಿ ಅದನ್ನು ಬಳಸಿಕೊಳ್ಳುವ ವಿಷಯ ಪ್ರಧಾನವಾಗುತ್ತದೆ. ಇಡೀ ಜನತೆಯ ಚೈತನ್ಯವನ್ನು ತಮ್ಮ ರಾಜಕೀಯ ಹಿತಾಸಕ್ತಿಗಾಗಿ, ಸಂಘಟನಾ ಹಿತಾಸಕ್ತಿಗಾಗಿ ಬಳಸಿಕೊಳ್ಳುವ ಅಥವಾ ಹಾಳು ಮಾಡುವ ಕೆಲಸ ಖಂಡಿತ ಜನತೆಯ ಬದುಕಿನ ದೃಷ್ಟಿಯಿಂದ ಒಳ್ಳೆಯದಲ್ಲ.

ಯಾವುದೇ ಸದುದ್ದೇಶದ ರಾಜಕಾರಣ ಅಥವಾ ಸಂಘಟನೆ ಜನರ ಚೇತನವನ್ನು ಅವಲಂಬಿಸಿರುತ್ತದೆ. ಅದನ್ನು ಸರಿಯಾಗಿ ಸಂಘಟಿಸಿ ಸಾಮಾಜಿಕ ಹಿತಕ್ಕಾಗಿ ಬಳಸುವುದು ಇಂದಿನ ಸಂಘಟಕರ ಆದ್ಯ ಕರ್ತವ್ಯ. ಆದರೇನು ಮಾಡುವುದು ಬಸವಣ್ಣನಂಥ ಮಹಾನ್ ಸಂಘಟಕ ಹುಟ್ಟಿದ ನಾಡಿನಲ್ಲಿಂದು ಒಬ್ಬ ಪ್ರಾಮಾಣಿಕ ಸಂಘಟನೆಯ ಕೊರತೆ ಇದೆ.

ಡಾ|| ಸಿದ್ದನಗೌಡ ಪಾಟೀಲ
ಶ್ರೀನಗರ, ಧಾರವಾಡ - ೫೮೦ ೦೦೧


ರಾಜಕೀಯ-ಧರ್ಮ

ಜಿ. ರಾಮಕೃಷ್ಣ

ಸಾಮಾನ್ಯಾರ್ಥದಲ್ಲಿ ನಾವು ಬಳಸುವ 'ಧರ್ಮ' ಎಂಬ ಪದಕ್ಕೂ ಮತಧರ್ಮಕ್ಕೂ ವ್ಯತ್ಯಾಸವಿದೆ. ಯಾವುದೇ ವಸ್ತುವಿನ ಮೂಲ ಲಕ್ಷಣಗಳನ್ನು 'ಧರ್ಮ' ಎಂದು ಕರೆಯುವುದು ವಾಡಿಕೆ. ಅಂತೆಯೇ ಯಾವುದು ಸಮಾಜಕ್ಕೆ ಧಾರಣಸಾಮರ್ಥ್ಯವನ್ನು ನೀಡುತ್ತದೋ ಅದನ್ನು ಧರ್ಮವೆಂದು ಕರೆಯುತ್ತಾರೆ. "ಧಾರಣಾ-ದ್ಧರ್ಮಂ ಇತ್ಯಾಹುಃ" ಎನ್ನುವಾಗ ಇದೇ ಅರ್ಥ ಸೂಚಿತವಾಗಿರುವುದು. ಒಂದು ಸಮೂಹವನ್ನು ಯಾವುದೋ ಎಲ್ಲೆಯಲ್ಲಿ ಅಥವಾ ಕಟ್ಟುಪಾಡಿನಲ್ಲಿ ಇಡುವ ಉದ್ದೇಶವನ್ನು ಧರ್ಮವು ಹೊಂದಿದೆಯೆಂಬುದು ಇಲ್ಲಿ ಗ್ರಹಿಸಬೇಕಾದ ಅಂಶ. ಆದರೆ ಅದು ನಿರಂತರ ಅಥವಾ ಸಾರ್ವಕಾಲಿಕವಾದುದಲ್ಲ. ಏಕೆಂದರೆ, ಸಮಾಜವು ಸಾರ್ವಕಾಲಿಕವಾಗಿ ಒಂದೇ ತೆರನಾಗಿ ಉಳಿಯುವಂತಹ ಘಟಕವಲ್ಲ. ಅನೇಕ ಸಾಮಗ್ರಿಗಳ ಆಧಾರದ ಮೇಲೆ ನಿಂತಿರುವ ಸಮಾಜವು ಆಯಾ ಮೂಲಭೂತ ವಸ್ತುಗಳಲ್ಲಿ ಉಂಟಾಗುವ ವ್ಯತ್ಯಾಸಗಳಿಂದಾಗಿ ತಾನೂ ಬದಲಾಗುತ್ತಿರುತ್ತದೆ. ಸಮಾಜದ ಆಂತರಿಕ ಸಂಬಂಧಗಳಲ್ಲಿ, ಮತ್ತು ಇಡಿಯಾಗಿ ಅದರ ವ್ಯವಸ್ಥೆಯಲ್ಲಿ ಸಹ, ಕಾಲದಿಂದ ಕಾಲಕ್ಕೆ ಇಂತಹ ಬದಲಾವಣೆಗಳು ಉಂಟಾಗಿರುವುದನ್ನು ಸುಲಭವಾಗಿ ಗಮನಿಸಬಹುದು. ಧರ್ಮದ ಆಯಾಮದಲ್ಲಿ ಕೆಲವು ಮೌಲ್ಯಗಳು ಸಾರ್ವತ್ರಿಕವಾಗಿ ಮತ್ತು ಸಾರ್ವಕಾಲಿಕವಾಗಿ ಎತ್ತಿ ಹಿಡಿಯಲ್ಪಟ್ಟಿವೆ, ಎಂಬರ್ಥದಲ್ಲಿ ಧರ್ಮವು ಚಿರಂತನವೆಂಬ ವಿವರಣೆಯು ಸರಿಯಾಗಿದೆ.

ಅನೇಕ ಮತಧರ್ಮಗಳು ವ್ಯಾಖ್ಯಾನಿಸುವಂತೆ ಧರ್ಮವು ಮಾನವ ನಿರ್ಮಿತವಾದುದಲ್ಲ; ಅದು ಶ್ರುತಿವಾಕ್ಯಗಳನ್ನಾಧರಿಸಿದ ತತ್ವ, ಸಮುದಾಯವನ್ನು ಸಲಹುವ ಸಿದ್ಧಾಂತ. ಹೀಗೆ ಹೇಳಿದಾಗ ಧರ್ಮವು ಸಂಸ್ಥೀಕರಣಗೊಂಡಿರುವ ಅಂಶವನ್ನು ಗುರುತಿಸಿದಂತಾಗುತ್ತದೆ. ಆದರೆ, ಇಲ್ಲಿಯ ತೊಡಕೇನೆಂದರೆ ಅದು ಸದಾ ಕಾಲ ಹೀಗೆ ಸಂಸ್ಥೀಕರಣಗೊಂಡೇ ಇದ್ದಿತು ಎಂಬ ತಪ್ಪು ಕಲ್ಪನೆಗೆ ಆಸ್ಪದವನ್ನುಂಟುಮಾಡುತ್ತದೆ. ಶ್ರುತಿವಾಕ್ಯವೇ ಧರ್ಮದ ಉಗಮಸ್ಥಾನವೆಂದು ಬಗೆದಾಗ ಅದು ಏಕಸ್ವರೂಪದ್ದಾಗಿರಬೇಕಾದ್ದು ಸಹಜ; ಆದಕ್ಕೆ ಮಾನವನ ಸನ್ನಿವೇಶ ಕಾರಣವಾಗುವುದಿಲ್ಲ, ವಿಕಾಸಕ್ಕೆ ಅವಕಾಶ ವಿರುವುದಿಲ್ಲ. ಧಾರ್ಮಿಕ ಕಟ್ಟುಪಾಡುಗಳ ನಿರ್ಬಂಧದಲ್ಲಿ ಸಮಾಜ ವಿರುವುದಾದರೆ ಅದಕ್ಕೆ ಚಲನೆ ಇಲ್ಲದಂತಾಗಿ ಸ್ಥಗಿತತೆ ಆವರಿಸುತ್ತದೆ. ಇಂತಹ ಪರಿಸ್ಥಿತಿಯ ಆತಂಕವಿಲ್ಲ. ಏಕೆಂದರೆ, ಸಮಾಜವು ಸ್ಥಗಿತವಲ್ಲ. ಹಾಗೂ ಸಮಾಜದ ಬಹುರೂಪೀ ಸಂಬಂಧಗಳನ್ನು ಪ್ರತಿಪಾದಿಸುವ ಧರ್ಮವು ಸ್ಥಗಿತವಲ್ಲ. ವಿಶ್ವದಲ್ಲಿ ಧರ್ಮವು ಏಕಪ್ರಕಾರವಾಗಿಲ್ಲ; ಬೇರೆ ಬೇರೆ ಹಂತಗಳಲ್ಲಿ ಆಯಾ ಕಾಲದ ಹಿನ್ನೆಲೆಗಳಿಗನುಸಾರವಾಗಿ ಧರ್ಮವು ವಿವಿಧ ರೂಪಗಳನ್ನು ತಳೆದಿರುವುದು ಇದಕ್ಕೆ ನಿದರ್ಶನವಾಗಿದೆ.

ಸ್ವತಃ ಶ್ರುತಿವಾಕ್ಯಗಳು ಕೂಡ ಅವುಗಳು ಹುಟ್ಟಿಕೊಂಡ ಹಿನ್ನೆಲೆಗಳಿಂದ ಪ್ರಭಾವಿತವಾಗಿದ್ದರೆ ಆಶ್ಚರ್ಯವಿಲ್ಲ. ಉದಾಹರಣೆಗೆ, ಆಡಂ ಮತ್ತು ಈವ್‌ಗಳ ಕತೆಯನ್ನು ನೋಡಬಹುದು. ಕೆಟ್ಟದ್ದು ಎಂಬುದರ ಲವಲೇಶದ ಲೇಪವೂ ಇಲ್ಲದ ಭಗವಂತನಿಂದ ಸೃಷ್ಟಿಸಲ್ಪಟ್ಟ ಮಾನವನಲ್ಲಿ ಕೆಟ್ಟದ್ದು ಹೇಗೆ ಮನೆಮಾಡಿಕೊಂಡಿತು? ದಯಾಮಯನಾದ ಸೃಷ್ಟಿಕರ್ತನು ಒಳಿತು-ಕೆಡಕುಗಳನ್ನು ಒಟ್ಟೊಟ್ಟಾಗಿರಿಸಿ ಮಾನವನಿಗೇಕೆ ತೊಂದರೆಯುಂಟು ಮಾಡಿದ? ಇದಕ್ಕೆ ಉತ್ತರವಾಗಿ ಕ್ರೈಸ್ತಧರ್ಮದ ಪುರಾಣ ಕಲ್ಪನೆಯು ಆಡಂ ಮತ್ತು ಈವರಿಗೆ ಜನ್ಮವಿತ್ತಿದೆ. ಅದು ಎಲ್ಲಿ ಮೊದಲಿಗೆ ವ್ಯಾಪಕವಾಗಿದ್ದಿತೋ ಅದೇ ಪ್ರದೇಶದಲ್ಲಿ



ಅಶೋಕನ ಬ್ರಹ್ಮಗಿರಿ ಶಾಸನ

ಇಸ್ಲಾಂ ಮತಧರ್ಮವು ಆವಿರ್ಭಾವವಾದ್ದರಿಂದ ಅದರ ಪುರಾಣ ಕಲ್ಪನೆಯಲ್ಲೂ ಆದಮ ಮತ್ತು ಈವ ಕಾಣಿಸಿಕೊಂಡಿದ್ದಾರೆ. ದಕ್ಷಿಣ ಅಮೆರಿಕಾದಲ್ಲಿ ಪ್ರಚಾರಕ್ಕೆ ಬಂದ ಪುರಾಣ ಕಲ್ಪನೆಗಳಲ್ಲಿ ಈ ಮೊದಲ ಮಾನವ ದಂಪತಿಗಳಿಗೆ ಸ್ಥಾನವಿಲ್ಲ! ಅಥವಾ ಭಾರತದಲ್ಲಿ ಕಾಣಿಸಿಕೊಂಡ ಮತಧರ್ಮಗಳಲ್ಲೂ ಅವರಿಗೆ ಸೂರಿಲ್ಲವೆಂಬುದನ್ನು ನೋಡಬಹುದು. ಈ ಧರ್ಮಗಳ ವಿವಿಧ ನಂಬಿಕೆಗಳು ಹೇಗೆ ಬೆಳೆದುವೆಂಬುದು ಬೇರೆ ಪ್ರಶ್ನೆ; ಅದನ್ನಿಲ್ಲಿ ಚರ್ಚಿಸುವುದು ಪ್ರಸ್ತುತವಲ್ಲ. ಕಾಲ ಮತ್ತು ಪ್ರದೇಶದ ಮಿತಿಗಳನ್ನು ಮೀರಿ ಮತಧರ್ಮಗಳು ನಿಂತಿಲ್ಲವೆಂಬುದು ಮಾತ್ರ ಇಲ್ಲಿಯ ಸೂಚನೆ.

ಇನ್ನೊಂದು ಉದಾಹರಣೆ ನೋಡೋಣ: ಶಾಕ್ಯ ಬುಡಕಟ್ಟು ಕಾರಣಾಂತರಗಳಿಂದ ಒಡೆದು ಛಿದ್ರವಾಗುತ್ತಿದ್ದ ಕಾಲಕ್ಕೆ ಗೌತಮನು ಅದಕ್ಕೆ ಪ್ರತಿಕ್ರಿಯಿಸುವ ಪ್ರಕ್ರಿಯೆಯಲ್ಲಿ ಬುದ್ಧನಾದ; ಆಗ್ಗೆ ಪ್ರಚಲಿತವಾಗಿದ್ದ ಮತಧರ್ಮದ ನಂಬಿಕೆ ಮತ್ತು ಆಚರಣೆಗಳನ್ನು ಅವನು ಪ್ರಶ್ನಿಸಿ ಬೇರೊಂದು ಪರ್ಯಾಯ ಪಂಥದ ಹರಿಕಾರನಾದ. (ಇದೇ ಮಾತನ್ನು ಬಸವಣ್ಣನವರ ಬಗೆಗೂ ಹೇಳುವುದು ಸಮಂಜಸವಾಗಿದೆ). ಬುದ್ಧನ ಕಾಲಕ್ಕೂ ಅಶೋಕನ ಕಾಲಕ್ಕೂ ಎರಡು ಶತಮಾನಗಳ ಅಂತರವಿದೆ. ಆ ಶತಮಾನಗಳಲ್ಲಿ ಬೌದ್ಧಮತವು ಎಷ್ಟು ವ್ಯಾಪಕವಾಗಿತ್ತು ಮತ್ತು ಪ್ರಭಾವಶಾಲಿಯಾಗಿತ್ತು? ಅಶೋಕನು ಆ ಮತವನ್ನು ಅವಲಂಬಿಸಿದ ನಂತರ ಅದಕ್ಕೆ ದೊರೆತ ಪ್ರಾಶಸ್ತ್ಯವನ್ನಂತೂ ಅವನಿಗೆ ಮುಂಚಿನ ಎರಡು ಶತಮಾನಗಳಲ್ಲಿ ನಾವು ಕಾಣುವುದಿಲ್ಲ. ಅಂದರೆ, ಬೌದ್ಧಧರ್ಮವು ಜನರನ್ನು ರಂಜಿಸಲು ಅಶೋಕನು ಬರಬೇಕಾಯಿತು ಮತ್ತು ಅವನು ಆ ಮತವನ್ನು ತನ್ನದೆಂದು ಸ್ವೀಕರಿಸಬೇಕಾಯಿತು. ಅದಕ್ಕೆ ಮುಂಚೆ ಬುದ್ಧನ ದಾರ್ಶನಿಕ ದೃಷ್ಟಿಗೆ ಅಂತಸ್ಸತ್ವವಿರಲಿಲ್ಲವೆಂದು ಇದರಿಂದ ಊಹಿಸುವಂತಿಲ್ಲ. ಏಕೆಂದರೆ, ಅಶೋಕನು ಹೊಸದಾಗಿ ಆ ಮತಕ್ಕೆ ಯಾವ ದಾರ್ಶನಿಕ ತತ್ವವನ್ನೂ ಸೇರಿಸಲಿಲ್ಲ.

ಈಗ ಇನ್ನೊಂದು ಪ್ರಶ್ನೆ ನಮ್ಮ ಮುಂದೆ ಬರುತ್ತದೆ: ಯುದ್ಧವೊಂದನ್ನು ಪ್ರಾರಂಭಿಸುವ ಮೊದಲೇ ಯುದ್ಧದ ಭೀಕರತೆಯನ್ನು ಮನಗಂಡು ಯುದ್ಧದಿಂದ ಹಿಂದೆಗೆಯಬೇಕೆಂದು ಅರ್ಜುನನು ಬಯಸಿದ್ದನೆಂದು ಗೀತೆಯಲ್ಲಿ ಹೇಳಲಾಗಿದೆ. ಅದಕ್ಕೆ ಅವನ ಭಯವು ಕಾರಣವೋ ಬೇರೆಯವರ ಮೇಲಿನ ಕರುಣೆ ಕಾರಣವೋ ಎಂಬುದನ್ನು ಭಗವಾನ್ ಶ್ರೀಕೃಷ್ಣ ಅರಿತಿದ್ದಿರಬೇಕು; ಅಂತೂ ಅವನಿಗೆ ಉಪದೇಶ ನೀಡಿ ಯುದ್ಧಕ್ಕೆ ಅಣಿಗೊಳಿಸಿದ. ಸಾವೆಂಬುದೇ ಅಸತ್ಯವಾದ್ದರಿಂದ ಸಾಯಿಸುವ ಕ್ರಿಯೆಯಿಂದ ವಿಚಲಿತರಾಗಬೇಕಿಲ್ಲ ಎಂಬುದು ಕೃಷ್ಣನ ಉಪದೇಶಸಾರ. ಆತ್ಮನು ನಿತ್ಯನಾದ್ದರಿಂದ ಸಾವು ಎಂಬುದಿಲ್ಲ. (ಸಾವು ಅಸತ್ಯವಾದ್ದರಿಂದ ಸಾಯಿಸುವ ಕ್ರಿಯೆಯಲ್ಲಿ ತೊಡಗದಿರುವುದು ಅರ್ಜುನನಿಗೆ ಶ್ರೇಯಸ್ಕರವಾಗಬೇಕಿತ್ತು; ಆದರೆ ಕೃಷ್ಣನ ಪ್ರಕಾರ ಅರ್ಜುನನ 'ಸ್ವಧರ್ಮ' ಸಾಯಿಸುವ ಕ್ರಿಯೆಯಲ್ಲಿ ತೊಡಗುವುದೇ ಆಗಿತ್ತು. "ಸ್ವ ಧರ್ಮೇ ನಿಧನಂ ಶ್ರೇಯಃ" : ಆದ್ದರಿಂದ ಅರ್ಜುನ ಯುದ್ಧ ಮಾಡಬೇಕು).

ಅಶೋಕನ ಹೃದಯ ಅರ್ಜುನನ ಹೃದಯದಷ್ಟು

ಮಾರ್ದವವಾದುದಲ್ಲ. ಆದ್ದರಿಂದ ಯುದ್ಧದ ಭೀಕರತೆಯು ಅವನಿಗೆ ತಿಳಿಯುವುದು ಯುದ್ಧ ಮುಗಿದ ನಂತರವೇ; ಯುದ್ಧದಲ್ಲಿ ವಿಜಯವನ್ನು ಸಾಧಿಸಿದ ನಂತರವೇ, ಎಂದು ಹೇಳುವುದು ಇನ್ನೂ ಉಚಿತವಾದ್ದು. ಕಳಿಂಗರು ಅವನನ್ನು ಸದೆ ಬಡಿದು ಅಟ್ಟಲು ಸಮರ್ಥರಾಗಿದ್ದಿದ್ದರೆ ಅಶೋಕನನ್ನು ಕರುಣೆಯು ಆವರಿಸುತ್ತಿತ್ತೋ, ಸೇಡಿನ ಭಾವನೆಯು ಆವರಿಸುತ್ತಿತ್ತೋ, ಹೇಗೆ ಹೇಳುವುದು! ಯುದ್ಧದ ಮೊದಲ ದಿನದಂದು ಸಂಭವಿಸಿದ್ದ ಸಾವು ನೋವುಗಳನ್ನು ಅಶೋಕನು ನೋಡಲಿಲ್ಲವೇ? ಹಾಗಿದ್ದರೆ, ಅಂದೇ ಯುದ್ಧವನ್ನು ನಿಲ್ಲಿಸುವ ಘೋಷಣೆಯನ್ನೇಕೆ ಅವನು ಮೊಳಗಿಸಲಿಲ್ಲ? ಹಾಗೇನಾದರೂ ಅವನು ಮಾಡಿದ್ದಿದ್ದರೆ ಅಶೋಕನ ಶಿಲಾಶಾಸನಗಳು ಕಳಿಂಗದ ಭುವನೇಶ್ವರದ ಬಳಿ ಇರುತ್ತಿರಲಿಲ್ಲ, ಬಿಹಾರದ ಪಾಟ್ನಾದ (ಅಂದರೆ ಮಗಧರ ಪಾಟಲೀಪುತ್ರದ) ಬಳಿ ಇರಬೇಕಾಗುತ್ತಿತ್ತು. ಇನ್ನೂ ಒಂದು ವಿಶೇಷವಿದೆ: ಕಳಿಂಗವನ್ನು ಗೆದ್ದಾದ ಮೇಲೆ ಅಶೋಕನ ಚಕ್ರಾಧಿಪತ್ಯದ ವಿಸ್ತರಣೆ ನಿಂತುಹೋಯಿತೆ? ಅಥವಾ ಅವನ ಸೈನ್ಯವನ್ನು ಚದುರಿಸಿ ಹಾಕಲಾಯಿತೆ?

ಇದಕ್ಕೆ ಎರಡು ರೀತಿಯ ಉತ್ತರ ಸಾಧ್ಯವಿದೆ: (ಅ) ಬೌದ್ಧಮತದ ತತ್ವಗಳ ಬಲದಿಂದ ವಿಸ್ತರಣೆ ಮುಂದುವರಿಯಿತು; ಅಥವಾ (ಆ) ಕಳಿಂಗದ ಅಪಜಯವನ್ನು ಕಂಡಿದ್ದವರೆಲ್ಲಾ ಅಶೋಕನಿಗೆ ತಾವಾಗಿಯೇ ಶರಣಾಗತರಾದರು.

ಇವುಗಳಲ್ಲಿ ಮೊದಲನೆಯದು ನಿಜವಾದರೆ ನಾವು ಇನ್ನೊಂದು ತೀರ್ಮಾನಕ್ಕೆ ಬರಬಹುದೇನೋ. ಅದೇನೆಂದರೆ, ಅಶೋಕನಿಗೆ ತನ್ನ ಅಗಾಧ ಸೈನ್ಯವನ್ನು ಪೋಷಿಸಿ ಅದರ ಬಲದಿಂದ ರಾಜ್ಯವನ್ನು ವಿಸ್ತರಿಸಿಕೊಳ್ಳುವುದಕ್ಕಿಂತಲೂ ಮತಧರ್ಮದ ಬಲದಿಂದ ಅದನ್ನು ಆಗುಮಾಡಿಕೊಳ್ಳುವುದು ಕಡಿಮೆ ವೆಚ್ಚ ಮತ್ತು ಶ್ರಮಗಳಿಂದ ಸಾಧ್ಯವಾಗುವಂತಿತ್ತು. ಭುವನೇಶ್ವರದ ಬಳಿಯ ದೊಡ್ಡ .ಬಂಡೆಗಳ ಮೇಲೆ ಕೆತ್ತಲಾಗಿರುವ ಶಾಸನಗಳನ್ನು ಓದಲು ಕಷ್ಟವಾಗುತ್ತದೆ. ಆ ಲಿಪಿ ಬಲ್ಲವರು ಸಹ ಅಷ್ಟು ಎತ್ತರದಲ್ಲಿರುವುದನ್ನು ಓದುವುದು ಕಷ್ಟವೆಂದು ಅನುಭವದಿಂದ ತಿಳಿಸಿದ್ದಾರೆ. ಅಶೋಕನ ಕಾಲದಲ್ಲಿ ಜನಸಾಮಾನ್ಯರೆಲ್ಲಾ ಅಕ್ಷರಸ್ಥರಾಗಿದ್ದರೆಂದು ವಾದಿಸುವುದು ಸಾಧ್ಯವಿಲ್ಲ. ಶಾಸನಗಳನ್ನೇನೋ ಜನರ ಆಡು ಭಾಷೆಯಾದ ಪಾಲಿಯಲ್ಲಿ ಬರೆಯಲಾಗಿದೆ. ಆದರೆ ಆ ಭಾಷೆಯನ್ನು ತಿಳಿದಿದ್ದವರಿಗೆ ಓದಲು ಬಾರದಿರುತ್ತಿದ್ದರೆ ಶಾಸನಗಳ ಪ್ರಯೋಜನವೇನಾಗಿದ್ದಿರಬಹುದು? ಅದರಲ್ಲಿದ್ದ ವಿಚಾರಗಳು ಬಾಯಿಂದ ಬಾಯಿಗೆ ಮುಟ್ಟಲು ಶಾಸನಗಳು ಪ್ರೇರಣೆ ನೀಡಿದ್ದವೆಂದು ಭಾವಿಸಬೇಕಾಗಿದೆ.

ಇದೆಲ್ಲದರ ಸಾರಾಂಶವಿಷ್ಟೆ: ಅಶೋಕನು ಬೌದ್ಧ ಮತವನ್ನು ಸ್ವೀಕರಿಸಿದಾಗ ಅದು ವೈಯಕ್ತಿಕ ನೆಲೆಯಲ್ಲಿ ಮಾತ್ರವೇ ನಿಲ್ಲದೆ ಅದಕ್ಕೊಂದು ಸಾರ್ವಜನಿಕ ಆಯಾಮವನ್ನು ಕೊಡಲಾಯಿತು. ಹಾಗೆ ಮಾಡಿದಾಗ ಕೇವಲ ಮತಧರ್ಮದ ಮೌಲ್ಯಗಳ ಪ್ರಚಾರವಷ್ಟೇ ಉದ್ದೇಶವಾಗಿರಲಿಲ್ಲ, ಅಪೇಕ್ಷಿತವೋ, ಅಲ್ಲವೋ, ಅಂತೂ ಮತಧರ್ಮವು ಒಂದು ರಾಜಕೀಯ ಹೊಣೆಗಾರಿಕೆಯನ್ನು ನಿರ್ವಹಿಸುವ ಸನ್ನಿವೇಶ ಒದಗಿಬಂದಿತು. ನಮ್ಮ ಚರಿತ್ರೆಯಲ್ಲಿ ಇಂತಹ ಪ್ರಸಂಗಗಳಲ್ಲಿ ಇದು ಮೊದಲನೆಯದೋ ಅಲ್ಲವೋ ನಿಖರವಾಗಿ ಹೇಳಬರುವುದಿಲ್ಲ. ಆದರೆ ಅದು ಕಡೆಯದಂತೂ ಅಲ್ಲ. ನಂತರದ ಶತಮಾನಗಳಲ್ಲಿ ಜೈನ, ಶೈವ, ವೈಷ್ಣವ, ಇತ್ಯಾದಿ ಮತೀಯ-ಧಾರ್ಮಿಕ ಪಂಥಗಳು ತಮ್ಮ ತತ್ತ್ವಗಳ ಬಲವನ್ನು ರಾಜಕೀಯ ಆಸಕ್ತಿಗಳ ವರ್ಧನೆಗೆ ಬಳಸಿರುವುದು ಸ್ಪಷ್ಟವಾಗಿದೆ. ಯೂರೋಪಿನಲ್ಲಿ ಮತೀಯ ಘರ್ಷಣೆಗಳು ಮೂಲತಃ ಕ್ರೈಸ್ತ ಧರ್ಮದ ಪ್ರಾಬಲ್ಯವನ್ನು ಸಾರಲು ಹಾಗೂ ಇಸ್ಲಾಮಿನ ಪ್ರಭಾವವನ್ನು ತಡೆಗಟ್ಟಲು ನಡೆದಿದ್ದವು. ನಮ್ಮಲ್ಲಿ ಈ ರೀತಿಯ ಘರ್ಷಣೆಗಳು ಅನೇಕ ಶತಮಾನಗಳಲ್ಲಿ ನಡೆದಿವೆ. ಅವುಗಳ ಪರಿಣಾಮವಾಗಿ ಜೈನ ಬಸದಿಗಳು ಶಿವಾಲಯಗಳಾಗಿವೆ, ಶಿವಾಲಯಗಳು ವಿಷ್ಣುವಿನ ದೇವಸ್ಥಾನಗಳಾಗಿವೆ ಮತ್ತು ಈ ಪರಿಪಾಠ ವಿವಿಧ ರೂಪಗಳಲ್ಲಿ ಜಾರಿಗೆ ಬಂದಿದೆ. ಒಬ್ಬ ರಾಜನು ಯಾವುದೋ ಒಂದು ಮತಧರ್ಮದವನಾದರೆ ಆ ಮತಧರ್ಮಕ್ಕೆ ಪ್ರಾಶಸ್ತ್ಯ ಸಿಗುವುದು, ಆಮೇಲೆ ಅದು ಬದಲಾಗುವುದು, ಇದೆಲ್ಲಾ ಅನೂಚಾನವಾಗಿ ನಡೆದುಬಂದಿದೆ. ರಾಜನು ಆಯ್ಕೆ ಮಾಡಿಕೊಂಡ ಮತಧರ್ಮದಿಂದಾಗಿ ಜನಸಾಮಾನ್ಯರಲ್ಲಿ ಆ ಮತದ ಬಗ್ಗೆ ಆಸಕ್ತಿ ವಿಶೇಷವಾಗಿ ಕೆರಳುತ್ತಿತ್ತೆಂದು ಹೇಳಲಾಗುವುದಿಲ್ಲ. ಆದಾಗ್ಯೂ ಮತಧರ್ಮವು ರಾಜಕೀಯ ಉದ್ದೇಶಗಳಿಗೆ ಸಾಧನವಾಗಿದ್ದುದಂತೂ ನಿಜ. ನಮ್ಮ ರಾಷ್ಟ್ರದಲ್ಲಿ ೧೯೯೨ರ ಡಿಸೆಂಬರ್ ೬ರಂದು ಜರುಗಿದ ಘಟನೆಗೆ ಇತಿಹಾಸದ ಪುಟಗಳಲ್ಲಿ ಬೇರೆಷ್ಟೋ ಸಮಾನ ಸಂಗತಿಗಳಿವೆಯೆಂದು ಇದರರ್ಥ. ಹಿಂದೆ ಹಾಗಾಗಿತ್ತು, ಆದ್ದರಿಂದ ಇಂದೂ ಹಾಗಾಗಲಿ, ಎಂಬುದು ಇದರ ಸೂಚನೆಯಲ್ಲ. ಹೀಗೆ ಆಗುತ್ತಲೇ ಇರಬಹುದಾದ ವಿದ್ಯಮಾನವನ್ನು ತಡೆಗಟ್ಟಲು ಸಮಕಾಲೀನ ಸಮಾಜವು ಕರೆ ಕೊಡುತ್ತದೆ; ಅದಕ್ಕೆ ಓಗೊಡದಿದ್ದರೆ ಧರ್ಮಕಾರಣದ ರಾಜಕಾರಣವು ಬಹುಬೇಗನೆ ಉಲ್ಬಣಗೊಂಡು ಬೇರೆಲ್ಲ ಸಾಮಾಜಿಕ ಅಗತ್ಯಗಳೂ ಆದ್ಯತೆಯನ್ನು ಕಳೆದುಕೊಳ್ಳುವ ದುರಂತ ನಮ್ಮ ಮುಂದಿದೆ. ವಿಕಾಸ ಹೊಂದುವ ಸಮಾಜದಲ್ಲಿ ಬೇರೆಲ್ಲ ಕ್ಷೇತ್ರಗಳಲ್ಲಿ ಬದಲಾವಣೆಗಳನ್ನು ಸ್ವಾಗತಿಸುವ ಜನ ಮತಧರ್ಮದ ಜಡ್ಡು ಸಂಪ್ರದಾಯಗಳು ಮಾತ್ರ ಬದಲಾಗದೆ ಹಾಗೇ ಉಳಿಯಬೇಕೆಂದು ಆಗ್ರಹಪಡಿಸುವುದು ಸೋಜಿಗದ ವಿಷಯ.

ವಸಾಹತುಶಾಹಿಯು ಕಳೆದ ಎರಡು ಶತಮಾನಗಳಲ್ಲಿ ಭಯಂಕರವಾಗಿ ತನ್ನ ದರ್ಪವನ್ನು ಮೆರೆದಿದೆ ಮತ್ತು ಅದು ಅಂತ್ಯಗೊಳ್ಳುವ ಸಂದರ್ಭ ಬಂದಾಗ ಏನಾದರೊಂದು ನೆಪವೊಡ್ಡಿ ಹೊಸ ದೌರ್ಜನ್ಯದ ವಿಷಬೀಜವನ್ನು ಬಿತ್ತಿ ನಿರ್ಗಮಿಸಿದೆ. ಭಾರತ, ಕಾಂಗೊ, ನೈಜೀರಿಯಾ, ಇತ್ಯಾದಿಗಳು ಈಚಿನ ದಶಕಗಳ ಉದಾಹರಣೆಗಳು. ಇಲ್ಲೆಲ್ಲಾ ಆಯಾ ರಾಷ್ಟ್ರಗಳನ್ನು ಮತೀಯ ಅಥವಾ ಬುಡಕಟ್ಟುಗಳ ಭಿನ್ನತೆಯ ಆಧಾರದ ಮೇಲೆ ವಿಭಜನೆ ಮಾಡಿರುವುದು ಇಲ್ಲವೇ ಮಾಡಯತ್ನಿಸಿದ್ದು ಗೋಚರಿಸುತ್ತದೆ. ಐರ್ಲೆಂಡಿನ ಸನ್ನಿವೇಶವು ಇವೆಲ್ಲದರ ಪೂರ್ವದಲ್ಲೇ ಸೃಷ್ಟಿಯಾಗಿತ್ತು. ಆ ದೇಶವನ್ನು ಇಂಗ್ಲೆಂಡ್ ಆಕ್ರಮಿಸಿದ್ದು ಸುಮಾರು ಮೂರು ಶತಮಾನಗಳ ಹಿಂದೆ. ರಾಜರ ಆಳ್ವಿಕೆಗೆ ವಿರುದ್ಧವಾಗಿ ಜನರ ಆಳ್ವಿಕೆಯನ್ನು ಸ್ಥಾಪಿಸಲು ತನ್ನ ಇಂಗ್ಲೆಂಡಿನಲ್ಲಿ ಹೋರಾಡಿದ್ದ ಆಲಿವರ್ ಕ್ರಾಮ್‌ವೆಲ್ ಐರ್ಲೆಂಡಿನಲ್ಲಿ ಮಾತ್ರ ಅಂತಹ ಪ್ರಕ್ರಿಯೆಯ ಪರವಾಗಿರಲಿಲ್ಲ. ಅಲ್ಲಿ ಇಂಗ್ಲೆಂಡಿನ ದುರಾಕ್ರಮಣವನ್ನು ಬೆಂಬಲಿಸಿದ್ದೇ ಅಲ್ಲದೆ ತಾನೇ ಸ್ವತಃ ಅದನ್ನು ಇಮ್ಮಡಿಗೊಳಿಸಿದವನು ಅವನು. ಅತಿ ದೈವಭಕ್ತನೂ ವೈಯಕ್ತಿಕ ಸ್ವಾತಂತ್ರ್ಯದ ಸಮರ್ಥಕನೂ ಆಗಿದ್ದ ಜಾನ್ ಮಿಲ್ಟನ್ ಈ ಆಕ್ರಮಣವನ್ನು ದೂಷಿಸಲಿಲ್ಲ; ಇನ್ನೊಬ್ಬ ಕವಿ ಆಂಡ್ರ್ಯೂ ಮಾರ್ವೆಲ್ ಎಂಬುವವನು ಈ ಆಕ್ರಮಣವನ್ನು ಶ್ಲಾಘಿಸಿ ಕವನವೊಂದನ್ನು ಬರೆದ! ಆ ಕವನವನ್ನು ಇಂದಿಗೂ ನಮ್ಮ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಅಭಿಮಾನದಿಂದ ವ್ಯಾಸಂಗ ಮಾಡಲಾಗುತ್ತದೆ. ಆ ಮಾತಂತಿರಲಿ, ಕ್ರಾಮ್‌ವೆಲ್ ಐರ್ಲೆಂಡಿನಲ್ಲಿ ಮಾಡಿದ್ದೇನು? ಸಂಪತ್ತನ್ನು ಸೂರೆ ಮಾಡುವುದು, ಜನರನ್ನು ಪರಾಧೀನಗೊಳಿಸುವುದು, ಮತ್ತು ಅವರ ಮತಧರ್ಮವನ್ನು ಹೀಯಾಳಿಸುವುದು. ಐರ್ಲೆಂಡ್ ಗಣರಾಜ್ಯದ ಕಾರ್ಕ್ ನಗರದ ಬಳಿ ಪುರಾತನವಾದ ಒಂದು ದೊಡ್ಡ ಮನೆ ಇದೆ. ಅದರ ಸುತ್ತಲೂ ಕೋಟೆ ಕಂದಕಗಳಿವೆ. ಅದನ್ನು ಬ್ಲಾರ್ನೆ ಕೋಟೆಮನೆಯೆಂದು ಕರೆಯುತ್ತಾರೆ. ಅದರ ಭಾಗವಾಗಿ ಒಂದು ಸುಂದರವಾದ ಚರ್ಚ್ ಇದೆ. ಆಕ್ರಮಣ ನಡೆಸಿದ ಇಂಗ್ಲೆಂಡಿನ ಕ್ರಾಮ್‌ವೆಲ್ ಈ ತಾಣವನ್ನು ತನ್ನ ಸೈನ್ಯದ ಕುದುರೆಗಳಿಗೆ ಲಾಯವನ್ನಾಗಿ ಬಳಸಿದ್ದ. ಹಾಗೆಂದು ತಿಳಿಸುವ ಫಲಕವು ಆ ಚರ್ಚಿನ ಬಾಗಿಲನ್ನು ಈಗಲೂ ಅಲಂಕರಿಸಿದೆ! ಕ್ರಾಮ್‌ವೆಲ್ ಕೂಡ ಒಬ್ಬ ಕ್ರೈಸ್ತಮತೀಯ. ಆದರೆ ಅವನೊಬ್ಬ ಪ್ರಾಟೆಸ್ಟೆಂಟ್ ಆಗಿದ್ದ. ಆದ್ದರಿಂದ ರೋಮನ್ ಕ್ಯಾಥೋಲಿಕ್ ಬಣಕ್ಕೆ ಸೇರಿದ್ದ ಐರ್ಲೆಂಡಿನ ಒಂದು ಚರ್ಚನ್ನು ಲಾಯವನ್ನಾಗಿ ಪರಿವರ್ತಿಸಲು ಅವನು ಅಳುಕಲಿಲ್ಲ. ಅಲ್ಲೂ ಕ್ರಿಸ್ತನ ಶಿಲುಬೆಗೆ ಸ್ಥಾನವಿತ್ತೆಂಬುದು ಅವನಿಗೆ ಗೌಣವಾಗಿ ಕಂಡಿತು. ಮತಧರ್ಮದ ಮತ್ತು ಎಷ್ಟು ಗಾಢವಾಗಿರಬಹುದೆಂಬುದಕ್ಕೆ ಇದೊಂದು ನಿದರ್ಶನ, ಅಷ್ಟೆ. ಮಸೀದಿ ಮತ್ತು ಮನಸ್ಸುಗಳನ್ನು ಭಗ್ನಗೊಳಿಸುವ ದುಷ್ಟತನ ಈ ಪರಂಪರೆಗೆ ಸೇರುತ್ತದೆ.

ಗಾಂಧೀಜಿಯವರು ತಮ್ಮ ಪ್ರಾರಂಭಿಕ ದೆಸೆಯಲ್ಲಿ ಮೈಗೂಡಿಸಿಕೊಂಡ ಕೆಲವು ಮಾರ್ಗಗಳನ್ನಿಲ್ಲಿ ನೆನೆಯಬೇಕು. ಅವರಿಗೆ ಭಾವನಾತ್ಮಕ ಪರಿಹಾರಗಳು ರುಚಿಸಲಿಲ್ಲ. ಸುಲಭದ ಡೊಂಕು ಹಾದಿಗಳು ಆಕರ್ಷಕವಾಗಲಿಲ್ಲ. ಚಂಪಾರಣ್ಯದ ಗೇಣಿದಾರರ ಮೇಲೆ ಹೇರಲಾಗಿದ್ದ ನೀಲಿ ಬೆಳೆಯ ಕಡ್ಡಾಯದತ್ತ ಅವರು ಗಮನ ಹರಿಸಿ ಹಲವಾರು ತಿಂಗಳುಗಳ ಕಾಲ ಅಲ್ಲಿಯ ಹಳ್ಳಿಗಳಲ್ಲಿ ತಂಗಿ ಆರೋಗ್ಯ, ಶಿಕ್ಷಣ, ಇತ್ಯಾದಿಗಳತ್ತಲೂ ವಿಶೇಷ ಆಸ್ಥೆ ವಹಿಸಿದರು. ನಂತರ ಗುಜರಾತಿನ ಖೇಡಾದಲ್ಲಿ ರೈತರಿಂದ ಬರಗಾಲದಲ್ಲಿ ಕಂದಾಯ ವಸೂಲು ಮಾಡುತ್ತಿದ್ದುದರ ವಿರುದ್ಧ ಹೋರಾಟವನ್ನು ಅಣಿಗೊಳಿಸಿದರು. ಆಮೇಲೆ ಅಹಮ್ಮದಾಬಾದಿನಲ್ಲಿ ಗಿರಣಿ ಕಾರ್ಮಿಕರಿಗೆ ನೀಡಲಾಗು

ತ್ತಿದ್ದ ಪ್ಲೇಗ್ ಭತ್ಯೆಯನ್ನು ಹಿಂತೆಗೆದುಕೊಂಡಾಗ ಅದಕ್ಕೆ ಸರಿದೂಗುವಂತಹ ವೇತನದ ಹೆಚ್ಚಳಕ್ಕಾಗಿ ಸಂಪು ಹೂಡುವುದನ್ನು ಸಮರ್ಥಿಸಿ ಕಣಕ್ಕಿಳಿದರು. ಹೀಗೆಯೇ ಮುಂದುವರಿದಿತ್ತು ಅವರ ಹೋರಾಟ ಪದ್ಧತಿ. ಒಂದು ಕಡೆ ವಸಾಹತು ದೌರ್ಜನ್ಯದ ವಿರುದ್ಧ ಸೆಣಸಾಟ, ಇನ್ನೊಂದು ಕಡೆ ಸಾಮಾಜಿಕ ಪಿಡುಗುಗಳನ್ನು ತೊಡೆದುಹಾಕಲು ಕ್ರಿಯಾಶೀಲ ಕಾರ್ಯಕ್ರಮಗಳು, –ಹೀಗೆ ಸಾಗಿತ್ತು ಅವರ ಚಿಂತನೆ ಮತ್ತು ಕ್ರಿಯೆ. ಜನಸಾಮಾನ್ಯರ ಸಮಸ್ಯೆಗಳು ಹಾಗೂ ಹೋರಾಟಗಳು ಗಾಂಧೀಜಿಯವರಿಗೆ ರಾಜಕೀಯ ಪ್ರಶ್ನೆಗಳಾದುವು, ಪರಿಹಾರಕ್ಕೆ ಸಾಧನಗಳಾದುವು. ಸಾರ್ವಜನಿಕರ ಮನ ಸೆಳೆಯಲು ಅವರ ಅವ್ಯಕ್ತ ಭಾವನೆಗಳ ಉದ್ರೇಕವನ್ನು ತಮ್ಮ ಅಸ್ತ್ರವನ್ನಾಗಿಸಿಕೊಳ್ಳಬಹುದೆಂಬ ಯೋಚನೆಯೇ ಅವರಿಗೆ ಬರಲಿಲ್ಲ. ಎಷ್ಟೇ ದೀರ್ಘವಾದ ಹೋರಾಟವಾದರೂ ಸಹನೆಯನ್ನು ಕಳೆದುಕೊಳ್ಳದೆ ಕೆಲವು ಆರೋಗ್ಯಕರ ನಿಯಮಗಳಿಗೆ ಬದ್ಧರಾಗಿರುವುದು ಅವರ ಕ್ರಮವಾಗಿತ್ತು.

ಅವರ ನಂತರದ ಕಾಲದಲ್ಲಿ ಅಧಿಕಾರ ವಹಿಸಿಕೊಂಡ ಕೆಲವರು ಹಾಗೂ ಅಧಿಕಾರಕ್ಕೆ ಹಾತೊರೆದ ಕೆಲವರು ಅಷ್ಟೊಂದು ಸಹನೆಯನ್ನಾಗಲಿ ಹೋರಾಟದ ನಿಯಮಗಳನ್ನಾಗಲೀ, ಸಾರ್ವಜನಿಕರ ಐಕ್ಯತೆ ಮತ್ತು ಹಿತವನ್ನಾಗಲಿ ಪ್ರಮುಖ ಅಂಶಗಳೆಂದು ಬಗೆಯದೆ ಬೇಗನೆ ಸುಲಭವಾಗಿ ಎತ್ತರಕ್ಕೇರಲು ಅಥವಾ ದೆಹಲಿಯ ಸಿಂಹಾಸನವನ್ನೇರಲು ಉತ್ಸುಕರಾದರು. ಸಾರ್ವಜನಿಕ ಸಂಪತ್ತನ್ನು ಖಾಸಗಿ ಅನುಭೋಗಕ್ಕೆ ಪರಿವರ್ತಿಸಿಕೊಳ್ಳುವುದು ಅಧಿಕಾರದಲ್ಲಿದ್ದಾಗ ಸಾಧ್ಯವೆಂಬುದನ್ನು ಅರಿತ ಮಂದಿ ಹೇಗಾದರೂ ಅದನ್ನು ಪಡೆಯಬೇಕೆಂಬ ಒಂದೇ ಉದ್ದೇಶದ ದಾಸರಾಗಿ ಎಲ್ಲ ಪ್ರಜಾಪ್ರಭುತ್ವವಾದಿ ನಿಯಮಗಳನ್ನು ಗಾಳಿಗೆ ತೂರಲು ಸಿದ್ಧರಾದರು. ''ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ'', ಎನ್ನುವುದು ಅವರ ಮಂತ್ರ. ಅದು ರಾಮನ ನಾಮವಾಗಬಹುದು, ಗಾಂಧೀಜಿಯವರದಾಗಬಹುದು, ಜಾತಿ-ಕೋಮುಗಳದ್ದಾಗಬಹುದು, ಬಸವ-ಅಂಬೇಡ್ಕರರದಾಗಬಹುದು, 'ಗರೀಬಿ' ಜನರದ್ದಾಗಬಹುದು, ಸಮಗ್ರಕ್ರಾಂತಿಯದೂ ಆಗಬಹುದು. ಇವುಗಳ ಪೈಕಿ ಮತಧರ್ಮದ ಭಾವನೆಯನ್ನು ಕೆರಳಿಸುವುದು ಭಾರಿ ರಾಜಕೀಯ ಸರಕಾಗಿ ಪರಿಣಮಿಸಿರುವುದು ಎಲ್ಲರಿಗೂ ಅನುಭವಕ್ಕೆ ಬಂದಿದೆ. ಸ್ವಾತಂತ್ರ್ಯಪೂರ್ವದಲ್ಲಿ ವಸಾಹತು ಯಜಮಾನನು ಅನುಸರಿಸಿದ ಕುತಂತ್ರವನ್ನು ಸ್ವಾತಂತ್ರ್ಯಾನಂತರದಲ್ಲಿ ನಮ್ಮ ಕೆಲವು ರಾಜಕೀಯ ಮುತ್ಸದ್ದಿಗಳು ಅನುಸರಿಸಲು ಹೊರಟಿದ್ದು ಈಗ ಒಂದು ಜ್ವಾಲೆಯಾಗಿ ಹಬ್ಬಿದೆ. ರಾಜಕೀಯವೆಂದರೆ ಸಾಮಾಜಿಕ - ಆರ್ಥಿಕ ಸಿದ್ಧಾಂತಗಳ ಬುನಾದಿಯ ಮೇಲೆ ಇಡೀ ಸಮುದಾಯದ ಏಳಿಗೆಗಾಗಿ ಕೆಲವು ಕಟ್ಟುನಿಟ್ಟಾದ ನೀತಿಗಳನ್ನು ಪ್ರತಿಪಾದಿಸಿ ಅವನ್ನು ಕಾರ್ಯತಃ ಆಗುಮಾಡುವ ಸಂಗ್ರಾಮ ಎಂಬ ಮೂಲತತ್ತ್ವವನ್ನು ಪರಿತ್ಯಜಿಸಿ ಜನರನ್ನು ವಿಭಾಗಗಳನ್ನಾಗಿ ಪ್ರತ್ಯೇಕಗೊಳಿಸುವುದು, ಅವರನ್ನು ದಿಕ್ಕು ತಪ್ಪಿಸಿ ಭಾವೋದ್ರೇಕಗಳಿಗೆ ಗುರಿಮಾಡುವುದು ಮತ್ತು ಅವರ ಮೇಲೆ ಸವಾರಿ ಮಾಡುತ್ತಾ ಅಧಿಕಾರಕ್ಕೇರುವುದು ರಾಜಕೀಯವೆಂದು ಗಣನೆಗೆ ಬಂದಿದೆ [illegible] ರಾಜಕೀಯ, ಜನವಿರೋಧಿ ರಾಜಕೀಯ, [illegible] ವಿರೋಧಿ ರಾಜಕೀಯ ಮತ್ತು [illegible] ರಾಜಕೀಯ. ಇದಕ್ಕೂ ಮತಧರ್ಮಕ್ಕೂ [illegible] ಅರ್ಥಾತ್ ಸಂಬಂಧವಿಲ್ಲ, ಆದರೆ ಅದರ ಹೆಸರಿನಲ್ಲಿ ಇದೆಲ್ಲಾ ಜರುಗುತ್ತದೆ.

ಒಂದೆರಡು ಚಿಕ್ಕ ಉದಾಹರಣೆಗಳನ್ನು ನೋಡೋಣ: (ಅ) ಸಾರ್ವಜನಿಕ ಆಸ್ತಿಯನ್ನು ಕಬಳಿಸಲು ಚರಂಡಿಯ ಹಾಸುಗಲ್ಲುಗಳ ಮೇಲೆ ಗಣೇಶನ ಗುಡಿಯ ನಿರ್ಮಾಣ ಮತ್ತು ಅದಕ್ಕೆ ಆತುಕೊಂಡಂತೆ ಮೂರು ಅಂತಸ್ತುಗಳ ಭವ್ಯ ಕಟ್ಟಡ ತಲೆಯೆತ್ತುವುದು. ಗಣೇಶನನ್ನು ಮುಂದಿಟ್ಟುಕೊಂಡು ನಗರಪಾಲಿಕೆಯ ಆಸ್ತಿಯನ್ನು ಸ್ವಕೀಯವಾಗಿಸಿಕೊಳ್ಳುವುದು ಇಲ್ಲಿಯ ನಿಜವಾದ ಉದ್ದೇಶ. ಯಾವ ನಾಗರಿಕ ನಿಯಮವೂ ಇಂತಹ ಚೌರ್ಯವನ್ನು ಸಮರ್ಥಿಸುವುದಿಲ್ಲ. ವಿಪರ್ಯಾಸವೇನೆಂದರೆ ಅದನ್ನು ಮಾಡಿದವರು ಸಂಭಾವಿತರಂತೆ ಕಾಣಿಸಿಕೊಳ್ಳುತ್ತಾರೆ ಮತ್ತು ಅವರ ಕ್ರಿಯೆಗೆ ಬೇರೆ 'ನಾಗರಿಕರು', ಅಂಗಡಿ ಮಾಲೀಕರು ಮತ್ತು ಮೇಲಧಿಕಾರಿಗಳು ಬೆಂಬಲ ನೀಡುತ್ತಾರೆ. ಮತಧರ್ಮದ ಸಂಕೇತಗಳಲ್ಲಿ ಒಂದಾದ ಗಣೇಶನನ್ನು ಇದಕ್ಕಿಂತಲೂ ಕೆಟ್ಟ ಮುಖವಾಡವನ್ನಾಗಿ ಮಾಡಿಕೊಳ್ಳಬಹುದಾದ ರಾಜಕೀಯ ಇನ್ನಾವುದಿದೆಯೋ ತಿಳಿಯುವುದಿಲ್ಲ. (ಆ) ಯಾವುದೂ ಜನ್ಮ ಮಾತ್ರದಿಂದಲೇ ಸಿದ್ಧಿಸುವುದಿಲ್ಲವೆಂಬ ಧೋರಣೆಯನ್ನು ಕಾರ್ಯತಃ ತೋರಿಸಿದ ಬಸವಣ್ಣ ತನ್ನನ್ನು ಅತ್ಯಂತ ಕೆಳಜಾತಿಗಳ

ಜನರೊಂದಿಗೆ ಗುರುತಿಸಿಕೊಳ್ಳುತ್ತಾನೆ. ಅವರು ಆ ಜಾತಿಗಳಿಗೆ ಸೇರಿದ್ದು ಅಪರಾಧವಲ್ಲ, ಅವರೂ ಶ್ರೇಷ್ಠರು, ಅವರೂ ಸುಸಂಸ್ಕೃತರೇ ಎಂಬ ಸಾಮಾಜಿಕ ಸಮಾನತೆಗಾಗಿ ಹಂಬಲಿಸಿ ದುಡಿದವರು, ಅವರೊಡನೆ ಸಮೀಕರಿಸಿ ಕೊಂಡವರು ಬಸವಣ್ಣನವರು. ಅದನ್ನೆಲ್ಲಾ ಗಾಳಿಗೆ ತೂರಿ ಉಗ್ರವಾದ ನಡತೆಯನ್ನು ತೋರಿಸುವ ಅನೇಕರು ಅವರ ಅನುಯಾಯಿಗಳೆಂದು ಕರೆದುಕೊಳ್ಳುವ ಪ್ರಹಸನ ನಮ್ಮ ನಡುವೆ ಇದೆ. ''ಧರ್ಮಕಾರಣವನ್ನು ಬರೆದ ಅವನನ್ನು ಇನ್ನೂ ಬದುಕಗೊಡಲಾಗಿದೆಯೇ'' ಎಂದು ಗುಡುಗುವ ಶಾಸಕರು ಸಹ ನಮ್ಮಲ್ಲಿದ್ದಾರೆ. ಬಸವಣ್ಣನವರ ಸೌಜನ್ಯಕ್ಕೂ ಈ ಶಾಸಕರ ಆರ್ಭಟಕ್ಕೂ ಎಲ್ಲಿಯ ಸಂಬಂಧ! ಮತಧರ್ಮವನ್ನು ಅಹಿತಕರ ರಾಜಕೀಯಕ್ಕೆ ಅಸ್ತ್ರವನ್ನಾಗಿಸಿ ಕೊಳ್ಳುವ ವೈಪರೀತ್ಯ ಇದರಲ್ಲಿದೆ. (ಇ) ಒಂದು ಇಂಗ್ಲಿಷ್ ವಾರಪತ್ರಿಕೆಯ ಪುರವಣಿಯಲ್ಲಿ ಕೆಲವು ವರ್ಷಗಳ ಹಿಂದೆ ಒಂದು ಕತೆ ಪ್ರಕಟವಾಗಿತ್ತು. ಅದು ಮುಂಚೆ ಮಲಯಾಳಂ ಭಾಷೆಯಲ್ಲಿ ಕೇರಳದ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತಂತೆ. ಆಗ ಅಸಮಾಧಾನದ ಹೊಗೆ ಅಲ್ಲಿ ಆವರಿಸಲಿಲ್ಲ. ಕತೆಯಲ್ಲಿ ಮುಹಮ್ಮದ್ ಎಂಬುವವನೊಬ್ಬ ಏನೋ ಹೀನಾಯ ಕೃತ್ಯದಲ್ಲಿ ತೊಡಗಿದ್ದಂತೆ ಚಿತ್ರಿಸಲಾಗಿದ್ದಿತೆಂದು ತೋರುತ್ತದೆ. ಅದನ್ನು ಓದಲು ಬಾರದ ಸಹಸ್ರ ಸಂಖ್ಯೆಯ ಮುಸಲ್ಮಾನರನ್ನು ಯಾರೋ ಕುಸಂಸ್ಕೃತ ರಾಜಕಾರಣಿ ಪ್ರೇರೇಪಿಸಿ ಪತ್ರಿಕೆಯ ಕಚೇರಿಯೆದುರು ನಿಲ್ಲಿಸಿ ಗೊಂದಲ ಆರಂಭಿಸಿದ. ಸಂಜೆಯ ವೇಳೆಗೆ ಮೂರು ಮಂದಿ ಹತರಾಗಿದ್ದರು, ನೂರಾರು ಚಪ್ಪಲಿಗಳು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿದ್ದವು. ಇಲ್ಲಿ ಹತ್ತಾರು ಪ್ರಶ್ನೆಗಳು ನಮ್ಮ ಮುಂದೆ ಬರುತ್ತವೆ: ರಾಮನೆಂದು ಹೆಸರಿಟ್ಟುಕೊಂಡವನೊಬ್ಬ ದರೋಡೆ ಕೋರನಾದರೆ ಶ್ರೀರಾಮಚಂದ್ರನಿಗೆ ಹೇಗೆ ಅಪಚಾರ ವಾಗುತ್ತದೆ? ಹಾಗಿದ್ದರೆ ಅಂತಹ ಹೆಸರುಗಳನ್ನಿಟ್ಟುಕೊಳ್ಳುವ ಪದ್ಧತಿಯನ್ನು ಕೈ ಬಿಡಬೇಕೆ? ಮುಹಮ್ಮದ್ ಎಂಬ ಹೆಸರಿರುವವರು ಯಾರೂ ದುಷ್ಕೃತ್ಯಗಳಲ್ಲಿ ತೊಡಗಿಲ್ಲವೆ? ಕತೆಯಲ್ಲಿ ಹಾಗೆ ಚಿತ್ರಿಸಿದರೆ ಪ್ರವಾದಿ ಮುಹಮ್ಮದನಿಗೆ ಅಗೌರವ ಹೇಗೆ ಉಂಟಾಗುತ್ತದೆ? ಇದನ್ನೆಲ್ಲಾ ಮೂಲೆ ಗೊತ್ತಿ ರಾಜಕಾರಣಿಯೊಬ್ಬ ಮತಧರ್ಮದ ಮುಸುಕಿನಲ್ಲಿ ತನ್ನ ಬೇಳೆ ಬೇಯಿಸಿಕೊಳ್ಳಲು ಅಮಾಯಕರನ್ನು ಬಲಿಗೀಡುಮಾಡಿದ. ಜನರನ್ನು ಭಾವೋದ್ರೇಕಕ್ಕೆ ಗುರಿಮಾಡಿ ತನ್ನ ಪ್ರಾಮುಖ್ಯತೆಯನ್ನು ಪ್ರದರ್ಶಿಸಿ ಕೊಳ್ಳುವ ಇಂತಹ ನಾಯಕಶಿಖಾಮಣಿಗಳ ಮುಖಕ್ಕೆ ಇನ್ನೆಷ್ಟು ಮಂಗಳಾರತಿ ಎತ್ತಬೇಕು?

ನಿಜಕ್ಕೂ ಮತಧರ್ಮದ ಮೌಲ್ಯಗಳಿಂದ ಪ್ರೇರಿತ ರಾದ ಸಜ್ಜನರು ಜನಸಮುದಾಯದ ಬಗೆಗೆ ತಾಳುವ ನಿಲುವೇ ಬೇರೆ. ಅವರನ್ನು ಬಲಿಪಶುಗಳನ್ನಾಗಿ ಮಾಡುವ ಬದಲು ತಾವೇ ತಮ್ಮ ಪ್ರಾಣವನ್ನು ಬಲಿಕೊಡುವುದಕ್ಕೆ ಅವರು ಹಿಂಜರಿಯುವುದಿಲ್ಲ. ಒಂದು ಉದಾಹರಣೆ ಯಾಗಿ ಚೈತನ್ಯ ಮಹಾಪ್ರಭುಗಳ ಜೀವನವನ್ನು ನೋಡಬಹುದು. ಸಂಮರ್ದಿತ ರೈತಾಪಿ ಜನಗಳನ್ನು ಸಂಘಟಿಸಿ ಭೂಮಾಲಿಕರನ್ನು ಛೇಡಿಸುತ್ತಾ ಅವರು ಲಕ್ಷಗಟ್ಟಲೆ ರೈತರೊಡನೆ ಪುರಿ ಜಗನ್ನಾಥನ ಬಳಿಗೆ ಬಂದರು. ಭೂಮಾಲಿಕರ ಮತ್ತು ಪುಂಡ ಪಂಡರ ಕುತಂತ್ರಗಳಿಗೆ ಬಲಿಯಾಗಿ ಅಸು ನೀಗಿದರು. ಶ್ರೀಮಂತ ರೊಡನೆ ಸಖ್ಯ ಬೆಳೆಸುವುದು ಅವರಿಗೆ ಸುಲಭವಾಗಿ ರುತ್ತಿತ್ತು; ಅವರ ಜೀವನವೂ ಸುಗಮವಾಗಿರುತ್ತಿತ್ತು. ಇದಕ್ಕೆ ದೊಡ್ಡ ಪುರಾವೆ ತರ್ಕಗಳ ಅಗತ್ಯವಿಲ್ಲ. ನಮ್ಮ ಸುತ್ತಮುತ್ತ ಬಲಿಷ್ಠವಾಗಿ ರಾರಾಜಿಸುತ್ತಿರುವ ಮಹಾಂತರು, ಸ್ವಾಮಿಗಳು, ಬಾಬಾಗಳು ಇರುವಂತೆ ಅಂದು ಚೈತನ್ಯ ಮಹಾಪ್ರಭುಗಳು ಇರಬಹುದಿತ್ತು. ಹಾಗಿದ್ದಿದ್ದರೆ ನಮಗಿಂದು ಅವರ ಹೆಸರೇ ಗೊತ್ತಿರುತ್ತಿರಲಿಲ್ಲ. ಅವರು ಆಯ್ದುಕೊಂಡ ಮೌಲ್ಯಗಳು ಹಾಗೂ ಹಾದಿ ಜನಪರವಾಗಿದ್ದುವು. ಅದೇ ಮತಧರ್ಮದ ಶ್ರೇಷ್ಠಮಟ್ಟದ ಪಾಲನೆಯೆಂದು ಅವರು ಭಾವಿಸಿ ಅದರಂತೆ ನಡೆದರು. ಇಂತಹ ಸದ್ಗುಣಗಳು ಮಾನವನ ಚರಿತ್ರೆಯಲ್ಲಿ ನೂರಾರು ಮಂದಿ ಆಗಿಹೋಗಿದ್ದಾರೆ. ಚೈತನ್ಯರಂತೆಯೇ ರೈತಾಪಿ ಜನರೊಡನೆ ಬೆರೆತು ಹೋರಾಡಿ ಮರಣದಂಡನೆಗೆ ಗುರಿಯಾದ ಒಬ್ಬ ಕ್ರೈಸ್ತಪಾದ್ರಿ ಜರ್ಮನಿಯಲ್ಲಿದ್ದ. ಅವನ ಹೆಸರು ಥಾಮಸ್ ಮುನ್ಸರ್. ಅವನೂ ಹೆಚ್ಚು ಕಡಿಮೆ ಚೈತನ್ಯರ ಸಮಕಾಲೀನನೇ ಆಗಿದ್ದ.

ಈಚಿನ ದಶಕಗಳಲ್ಲಿ ದಕ್ಷಿಣ ಅಮೆರಿಕಾದ ಕೆಲವು ದೇಶಗಳಲ್ಲಿ ಹತ್ತಾರು ಮಂದಿ ಕ್ರೈಸ್ತ ಪಾದ್ರಿಗಳು ಇದೇ ಪರಂಪರೆಯಲ್ಲಿ ಕ್ರಿಯಾಶೀಲರಾಗಿ ಪ್ರಸಿದ್ಧಿ ಪಡೆದಿದ್ದಾರೆ. ಅವರು ''ವಿಮೋಚನಾ ಮತಧರ್ಮ ಸಿದ್ಧಾಂತ''ವೆಂದು ತಮ್ಮ ಚಿಂತನೆ ಹಾಗೂ ಕ್ರಿಯೆಗಳನ್ನು ವ್ಯಾಖ್ಯಾನಿಸಿಕೊಂಡಿದ್ದಾರೆ. ಅವರೆಲ್ಲಾ ರಾಜಕೀಯವಾಗಿ ಸಕ್ರಿಯರಾಗಿರುವ ಜನ. ಆದರೆ ಮತಧರ್ಮದ ಗುಂಗಿನಲ್ಲಿ ಶೋಷಿತ ಜನರು ಭಾವೋದ್ರೇಕಗಳಿಂದ ಅಸಹ್ಯ ಪ್ರವೃತ್ತಿಗಳಿಗೆ ಬಲಿಯಾಗದಂತೆ ಅವರನ್ನು ಸಂಘಟಿಸುವ ರಾಜಕಾರಣ ಇವರದು. ಕ್ರೈಸ್ತಮತದ ಮೌಲ್ಯಗಳು ಜೀವಂತವಾಗಿ ಅರ್ಥ ಪಡೆದುಕೊಳ್ಳಬೇಕೆಂಬ ಆಸಕ್ತಿ ಇವರಲ್ಲಿ ವಿಶೇಷವಾಗಿದೆ.

ಇದಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾದದ್ದು ಮತಧರ್ಮದ ಜಡ್ಡು ಸಂಪ್ರದಾಯದ ಅಧಿಕೃತ ವಕ್ತಾರರ ನಡತೆ. ಇದಕ್ಕೆ ಒಂದು ಉದಾಹರಣೆಯೆಂದರೆ ಇಸ್ಲಾಂನ ಹೆಸರಿನಲ್ಲಿ ಅತ್ಯಂತ ಅಮಾನವೀಯ ಕೃತ್ಯಗಳಲ್ಲಿ ತೊಡಗಿರುವ ತಾಲಿಬಾನ್ ತಂಡಗಳದ್ದು. ಇದು ಖೊಮೇನಿ ಸಂಪ್ರದಾಯ. ಮತಧರ್ಮದ ರಕ್ಷಣೆಯ ಹೆಸರಿನಲ್ಲಿ ಜನರನ್ನು ಹಿಂಸಿಸುವ, ಕೊಲ್ಲುವ, ಅಪಮಾನಿಸುವ ಬೀಭತ್ಸ ಲಕ್ಷಣ ಇದರಲ್ಲಿದೆ. ಮಹಿಳೆಯರನ್ನು ತುಚ್ಛವಾಗಿಸುವುದಂತೂ ಇದರ ಮೂಲಭೂತ ಗುಣ. ಅದೂ ರಾಜಕೀಯವೇ. ಆದರೆ ಅದು ಅನಾಗರಿಕ ರಾಜಕೀಯ, ಜನವಿರೋಧಿ ರಾಜಕೀಯ, ಇತಿಹಾಸ ವಿರೋಧಿ ರಾಜಕೀಯ. ಇಂತಹ ಉದಾಹರಣೆಗಳು ಬೇರೆ ಮತಗಳ ಮೂಸೆಯಲ್ಲೂ ದೊರೆಯುತ್ತವೆಂಬುದು ವ್ಯಾವಹಾರಿಕ ಸತ್ಯ.

ಇಂತಹ ಪರಿಸ್ಥಿತಿಯು ಉದ್ಭವವಾಗುವುದಾದರೂ ಏಕೆಂಬುದು ಒಂದು ಸೈದ್ಧಾಂತಿಕ ಪ್ರಶ್ನೆ. ಅದರ ವಿಶ್ಲೇಷಣೆ ಮಾಡಿ ಪರಿಹಾರ ಕಂಡುಕೊಳ್ಳದೆ ಸುಮ್ಮನೆ ಮುಲ್ಲಾ ಮಠಾಧ್ಯಕ್ಷ ಪಾದ್ರಿಗಳನ್ನು ದೂಷಿಸಿ, ವಿಡಂಬನೆ ಮಾಡಿ, ಇದು ಹೀಗೇ ಇರುತ್ತದೆಂದು ಅಸಹಾಯಕತೆಯನ್ನು ಪ್ರದರ್ಶಿಸುವುದು ನಿರರ್ಥಕ. ಹಿಟ್ಲರನಂತಹ ವ್ಯಕ್ತಿಯೊಬ್ಬ ಎಂತಹ ಹಿನ್ನೆಲೆಯಿಂದ ಪ್ರವರ್ಧಮಾನಕ್ಕೆ ಬಂದ, ಯಾರ ಹಿತಾಸಕ್ತಿಗಳನ್ನು ರಕ್ಷಿಸುವುದು ಅವನ ಉದ್ದೇಶವಾಯಿತು ಮತ್ತು ಇದಕ್ಕಾಗಿ ಯಾರು ಅಪಾರ ಕಷ್ಟ-ನಷ್ಟಗಳನ್ನು ಅನುಭವಿಸಿದರು ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡರೆ ಈ ಸೈದ್ಧಾಂತಿಕ ಪ್ರಶ್ನೆಯು ಜಟಿಲವಾಗಿ ಉಳಿಯುವುದಿಲ್ಲ. ಸಂಕ್ಷೇಪವಾಗಿ ಹೇಳುವುದಾದರೆ ಇದರ ತಾತ್ಪರ್ಯ ಹೀಗಿದೆ: ನಮ್ಮದು ಅಭಿವೃದ್ಧಿ ಹೊಂದಬೇಕಾದ ಹಿಂದುಳಿದ ದೇಶ. ನಮ್ಮ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಅಪವ್ಯಯ ಮತ್ತು ದುರ್ಬಳಕೆ ದಿನನಿತ್ಯದ ಅನುಭವಕ್ಕೆ ಬರುವ ಸಂಗತಿ. ಅವನ್ನು ರೂಢಿಸಿಕೊಂಡು ಇಡೀ ಜನಸಮುದಾಯದ ಆಕಾಂಕ್ಷೆ ಮತ್ತು ಕ್ರಿಯಾಶಕ್ತಿಯನ್ನು ಋಜುಮಾರ್ಗದಲ್ಲಿ ಕೊಂಡೊಯ್ಯುವ ಸವಾಲು ನಮ್ಮ ಮುಂದಿದೆ. ಅದನ್ನು ಫಲಕಾರಿಯಾಗುವಂತೆ ಎದುರಿಸುವ ಸಾಮೂಹಿಕ ಶಕ್ತಿಯನ್ನು ದುಡಿಯುವ ಜನ ಸಂಘಟಿತರಾಗಿ ಪಡೆಯಬೇಕು; ಅಂತಹ ಮುನ್ನೋಟವಿರುವ ರಾಜಕೀಯ ಸಿದ್ಧಾಂತ ಮತ್ತು ಅದರ ಕಾರ್ಯಕರ್ತನೆನಿಸಿಕೊಳ್ಳುವ ರಾಜಕೀಯ ಪಕ್ಷ ಅಂತಹ ಸಂಘಟನೆಯನ್ನು ರಚಿಸಬೇಕು. ಎಲ್ಲ ರೀತಿಯ ಅಸಮತೋಲನ ನಮ್ಮಲ್ಲಿದೆ. ಪ್ರಾದೇಶಿಕ, ಭಾಷಿಕ, ಮತೀಯ, ವರ್ಗೀಯ, ಲಿಂಗಭೇದದ ಹಾಗೂ ಇನ್ನಿತರ ಅಸಮತೋಲನಗಳ ಮಧ್ಯೆ ವೈಯಕ್ತಿಕ ಮತ್ತು ಸಾಮೂಹಿಕ ಆಕಾಂಕ್ಷೆಗಳು ಇಂದು ಬಲವತ್ತರವಾಗಿ ಪ್ರಕಟವಾಗುತ್ತಿವೆ. ಅವುಗಳನ್ನೆಲ್ಲಾ ಒಂದು ಸ್ಪಷ್ಟವಾದ ದಿಕ್ಕಿನಲ್ಲಿ ಚಲಿಸುವಂತೆ ಮಾಡುವ ಸನ್ನಿವೇಶವನ್ನು ನಾವು ರಚಿಸಿಕೊಂಡಿಲ್ಲ. ಮತ್ತು ಒಂದು ಗುರಿಯತ್ತ ಸಾಗಲು ಪ್ರೇರೇಪಿಸುವಂತಹ ಒಂದು ಗಾರೆಯಿಂದ ಅವನ್ನು ಒಟ್ಟಾಗಿಸುವ ಯತ್ನವೂ ನಮ್ಮಲ್ಲಿ ಅಷ್ಟಾಗಿ ನಡೆದಿಲ್ಲ. ಹತಾಶೆ, ಅಸ್ಥಿರತೆ, ವಿಭಜನೆಯ ಮನೋಭಾವ, ಇತರರನ್ನು ಆಕ್ರಮಣ ಮಾಡುವಂತಹ ದೃಷ್ಟಿ, ಅಸ್ಮಿತೆಯ ಪ್ರದರ್ಶನ, ಇವುಗಳೆಲ್ಲಾ ಅದರ ಫಲ. ಉತ್ಪಾದನೆಯ ಸಲಕರಣೆಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವವರಿಗೆ ಲಾಭಗಳಿಕೆಗೆ ಇಂತಹ ಬಿಕ್ಕಟ್ಟಿನ ಸನ್ನಿವೇಶವು ಪ್ರಶಸ್ತವಾಗಿದೆ. ಆದ್ದರಿಂದ ಅದಕ್ಕೆ ಸೊಪ್ಪು ಹಾಕುವುದು ಅವರಿಗೆ ಸಹಜವಾಗಿದೆ. ಈ ಕೊಂಡಿಯಿಂದ ಬಿಡಿಸಿಕೊಳ್ಳಲು ನಮಗೆ ಇಂದಿನ ಸಾಮಾಜಿಕ-ಆರ್ಥಿಕ ಸಂರಚನೆಗೆ ಪರ್ಯಾಯವಾದ ಬೇರೊಂದು ಸಂರಚನೆಯ ಅಗತ್ಯವಿದೆ. ಅದರ ಪ್ರಜ್ಞೆಯೇ ಮೂಡದಿರುವಂತೆ ದಿಗ್ಬಂಧನ ವಿಧಿಸುವ ಸಂಚು ನಮ್ಮಲ್ಲಿ ನಡೆದಿದೆ, ನಡೆಯುತ್ತಿದೆ. ಅದರಿಂದಾಗಿ ಅಮೂರ್ತವಾದ ಮತ್ತು ಅಧ್ರುವವಾದ ಆಶಯಗಳಿಗೆ ಪ್ರಾಮುಖ್ಯತೆ ದೊರೆತು ನಿಜಕ್ಕೂ ಪ್ರಸ್ತುತವಾದ ವಿಷಯಗಳು ಪ್ರಕಾಶಕ್ಕೆ ಬರುತ್ತಿಲ್ಲ. ಶಿಕ್ಷಣ ದೊರೆತೋ ದೊರೆಯದೆಯೋ ಇರುವ ವ್ಯಕ್ತಿ ನಿರುದ್ಯೋಗಿಯಾಗಿ ತನ್ನ ವ್ಯಕ್ತಿತ್ವದ ಪ್ರಕಟಣೆಗೆ ಅವಕಾಶಗಳನ್ನು ಕಳೆದುಕೊಂಡಾಗ ಯಾವುದೋ ಅಮೂರ್ತವಾದ ಆಶಯಕ್ಕೆ ಜೋತುಬೀಳುವುದು ಅಸ್ವಾಭಾವಿಕವಲ್ಲ. ಆಗ ಅವನಿಗೆ ಇಟ್ಟಿಗೆ, ರಥಯಾತ್ರೆ, **ಧರ್ಮಕಾರಣ**, ಮಸೀದಿ, ಮಂದಿರ ಇವೇ ಬೌದ್ಧಿಕ ಆಹಾರ ಒದಗಿಸಲಾರಂಭಿಸುತ್ತವೆ.

ಮತಧರ್ಮವು ರಾಜಕೀಯವನ್ನು ಆವರಿಸುವಾಗ ಎಂತಹ ಪ್ರಕ್ರಿಯೆಯನ್ನು ಆರಂಭಿಸಬಾರದೋ ಅದನ್ನು ಆರಂಭಿಸುತ್ತದೆ. ಇಂತಹ ಆಯಕಟ್ಟಿನಲ್ಲಿ ಇತರರ ಅಜ್ಞಾನವು ನನ್ನ ರಾಜಕೀಯ ಬಂಡವಾಳವಾದಾಗ ದಾಳಗಳನ್ನು ಎಸೆಯುವವನು ನಾನು, ಅವರು ಕೇವಲ ಪೇದೆಗಳಾಗಿಬಿಡುತ್ತಾರೆ. ಆಕಾಶದಲ್ಲೆಲ್ಲೋ ಕಂಗೊಳಿಸುವ ಸಂಪತ್ತನ್ನು ತಮಗೆ ಕೊಡಿಸಲಾಗುತ್ತದೆಯೆಂಬ ಭ್ರಮೆ ಅವರನ್ನು ಹುಚ್ಚೆಬ್ಬಿಸುತ್ತದೆ. ಈ ಚದುರಂಗದಾಟದಲ್ಲಿ ಯಾರೋ ಕುತಂತ್ರಿಯು ಸಂಪತ್ತನ್ನು ದೋಚಿ ಸವಿಯುತ್ತಾನೆ.

ಪಾಪ ಪ್ರಜ್ಞೆಯನ್ನು ಹಗುರ ಮಾಡಿಕೊಳ್ಳಲು ನಮ್ಮಲ್ಲಿ ವಿಪುಲವಾದ ಸಾಮಗ್ರಿಗಳಿವೆ. ಪೂಜೆ, ಪುನಸ್ಕಾರ, ಭಜನೆ, ಯಜ್ಞ, ಸಂಕೀರ್ತನೆ, ದಕ್ಷಿಣೆ, ತೀರ್ಥಯಾತ್ರೆ, ಇವುಗಳು ಅಂತಹ ಕೆಲವು ಸಾಮಗ್ರಿಗಳು ಮಾತ್ರ. ಶಿಕ್ಷಣ ಸಂಸ್ಥೆಯೊಂದನ್ನು ನಡೆಸುವ ಕ್ರೈಸ್ತ ಸಂಪ್ರದಾಯದ ಒಂದು ಗುಂಪು ಒಂದೊಮ್ಮೆ ಕೇರಳ ಮತ್ತು ಕರ್ನಾಟಕಗಳಲ್ಲಿ ದೊಡ್ಡ ದೊಡ್ಡ ಪ್ರತಿಭಟನಾ ಮೆರವಣಿಗೆಗಳನ್ನು ನಡೆಸಿತ್ತು. ಕಾರಣ ಸ್ವಾರಸ್ಯವಾಗಿತ್ತು. ಆ ಸಂಸ್ಥೆಯ ನಿಯಮ ಬಾಹಿರ ದುಷ್ಕೃತ್ಯಗಳನ್ನು ಬಹಿರಂಗಗೊಳಿಸಿ ಅವನ್ನು ಮಾಡ ಬಾರದೆಂದು ವಿಶ್ವವಿದ್ಯಾಲಯವೊಂದು ಸಂಸ್ಥೆಗೆ ನಿರ್ದೇಶನ ನೀಡಿದ್ದು ಅವರ ಧರ್ಮಪ್ರಜ್ಞೆಯನ್ನು ಹೊಡೆದೆಬ್ಬಿಸಿತ್ತು. ಪ್ರತಿ ಭಾನುವಾರ [illegible] ಹೋಗುವವನು ಯಾವ ನಿಯಮ ಉಲ್ಲಂಘಿಸಿದರೇನು, ಪರಮಾತ್ಮನ ರಕ್ಷಣೆ ಅವನಿಗೆ ಇದೆಯಲ್ಲವೆ? ಅಂತೆಯೇ ದಿನಕ್ಕೆ ಐದು ಬಾರಿ ಅಥವಾ ಶುಕ್ರವಾರದಂದು ಒಮ್ಮೆ ಮಸೀದಿಗೆ ಹೋಗಿ ಸೊಂಟ ಬಗ್ಗಿಸಿದವನಿಗೂ ಅಲ್ಲಾಹನ ರಕ್ಷಣೆ ಇದೆ. ಇನ್ನು ಕಪ್ಪುಹಣದ ಒಂದು ಭಾಗವನ್ನು ತಿರುಪತಿಯ ತಿಮ್ಮಪ್ಪನಿಗೆ ಲಂಚವಾಗಿ ಕೊಡುವವನಿಗೆ ಯಾವ ಜುಡಿಷಿಯಲ್ ಆಕ್ಟಿವಿಸಂ ತಾನೆ ಏನು ಮಾಡೀತು! ಬಾಯಿಗೆ ಬಟ್ಟೆ ಕಟ್ಟಿಕೊಂಡ ಜೈನ ಮುನಿಗಳು ಯಾವುದೇ ವ್ಯಾಪಾರಿಯ ಮಾನವನ್ನು ಕಾಯಬಲ್ಲರು. ಅಂದರೆ, ಮತಧರ್ಮವು ಇವರಿಗೆಲ್ಲಾ ಅಭೇದ್ಯವಾದ ಗುರಾಣಿಯಾಗಿದೆ. ಆದ್ದರಿಂದ ಮತಧರ್ಮದ ಕಕ್ಷೆಯಲ್ಲಿ ನಡೆಯುವ ರಾಜಕೀಯದಲ್ಲಿ ಅವರೆಲ್ಲಾ ಪಾಲುದಾರರು.

ಚೈತನ್ಯ ಮಹಾಪ್ರಭುಗಳಂತಹವರ ಮತಧರ್ಮದ ಮೌಲ್ಯಪ್ರಜ್ಞೆಯ ಬದಲಾಗಿ ಪೋಪ್ ಪಾಲರಂತಹವರ ಮತಧರ್ಮದ ಲಾಭಪ್ರಜ್ಞೆ ಇಂದು ನಮಗೆ ಹಲವು ಸಂದರ್ಭಗಳಲ್ಲಿ ಕಾಣಬರುತ್ತಿದೆ. ಜೊತೆಗೆ ಖೊಮೇನಿಯಂತಹವರ ಮೌಢ್ಯ ಪ್ರಜ್ಞೆಯೂ ಸೇರಿ ಮತಧರ್ಮವು ಅಪಾಯಕಾರಿ ಆಯಾಮಗಳಿಂದ ಕಲುಷಿತಗೊಂಡಿದೆ. ರಾಜಕೀಯದಲ್ಲಿ ಮತಧರ್ಮದ ಕೆಲವು ಘನಾತ್ಮಕ ಮೌಲ್ಯಗಳನ್ನು ಮೇಳೈಸಿಕೊಳ್ಳುವುದು ಸಾರ್ಥಕವಾಗಿರುತ್ತದೆ. ಅವು ಸಾರ್ವತ್ರಿಕ ಮತ್ತು ಸಾಮುದಾಯಿಕ ಆಶಯಗಳ ಪ್ರತಿಫಲನವಾಗಿರಬೇಕು, ಅಷ್ಟೆ. ಆದರೆ, ಅನ್ಯಮತ ದ್ವೇಷವೂ ಸೇರಿದಂತೆ ಕೆಲವು ತ್ಯಾಜ್ಯ ಮನೋಭಾವಗಳನ್ನು ಮತಧರ್ಮದ ಕಪ್ಪು ಛಾಯೆಯಡಿ ರಾಜಕೀಯಕ್ಕೆ ಆರೋಪಿಸಿದಾಗ ಅತಂತ್ರದ ಸ್ಥಿತಿ ಅನಿವಾರ್ಯ. ಅಲ್ಲದೆ, ಮತಧರ್ಮದ ಆಚರಣೆಯು ಸ್ವಕೀಯವಾದದ್ದು, ಖಾಸಗಿಯಾದದ್ದು; ಅದನ್ನು ಸಮೂಹ ಸನ್ನಿಗೆ ತಿರುಗುವಂತೆ ಬಳಸುವ ರಾಜಕೀಯವು ಸರ್ವಥಾ ಅಸಮರ್ಥನೀಯ.

ಈಗ ಸುಮಾರು ಮೂವತ್ತೈದು ವರ್ಷಗಳ ಹಿಂದೆ ಆಗ ಲೋಕಸಭಾ ಸದಸ್ಯರಾಗಿದ್ದ ಶ್ರೀ ಎಚ್. ವಿ. ಕಾಮತ್ ಲೋನಾವ್ಲಾದ ಕೈವಲ್ಯಧಾಮಕ್ಕೆ ಭೇಟಿ ನೀಡಿದ್ದರು. [illegible] ಚಿಕ್ಕ ಗೋಷ್ಠಿಯಲ್ಲಿ ಮಾತನಾಡುತ್ತಾ [illegible] ''ನಮ್ಮ ರಾಜಕೀಯ ಚಿಂತನೆ ಮತ್ತು [illegible] ಯೋಗದ ಅಂಶಗಳನ್ನು [illegible]'' [illegible] ಸ್ವಾಮಿ [illegible] ತಕ್ಷಣ ಹೇಳಿದರು: ''ಹಾಗೇ ಮಾಡಿ, [illegible] ಚಿಂತನೆ ಮತ್ತು [illegible] [illegible]''


ನಡೆದ ಹಾದಿಗುಂಟ

ಅಮರೇಶ ನುಗಡೋಣಿ

ಸಿದ್ಧವೀರಪ್ಪ ಮನೆಗೆ ಬಂದಾಗ ರಾತ್ರಿ ೧೧ ಗಂಟೆಯಾಗಿತ್ತು. ದಣದು ಮೆತ್ತಗಾಗಿದ್ದ. ಚಂದ್ರಮ್ಮ ಕಾಶಿಂಬಿ ಆತಂಕದಿಂದ ಆತನ ದಾರಿಯನ್ನೇ ಕಾಯುತ್ತಿದ್ದರು. "ಅಲ್ಲೇ ಹಳ್ಳಿಯಲ್ಲಿ ಮಣ್ಣು ಮಾಡಲು ಹೇಳಿದೆ. ಅದರಂತೆ ಮಾಡಿ ಮುಗಿಸಿದ್ರು." ಅಂದ. ಕಾಶಿಂಬಿ ದುಃಖಿಸಿ ಅಳತೊಡಗಿದಳು. ಅದನ್ನು ನೋಡಿ ಕಾಶಿಂಬಿಯ ಬಗ್ಗೆ ಕರುಣೆ ಉಕ್ಕಿ ಬಂತು. ಚಂದ್ರಮ್ಮ ಅಡಿಗೆ ಮನೆಯೊಳಗೆ ಹೋದಳು. ಸಿದ್ಧವೀರಪ್ಪ ಸ್ನಾನ ಮಾಡಿದ. ಚಂದ್ರಮ್ಮ ಊಟಕ್ಕೆ ವ್ಯವಸ್ಥೆಮಾಡಿ ಕರೆದರೂ ಉಣ್ಣದೆ, ಬರೀ ನೀರು ಕುಡಿದು ಹೊರಬಂದ. ಬೇಸಿಗೆಯ ಧಗೆ ತಾಳದೆ ಮನೆ ಮಾಳಿಗೆ ಏರಿ, ಬಯಲಲ್ಲೇ ಹಾಸಿಗೆ ಹಾಸಿಕೊಂಡು ಮಲಗಿದ. ಹಾಸಿಗೆಗೆ ಮೈ ಕೊಡದೆ ಎರಡು ದಿನ ಕಳೆದಿದ್ದ. ಅಂಗಾತ ಮಲಗಿ ನಿಟ್ಟುಸಿರು ಬಿಟ್ಟ. ಅಂದೇ ಮಧ್ಯಾಹ್ನ ಮಣ್ಣು ಸೇರಿದ್ದ ಹೆಂಡತಿ ಸುಜ್ಞಾನಮ್ಮಳ ಹೆಣ ನೆನಪಿಗೆ ಬಂತೇ ಹೊರತು, ಆಕೆಯ ಜೀವಂತ ಚಿತ್ರ ಮನಸ್ಸಿನಲ್ಲಿ ಮೂಡಿ ನಿಲ್ಲಲಿಲ್ಲ. ಸದ್ದಿಲ್ಲದೆ ಅನಾಥಳಂತೆ ಕುಣಿಗೆ ಸೇರಿದ್ದಳು. ಏಳ್ಳಿ ಇದ್ದು ಕೂಡ ಬೀದಿನಾಯಿಯಂತೆ ಬದುಕಿದ ಹೆಂಡತಿಯ ಪಾಡು ನೆನಪಾಗಿ ವ್ಯಥೆಯಾಯಿತು.

ವಾರದ ಹಿಂದೆ ಹೆಂಡತಿಗೆ ಒಂದು ಮದುವೆಯ ಪತ್ರ ಕೊಡುತ್ತ, "ನಿನ್ನ ದೊಡ್ಡಪ್ಪನ ಮಗಳ ಮದುವೆ ಕಾರ್ಡು ಬಂದದ ನೋಡು" ಎಂದು ಸಹನೆಯಿಂದಲೇ ಮಾತಾಡಿ ಕೊಟ್ಟ. ಆಕೆಯ ಹುಟ್ಟು ಗುಣವಾದ ಸಿಡುಕುತನ ಇನ್ನೇನು ಹೊರಬೀಳುತ್ತಿತ್ತು. ಆದರೆ, ಅದು ತನ್ನ ಸಂಬಂಧಿಕರ ಮದುವೆ ಸುದ್ದಿಯಾದ್ದರಿಂದ "ಹೌದೇನು?" ಎಂದು ಮೆತ್ತಗೆ ಕೇಳಿದಳು. ಮದುವೆ ಯಾವಾಗ, ಎಲ್ಲಿ ಎಂಬ ವಿವರ ಕೇಳಿಕೊಂಡು, "ನಿನಗಂತೂ ಬಂಧು-ಬಳಗ ಯಾರೂ ಬೇಕಿಲ್ಲ. ಕಲ್ಲು ಬಂಡೆಗಿಂತ ಅತ್ತತ್ತ. ನಾನನ್ನ ಮದುವಿಗೆ ಹೋಗಿ ಬರ್ತೀನಿ" ಎಂದು ಅಂಗಲಾಚುವಂತೆ ಕೇಳಿದಳು. ಹೆಂಡತಿ ಅಂದಂತೆ ಸಿದ್ಧವೀರಪ್ಪ ತನ್ನವರು ಎಂಬ ಸಂಬಂಧಿಗಳನ್ನು ಉಳಿಸಿಕೊಂಡಿರಲಿಲ್ಲ. ತನ್ನ ಸ್ವಾಭಿಮಾನವನ್ನು ಅವರೆಲ್ಲರ ಮುಂದೆ ಕಣ್ಣಿಗೆ ಹೊಡೆಯುವಂತೆ ತೋರಿಸಬೇಕೆಂಬ ಛಲವಿತ್ತು. ಅದರಂತೆ ಮಾಡಿದ್ದ. ಖಾಜಿ ಮಾಸ್ತರನ ಗೆಳೆತನವಾದ ಮೇಲೆ ಅದೂ ತನ್ನ ಸಣ್ಣತನವೆಂಬ ಅರಿವು ಮೂಡಿತ್ತು. ಹೆಂಡತಿ ಮದುವೆಗೆ ಸಿದ್ಧಳಾಗಿ, "ದೊಡ್ಡಪ್ಪನ ಮಗಳಿಗೆ ಒಂದು ನೂರು ರೂಪಾಯಿ ಮುಯ್ಯಿ ಇಡ್ತೀನಿ" ಅಂದಳು. ಸಿದ್ಧವೀರಪ್ಪ "ಒಂದು ಸಾವಿರದ ಒಂದು ರೂಪಾಯಿ ಮುಯ್ಯಿ ಮಾಡು, ಮ್ಯಾಗ ಒಂದು ಸೀರೆ ಕೊಟ್ಟು ಮದುವೆ ಮುಗಿಸಿ ಬಾ" ಎಂದು ಹಣ ಕೊಟ್ಟ. ಹಿಗ್ಗಿ ಸಡಗರದಿಂದ ಹೋಗುವಾಗ, "ಮಗನ ಮಾರೆ ನೋಡಂಗಾಗ್ಯಾದ, ಅವನಿಗೆ ಇನ್ನೇಸು ದಿನ ವನವಾಸ..." ಕಣ್ಣೀರು ತಂದು, ಹಲಬುತ್ತ ಹೋದದ್ದು ಸಿದ್ಧವೀರಪ್ಪನಿಗೆ ಕಣ್ಣಿಗೆ ಕಟ್ಟಿತ್ತು. ನಿದ್ದೆ ಬರಲಿಲ್ಲ, ಬದುಕಿನಲ್ಲಿ ಸಂಭವಿಸಿದ ಘಟನೆಗಳೆಲ್ಲ ನೆನಪಿಗೆ ಬರತೊಡಗಿದವು-

ಸಿದ್ಧವೀರಪ್ಪನ ತಂದೆ ಮಲ್ಲಪ್ಪ ಮೂರು ಮಕ್ಕಳ ತಂದೆಯಾಗಿದ್ದಾಗ, ವಿಧಿಯಾಟವೋ ಏನೋ ಮಲ್ಲಪ್ಪ ಬ್ಯಾಡರ ಹೆಂಗಸನ್ನು ಕೂಡಿಕೊಂಡ. ಆಕೆಗೆ ಸಿದ್ಧವೀರಪ್ಪ ಹುಟ್ಟಿದ. ವೀರಪ್ಪ, ಆತನ ತಮ್ಮಂದಿರು, ಹೆಂಡತಿ-ಮಕ್ಕಳು ಎಲ್ಲರೂ ಕೂಡಿಯೇ ಇದ್ದರು. ಅವರೆಲ್ಲರೂ ಕೂಡಿ ಮಲ್ಲಪ್ಪನಿಗೆ ಕಿರುಕುಳ ನೀಡಿ ಎರಡನೇ ಸಂಸಾರವನ್ನು ಬಿಡಿಸಲು ನೋಡಿದರು. ಮಲ್ಲಪ್ಪನಿಗೆ ಅದು ಸಾಧ್ಯವಾಗಲಿಲ್ಲ. ಕೊನೆಗೆ ಒಂದು ಕೂರಿಗೆ ಹೊಲ ಪಡೆದು ಬೇರೆಯಿರಲು ಬಯಸಿದ. ಮನೆ ಮಂದಿ ಕೂಡಿಕೊಂಡು ಅದನ್ನು ದಕ್ಕದಂತೆ ಮಾಡಿದರು. ಬೇಸತ್ತು ಊರುಬಿಟ್ಟು ಎರಡನೆ ಸಂಸಾರದೊಂದಿಗೆ ತಾಲ್ಲೂಕು ಸೇರಿ ಬಾಳು ನಡೆಸಿದ. ಆಗ ಸಿದ್ಧವೀರಪ್ಪನಿಗೆ ಹತ್ತು ವರ್ಷ. ಹೊಟ್ಟೆ ಪಾಡಿಗಾಗಿ ತಂದೆ ಮಾಡುತ್ತಿದ್ದ ಸಣ್ಣಪುಟ್ಟ ವ್ಯಾಪಾರದಲ್ಲಿ



ಅನಿವಾರ್ಯವಾಗಿ ನೆರವಾಗಬೇಕಾಯಿತು. ಆದರಿಂದಾಗಿ ಸರಿಯಾಗಿ ಶಾಲೆಗೆ ಹೋಗುವಂತಾಗಲಿಲ್ಲ. ತಾಲ್ಲೂಕು ಸೇರಿ ನಾಲ್ಕು ವರ್ಷವಾಗಿತ್ತು. ತಾಯಿಗೆ ಜ್ವರ ಬಂದು ಅದರಲ್ಲೇ ತೀರಿಕೊಂಡಳು. ಸಿದ್ಧವೀರಪ್ಪ ತಂದೆಯ ಜತೆಗೆ ದುಡಿಯಲು ನಿಂತು, ಯಾವುದೇ ವ್ಯಾಪಾರ ಮಾಡಿದರೂ ಅದರಲ್ಲಿ ಗೆಲ್ಲುತ್ತಿದ್ದ. ಇದರಿಂದ ತಂದೆಗೆ ಚಿಂತೆಯಿರಲಿಲ್ಲ. ಆದರೆ ಮಗ ಕೈಗೆ ಬರುತ್ತಿದ್ದಂತೆ ಬೇರೆ ಚಿಂತೆ ಹತ್ತಿತು. "ಕುಲಗೆಟ್ಟವರು" ಎಂದು ಆತನ ಸಂಬಂಧಿಗಳೆಲ್ಲ ಅವಮಾನ ಮಾಡಿ ದೂರಿಟ್ಟಿದ್ದರು. ಸಿದ್ಧವೀರಪ್ಪನ ಮದುವೆಯ ಮಾತು ಬಂದಾಗ ಹೆಣ್ಣು ತರುವುದೇ ಕಷ್ಟವಾಯಿತು. ತಂದೆಗೆ ಮಗನೇ ಸಮಾಧಾನ ಮಾಡುತ್ತಿದ್ದ. "ದುಡಿವ ನಿನ್ನ ಕೈಗೆ ಇನ್ನೊಂದು ಕೈ ಜತೆಯಾದ್ರ ಬದುಕು ಪಾಡಾಗಿ ನಡಿತದ" ಎಂದು ಮರಗುತ್ತಿದ್ದ. ಸಿದ್ಧವೀರಪ್ಪನಿಗೆ ಇಪ್ಪತ್ತು ವರ್ಷವೂ ಆಗಿರಲಿಲ್ಲ. ಮದುವೆಯೂ ಬೇಕಿರಲಿಲ್ಲ. ಆದರೆ ತಂದೆಗೆ ಭಯವಿತ್ತು. ಮಗನಿಗೆ ಹೆಣ್ಣನ್ನು ಯಾರೂ ಕೊಡದಿದ್ದರೆ ಹೇಗೆಂದು ಹೆದರಿ ಅವಸರದಿಂದಲೇ ದೂರದ ಸಂಬಂಧಿಗಳೆಂದು ಸುಜ್ಞಾನಮ್ಮನನ್ನು ಮಗನಿಗೆ ಗೊತ್ತು ಮಾಡಿ ಮದುವೆಯನ್ನೂ ಮಾಡಿಬಿಟ್ಟ. ಊರ ಮನೆಮಂದಿ ಬರಲಿಲ್ಲ. ಮದುವೆ ಮಾಡಿದ್ದೇ ದೊಡ್ಡ ಸಾಧನೆ ಎಂದು ಹಿಗ್ಗಿದ. ಆದರೆ ವರ್ಷ ಕಳೆಯುವ ಮುನ್ನವೇ ತೀರಿಕೊಂಡ.

ತಂದೆ ಇರುವಾಗಲೇ ಹೆಂಡತಿ ಸುಜ್ಞಾನಮ್ಮನ ಗುಣಗಳು ಹೊರಬಿದ್ದಿದ್ದವು. ಸಿದ್ಧವೀರಪ್ಪ ಹೊಟ್ಟೆಪಾಡಿಗಾಗಿ ದುಡಿಯಬೇಕಾಗಿತ್ತು. ಆದರೆ ಹೆಂಡತಿಯ ಬುದ್ಧಿಗೇಡಿತನದಿಂದ ಕಿರಿಕಿರಿಯಾಗುತ್ತಿತ್ತು. ಖಾನಾವಳಿ ಆರಂಭಿಸಿದ. ಅದರ ಕಡೆ ಗಮನವಿರಿಸಿದ. ಹೆಂಡತಿ ಯಾವಾಗಲೂ ಅಸಮಾಧಾನದಿಂದಲೇ ವರ್ತಿಸುತ್ತಿದ್ದಳು. ಸಿದ್ಧವೀರಪ್ಪನಿಗೆ ಒಮ್ಮೊಮ್ಮೆ ವಿಪರೀತ ಬೇಸರ ಬಂದು ತವರು ಮನೆಗೆ ಕಳಿಸಿಬಿಡುತ್ತಿದ್ದ. ಆಕೆಗೆ ಅಲ್ಲಿ ನೆಲೆಯಿರಲಿಲ್ಲ. ತಂದೆ ತಾಯಿಯಿಂದ ಬೈಯಿಕೊಂಡು ಬಂದುಬಿಡುತ್ತಿದ್ದಳು. ಹಾಗೆ ನೋಡಿದರೆ ಹೆಂಡತಿ ಖಾನಾವಳಿಯಲ್ಲಿ ದೆವ್ವದಂತೆ ದುಡಿಯುತ್ತಿದ್ದಳು. ಸರಿಯಾದ ಮನಃಸ್ಥಿತಿಯಲ್ಲಿ ದುಡಿದರೆ ಆಕೆಯೇ ಎಲ್ಲ ಅಡಿಗೆ ಮಾಡುತ್ತಿದ್ದಳು. ಆದರೆ ತನ್ನ ಪಾಡಿಗೆ ತಾನು ಕೆಲಸ ಮಾಡಿಕೊಂಡು ಇರುತ್ತಿರಲಿಲ್ಲ. ಖಾಯಂ ಊಟ ಮಾಡುವವರು ಒಮ್ಮೊಮ್ಮೆ ಉಂಡು "ಹಣ ನಾಳೆ ಕೊಡ್ತೀವಿ" ಎಂದು ಹೇಳಿ ಹೋಗುತ್ತಿದ್ದರು. ಸಿದ್ಧವೀರಪ್ಪ ಅದಕ್ಕೆ ಸಹಜವಾಗಿ ಒಪ್ಪುತ್ತಿದ್ದ. ಅದು ಕಿವಿಗೆ ಬಿದ್ದರೆ ಸಾಕು, "ನಾಳೆ ಕೊಡ್ತಾರಂತೆ! ಉದ್ರಿ ಉಂಡು ಹೋಗ್ತಾರ" ಎಂದು ಗೊಣಗುತ್ತಿದ್ದಳು. ಒಮ್ಮೊಮ್ಮೆ ಕೇಳಿಸಿಕೊಂಡ ಗಿರಾಕಿಗಳು ಬೇಸರ ಮಾಡಿಕೊಳ್ಳುತ್ತಿದ್ದರು. ಇದರಿಂದ ಸಿದ್ಧವೀರಪ್ಪನಿಗೆ ಮುಜುಗರವಾಗುತ್ತಿತ್ತು. ಹೆಂಡತಿಗೆ ಯಾವ ಸಂದರ್ಭದಲ್ಲಿ ಏನು ಮಾತಾಡಬೇಕು, ಹೇಗೆ ನಡೆದುಕೊಳ್ಳಬೇಕು ಎಂಬ ಕಿಂಚಿತ್ ಅರಿವೂ ಇರಲಿಲ್ಲ. ಅನೇಕ ಸಲ ಹೆಂಡತಿಯ ಬದಲಾಗಿ ತಾನೇ ಕ್ಷಮೆ ಕೇಳುತ್ತಿದ್ದ. ಆಗಲೂ, "ನೀನೆಂಥ ಗಂಡಸು? ಹೇಣ್ತಿಕಡೆ ಮಾತಾಡಕ ನಿನ್ಗ ಗಂಡಸ್ತನ ಇಲ್ಲೇನು?" ಎಂದು ಬಯ್ಯುತ್ತಿದ್ದಳು. ದಿನ ಕಳೆದಂತೆ ಹೆಂಡತಿಯ ಕಾರುಬಾರಿಗೆ ಕೆಲವರು ಖಾನಾವಳಿಗೆ ಉಣ್ಣಲು ಬರಲಿಲ್ಲ. ಆಗ ಹೆಂಡತಿಯನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಅನಿವಾರ್ಯವಾಯಿತು. ಅಡಿಗೆ ಮನೆ ಬಿಟ್ಟು ಹೊರಗೆ ಬರದಂತೆ ಮಾಡಿದ. ಅಲ್ಲಿಂದ ಸುಜ್ಞಾನಮ್ಮ ಅಡಿಗೆ ಮಾಡಿದರೆ ಮಾಡಿದಳು ಇಲ್ಲದಿದ್ದರೆ ಇಲ್ಲ, ಕೆಲಸವಿದ್ದಾಗ ಮಧ್ಯಾಹ್ನ ಸಿನಿಮಾ ನೋಡಲು ಹೋಗುವುದು ಮಾಡತೊಡಗಿದಳು. ಅಡಿಗೆ ಮಾಡಿದರೆ ಒಬ್ಬಳೇ ಚೆನ್ನಾಗಿ ಮಾಡುತ್ತಿದ್ದಳು. ಆದರೆ ಭರವಸೆ ಇರಲಿಲ್ಲ. ಇದರಿಂದ ಖಾನಾವಳಿಯಲ್ಲಿ ಅಡಿಗೆ ಮಾಡುವವರನ್ನು ಹುಡುಕಬೇಕಾಯಿತು. ಹುಡುಕಿ ತಂದವರ ಜತೆ ಜಗಳಕ್ಕೆ ನಿಂತು ಓಡಿಸುತ್ತಿದ್ದಳು. ಸಿದ್ಧವೀರಪ್ಪ ಆಕೆಯನ್ನು ಕೂಡಿಸಿಕೊಂಡು ಬುದ್ಧಿವಾದ ಮಾಡಿದ. "ಏನು ಬೇಕು? ನಿನ್ನ ಮನಸ್ಸಿಗೆ ಬಂದಂತೆ ಇರು. ಆದರೆ ನನ್ಗೆ ಯಾವುದಕ್ಕೂ ಅಡ್ಡಿ

ಮಾಡಬೇಡ'' ಎಂದು ತಾಳ್ಮೆಯಿಂದ ಹೇಳಿದ. ವಿಚಿತ್ರ ಮನಃಸ್ಥಿತಿಯ ಹೆಂಡತಿಯನ್ನು ಹಿಡಿತದಲ್ಲಿಟ್ಟುಕೊಳ್ಳಲು ಅಸಹಾಯಕನಾಗಿ ಸಿಟ್ಟು ತಡೆಯದೆ ತಾನೇ ಹೆಂಡತಿಯನ್ನು ತವರುಮನೆಗೆ ಎಳೆದುಕೊಂಡು ಹೋಗಿ, ''ಈ ಜನ್ಮದಲ್ಲಿ ಇವಳಿಗೆ ಬುದ್ಧಿ ಬರುವುದಿಲ್ಲ. ಉಪಜೀವನಕ್ಕೆ ಕೊಡ್ತೀನಿ. ಇಲ್ಲೇ ಇಟ್ಟುಕೊಳ್ಳಿ'' ಎಂದು ಮಾವನಿಗೆ ಬೇಡಿಕೊಂಡ. ಮಗಳ ಗುಣ ಗೊತ್ತಿದ್ದ ಆಕೆಯ ತಂದೆಯೇ ಬಯ್ದು-ಹೊಡೆದು ''ಗಂಡನ ಮನೆಯಲ್ಲಿ ಬಿದ್ದಿರು, ದೇವರಂಥ ಅಳಿಯ ಸಿಕ್ಕಾನ'' ಅಂದು, ''ಸಂಸಾರಂದ್ರೆ ಹಿಂಗೇ. ನೀನೆ ಹದ್ದುಬಸ್ತಿನಲ್ಲಿಟ್ಟುಕೊಂಡಿರು. ನಾಳೆ ಮಕ್ಕಳಾದ್ರೆ ಸರಿ ಹೋದೀತು'' ಎಂದು ಸಿದ್ದವೀರಪ್ಪನಿಗೆ ಬೇಡಿಕೊಂಡ.

ಖಾನಾವಳಿಯನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ದೀವಾಳಿಯಾದೇನು ಎಂದುಕೊಂಡು ಸಿದ್ದವೀರಪ್ಪ ಹೆಂಡತಿಯನ್ನು ಕಡೆಗಣಿಸಿದ. ಅದೆಷ್ಟೇ ಸಹನೆಯಿಂದ ಸಂಸಾರ ನಡೆಸಲು ಬಯಸಿದರೂ ಹಿಂಸೆಯಾಗತೊಡಗಿತು. ಅಡಿಗೆ ಮಾಡಲು ಕಾಶಿಂಬಿ ಎಂಬ ಮಧ್ಯವಯಸ್ಸಿನ ಹೆಂಗಸನ್ನು ನೇಮಿಸಿಕೊಂಡ. ಆಕೆಗೆ ಹೆಂಡತಿ ಕಿರುಕುಳ ನೀಡುತ್ತಿದ್ದರೂ ಆಕೆ ತನ್ನ ಪಾಡಿಗೆ ತಾನು ಕೆಲಸ ಮಾಡಿ ಹೋಗುತ್ತಿದ್ದಳು. ಸಿದ್ಧವೀರಪ್ಪ ''ಕಾಶಿಂಬಿ, ನನ್ನ ಹೇಣ್ತಿ ಏನಾದರೂ ಅಂದ್ರ ಕಿವಿಗೆ ಹಾಕಿಕೊಳ್ಳಬೇಡಮ್ಮ'' ಎಂದು ಬೇಡಿಕೊಂಡಿದ್ದ. ಆದರೂ ಮರ್ಮಕ್ಕೆ ತಟ್ಟುವಂತೆ ಅನ್ನುತ್ತಿದ್ದಳು. ದಿನ ಗಳೆದಂತೆ ಕಾಶಿಂಬಿ ಹೊಂದಿಕೊಂಡಳು. ಬಾಯಿ ತೆರೆದರೆ ಸಾಕು ಕೇಳಿಸಿಕೊಳ್ಳುವವರಿಗೆ ಹೇಸಿಗೆ ಬರುವಂತೆ ಮಾತಾಡುತ್ತಿದ್ದಳು. ಸಿದ್ದವೀರಪ್ಪನಿಗೆ ರಾತ್ರಿಯಾದರೆ ಸಾಕು ಎಲ್ಲಾದರೂ ಗುಡಿಗುಂಡಾರಕ್ಕೆ ಹೋಗಿ ಮಲಗಬೇಕೆನಿಸಿತು. ಅದನ್ನೂ ಮಾಡಿದ. ಹನುಮಪ್ಪನ ಗುಡಿಗೆ ಹೋಗಿ ಭಜನೆಯಲ್ಲಿ ಸೇರಿಕೊಂಡು ಅಲ್ಲೇ ಮಲಗಿ ಬೆಳಿಗ್ಗೆ ಬಂದ. ಆದರೆ ಖಾನಾವಳಿಯನ್ನು ಬಿಟ್ಟು ಹೋಗುವಂತಿರಲಿಲ್ಲ. ಒಮ್ಮೆ ಹೊರಗಿನ ಕಟ್ಟೆಯ ಮೇಲೆ ಸಿದ್ದವೀರಪ್ಪ ಮಲಗಿದ್ದ. ಹೆಂಡತಿ, ''ಬಾರೋ, ಗಂಡಸ್ತನ ಇಲ್ದೇ ಇದ್ರ ಯಾಕ ಮದುವಿ ಮಾಡ್ಕೆಬೇಕು? ಜೋಗಪ್ಪನಾಗಬೇಕಿತ್ತು'' ಎಂದು ಮನೆ ಮುಂದೆ ನಿಂತು ಕೂಗಾಡಿದಳು. ಮಧ್ಯರಾತ್ರಿಯಾಗಿರಬೇಕು! ರಾತ್ರಿ ಸಿನಿಮಾ ಮುಗಿಸಿಕೊಂಡು ಜನ ಬೀದಿಯಲ್ಲಿ ಹೋಗುತ್ತಿದ್ದರು. ಕೆಲವರು ಈಕೆಯ ಮಾತು ಕೇಳಿ ನಿಂತು ನಗತೊಡಗಿದರು. ಸಿದ್ದವೀರಪ್ಪನಿಗೆ ಮೈಯಿಗೆ ಬೆಂಕಿ ತಗುಲಿದಂತಾಯಿತು. ಎದ್ದವನೇ ಹೆಂಡತಿಯನ್ನು ಒಳಗೆ ಎಳೆದುಕೊಂಡು ಹೋಗಿ ಸಿಕ್ಕ ಸಿಕ್ಕ ಕಡೆ ಜಜ್ಜಿಬಿಟ್ಟ. ಬಾಯಿ ಬಿಡಲು ಆಗದಂತೆ ಜಜ್ಜಿದ. ಜನ ಜಂಗುಳಿಯ ಕಾಲಿಗೆ ಸಿಕ್ಕವರಂತೆ ನೆಲಕ್ಕೆ ಬಿದ್ದಿದ್ದಳು. ಹೊರಗೆ ಬಂದು ಕುಂತು, ''ಥತ್ ಇದೆಂಥ ಬಾಳು'' ಎಂದು ಸಂಕಟದಿಂದ ನರಳಿದ. ಒಳ ಬಂದು, ಮೂರ್ಛೆ ಹೋಗಿ ಬಿದ್ದಿದ್ದ ಹೆಂಡತಿಯನ್ನು ಎತ್ತಿ ಮಂಚದ ಮೇಲೆ ಹಾಕಿ, ನೀರು ಕುಡಿಸಿ ಆರೈಕೆ ಮಾಡಿದ. ಮರುದಿನ ಕಾಶಿಂಬಿ ಜತೆ ದವಾಖಾನೆಗೆ ಕಳಿಸಿದ. ''ರಾಕ್ಷಸನಂಥ ಗಂಡ ಸಿಕ್ಕಾನ್ರಿ! ರಾತ್ರಿ ಮಲಗಾಕ ಕರದ್ರೆ ಹಿಂಗ ಬಡದಾನ್ರಿ!'' ಎಂದು ನಾಚಿಕೆಯಿಲ್ಲದೆ ಡಾಕ್ಟರರಿಗೆ ಹೇಳಿದಳಂತೆ.

ಮನೆಯಲ್ಲೇ ಖಾನಾವಳಿಯೂ ಇತ್ತು. ಸಿದ್ದವೀರಪ್ಪ ಮನೆಯನ್ನು ಬೇರೆ ಮಾಡಿದ. ಅಲ್ಲಿ ಹೆಂಡತಿಯನ್ನಿರಿಸಿದ. ಅದರಿಂದಲೂ ಪ್ರಯೋಜನವಾಗಲಿಲ್ಲ. ಮನಸ್ಸು ಬಂದರೆ ಸರಿಯಾಗಿ ಕೆಲಸ ಮಾಡುವ ಹೆಂಡತಿ ಇಲ್ಲದ ಮೇಲೆ ಕಾಶಿಂಬಿಗೆ ಒತ್ತಡ ಬಿತ್ತು. ಮೇಲಾಗಿ, ''ನನ್ನ ಗಂಡನ ರಂಡೆ'' ಎಂದು ಕಾಶಿಂಬಿಗೆ ಹೀಯಾಳಿಸತೊಡಗಿದಳು. ಸಿದ್ಧವೀರಪ್ಪ ಮನೆ ಕಡೆ ಹೋಗಲಿಲ್ಲ. ಹೆಂಡತಿ ಬರೀ ಸಿನಿಮಾ ನೋಡಿ ಕಾಲ ಕಳೆಯತೊಡಗಿದಳು.



ಕಾಶಿಂಬಿಯೇ, ''ಒಂಟಿ ಜಿಡದು ಬೇಸಲ್ಲ ದಣಿ, ಮನೆಕಡೆ ಹೋಗಿ ಬರ್ರಿ'' ಎಂದು ಸೂಚಿಸಿದಳು. ಸಿದ್ಧವೀರಪ್ಪ ಹೋದರೂ ರಾತ್ರಿ ಉಳಿದುಕೊಳ್ಳುತ್ತಿರಲಿಲ್ಲ. ಬರುಬರುತ್ತ ಮನೆಕಡೆ ಹೋದರೆ ಸಾಕು ಓಣಿಯ ಜನ ಕೆಟ್ಟ ರೀತಿಯಿಂದ ನೋಡತೊಡಗಿದರು. ಗಂಡನ ಬಗ್ಗೆ ಇಲ್ಲ ಸಲ್ಲದ ಅಪವಾದ ಹೊರಿಸಿದ್ದಳು. ಅದರಿಂದ ಬೇಸತ್ತು ಮನೆ ಖಾಲಿ ಮಾಡಿಸಿ ಖಾನಾವಳಿಗೇ ಕರೆತಂದ. ಹೆಂಡತಿ ಒಳ್ಳೆಸೀರೆ ಉಟ್ಟುಕೊಂಡು ತಲೆಗೆ ಹೂ ಮುಡಿದುಕೊಂಡು ನಿಂತಿದ್ದರೆ, ಸಿದ್ಧವೀರಪ್ಪನಿಗೆ ಪ್ರೀತಿ ಬರುತ್ತಿತ್ತು. ಹಾಗ ನೋಡಿದರೆ ಸುಜ್ಞಾನಮ್ಮನನ್ನು ತೆಗೆದುಹಾಕುವಂತಿರಲಿಲ್ಲ. ತಕ್ಕಮಟ್ಟಿಗೆ ಲಕ್ಷಣವಾಗಿದ್ದಳು. ಪ್ರೀತಿಯಿಂದ ಮಾತಾಡಿಸಿದರೆ ಸಾಕು ''ಗಂಡಸರ ಹಣೆಬರಹವೇ ಇಷ್ಟು. ತೆವಲು ತೀರಿಸಿಕೊಳ್ಳಲು ಮಾತ್ರ ಬರ್ತಾರ'' [illegible]

ಇಂಥ ವಿಲಕ್ಷಣ ವ್ಯಕ್ತಿತ್ವದ ಹೆಂಡತಿ ಬಗ್ಗೆ [illegible] ಸಹನೆಯಿಂದಿದ್ದರೂ ಸಂಸಾರವನ್ನು ನಿತ್ಯ ಸರಿ ತೂಗಿಸುವುದು ಸಿದ್ಧವೀರಪ್ಪನಿಗೆ ಗಂಡಾಂತರವಾಗಿ ಕಂಡಿತು. ಮದುವೆಯಾಗಿ ಐದಾರು ವರ್ಷಗಳಾದರೂ ಮಕ್ಕಳಾಗಲಿಲ್ಲ. ''ಮನಸ್ಸಿಟ್ಟು ಸಂಸಾರ ಮಾಡಿದ್ರೆ ಮಕ್ಕಳಾಗದೇ ಇರ್ತಾವೇನು?'' ಎಂದು ಹೆಂಡತಿ ಹಲುಬುವುದನ್ನು ಮಾತ್ರ ಸಿದ್ಧವೀರಪ್ಪ ಕೇಳುತ್ತಿದ್ದ.

ಇಷ್ಟಾಗಿಯೂ ಸಿದ್ಧವೀರಪ್ಪ ಖಾನಾವಳಿಯಿಂದ ಚೆನ್ನಾಗಿಯೇ ಸಂಪಾದಿಸಿದ. ತಾಲ್ಲೂಕಿನಲ್ಲಿ [illegible] ಹೋಗಲಿಲ್ಲ. ತಾಲ್ಲೂಕು ಬಿಟ್ಟು ಜಿಲ್ಲೆ [illegible] ಖಾನಾವಳಿ ಶುರು ಮಾಡಬೇಕೆಂದು [illegible] ಅದಕ್ಕೆ ಬೇಕಾಗುವ ಹಣದ ವ್ಯವಸ್ಥೆಯನ್ನು ಮಾಡಿಕೊಳ್ಳಲು ಪ್ರಯತ್ನಿಸಿದ. ಅನೇಕ ಸಲ [illegible] ಚಿಂತಿಸಿದ. ಸಿದ್ಧವೀರಪ್ಪ ಹಲವು ಜನರಿಗೆ ಬೇಕಾಗಿದ್ದ. ಕೆಲವರು ಕೆಟ್ಟ ಹೆಂಡತಿಯನ್ನು ನೋಡಿ, ''ಬೇರೆ ಮದುವೆ ಮಾಡಿಕೊಂಡುಬಿಡು'' ಎಂದರೆ, ''ಮಕ್ಕಳಾದರೆ ಸರಿ ಹೋಗಬಹುದಪ್ಪ'' ಎಂದು ಕೆಲವರು ಸಮಾಧಾನ ಮಾಡಿದರು. ಬೇರೆ ಮದುವೆ ಮಾಡಿಕೊಳ್ಳುವ ವಿಚಾರ ಬಂದರೂ ಅದು ಯಾಕೋ ಆಗಲಿಲ್ಲ. ಒಂದು ದಿನ ಕಾಶಿಂಬಿ, ''ಇನ್ನೇನು ಮನೆಗೆ ಕಂದ ಬರತ್ತೈತೆ'' ಅಂದಳು. ಸಿದ್ಧವೀರಪ್ಪ ನಿಜವಾಗಿಯೂ ಖುಷಿಯ ನಿಟ್ಟುಸಿರುಬಿಟ್ಟ....

ತನಗೆ ಮಗು ಹುಟ್ಟಲಿದೆ ಎಂಬ ಸುದ್ದಿ ಕೇಳಿ ಇಪ್ಪತ್ತು ವರ್ಷಗಳ ಹಿಂದೆ ಖುಷಿಯ ನಿಟ್ಟುಸಿರು ಬಿಟ್ಟದ್ದು ನೆನಪಿಗೆ ಬಂತು. ಮಾಳಿಗೆಯ ಮೇಲೆ ಮಲಗಿದ್ದ ಸಿದ್ದವೀರಪ್ಪ, ''ಶಿವಶಿವಾ'' ಎಂದು ನಿಟ್ಟುಸಿರು ಬಿಟ್ಟ. ಆದರೆ ಇದು ವ್ಯಥೆಯಿಂದ ಕೂಡಿತ್ತು. ಹೆಂಡತಿಯೋ ತೀರಿಕೊಂಡಳು. ಮಗ ಜೀವಂತವಾಗಿದ್ದ. ನೆನಸಿಕೊಂಡರೆ ರಕ್ತ ಹೆಪ್ಪುಗಟ್ಟುತ್ತಿತ್ತು. ನಿದ್ರೆ ಕವಿಯುವ ಮುನ್ನ ಖಾನಾವಳಿಯನ್ನು ಚಂದ್ರಮ್ಮ, ಕಾಶಿಂಬಿಗೆ ಬಿಟ್ಟು ತಾನು ಖಾಜಿ ಮಾಸ್ತಾರನ ಜತೆ ಎರಡು ದಿನ ಕಾಲ ಕಳೆಯಲು ನಿರ್ಧರಿಸಿದ.

೨

ಸಿದ್ಧವೀರಪ್ಪ ಹೆಂಡತಿಯನ್ನು ಮಣ್ಣು ಮಾಡಿ ಬಂದ ಮೇಲೆ ಎರಡು ದಿನ ಖಾಜಿ ಮಾಸ್ತಾರನ ಜತೆ ಕಾಲ ಕಳೆದು ''ಇದೇ ಬೇಸಗೆಯಲ್ಲಿ ನಿಮ್ಮಿಂದ ಹಿಮಾಲಯಕ್ಕೆ ಬರುತ್ತೇನೆ'' ಎಂದು ಮಾತು ಕೊಟ್ಟ. ಅದೇ ರಾತ್ರಿ ತೋಟದ ರಾಮಯ್ಯ ಬಂದು ಗೌರಮ್ಮನ ಇಂಗಿತವನ್ನು ತಿಳಿಸಿದ್ದ. ಅದರಿಂದ ಸಿದ್ಧವೀರಪ್ಪನ ಮನಸ್ಸು ಕದಡಿ ಹೋಗಿತ್ತು. [illegible] ಮನಸ್ಸು ಹೊಯ್ದಾಡಿದರೂ ಯಾಕೋ [illegible] ಗಟ್ಟಿಯಾಗಿರಲು ಪ್ರಯತ್ನಿಸಿದ. [illegible] ಒಳ್ಳೆಯ ಬೆಳವಣಿಗೆಯಲ್ಲ ಎಂದು ಅನ್ನಿಸಿತು. [illegible] ಸಾಧ್ಯವಾಗಲಿಲ್ಲ. ಅದು [illegible] ಕಾಡಿತು. [illegible] ಸಾಕು. ಅದು [illegible] ನೆನೆದಂತೆ

[illegible] [illegible] [illegible] [illegible]. ''ಕುಹೂ..... ಕುಹೂ.....'' ಬೆಳ್ಳಂಬೆಳಗ್ಗೆ [illegible] [illegible] ಗಿಡದಲ್ಲಿದ್ದ ಕೋಗಿಲೆ [illegible] [illegible] ಕೂಗತೊಡಗಿತ್ತು. ಮೂರು ನಾಲ್ಕು ದಿನದಿಂದ ಮೊಳಗೆ ಮೇಲೆಯೇ ಮಲಗುತ್ತಿದ್ದ ಸಿದ್ದವೀರಪ್ಪನನ್ನು ಕೋಗಿಲೆಯೇ ಕೂಗಿ ಎಬ್ಬಿಸುತ್ತಿತ್ತು. ಅಂದು ಎದ್ದು ನಿತ್ಯ ಕರ್ಮಗಳನ್ನು ಮುಗಿಸಿ, ಒಂದು ತಂಬಿಗೆ ನೀರು ಕುಡಿದು ಕಾಶಿಂಬಿ, ಚಂದ್ರಮ್ಮ ಇನ್ನೂ ಎದ್ದಿರಲಿಲ್ಲ. ಇವತ್ತು ಖಾನಾವಳಿಯಲ್ಲಿ ಇರಬೇಕೆನಿಸಿತು. ಹಾಲಿನ ಕ್ಯಾನು, ತರಕಾರಿಯ ಚೀಲ ಹಿಡಿದು, ಬಾಗಿಲ ತೆರೆದು ಹೊರಬಂದು. ಬಾಗಿಲನ್ನು ಹಾಗೆ ಮುಚ್ಚಿದ. ಹೊರ ಬಾಗಿಲ ಬಳಿಯಿದ್ದ ಬೇವಿನ ಮರದಿಂದ ಸುವಾಸನೆ ಬಂತು. ಬೇವಿನ ಮರದಲ್ಲಿ ಗೊಂಚಲು ಗೊಂಚಲು ಹೂವೇ ಕಂಡವು. ಮನಸ್ಸಿಗೆ ಹಿತವಾಯಿತು. ಯುಗಾದಿ ಹೋದ ವಾರವೇ ಬಂದು ಹೋಗಿತ್ತು. ಹತ್ತು ವರ್ಷದ ಆ ಗಿಡ ಹೂ ತುಂಬಿಕೊಂಡು ಸೊಗಸಾಗಿ ಕಂಡಿತು. ಆಗಲೇ ಕತ್ತಲು ಕರಗತೊಡಗಿತ್ತು.

ನಗರದ ಹೊಸ ಬಡಾವಣೆಯಲ್ಲಿ ಸಿದ್ದವೀರಪ್ಪನ ಮನೆ - ಖಾನಾವಳಿಯಿತ್ತು. ಮನೆಯಿಂದ ನಿತ್ಯ ಬೆಳಿಗ್ಗೆ ಹೋಗುವ ಹಳ್ಳಿಯು ಮೂರು ಮೈಲು ದೂರದಲ್ಲಿತ್ತು. ಸರಿಯಾಗಿ ಐದು ಗಂಟೆಗೆ ಮನೆ ಬಿಟ್ಟರೆ, ಮುಕ್ಕಾಲು ತಾಸಿಗೆ ಹಳ್ಳಿ ತಲುಪುತ್ತಿದ್ದ. ಗೌರಮ್ಮನ ಬಳಿ ಹಾಲು ತುಂಬಿಸಿಕೊಂಡು, ತೋಟದ ರಾಮಯ್ಯನಲ್ಲಿ ತರಕಾರಿ ಹಾಕಿಸಿಕೊಂಡು ಅಲ್ಲಿಂದ ಬಿಟ್ಟರೆ ಸರಿಯಾಗಿ ಆರು ಗಂಟೆ ಹೊತ್ತಿಗೆ ತನ್ನ ಮನೆಯಲ್ಲಿರುತ್ತಿದ್ದ. ಈ ಒಂದು ಹರದಾರಿ ಉದ್ದದ ದಾರಿಯ [illegible] ಬದಿಗಳಲ್ಲಿ ಏನೇನಿದೆ ಎಂಬುದು ಸಿದ್ದವೀರಪ್ಪನಿಗೆ ಸರಿಯಾಗಿ ಗೊತ್ತು. ಋತು ಮಾನಗಳ ಉದ್ದಕ್ಕೂ ಅಲ್ಲಿ ಏನೇನು ಏರುಪೇರು ಗಳಾಗುತ್ತವೆ ಎಂಬುದನ್ನು ಗಮನಿಸುತ್ತ, ಮನಸ್ಸಿನಲ್ಲೇ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ ಆತಂಕ, ಬೆರಗು ಪಡುತ್ತ ಈ ಹತ್ತು ವರ್ಷಗಳಿಂದ ಈ ಬಂಡಿದಾರಿಯ ಮೇಲೆ ಹೆಜ್ಜೆ ಹಾಕುತ್ತಾ ಬಂದಿದ್ದ. ಸಿದ್ದವೀರಪ್ಪನಿಗೆ ಅಂದು ಹೆಜ್ಜೆ ತುಳಿದದ್ದೇ ಗೊತ್ತಾಗಲಿಲ್ಲ. ಹಳ್ಳಿ ಸಮೀಪಿಸುತ್ತಿದ್ದಂತೆ, ಮೂಡಿದ ಸೂರ್ಯನನ್ನು ಮನಸ್ಸಿಟ್ಟು ನೋಡಲಿಲ್ಲ. ಗೌರಮ್ಮನ ಇಂಗಿತವನ್ನು ತೋಟದ ರಾಮಯ್ಯ ತಿಳಿಸಿದ್ದಕ್ಕೋ ಏನೋ ಆತನಲ್ಲಿ ಭಯ ಹೆಚ್ಚಾಯಿತು. ಗೌರಮ್ಮನನ್ನು ಹೊಸದಾಗಿ ನೋಡುವಂತೆ ಅನ್ನಿಸಿತು. ಆಕೆಯ ಮನೆ ಮುಂದ ಬಂದು ನಿಂತ. ಅಲ್ಲಿ ಯಾಕೋ ವಾತಾವರಣ ನಿತ್ಯದಂತೆ ಕಾಣಲಿಲ್ಲ. ಅಂಗಳದಲ್ಲಿ ಎಮ್ಮೆಗಳಿರಲಿಲ್ಲ. ಅಲ್ಲಿಗೆ ಬರುತ್ತಿದ್ದಂತೆ ''ಸರಣ್ರೀಂಪಪ್ಪ'' ಎಂದು ನಿತ್ಯವೂ ಅದೊಂದೇ ಮಾತನ್ನು ಹೇಳುತ್ತಿದ್ದ ಎಮ್ಮೆ ಕಾಯುವ ಭರಮನೂ ಕಾಣಲಿಲ್ಲ. ಆದರೂ ಸಿದ್ದವೀರಪ್ಪ, ''ಹಾಲು'' ಅಂದು, ತಾನು ಬಂದದ್ದನ್ನು ಸೂಚಿಸಿದ. ಯಾರೂ ಬರಲಿಲ್ಲ. ಒಳಗಿನಿಂದ ಗೌರಮ್ಮನೂ ಓಗೊಡಲಿಲ್ಲ. ಪುನಃ ಸೂಚಿಸಿದ. ಮೂರುನಾಲ್ಕು ನಿಮಿಷದ ಮೇಲೆ ಒಳಗಿನಿಂದ ಅವಸರದಿಂದಲೇ ಧಾವಿಸಿ ಬಂದ ಗೌರಮ್ಮ, ಸಿದ್ದವೀರಪ್ಪನ್ನು ನೋಡಿ ಭಯ- ಬೆರಗಿನಿಂದ ಮೂಕಳಾಗಿ ನಿಂತಳು. ಎಳೆ ಬಿಸಿಲನ್ನು ಹೊದ್ದುಕೊಂಡಂತೆ ನಿಂತಿದ್ದ ಆಕೆಯನ್ನು ಆತನೂ ನೋಡಿದ. ಯಾರೂ ಮಾತಾಡಲಿಲ್ಲ. ''ಹಾಲು.....'' ಅಂದ. ಗೌರಮ್ಮನಿಗೆ ಎದೆ ಒಡೆದಂತಾಯಿತೋ ಏನೋ... ''ಹಾಲಾ....?'' ಅಂದಳು. ಬಹುಶಃ ತೋಟದ ರಾಮಯ್ಯನ ಮುಂದೆ ತನ್ನ ಇಂಗಿತವನ್ನು ಹೇಳಿದ್ದನ್ನು ಕೇಳಿ ಸಿದ್ದವೀರಪ್ಪ ಬಂದಿರಬೇಕೆಂದು ತಿಳಿದು ಗಲಿಬಿಲಿಗೊಂಡಿದ್ದಳು. ಕೈಯ್ಯಲ್ಲಿ ಕ್ಯಾನು ನೋಡಿ ''ಹಾಲು'' ಎಂದು ನಿತ್ಯದಂತೆ ಅಂದದ್ದನ್ನು ಕೇಳಿ ದಿಕ್ಕುಗೇಡಿಯಾದಂತಾದಳು. ತೋಟದ ರಾಮಯ್ಯ ಹೇಳಿದ್ದನ್ನು ಕೇಳಿ ಗೊಂದಲದಲ್ಲಿ ಬಿದ್ದದ್ದು ನಿಜ. ಆದರೆ ಖಾಜಿ ಮಾಸ್ತಾರನ ಮುಂದೆ ಈ ವಿಷಯದಲ್ಲಿ ಸಣ್ಣವನಾಗಿ ಕಾಣಲು ಸಿದ್ದವೀರಪ್ಪ ಸಿದ್ದನಾಗಿರಲಿಲ್ಲ. ನಿಂತಲ್ಲೇ ಇಬ್ಬರೂ ಚಡಪಡಿಸಿದರು. ''ಹಾಲು ಹಾಕು'' ಎಂದು ಕ್ಯಾನು ಒಡ್ಡಿದ. ''ಇವತ್ತು ಆದಿವಾರ...'' ಅಂದು ಅನುಮಾನಿಸಿ ದಳು. ಆಕೆಗೇ ಗೊಂದಲವಾಯಿತು. ''ಛೇ! ಹೌದಲ್ಲ?'' ಎಂದ ಸಿದ್ದವೀರಪ್ಪ ಸರ್ರನೆ ಹಿಂದಿರುಗಿದ. ಗೌರಮ್ಮ ತನಗೆ ಗೊತ್ತಿಲ್ಲದಂತೆ, ''ಬರ್ರಿ....'' ಅಂದಳು. ನಿಂತ ಸಿದ್ದವೀರಪ್ಪ ಹಿತವಾದ ಅವಮಾನವನ್ನು ಅನುಭವಿಸಿದಂತೆ ಮುಗುಳ್ನಗೆ ನಕ್ಕ. ಗೌರಮ್ಮ ಅದಕ್ಕೆ ಪ್ರತಿಕ್ರಿಯೆ ಎನ್ನುವಂತೆ ಗಂಭೀರವಾಗಿ ನಾಚಿದಳು. ''ವಾರವೇ ಮರೆತು ಹೋಗಿದೆ'' ಅಂದ ಆತ. ನಲವತ್ತು ವರ್ಷದ ಗೌರಮ್ಮನನ್ನು ನೋಡಿದ. ಮಸಾರಿ ಮಣ್ಣಿನ ಮೈ

ಬಣ್ಣ ಹೊಂದಿದ್ದ ಗೌರಮ್ಮನ ಅಗಲವಾದ ಮುಖದಲ್ಲಿ ಎದ್ದು ಕಾಣುವ ಕವಡೆಗಣ್ಣುಗಳಲ್ಲಿ ಬೆರಗಿತ್ತು. ಸಿದ್ಧವೀರಪ್ಪ ಬಂದು ಕರೆದಾಗ ಆಕೆ ಸ್ನಾನ ಮಾಡುತ್ತಿದ್ದಳು. ಅವಸರದಲ್ಲಿ ಸೀರೆ ಉಟ್ಟುಕೊಂಡು, ಮೈ ತುಂಬ ಸೆರಗನ್ನು ಹೊದ್ದುಕೊಂಡು ಬಂದಿದ್ದಳು. ಸೀರೆ ಅಲ್ಲಲ್ಲಿ ತೊಯ್ದಿತ್ತು. ಸಿದ್ಧವೀರಪ್ಪನಿಗೆ ತನ್ನ ಮನೆ ಮುಂದಿದ್ದ ಬೇವಿನ ಮರದಂತೆ ಗೌರಮ್ಮ ಕಂಡಳು. ''ಒಳಗೆ ಬರ್ರಿ'' ಎಂದು ಕರೆದಳು. ಆಕೆ ಎಂದೂ ಕರೆದಿರಲಿಲ್ಲ. ಮಾತಾಡಿರಲೂ ಇಲ್ಲ. ಈ ಹತ್ತು ವರ್ಷಗಳಿಂದ ನಿತ್ಯ ಬರುತ್ತಿದ್ದ ಆತ. ಅಂಗಳಕ್ಕೆ ಬರುತ್ತಿದ್ದಂತೆ ಗೌರಮ್ಮ ಹಾಲು ಕೊಡುತ್ತಿದ್ದಳು. ಆತ ಹೊರಡುತ್ತಿದ್ದ. ಆದರೆ ಆತನ ಬಗ್ಗೆ ಈಕೆ, ಈಕೆಯ ಬಗ್ಗೆ ಆತ ಈ ಹತ್ತು ವರ್ಷಗಳ ಉದ್ದಕ್ಕೂ ಮೌನ ಸಂವಾದ ನಡೆಸಿದ್ದರು. ಚಿಕ್ಕದಾದ, ಅಂದವಾದ ಗೌರಮ್ಮನ ಮನೆ ಒಳಗೆ ಹೋದ. ಹಾಸಿದ ಚಾಪೆಯ ಮೇಲೆ ಕುಳಿತ. ಬಾಗಿಲಿನಿಂದ ಎಳೆ ಬಿಸಿಲು ಒಳಗೆ ಚಾಚಿತ್ತು. ಎಲ್ಲವೂ ಹೊಸದಾಗಿ ಕಂಡಿತು. ಗೌರಮ್ಮನಿಗೆ ಮದುವೆಯಾದ ಐದು ವರ್ಷದ ಒಳಗೇ ಗಂಡ ತೀರಿಕೊಂಡಿದ್ದ. ಗಂಡನ ಆಸ್ತಿ ಹೇಳಿಕೊಳ್ಳು ವಂತಿರಲಿಲ್ಲ. ಆದರೆ ತವರು ಮನೆಗೆ ಹೋಗದೆ ಗಂಡನ ಪಾಲಿಗೆ ಬಂದದ್ದನ್ನೇ ಪಡೆದುಕೊಂಡು ಬಾಳು ನಡೆಸಿದ್ದಳು. ಒಂದು ಹೆಣ್ಣು ಮಗುವಿತ್ತು. ಗಂಡ ಸತ್ತ ವರ್ಷವೇ ಕಾಮಣಿ ತಗುಲಿ ಸತ್ತುಹೋಗಿತ್ತು. ಈ ಚಿಕ್ಕ ಮನೆ, ಮನೆ ಮುಂದಿನ ಅಂಗಳ, ಅದರಲ್ಲಿ ನಾಲ್ಕಾರು ಎಮ್ಮೆಗಳು, ಗೌರಮ್ಮನಿಗೆ ನೆರವಾಗುತ್ತಿದ್ದ ಭರಮ, ಗೌರಮ್ಮನ ಹಿತೈಷಿ ತೋಟದ ರಾಮಯ್ಯ ಇಷ್ಟನ್ನು ಸಿದ್ಧವೀರಪ್ಪ ಬಲ್ಲವನಾಗಿದ್ದ. ತೋಟದ ರಾಮಯ್ಯನಿಗೆ ಸಿದ್ಧವೀರಪ್ಪನ ಬದುಕು ಗೊತ್ತಿತ್ತು. ಗೌರವದಿಂದ ಮಾತಾಡಿಸುತ್ತಿದ್ದನೇ ಹೊರತು ಸಲಿಗೆ ಇರಲಿಲ್ಲ. ಈಚೆಗೆ ಅದೇನೋ ಸಿದ್ಧವೀರಪ್ಪ - ಗೌರಮ್ಮ ಕೂಡಿಕೊಂಡರೆ ತಪ್ಪೇನಿದೆ? ಎಂದು ಚಿಂತಿಸಿದ್ದ. ಆದರೆ ಅದು ಸುಲಭವಾಗಿರಲಿಲ್ಲ. ಅವರಿಬ್ಬರಲ್ಲಿ ಭಯವಿತ್ತು. ಅದಕ್ಕೆ ಬೇರೆ ಕಾರಣಗಳಿದ್ದವು. ಜನಕ್ಕೂ ಮನಕ್ಕೂ ಅಂಜುವವರಾಗಿದ್ದರು. ಸಿದ್ಧವೀರಪ್ಪ ಮಾತ್ರ ''ಗೌರಮ್ಮ ನಂಥ ಹೆಂಡತಿ ತನಗೆ ದೊರಕಿದ್ದರೆ'' ಎಂದು ನೂರು ಸಲ ಅಂದುಕೊಂಡಿದ್ದ. ಈಗ ಹೆಂಡತಿಯಿಲ್ಲ ಇದ್ದ ಚೂರು ಬಂಧನವೂ ಈಗಿಲ್ಲ. ಅಡಿಗೆ ಮನೆಯೊಳಗಿದ್ದ ಗೌರಮ್ಮ ಬಿಸಿ ಹಾಲು ತಂದು, ''ಕುಡಿರಿ'' ಎಂದು ಮುಂದಿಟ್ಟಳು. ಪುನಃ ಒಳ ಹೋಗಿ ಅಡಿಗೆ ಮನೆ ಬಾಗಿಲ ಒಳಗೆ ನಿಂತಳು. ಸಿದ್ಧವೀರಪ್ಪ ಹಾಲು ಕುಡಿದು ಅಡಿಗೆ ಮನೆಯೊಳಗೆ ಹೋಗಿ ಗೌರಮ್ಮನನ್ನು ಮೈದಡವಿದರೆ ಸಾಕು, ಹತ್ತು ವರ್ಷದಿಂದ ತುಂಬಿಕೊಂಡು ಬಂದಿದ್ದ ಭಯ, ಹಿಂಜರಿಕೆ, ಉದ್ವಿಗ್ನತೆಗಳೆಲ್ಲ ಕರಗಿ ಎರಡಳಿದು ಒಂದಾಗುತ್ತಿದ್ದರು. ಸಿದ್ಧವೀರಪ್ಪ ಹಾಲು ಕುಡಿದು ಎದ್ದ. ಅಡಿಗೆ ಮನೆ ಕಡೆ ನೋಡಿ, ''ಬರ್ತೀನಿ'' ಎಂದು ಹೊರಬಂದ. ಕೈಯಲ್ಲಿ ಖಾಲಿ ಕ್ಯಾನು, ಚೀಲ ಇದ್ದವು. ಗೌರಮ್ಮನ ಉದ್ವೇಗದ ಉಸಿರಾಟ ಸಿದ್ಧವೀರಪ್ಪನಿಗೆ ಕೇಳಿಸುತ್ತಲೇ ಇತ್ತು.

''ಅರೇ'' ಎಂದು ಹಾವು ತುಳಿದವರಂತೆ ಹಿಂದಕ್ಕೆ ಸರಿದ, ಸಿದ್ಧವೀರಪ್ಪ. ಮನೆ ಮುಂದೆ ಇಡೀ ಅಂಗಳವೇ ಹಬ್ಬಿ ನಿಂತಂತೆ ಚಂದ್ರಮ್ಮ ರಂಗೋಲಿ ಹಾಕಿದ್ದಳು. ಆತ ಗಳಿಗೆ ಹೊತ್ತು ನಿಂತು ನೋಡಿದ. ಮನೆಯೊಳಗೆ ಹೋಗಲು ಹೇಗೆ ಪ್ರಯತ್ನಿಸಿದರೂ ರಂಗೋಲಿಯನ್ನು ತುಳಿಯದೆ ಹೋಗಲು ಅಸಾಧ್ಯವೆನಿಸಿತು. ಪೇಚಾಡುತ್ತಾ ಇಡಲಾರದೆ ಹೆಜ್ಜೆಯೂರಿ [illegible]. ಹೆಜ್ಜೆಗೆ ರಂಗೋಲಿಯು ಕೆಟ್ಟಿರಲಿಲ್ಲ. ಒಳಗೆ [illegible]. ದೊಡ್ಡ ಹಾಲಿ ನಲ್ಲಿ ಎಲ್ಲವೂ ತಣ್ಣಗಿದ್ದವು. ಚೇರ್‌ಗಳು, ಟೇಬಲ್‌ಗಳು, ಟಿ.ವಿ., ಫ್ರಿಜ್, ಸೋಫಾ, ಫೋನ್ ಎಲ್ಲವನ್ನೂ ಕಾಶಿಂಬಿ ನೀಟಾಗಿಟ್ಟಿದ್ದಳು. ಸಿದ್ಧವೀರಪ್ಪ ತಾನು ಕೂಡುವ ಸ್ಥಳಕ್ಕೆ ಬಂದು ಕುಂತ. ಸುಂದರವಾದ ಕಟ್ಟಿಗೆಯ ಚೇರ್-ಟೇಬಲ್ ಮಾಡಿಸಿದ್ದ. ಅಲ್ಲಿ ಕೂಡುವುದು ಕಡಿಮೆ, ಆದರೆ ಅದು ಮಾಲಿಕನ ಸ್ಥಳ. ಆದಿವಾರವಾದ್ದರಿಂದ ಖಾನಾವಳಿಗೆ ರಜೆ. ಸುಮ್ಮನೆ ಕುಂತ.

ಸಿದ್ಧವೀರಪ್ಪನ ''ಸಕಲೇಶ್ವರ ಊಟದ ಆಲಯ'' ಎಂದರೆ ನಗರದಲ್ಲಿ ಪ್ರತಿಷ್ಠಿತ ಖಾನಾವಳಿಯಾಗಿತ್ತು. ಶಿಸ್ತಿಗೆ, ರುಚಿಗೆ ಹೆಸರಾಗಿತ್ತು. ದೊಡ್ಡ ದೊಡ್ಡ ಅಧಿಕಾರಿಗಳು, ಮಂತ್ರಿಗಳು ಇಲ್ಲಿಂದ ಊಟ ತರಿಸಿಕೊಳ್ಳುತ್ತಿದ್ದರು. ಬಿಡುವು ಮಾಡಿಕೊಂಡು ಸಂಸಾರದ ಜತೆ ಉಂಡು ನೆಮ್ಮದಿಯಿಂದ ಹೋಗುತ್ತಿದ್ದರು. ಈಚೆಗೆ ಜಿಲ್ಲೆಗೆ ಬಂದ ಡಿ.ಸಿ. ಮೂಲತಃ ಹಳ್ಳಿಯವನಾಗಿದ್ದ. ಸಿದ್ಧವೀರಪ್ಪನ ಖಾನಾವಳಿಯ ಊಟ ಉಂಡು, ''ಒರಿಜಿನಲ್ ಮೀಲ್ಸ್ ಅಂದ್ರೆ ಇದು'' ಎಂದು ಖಾಯಂ ಊಟ ತರಿಸಿಕೊಳ್ಳುತ್ತಿದ್ದ. ಸಿದ್ಧವೀರಪ್ಪನಿಗೆ ಬಹಳ ಆತ್ಮೀಯನಾಗಿ ಬಿಟ್ಟ. ಜಿಲ್ಲೆಯ ಉಸ್ತುವಾರಿ ಮಂತ್ರಿಯಂತೂ ಸಿದ್ಧವೀರಪ್ಪನ ಖಾನಾವಳಿಯನ್ನು ಮನೆಯೆಂದು ತಿಳಿದಿದ್ದ. ಸಿದ್ಧವೀರಪ್ಪ ತನ್ನ ಮಿತಿಯಲ್ಲಿ ಮಾತ್ರ ಖಾನಾವಳಿ ನಡೆಸುತ್ತಿದ್ದ. ನೂರಾರು ಜನರು ಬಂದರೆ, ಪಾರ್ಟಿ ಏರ್ಪಡಿಸಲು ಕೇಳಿದರೆ ಖಂಡಿತ ಒಪ್ಪಿಕೊಳ್ಳುತ್ತಿರಲಿಲ್ಲ.

ಸಿದ್ಧವೀರಪ್ಪ ಸುಮ್ಮನೆ ಕುಂತ ಎಲ್ಲ ನೋಡಿದ. ನಾಲ್ಕೈದು ದಿನ ಚಂದ್ರಮ್ಮ, ಕಾಶಿಂಬಿ ಖಾನಾವಳಿಯನ್ನು ಮುಚ್ಚದೆ ಸರಿಯಾಗಿ ನಡೆಸಿದ್ದರು. ಹೆಂಡತಿಗೆ ಜ್ವರ ಬಂದಿದೆ ಬಾ ಎಂದು ಕರೆ ಬಂದಿತ್ತು. ಹೋದರೆ ತೀರಿಕೊಂಡಿದ್ದಳು. ಆಕೆ ತೀರಿಕೊಂಡ ಸುದ್ದಿ ಮೊದಲೇ ಗೊತ್ತಾಗಿದ್ದರೆ ಚಂದ್ರಮ್ಮ, ಕಾಶಿಂಬಿ ಮಣ್ಣಿಗೆ ಹೋಗುತ್ತಿದ್ದರು. ''ಹೋಗಿ ಕರಕೊಂಡು ಬರ್ತೀನಿ'' ಎಂದು ಹೋಗಿದ್ದರಿಂದ ಖಾನಾವಳಿ ಮುಚ್ಚಿರಲಿಲ್ಲ. ದಿನದ ಗಳಿಕೆ ಗಲ್ಲಾ ಪೆಟ್ಟಿಗೆಯಲ್ಲೇ ಇತ್ತು. ಸಿದ್ಧವೀರಪ್ಪ ಅದನ್ನು ಗಮನಿಸಿದ. ಪಕ್ಕದಲ್ಲಿದ್ದ ಫೋನ್ ಕರೆಯಿತು, ಎತ್ತಿದ. ಅಷ್ಟರಲ್ಲಿ ಚಂದ್ರಮ್ಮ ಗಂಗಾಳದಲ್ಲಿ ತಿಂಡಿ ತಂದು ನಿಂತಳು. ಐದು ನಿಮಿಷ ಮಾತಾಡಿ ಫೋನ್ ಕೆಳಗಿಟ್ಟಾಗ ಸಿದ್ಧವೀರಪ್ಪ ಕದಡಿ ಭಯದಿಂದ ಚಡಪಡಿಸಿದ. ಚಂದ್ರಮ್ಮ ಗಂಗಾಳ ವನ್ನು ಅಲ್ಲೇ ಟೇಬಲ್ ಮೇಲಿಟ್ಟು ಒಳಗೆ ಹೋದಳು. ಸಿದ್ಧವೀರಪ್ಪ ಕುಸಿದಂತೆ ಕಂಡ. ಕಾಶಿಂಬಿ ಒಳಗಿನಿಂದ ಅವಸರದಿಂದಲೇ ಬಂದು, ''ಏನಾಯ್ತು ದಣಿ'' ಎಂದು ಕೇಳಿದಳು. ಸಿದ್ಧವೀರಪ್ಪ ಯಥಾಸ್ಥಿತಿಗೆ ಬಂದು, ''ಆನಂದನನ್ನು ಇವತ್ತು ಜೈಲಿನಿಂದ ಹೊರಗೆ ಬಿಡ್ತಾರಂತ ! ಡಿ.ಸಿ. ಸಾಹೇಬ್ರು ಫೋನ್ ಮಾಡಿ ಹೇಳಿದ್ರು.'' ಅಂದ

ಪಿರಸ

ಮಾಮರದ ಮೇಲೆ
ಕುಳಿತು ಕೋಗಿಲೆ
ಇಂಪಾಗಿ ಹಾಡದಿರುವಂತೆ
ಶರದೃತುವಿನ ವರ್ಷಧಾರೆಯಲಿ
ಮಯೂರ ನರ್ತಿಸದೆ
ಮೌನವಾಗಿರುವಂತೆ

ಎನ್. ಶ್ರೀನಿವಾಸ
ದ್ವಿ.ದ.ಸ , ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರ,
ವಿ.ಸಿ.ಫಾರಂ, ಮಂಡ್ಯ

ಕಾಶಿಂಬಿ ಕೇಳಿದ್ದೇ ತಡ ಚಂದ್ರಮ್ಮನನ್ನು ನೆನೆಸಿಕೊಂಡು ಒಳ ಓಡಿದಳು. ಸಿದ್ಧವೀರಪ್ಪ ಬಂದದ್ದನ್ನು ಎದುರಿಸ ಬೇಕೆಂಬ ಧೈರ್ಯವನ್ನು ಎಂದಿನಂತೆ ತಂದುಕೊಂಡ.

ಇಪ್ಪತ್ತು ವರ್ಷಗಳ ಹಿಂದೆ ಕಾಶಿಂಬಿ, ''ಇನ್ನೇನು ಮನೆಗೊಂದು ಕಂದ ಬರತ್ತೈತೆ'' ಎಂದದ್ದು ನೆನಪಿಗೆ ಬಂತು. ಅಂದು ಆ ಮಾತು ಕೇಳಿ ಖುಷಿಯಾದದ್ದು ನಿಜ. ಆ ಕ್ಷಣದಿಂದಲೇ ಹೆಂಡತಿಯನ್ನು ಸರಿಯಾಗಿ ನೋಡಿಕೊಳ್ಳಲು ಪ್ರಯತ್ನಿಸಿದ. ಕಾಶಿಂಬಿಗೂ [illegible]. ಆದರೆ ಹೆಂಡತಿ, ''ಹುಟ್ಟುವ ಕೂಸಿನ ಮ್ಯಾಗ ಜೀವ ಯಿಟ್ಟು ಕಾಳಜಿ ಮಾಡಾಕ ನಿಂತಾನ. ನನ್ನ ಮ್ಯಾಗ ಯಾರು ಜೀವಯಿಟ್ಟಾರ'' ಎಂದು ಅಣಕಿಸಿದಳೇ ಹೊರತು ಸಮಯ ಸಂದರ್ಭವನ್ನು ಅರಿತುಕೊಳ್ಳಲು ಯತ್ನಿಸಲಿಲ್ಲ. ದವಾಖಾನೆಗೆ ತಿಂಗಳ ತಿಂಗಳ ಹೋಗಿ ಬರಲು [illegible] ದವಾಖಾನೆಯಲ್ಲಿ [illegible] ಎಂದು ಸಿದ್ಧವೀರಪ್ಪ ಎಷ್ಟು ಪ್ರಯತ್ನಿಸಿದರೂ [illegible] ತವರುಮನ್ಯಾಗ ಹಡಿತೀನಿ, ಅನಾಥರಂಗ ದವಾಖಾನ್ಯಾಗ ಯಾಕ ಹಡಿಲಿ?'' ಎಂದು [illegible]. ಹೋದರೆ ಹೋಗಲಿ ಬಿಡೆ ಎಂದು [illegible] ಖಾನಾವಳಿಯ ಕಡೆ ಗಮನ [illegible] ಕಳಿಸಿದ. ಹೋದಾಕೆ [illegible] ಬಯಿಕೊಂಡೇ ಬಂದಳು. ಗಂಡು ಮಗುವನ್ನು ಹಡೆದ ಸುದ್ದಿ ಕೇಳಿ ಹೋದಾಗಲೂ. ''ಮಗನನ್ನು ನೋಡಾಕ ಬಂದಾನ! ನನ್ನ ನೋಡಾಕ [illegible]

[illegible]

ಕೇಳಿ ಹೋಗಿ ಬಲವಂತವಾಗಿ ಹೆಂಡತಿ-ಮಗುವನ್ನು ಕರೆತಂದು ದವಾಖಾನೆಗೆ ತೋರಿಸಿದ. ಪ್ರಯೋಜನ ವೇನೂ ಆಗಲಿಲ್ಲ. ಕಾಳಜಿ ವಹಿಸಿದಂತೆ ಹೆಂಡತಿಯ ವರ್ತನೆಗಳು ಹೇಸಿಗೆ ಹುಟ್ಟಿಸತೊಡಗಿದವು. ಸರಿಯಾಗಿ ಎದೆಹಾಲು ಕೊಡದೆ ಇರುವುದು, ಮನೆಯಲ್ಲೇ ಮಗುವನ್ನು ಬಿಟ್ಟು ಸಿನಿಮಾಗೆ ಹೋಗುವುದು, ಬಯ್ದರೆ ಸಿನಿಮಾಕ್ಕೆ ಎತ್ತಿಕೊಂಡೇ ಹೋಗುವುದು. ಅಲ್ಲಿ ತುಂಬಿದ ಜನಗಳಲ್ಲಿ ಸಿನಿಮಾ ನೋಡಿ ಮನೆಗೆ ಬಂದಾಗ ಮಗು ದಣಿದು ಬಾಡಿ ಹೋಗಿರುತ್ತಿತ್ತು. ಅದನ್ನು ನೋಡಿ ಜೀವ ಚುರುಚುರು ಅಂದು, ಹೆಂಡತಿ ಮೇಲೆ ವಿಪರೀತ ಸಿಟ್ಟು ಬಂದು ಬಯ್ಯುತ್ತಿದ್ದ. ''ನೀನೆ ಸಾಕು'' ಎಂದು ನೆಲದ ಮೇಲೆ ಇಳಿಸಿ ಹೋಗುತ್ತಿದ್ದಳು. ದಿನವಿಡೀ ಮಗುವಿನ ಬಳಿ ಬರುತ್ತಿರಲಿಲ್ಲ. ಕಾಶಿಂಬಿ ಎತ್ತಿಕೊಂಡು ಆರೈಕೆ ಮಾಡಲು ನಿಂತರೆ ನೋಡಿ ಸಹಿಸದೆ, ''ಬೀದಿ ಭಿಕಾರಿ'' ಎಂದು ಬಯ್ದು ಮಗುವನ್ನು ಕಸಿದುಕೊಳ್ಳುತ್ತಿದ್ದಳು. ಹೀಗೆ ಬದುಕು ಸಾಗಿತು. ಸಿದ್ಧವೀರಪ್ಪ ಹೆಂಡತಿ-ಮಗನನ್ನು ಅವರ ಪಾಡಿಗೆ ಬಿಟ್ಟುಬಿಟ್ಟ. ತಾಲ್ಲೂಕ ಬಿಟ್ಟು, ಜಿಲ್ಲೆ ಸೇರಿ ಅಲ್ಲಿ ಖಾನಾವಳಿ ಇಡಲು ನಿರ್ಧರಿಸಿದ. ಅದಕ್ಕೆ ಬೇಕಾಗುವ ಹಣದ ವ್ಯವಸ್ಥೆಯನ್ನು ಮಾಡಿಕೊಂಡು, ಕಟ್ಟಿಸಿದ್ದ ದೊಡ್ಡ ಮನೆಯನ್ನೇ ಖರೀದಿಸಿದ. ವೈಭವದಿಂದ ಆಧುನಿಕ ರೀತಿಯಲ್ಲಿ ಖಾನಾವಳಿಯನ್ನು ಸಜ್ಜುಗೊಳಿಸಿ ಆರಂಭಿಸಿದ. ಜಿಲ್ಲೆ ಸೇರಿದಾಗ ಮಗನಿಗೆ ಹತ್ತು ವರ್ಷ ಮುಗಿದಿದ್ದವು. ಅವನ ಹಟಮಾರಿತನ ಅದಕ್ಕೆ ಹೆಂಡತಿಯ ಬೆಂಬಲದಿಂದ ಮಗ ಅನಾರೋಗ್ಯದಿಂದಲೇ ಬೆಳೆದ. ಶಾಲೆಗೆ ಹೋಗುತ್ತಿದ್ದನಾದರೂ ಅದರಿಂದ ಅವನಿಗೆ ಯಾವ ಸುಖವಿರಲಿಲ್ಲ. ಮನೆಯಲ್ಲಿ ಆರೋಗ್ಯವಾದ ಊಟವಿದ್ದರೂ ಉಣ್ಣದೇ, ಎಣ್ಣೆಯಲ್ಲಿ ಕರಿದ ತಿಂಡಿಗಳನ್ನು ತಿಂದು ಕೆಮ್ಮುತ್ತಿದ್ದ. ಹಣ್ಣು ತಿನ್ನುತ್ತಿರಲಿಲ್ಲ. ತಂದೆ ಬಳಿಗೆ ಬರುತ್ತಿರಲಿಲ್ಲ. ಸಿದ್ಧವೀರಪ್ಪ ಮಗನ ಬಗ್ಗೆ ಕನಸು ಕಾಣಲು ಹೋಗಲಿಲ್ಲ. ಯಾವ ಜನ್ಮದಲ್ಲಿ ಅದೆಂಥ ಘೋರ ಪಾಪ ಮಾಡಿದ್ದೆನೋ! ಅದಕ್ಕಾಗಿ ಈ ಜನ್ಮದಲ್ಲಿ ಇಂಥ ಹೆಂಡತಿ-ಮಗ ಸಿಕ್ಕಿದ್ದಾರೆಂದು ನರಳಿದ. ಅವರನ್ನು ನೋಡಿ ಸಹಿಸಿಕೊಳ್ಳುವ ಗುಣವನ್ನು ಬೆಳೆಸಿಕೊಂಡ. ಜಿಲ್ಲೆಗೆ ಬಂದ ಮೇಲೆ ಖಾಜಿ ಮಾಸ್ತರ ಪರಿಚಯವಾಗಿ ಇನ್ನಷ್ಟು ಗಟ್ಟಿಗೊಂಡ. ಆತನ ಸಹವಾಸದಿಂದ ಸಿದ್ಧವೀರಪ್ಪನ ವ್ಯಕ್ತಿತ್ವಕ್ಕೆ ಮತ್ತಷ್ಟು ಶಿಸ್ತು ಬಂತು. ಯೋಗಾಸನ ಕಲಿತ. ನಂತರ ಯೋಗದಿಂದ ದೈಹಿಕ ಮತ್ತು ಮಾನಸಿಕ ಸ್ಥಿತಿಯನ್ನು ಗಟ್ಟಿಗೊಳಿಸಿಕೊಂಡ. ಆದರೂ ಸಂಸಾರದಲ್ಲಿ ಅನೈಕ್ಯತೆಯನ್ನು ನೋಡಿ ಸಹಿಸಿಕೊಳ್ಳುವುದೇ ದೊಡ್ಡ ಸವಾಲಾಗಿ ಕಂಡಿತು. ಗೌರಮ್ಮ ಮನಸ್ಸಿನಲ್ಲಿ ಕುಳಿತಿದ್ದಳು. ನಿತ್ಯ ಸೂರ್ಯೋದಯದ ಜತೆಗೆ ಆಕೆಯನ್ನು ನೋಡಿದರೆ ಸಾಕು ಇಡೀ ದಿನ ಉಲ್ಲಾಸವಾಗಿರುತ್ತಿದ್ದ. ಅವರಿಬ್ಬರ ನಡುವೆ ಅವ್ಯಕ್ತವಾದ ಮಾಗಿದ ಸಂಬಂಧ ಬೆಳೆದಿತ್ತು. ಬೇರಿಗೂ ಹೂವಿಗೂ ಇರುವ ಸಂಬಂಧದಂತೆ.

ಖಾಜಿ ಮಾಸ್ತರ ಹೇಳುತ್ತಿದ್ದ : ''ಸಿದ್ಧವೀರಪ್ಪ, ಮಾನಸದ ಸುಖವನ್ನು ಗಳಿಸಬೇಕು'' ಎಂದು. ಅದಕ್ಕೆ ಬೇಕಾದ ಸಾಧನೆಯ ದಾರಿಯನ್ನು ಖಾಜಿ ಮಾಸ್ತರ ಹೇಳುತ್ತಿದ್ದ. ಅದು ಕಷ್ಟದ ಹಾದಿ ಎಂದು ಸಿದ್ಧವೀರಪ್ಪನಿಗೆ ಅರಿವಿತ್ತು. ಆದರೂ ಮನೆಯಲ್ಲಿ ಹೆಂಡತಿ-ಮಗನ ವರ್ತನೆಯನ್ನು ನೋಡಿ ನಿರ್ಲಿಪ್ತವಾಗಿರುವುದನ್ನು ಸಾಧಿಸಿದ. ಈ ನಿರ್ಲಿಪ್ತತೆ ಗೌರಮ್ಮನ ವಿಷಯದಲ್ಲಿಯೂ ಬೆಳೆಯುತ್ತಿತ್ತು. ಸಿದ್ಧವೀರಪ್ಪ ಹೊಟ್ಟೆಪಾಡಿಗಾಗಿ ಖಾನಾವಳಿಯನ್ನು ಮಾಡಿಕೊಂಡಿದ್ದರಿಂದ ಅದನ್ನು ಬಿಡುವಂತಿರಲಿಲ್ಲ. ಆದರೆ ಖಾಜಿ ಮಾಸ್ತರ ಎಲ್ಲ ಬಿಟ್ಟು ಪ್ರತಿ ಬೇಸಿಗೆಯಲ್ಲಿ ಹಿಮಾಲಯಕ್ಕೆ ಹೋಗಿ ಬರುತ್ತಿದ್ದ. ಸಿದ್ಧವೀರಪ್ಪನಿಗೆ ಅದೊಂದು ಆಗಿರಲಿಲ್ಲ. ಈ ಸಲ ಬಂದೇ ಬರ್ತೀನಿ ಎಂದು ನಾಲ್ಕು ವರ್ಷಗಳಿಂದ ಪ್ರಯತ್ನಿಸಿದರೂ ಸಾಧ್ಯವಾಗಿರಲಿಲ್ಲ.

ಒಮ್ಮೆ ಪಿ.ಎಸ್.ಐ. ಫೋನ್ ಮಾಡಿ ಕರೆಸಿಕೊಂಡರು. ಪೊಲೀಸ್ ಸ್ಟೇಷನ್ನಿಗೆ ಹೋಗಿ ನೋಡಿದರೆ, ಮಗ ಪೊಲೀಸರ ವಶದಲ್ಲಿದ್ದ. ವೇಶ್ಯಾಗೃಹದಲ್ಲಿದ್ದ ಮಗನನ್ನು ಬಂಧಿಸಿದ್ದರು. ಮಗನನ್ನು ಬಿಡಿಸಿಕೊಂಡು ಮನೆಗೆ ಬಂದ. ಹದಿನೆಂಟು ವರ್ಷದ ಮಗ. ''ಕೈಗೆ ಬಂದ ಮಗನಿಗೆ ಮದುವೆ ಮಾಡಬೇಕೆಂಬ ಅರಿವು ಬ್ಯಾಡೇನು?'' ಹೆಂಡತಿ ಉಪದೇಶ ಮಾಡಿದಳು. ಸಿದ್ಧವೀರಪ್ಪನಿಗೆ ನಗಬೇಕೋ ಅಳಬೇಕೋ ತಿಳಿಯಲಿಲ್ಲ. ಹೆಂಡತಿ ಅಷ್ಟಕ್ಕೆ ಸುಮ್ಮನಿರದೆ ಅವರಿವರನ್ನು ಸೇರಿಸಿ ಒತ್ತಡ ತಂದಳು. ''ಮದುವೆ ಮಾಡಿ ಜವಾಬ್ದಾರಿ ಹೊರಿಸು, ಸರಿ ಹೋದಾನು'' ಎಂದು ಬಲ್ಲವರು ಹೇಳಿದರು. ''ದಮ್ಮಡಿಯ ಗಳಿಕೆ ಮಾಡಲು ಆಗದವನಿಗೆ, ಮನುಷ್ಯತ್ವವೇ ಇಲ್ಲದ ಮಗನಿಗೆ ಮದುವೆ ಮಾಡಿ ಯಾವ ಪಾಪಕ್ಕೆ ಗುರಿಯಾಗ್ಲಿ?'' ಎಂದು ಸಂಕಟಪಟ್ಟ. ಬರುವ ಸೊಸೆಯನ್ನು ನೆನಸಿಕೊಂಡು, ''ವ್ಯರ್ಥವಾಗಿ ಒಂದು ಹೆಣ್ಣಿನ ಬಾಳನ್ನು ನಾನ್ಯಾಕೆ ಹಾಳು ಮಾಡಲಿ?'' ಎಂದು ಸುಮ್ಮನಾದ. ಹೆಂಡತಿ ಸುಮ್ಮನಿರದೆ ಮಗನಿಗಾಗಿ ಅದೆಲ್ಲಿ ಕನ್ಯ ನೋಡಿದಳೋ ಒಮ್ಮೆಲೆ ನಿಶ್ಚಯಿಸಿ ಮದುವೆಗಾಗಿ ಒತ್ತಾಯಿಸಿದಳು. ಸಿದ್ಧವೀರಪ್ಪನಿಗೆ ಅದು ಜೀವನ್ಮರಣದ ಪ್ರಶ್ನೆಯಾಯಿತು. ಕೊನೆಗೆ, ''ನಡೆಯುವುದು ನಡೆಯುತ್ತದೆ, ತಡೆಯುವುದಕ್ಕೆ ನಾನ್ಯಾರು?'' ಎಂದುಕೊಂಡ. ಮದುವೆಯ ಸಿದ್ಧತೆಗಳು ನಡೆದವು. ಹಾಗೆ ನೋಡಿದರೆ ಮದುವೆಯ ಜವಾಬ್ದಾರಿಯನ್ನು ಕಾಶಿಂಬಿಯೇ ಹೊತ್ತಳು. ಮದುವೆಯ ದಿನ ನೇರವಾಗಿ ಮದುವೆ ಮಂಟಪಕ್ಕೆ ಹೋಗಿ ತಾಳಿ ಕಟ್ಟುವ ಸಮಯದಲ್ಲಿ ಅಕ್ಕಿಕಾಳು ಹಾಕಿ, ''ದೇವರು ನಿನ್ನ ಬೆನ್ನಿಗಿರಲಿ, ಮಗನನ್ನು ಮನುಷ್ಯನನ್ನಾಗಿಸುವ ಪವಾಡ ಮಾಡು'' ಎಂದು ಸೊಸೆಯನ್ನು ನೋಡಿ ಮನಸ್ಸಿನಲ್ಲೇ ಹರಸಿದ. ಸೊಗಸಾಗಿ ಬೆಳೆದ ಬಾಳೆಯ ಗಿಡದಂತಿದ್ದ ಸೊಸೆಯ ಪಕ್ಕದಲ್ಲಿ ಗೆದ್ದಲು ಹತ್ತಿದ ಗಿಡದಂತೆ ಮಗ ನಿಂತದ್ದನ್ನು ನೋಡಲಾಗದೆ ಮರಳಿ ಬಂದ.......

''ಊಟಮಾಡ್ರಿ,'' ಚಂದ್ರಮ್ಮ, ಗಂಗಾಳ ತಂದಳು. ಸಿದ್ಧವೀರಪ್ಪ ಗತಕಾಲದ ನೆನಪಿನಲ್ಲಿ ಮುಳುಗಿದ್ದ. ಮಧ್ಯಾಹ್ನವಾಗಿತ್ತು. ಹೊರಗೆ ರಣ ರಣ ಬಿಸಿಲು. ಹಿತ್ತಲಿನಲ್ಲಿ ಆಕಾಶ ಮಲ್ಲಿಗೆ ಹೂವಿನ ಗಿಡದಲ್ಲಿದ್ದ ಕೋಗಿಲೆ ಕೂಗುತ್ತಿತ್ತು. ಬೆಳಗಿನ ತಿಂಡಿಯ ಗಂಗಾಳ ಹಾಗೇ ಇತ್ತು. ಚಂದ್ರಮ್ಮ ಊಟದ ಗಂಗಾಳ ಇಟ್ಟು ತಿಂಡಿಯ ಗಂಗಾಳ ಎತ್ತಿಕೊಂಡು, ''ಊಟ ಮಾಡ್ರಿ'' ಎಂದು ಪುನಃ ಹೇಳಿ ಹೋದಳು. ಸಿದ್ಧವೀರಪ್ಪ ಚಂದ್ರಮ್ಮನನ್ನು ನೋಡಿದ. ಆಗಲೇ ಆಕೆ ಯಥಾಸ್ಥಿತಿಗೆ ಬಂದಿದ್ದಳು. ಸಿದ್ಧವೀರಪ್ಪನಿಗೇ ನಾಚಿಕೆ ಬರುವಷ್ಟು ನಿರ್ಲಿಪ್ತವಾಗಿದ್ದಳು. ದಪ್ಪವೂ ಅಲ್ಲದ, ತೆಳುವೂ ಅಲ್ಲದ, ಎತ್ತರದ ನಿಲುವಿನ ಚಂದ್ರಮ್ಮ ಗೋಧಿ ಮೈಬಣ್ಣ ಹೊಂದಿದ್ದಳು. ಹೌದೋ ಅಲ್ಲೋ ಅನ್ನುವ ನಗು ಯಾವಾಗಲೂ ಮುಖದಲ್ಲಿ ಅರಳಿ ಅರಳದಂತೆ ನಿಂತಿರುತ್ತಿತ್ತು. ಸಿದ್ಧವೀರಪ್ಪ ಆ ನಗುಮುಖವನ್ನು ನೋಡಿ ಪ್ರಸನ್ನನಾಗುತ್ತಿದ್ದ. ಯಾಕೋ ಉಣ್ಣಲು ಮನಸ್ಸಾಗಲಿಲ್ಲ. ಕೋಗಿಲೆ ಕೂಗುತ್ತಿತ್ತು....! ಫೋನ್ ಕರೆಯಿತು, ಎತ್ತಿದ. ಎಲ್ಲ ಕೇಳಿ ''ಆಯ್ತು'' ಎಂದಿಟ್ಟ. ಮಧ್ಯಾಹ್ನ ಎರಡು ಗಂಟೆಗೆ ಆನಂದನನ್ನು ಬಿಡುಗಡೆ ಮಾಡಲಾಗುತ್ತದೆ ಎಂಬ ಸುದ್ದಿ ಬಂದಿತ್ತು.

ಮಗನ ಮದುವೆ ಮುಗಿದು ಸೊಸೆ ಮನೆಗೆ ಬಂದಳು. ಅವರಿಬ್ಬರನ್ನು ನೋಡಿಕೊಳ್ಳಲು ಸಿದ್ಧವೀರಪ್ಪ ಕಾಶಿಂಬಿಗೆ ಬಿಟ್ಟ. ಕಾಶಿಂಬಿ ಬಂದ ಸೊಸೆಗೆ ಮಗ-ಹೆಂಡತಿಯ ವರ್ತನೆಗಳನ್ನು ಸೂಕ್ಷ್ಮವಾಗಿ ತಿಳಿಸಿದಳು. ಸೊಸೆಗೇ ಮಗ-ಹೆಂಡತಿಯ ಕಲ್ಯಾಣ ಗುಣಗಳ ಪರಿಚಯ ಆಗ ತೊಡಗಿತ್ತು. ಆಕೆಯ ತಾಳ್ಮೆ ಕಂಡು ಸಿದ್ಧವೀರಪ್ಪನಿಗೆ ಹೆಮ್ಮೆ ಎನಿಸಿತು. ಸೊಸೆ, ಕಾಶಿಂಬಿ ಕೂಡಿ ಖಾನಾವಳಿಯನ್ನು ಸುಗಮವಾಗಿ ನಡೆಸತೊಡಗಿದರು. ಅಷ್ಟೇ ಅಲ್ಲ, ಮಗ-ಹೆಂಡತಿಯಿಂದ ಅನುಭವಿಸಿದ ನೋವನ್ನು ಮಾಸುವಂತೆ ಸೊಸೆ ಸಿದ್ಧವೀರಪ್ಪನನ್ನು ಪ್ರೀತಿ-ಗೌರವಗಳಿಂದ ಕಂಡಳು. ನೆಮ್ಮದಿಯ ಗಂಧಗಾಳಿ ಸುಳಿಯದ ಮನೆಯಲ್ಲಿ ಸೊಸೆಯ ಚಟುವಟಿಕೆಗಳು ತಂಗಾಳಿ ಬೀಸಿದಂತಾಯಿತು. ಕಾಶಿಂಬಿಯಂತೂ ದಣಿ ಆರಾಮದಿಂದ ಇರುವುದನ್ನು ಕಂಡು ಉತ್ಸಾಹದಿಂದ ಉಬ್ಬಿದಳು. ಮನೆ ಕೆಲಸ, ಖಾನಾವಳಿ ಕೆಲಸ ಎಲ್ಲದರಲ್ಲೂ ಸೊಸೆ ಹೊಸ ವಾತಾವರಣವನ್ನು ಮೂಡಿಸಿದಳು. ಸಿದ್ಧವೀರಪ್ಪನ ಶಿಸ್ತಿನ, ಗಾಂಭೀರ್ಯದ ಬದುಕಿಗೆ ಶೋಭೆ ತಂದಳು. ಸೊಸೆಯಿಂದಾಗಿ ಮಗ-ಹೆಂಡತಿಯೂ ಹಿತವಾಗಿ ಕಂಡರು. ಅವರಿಬ್ಬರು ದುಡಿಯದಿದ್ದರೂ ಪರವಾಗಿಲ್ಲ, ಸುಮ್ಮನೆ ತಿಂದುಂಡು ತಮ್ಮ ಪಾಡಿಗೆ ತಾವಿದ್ದರೆ ಅದಕ್ಕಿಂತ ಭಾಗ್ಯ ಬೇರೆ ಬೇಕಾಗಿರಲಿಲ್ಲ ಎನ್ನಿಸಿತ್ತು. ಆದರೆ ಸಿದ್ಧವೀರಪ್ಪನ ಈ ನೆಮ್ಮದಿಯೂ ಕನಸಿನಂತಾಯಿತು. ಸೊಸೆ ತೋರಿಸುತ್ತಿದ್ದ ಗೌರವವನ್ನು ಮಗ-ಹೆಂಡತಿ ಕೂಡಿಯೇ ಅಪಾರ್ಥಮಾಡಿಕೊಂಡರು. ಮೇಲಾಗಿ ಮಗನಿಗೆ ಹಣ ಬೇಕಾದಾಗಲೆಲ್ಲ ಹೆಂಡತಿಯನ್ನು ಪೀಡಿಸಿ, ಕಾಡಿಸಿದ. ಆದರೆ ಸೊಸೆ ಗಂಡನಿಗಾಗಿ ಹಣವನ್ನು ಕೇಳಲು ಸಿದ್ಧವೀರಪ್ಪನನ್ನು ಕೇಳಲಿಲ್ಲ. ಸಿದ್ಧವೀರಪ್ಪನೇ ಅರಿತುಕೊಂಡು ಮಗನಿಗೆ ಕೊಡಲು ಹೇಳಿ, ಸೊಸೆಗೆ ಹಣ ಕೊಡುತ್ತಿದ್ದ. ಸೊಸೆಗೆ ಅದು ನೋವಿನ ಸಂಗತಿಯಾದದ್ದು ಗೊತ್ತಾಯಿತು. ಅದು ದಿನದಿಂದ ದಿನಕ್ಕೆ ಹೆಚ್ಚಾಯಿತು. ಕೊನೆಗೆ ಹೆಂಡತಿ-ಮಗ ಕೂಡಿಯೇ ಸಂಚು ಮಾಡಿ ಸೊಸೆಯನ್ನು ಮುಂದುಮಾಡಲು ನೋಡಿದರು. ಸೊಸೆ ಯಾವುದಕ್ಕೂ ಸಿದ್ಧಳಾಗಲಿಲ್ಲ. ಅವಳಿಗೆ ಕಿರಿಕಿರಿ ಮಾಡಿದರು. ಕಾಶಿಂಬಿಯೇ, ''ದಣಿ, ಬ್ಯಾರೆ ಇದ್ದು

ಕೊಂಡು ಏನಾದ್ರೂ ವ್ಯಾಪಾರ ಮಾಡ್ತಾರಂತ. ಅದಕ್ಕಾಗಿ ಹಣ ಕೇಳ್ತಾರ್'' ಎಂದು ಸಿದ್ಧವೀರಪ್ಪನಿಗೆ ಹೇಳಿದಳು. ಕೊಡದಿದ್ದರೊಂದು ಕಷ್ಟ, ಕೊಟ್ಟರೊಂದು ಕಷ್ಟವಾಯ್ತು. ಸಿದ್ಧವೀರಪ್ಪ ಕಟ್ಟೆಚ್ಚರ ಮಾಡಿ ಹಣ ಕೊಡಲು ಒಪ್ಪಿದ. ಹಿಂದೆ ಇದ್ದ ತಾಲ್ಲೂಕಿಗೆ ಹೋಗಿ ಅಲ್ಲಿ ಕಿರಾಣ ಅಂಗಡಿ ತೆಗೆದರು. ಸೊಸೆ, ಮಗ-ಹೆಂಡತಿ ತಾಲ್ಲೂಕು ಸೇರಿದರು. ಹೋಗುವಾಗ ಸೊಸೆಗೆ, ''ಅವರ ನಡುವೆ ನೀನು ಬಾಳುವುದು ಕಷ್ಟ!'' ಎಂದು ಸಿದ್ಧವೀರಪ್ಪ ಹೇಳಿದ್ದ. ಸೊಸೆಯ ಮೇಲಿನ ಕಕ್ಕುಲಾತಿಗೆ ಆಗಾಗ ಕಾಶಿಂಬಿಯನ್ನು ನೋಡಿ ಬರಲು ಕಳಿಸುತ್ತಿದ್ದ. ಸಹಜವಾಗಿಯೇ ಮಗ-ಹೆಂಡತಿಯ ಕಿರಾಣಿ ಅಂಗಡಿ ಮೂರು ತಿಂಗಳಲ್ಲಿ ದಿವಾಳಿಯಾಯಿತು. ಹೊರಗಿನ ತಿಂಡಿ, ಸಿನಿಮಾ ರುಚಿಗೆ ಬಿದ್ದಿದ್ದ ಹೆಂಡತಿ ಒಂದು ಕಡೆ. ಇಸ್ಪಿಟ್ ಆಟ, ಕುಡಿತ ಕಲಿತಿದ್ದ ಮಗ ಇನ್ನೊಂದು ಕಡೆ. ದಿನದ ಗಳಿಕೆಯನ್ನು ಮಗ-ಹೆಂಡತಿ ಕೂಡಿಯೇ ಹಾಳು ಮಾಡಿದರೆ ಸೊಸೆ ಏನು ಮಾಡಿಯಾಳು? ಕಾಶಿಂಬಿಯಿಂದ ಸೊಸೆ ಮನೆಗೆ ಬಂದಳು. ಮದುವೆಯಾಗಿ ವರ್ಷವಾಗಿರಲಿಲ್ಲ, ಕಮರಿ ಹೋಗಿದ್ದಳು. ವಾರದ ನಂತರ ಹೆಂಡತಿ ಬಂದಳು. ಮಗ ಹೊಡೆದು ಬಡಿದು ಹಣ ತರಲು ಕಳಿಸಿದ್ದ. ಕಾಶಿಂಬಿಯೇ ಆರೈಕೆ ಮಾಡಿ ಉಸಿರಾಡುವಂತೆ ಮಾಡಿದಳು. ಅದಾಗಿ ವಾರವಾಗಿರಲಿಲ್ಲ. ತಾಲ್ಲೂಕಿನಲ್ಲಿ ಮಗನಿಗೆ ಸಾಲ ಕೊಟ್ಟವರು ಬಂದು ಕುಂತರು. ಸಿದ್ಧವೀರಪ್ಪನಿಗೆ ವಿಪರೀತ ಸಿಟ್ಟು ಬಂದರೂ ತಡೆದುಕೊಂಡು, ಮಗನನ್ನು ಕರೆಸಿ ಸಾಲಗಾರರಿಗೆ ಹಣ ಕೊಟ್ಟು ಕಳಿಸಿದ. ಸೊಸೆ ಕ್ಷಮೆ ಬೇಡುವಂತೆ ಕಣ್ಣೀರು ತಂದಳು. ''ಮಗ-ಹೇಣ್ತಿ ಇಬ್ಬರೂ ನನ್ನ ಎದ್ಯಾಗ ಮುಳ್ಳಾಗಿ ಕುಂತಾರ. ನಾನು ಸತ್ತರ ಮಾತ್ರ ನೋವು ಕಮ್ಮಿಯಾಗುವುದು'' ಅಂದ.

ಹೆಂಡತಿಯ ಕಾಡಾಟ ಕಮ್ಮಿಯಾದಂತೆ ಕಂಡಿತು. ಮಗ ಮನೆಯಲ್ಲಿದ್ದು ದಿನಾಲು ಹೆಂಡತಿಗೆ ಪೀಡಿಸಿ ಪೀಡಿಸಿ ಆಕೆಯನ್ನು ಸಾಯುವಂತೆ ಮಾಡಿದ. ಸಿದ್ಧವೀರಪ್ಪನೇ ಪರಿಚಯವಿದ್ದ ಪಿ.ಎಸ್.ಐ.ಗೆ ಹೇಳಿದ. ಪೊಲೀಸರು ಬಂದು ಮಗನನ್ನು ಕರೆದುಕೊಂಡು ಹೋದರು. ಬರೀ ಹೆದರಿಸಿ ಎಚ್ಚರಿಕೆ ನೀಡಲು ಹೇಳಿದ್ದ. ಎರಡು ದಿನದ ನಂತರ ಮಗ ಮನೆಗೆ ಬಂದಾಗ ನೋಡಿದರೆ ಪೊಲೀಸರು ಏಳಲಾಗದಂತೆ ಹೊಡೆದಿದ್ದರು. ವಿಚಾರಿಸಿದರೆ, ನ್ಯಾಯ, ಕಾನೂನು, ಮಾತಾಡಿ ಮಗ ಪೊಲೀಸರಿಗೆ ಬಾಯಿಗೆ ಬಂದಂತೆ ಬಯ್ದನಂತೆ. ಅದಕ್ಕಾಗಿ ಅವರು ಕೈ ತೋರಿಸಿದ್ದರು. ಒಂದು ತಿಂಗಳು ಪರಾಮರಿಕೆ ಮಾಡಬೇಕಾಯಿತು. ಹೆಂಡತಿ-ಮಗ ಕೂಡಿ ಸಿದ್ಧವೀರಪ್ಪನಿಗೂ-ಸೊಸೆಗೂ ಸೇರಿಸಿ ಮರ್ಯಾದೆ ಮೀರಿ ಬಯ್ಯುವುದು ನಡೆಸಿದರು. ಸೊಸೆ ಮಾತ್ರ ಅಂತರಮುಖಿಯಾಗಿ ಖಾನಾವಳಿ ಕೆಲಸದಲ್ಲಿ ತೊಡಗಿಕೊಂಡಿದ್ದಳು. ಅದನ್ನೂ ಸಹಿಸದೆ ಮಗ ಹೆಂಡತಿಗೆ ಖಾನಾವಳಿಯಲ್ಲಿ ಕೆಲಸ ಮಾಡಲು ಬಿಡಲಿಲ್ಲ. ಆದರೆ ಸೊಸೆ ಎಂದಿನಂತೆ ದುಡಿದಳು. ಪುನಃ ಹೆಂಡತಿ ಮಗ ಸೇರಿ, ''ನಾವು ಬ್ಯಾರೆ ಇರ್ತೇವಿ, ನಮಗ ಅದೇನು ಕೊಡ್ತಿದ್ದಿ ಕೊಡು'' ಎಂದು ನಿಂತರು. ಸಿದ್ಧವೀರಪ್ಪನಿಗೆ ನಗು ಬಂತು. ತನ್ನ ತಂದೆಯ [illegible] ಬಂತು. ಮಗ [illegible] ಹೋಗಿ,, ಜೋಕವೆ [illegible] ಎಲ್ಲಾ ನಿಮ್ದೇ'' ಅಂದ [illegible]

ಆದರೆ ದಿನಕಳೆದಂತೆ ಹೆಂಡತಿ-ಮಗ ಕೂಡಿ ಸೊಸೆಗೆ ಕಿರುಕುಳ ನೀಡಿ, ಅನ್ನ-ನೀರು ಹೊಟ್ಟೆಗೆ ಹತ್ತದಂತೆ ಮಾಡಿದರು. ತಾಲ್ಲೂಕಿನಲ್ಲಿ ಹೋಟೆಲ್ಲು ಇಡುತ್ತೇವೆಂದು ಅದಕ್ಕೆ ಹಣ ಬೇಕೆಂದು ಸಿದ್ಧವೀರಪ್ಪನನ್ನು ಬೇಡಿಕೊಂಡರು. ಸೊಸೆಯನ್ನು ಕಳಿಸುವುದಿಲ್ಲ, [illegible] ನೀವೇ ಹೋಗಿ ಎಂದ. ಹಾಜಿ ಮಾಸ್ತಾರ ಈ ನಡುವೆ, ''ನಿನ್ನ ದೌರ್ಬಲ್ಯ ಅವರಿಗೆ ತೋರಿಸಿದ್ದಿ. ನಿನಗ್ಯಾಕೆ ಸೊಸೆಯ ಮೇಲೆ ವ್ಯಾಮೋಹ?'' ಅಂದಿದ್ದ. ಅದು ನಿಜವೆಂದು ಸೊಸೆಯನ್ನು ನಿರ್ಲಿಪ್ತವಾಗಿ ಕಾಣಲು ಪ್ರಯತ್ನಿಸಿದ. ಸೊಸೆಯೇ ತನ್ನಿಂದ ಸಿದ್ಧವೀರಪ್ಪನಿಗೆ ಕಷ್ಟವೆಂದು ಅರಿತು, ''ನಾನು ಅವರಿಂದ ಹೋಗ್ತಿನಿ'' ಅಂದಳು. ''ಈ ಸಲವಾದ್ರೂ ನೀನು ಬದುಕುವ ದಾರಿ ಕಂಡುಕೋ'' ಎಂದು ಹಣ ಕೊಟ್ಟು ಕಳಿಸಿದ. ಪಾಪ ಆಕೆ ಬದುಕುವ ದಾರಿಯನ್ನು ಹೇಗೆ ಕಲೀಬೇಕು? ಎಂದು ಸಿದ್ಧವೀರಪ್ಪ ಮರುಗಿದ.

ಹೋಗಿ ನೆಲೆಯೂರಿ ತಿಂಗಳಾಗಿರಬೇಕು, ಕಾಶಿಂಬಿಯನ್ನು ಕಳಿಸಿದ. ನೋಡಲು ಹೋದ ಕಾಶಿಂಬಿಯನ್ನು ಮಗ-ಹೆಂಡತಿ ಬಾಯಿಗೆ ಬಂದಂತೆ ಬಯ್ದು ಕಳಿಸಿದರು. ಅವರು ಬಯ್ದದ್ದು ಕಾಶಿಂಬಿಗೆ ಹತ್ತಲಿಲ್ಲ. ಆದರೆ ಅವರು

ಬದುಕು[illegible] ರೀತಿಯೇ ಎದೆ ಬಿರಿಯುವಂತಿತ್ತು. ಬಂದ ವಳೇ ಗೊಳೋಂತ ಅತ್ತಳು. "ಸೊಸೆಯನ್ನು ಕಾಪಾಡ್ರಿ," ಅಂದಳು. ಸಿದ್ಧವೀರಪ್ಪ ಸೊಸೆಯನ್ನು ನೆನೆದು, ನಿಂತ [illegible] ತಯಾರಾದ. ಖಾಜಿ ಮಾಸ್ತರನ ಮಾತು [illegible] ಬಂದರೂ. ಮೂರು ವರ್ಷದ ಹಿಂದೆ ಕೊಂಡಿದ್ದ ಬುಲ್ಲೆಟ್ ಸೈಕಲ್ ಮೋಟಾರ್ ಮೇಲೆ ಹೊರಟ. ಅರವತ್ತು ಕಿ.ಮೀ. ದೂರವಿದ್ದ ತಾಲ್ಲೂಕಿಗೆ ಕೇವಲ ನಲವತ್ತು [illegible] ತಲುಪಿ. [illegible] ಸ್ವಕ್ಕೆ [illegible] ಬಂದ ಗತ್ತಿಗೆ [illegible] ಗುಡಿಸಲು, ಎರಡೇ ಬೆಂಚು, ಒಂದು ಟೇಬಲ್ಲು. ಬರೀ ಕುಡುಕರಿದ್ದರು. ಸ್ವಲ್ಪದೂರದಲ್ಲಿ ಸರಾಯಿ ಅಂಗಡಿ ಕಂಡಿತು. ಕೊಳಗೇರಿ ಎದ್ದುಕಂಡಿತು. ಸಂಸಾರಸ್ಥರು ಅಲ್ಲಿ ಇರಲು ಅಸಾಧ್ಯವೆನಿಸಿತು. ಸಿದ್ಧವೀರಪ್ಪ ಹೋಟೆಲ್ಲೆಂಬ ಗುಡಿಸಲಿಗೆ ಬಂದ. ನಾಲ್ಕಾರು ಜನ ಇಸ್ಪಿಟ್ ಆಡುತ್ತಿದ್ದರು. ಮೂರು ನಾಲ್ಕು ಜನ ಅದನ್ನು ನೋಡುತ್ತಿದ್ದರು. ಮೂವ್ವರು ಚಹಾ ಕುಡಿಯುತ್ತಿದ್ದರು. ಸೊಸೆ ಒಂದು ಮೂಲೆಯಲ್ಲಿ ನಿಂತು ಕೆಲಸದಲ್ಲಿ ಮಗ್ನವಾಗಿದ್ದಳು. ಹೊಗೆ ತುಂಬಿತ್ತು. ಸಿದ್ಧವೀರಪ್ಪ ಬೆಟ್ಟದಂತೆ ಬಂದು ನಿಂತದ್ದನ್ನು ಕಂಡವರು ದಿಗ್ಗನೆದ್ದು ನಿಂತರು. ಮಗ ಕಂಡ. ಸತ್ತ ಹೆಣಕ್ಕೆ ಅದೇ ತಾನೇ ಜೀವ ಬಂದರೆ ಹೇಗಿರುತ್ತದೋ ಹಾಗಿದ್ದ. ಸೊಸೆ ಬಂದು ನಿಂತಳು. ದುಃಖ ಒತ್ತಿ ಬಂದಿತ್ತು. ಎರಡೇ ನಿಮಿಷ ನಿಂತು ಎಲ್ಲ ನೋಡಿದ. "ಗಾಡಿ ಹತ್ತಮ್ಮ" ಅಂದ. ಆಕೆ ನಿಂತ ನಿಲುವಿನಲ್ಲೇ ಹೊರಬಂದಳು. ಬುಲೆಟ್ ಸೈಕಲ್ ಮೋಟಾರ್ ಮೇಲೆ ಸೊಸೆಯನ್ನು ಕೂಡಿಸಿಕೊಂಡು ಅದೇ ವೇಗದಲ್ಲಿ ಬಿಟ್ಟ. ಯಾಕೋ ಹೆಂಡತಿ ಕಾಣಲಿಲ್ಲ. ಸಿನಿಮಾಕ್ಕೆ ಹೋಗಿರಬೇಕೆಂದು ಎಂದುಕೊಂಡ.

ಮನೆಗೆ ಬಂದ ಮೇಲೆಯೇ ಸೊಸೆಯನ್ನು ನೋಡಿದ. ಬೆಂಕಿಗೆ ತಗುಲಿದ ಬಾಳೆಯ ಗಿಡದಂತಾಗಿದ್ದಳು. ವಾರ ಕಳೆದ ಮೇಲೆಯೇ ಆಕೆ ಎದ್ದು ಓಡಾಡುವಂತಾದಳು. ಹೆಂಡತಿ ಮಗನಿಂದ ಒದೆ ತಿಂದು ತಾಳದೆ ಬಂದು ಮನೆ ಸೇರಿಕೊಂಡಳು. ಮೊದಲ ಸಲ ಮಗನನ್ನು ಬಯ್ದದ್ದು ಸಿದ್ಧವೀರಪ್ಪ ಕೇಳಿದ. ಮಗನೂ ಬಂದು, "ಬಾರಲೇ ಚಿನಾಲಿ, ಮಿಂಡನ ಮನ್ಯಾಗ ಯಾಕಿದ್ದಿ?" ಅಂದ. ಸಿದ್ಧವೀರಪ್ಪ ಕೇಳಿಸಿಕೊಂಡೂ ಒಳಗೆ ಕರೆದು ಕೂಡಿಸಿದ. ಕಾಶಿಂಬಿಗೆ ಹೇಳಿ ಊಟಕ್ಕೂ ಹಾಕಿಸಿದ. ಅಷ್ಟರಲ್ಲಿ ಪೊಲೀಸರು ಬಂದರು. ಮಗನನ್ನು ಅವರಿಗೆ ಒಪ್ಪಿಸಿದ. ಸಿದ್ಧವೀರಪ್ಪ ಡಿ.ಸಿ.ಗೆ ಮಗನ ಬಗ್ಗೆ ವಿವರವಾಗಿ ಹೇಳಿದ್ದ. [illegible] "ಹೆಂಡತಿಯನ್ನು ಸೂಳೆಗಾರಿಕೆಗೆ [illegible]" ಎಂಬ ಆರೋಪ ಹೊರಿಸಿ ಜೈಲಿಗೆ ಹಾಕಿಸಿದ್ದ. ಸೊಸೆ ನಿರುಮ್ಮಳವಾಗಿ ಮನೆಯಲ್ಲಿಯೇ [illegible] ಜೊತೆ ಕಾಲ ಕಳೆಯುತ್ತಿದ್ದಳು. [illegible] ಬರೀ ಗೊಣಗುತ್ತ ಮನೆಯಲ್ಲಿದ್ದಳು. "ಮಗನಿದ್ದ ಜಾಗಕ್ಕೆ ನಿನ್ನನ್ನು [illegible]" ಎಂದು ಗದರಿಸಿದ ಮೇಲೆ ಆಕೆ ಮೂಲೆ [illegible] ಒಂದೂವರೆ ವರ್ಷ ಮಗ ಜೈಲಿನಲ್ಲಿಯೇ ಉಳಿದಿದ್ದ. ಕಳೆದ ವಾರವಷ್ಟೇ ಹೆಂಡತಿ ಸಂಬಂಧಿಕರ ಮದುವೆಗೆ ಹೋಗಿ, ಅಲ್ಲಿ ವಾಂತಿ-ಭೇದಿ ಹತ್ತಿ ಬೆಳಗಾಗುವುದರಲ್ಲೇ ಜೀವ ಬಿಟ್ಟಿದ್ದಳು. ಸಿದ್ಧವೀರಪ್ಪ ಅಲ್ಲಿಯೇ ಮಣ್ಣು ಮಾಡಿ ಬಂದಿದ್ದ. ಒಂದು ವಾರವಾಗಿರಲಿಲ್ಲ, ಮಗ ಆನಂದನನ್ನು ಜೈಲಿನಿಂದ ಬಿಡುಗಡೆ ಮಾಡುವ ಸುದ್ದಿಯನ್ನು ಡಿ.ಸಿ.ಯೇ ತಿಳಿಸಿದ್ದ.

ಊಟ ಮಾಡಬೇಕೆನಿಸಲಿಲ್ಲ. ನಾಲ್ಕು ಗಂಟೆಯಾಗಿರಬೇಕು. ಮಗ ಜೈಲಿನಿಂದ ಹೊರ ಬಂದು ಮನೆಗೆ ಬರಬಹುದು ಎಂದುಕೊಂಡ. ಇಷ್ಟೊತ್ತಿಗೆ ಬರಬೇಕಾಗಿತ್ತು ಎಂದು ಯೋಚಿಸಿದ, ಉದ್ವೇಗವಾಯಿತು. ಅಷ್ಟರಲ್ಲಿ ಫೋನ್ ಕರೆಯಿತು. "ಹಾಂ ಹೌದಾ! ನಮಸ್ಕಾರ..... ನಾನು ಬರಬೇಕಾ? ಆಯ್ತು ಆಯ್ತು ಬಂದೆ" ಎಂದು ಗಾಬರಿಯಿಂದ ಫೋನ್ ಇಟ್ಟ. "ಸ್ವಲ್ಪ ಹೋಗಿ ಬರ್ತೀನಿ" ಎಂದು ಬುಲ್ಲೆಟ್ ಸೈಕಲ್ ಮೋಟಾರ್ ಹತ್ತಿ ಹೊರಟ. ಚಂದ್ರಮ್ಮ, ಕಾಶಿಂಬಿ ಹೊರ ಬಾಗಿಲಿಗೆ ಬಂದು ನೋಡಿದರು.

೩

ಸಿದ್ಧವೀರಪ್ಪ ಮಧ್ಯರಾತ್ರಿ ಬುಲ್ಲೆಟ್ ಸೈಕಲ್ ಮೋಟಾರ್ ಮೇಲೆ ಮನೆಗೆ ಬಂದ. ಚಂದ್ರಮ್ಮ, ಕಾಶಿಂಬಿ ಎದ್ದೇ ದಾರಿ ಕಾಯುತ್ತಿದ್ದರು. ಸಿದ್ಧವೀರಪ್ಪ ಪೂರ್ಣ ದಣಿದಿದ್ದ. ಕುಂತರೆ ಬೆಟ್ಟದಂತೆ ಕೂಡುವ, ನಡೆದರೆ ನದಿಯಂತೆ ಹರಿಯುವ ಆತ ಕುಸಿದದ್ದು ಕಂಡು ಗಾಬರಿಯಾದರು. ಸಿದ್ಧವೀರಪ್ಪ ಸೊಸೆ ಚಂದ್ರಮ್ಮನನ್ನು ನೋಡಿ, "ನನ್ನ ಕ್ಷಮಿಸಿಬಿಡು" ಅಂದ. "........" ಚಂದ್ರಮ್ಮ ಹೌಹಾರಿದಂತೆ ನೋಡಿದಳು.

"ಮಗ ಆನಂದನನ್ನು ಸಂಜೆ ಜೈಲಿನಿಂದ ಬಿಟ್ರಂತೆ. ಅರ್ಧಗಂಟೆ ಆಗಿತ್ತೊ ಇಲ್ಲೋ ಚೌರಾಸ್ತಾದ ಬಳಿ ಕಾರಿಗೆ ಸಿಕ್ಕು ಬಿದ್ದನಂತೆ. ಅದೇ ಕಾರಿನವರು ಸರ್ಕಾರಿ ದವಾಖಾನಿಗೆ ಸೇರಿಸಿದರಂತೆ. ತಾಸಿನೊಳಗೆ ಸತ್ತನಂತೆ ....." ಸಿದ್ಧವೀರಪ್ಪನಿಗೆ ದುಃಖ ಒತ್ತಿ ಬಂತು. ಕೇಳಿದ ಚಂದ್ರಮ್ಮ, ನಿಂತ ಗೋಡೆಗುಂಟ ಕುಸಿದು ನೆಲದ ಮೇಲೆ ಕುಂತಳು. ಕಾಶಿಂಬಿ ಅಳುತ್ತ ಹಿಡಿದುಕೊಂಡಳು. ಸ್ವಲ್ಪ ಹೊತ್ತು ಬರೀ ದುಃಖದ ನಿಟ್ಟುಸಿರುಗಳಲ್ಲಿ ಕಳೆಯಿತು.

"ದವಾಖಾನೆಯಲ್ಲಿ ಪೋಸ್ಟ್ ಮಾರ್ಟಮ್ ಮಾಡಿದ್ರು. ನಾನೇ ಸಾಕ್ಷಿಯಾಗಿದ್ದೆ. ಅವನ ಹೆಣವನ್ನು ಮನೆಗೆ ಯಾವ ಸುಖಕ್ಕಾಗಿ ತರಲಿ? ಅಲ್ಲಿಂದಲೇ ನಾಲ್ಕು ಮಂದಿಗೆ ಹೇಳಿ ಮಣ್ಣು ಮಾಡಿಸಿ ಬಂದೀನಿ. ನೀನು ಬಯ್ದರೆ ಬಯ್ಯಿ......" ಎಂದು ನೋಡಿದ. ಚಂದ್ರಮ್ಮ ಸುಮ್ಮನಿದ್ದಳು.

"ಸಿನಿಮಾದಲ್ಲಿ ನಡದಂಗ ನಡದು ಹೋಯ್ತು!" ಮಗನಿಗೆ ಡಿಕ್ಕಿ ಹೊಡದವ ರಾಜಕೀಯ ಮನುಷ್ಯ. ನನಗೂ ಪರಿಚಯ. ಮುಂದಿನ ತಿಂಗಳು ಚುನಾವಣೆ ನಡೀತಾ ವಲ್ಲ..... ಇವನು ಎಂ.ಎಲ್.ಎ. ಸೀಟಿಗೆ ನಿಲ್ಲುವವ ನಿದ್ದಾನಂತ. ಈ ಸಲ ಗೆಲ್ತಾನಂತ, ಗೆದ್ದು ಮಂತ್ರಿಯಾಗೇ ಆಗ್ತಾನಂತ. ಜನರೂ ಅಂಗೇ ಮಾತಾಡ್ತಾರ. ಈ ಅಪಘಾತದ ಕೇಸು ಹೊರಬಿದ್ರೆ ಅವನಿಗೆ ಸೀಟು ಸಿಗುವುದಿಲ್ಲಂತ. ನೂರಾ ಎಂಟು ಮಂದಿ ಕಡೆಯಿಂದ ಹೇಳಿಸಿ, ಒತ್ತಡ ತಂದು ಕೇಸು ಮುಚ್ಚಿ ಹಾಕುವಂತೆ ಮಾಡಿದ್ರು. ಆದರಾಗ ಡಿ.ಸಿ. ಕರೆದು, "ಅವನಿಂದ ನಿನಗ್ಯಾವ ಸುಖ ಇತ್ತು? ಮೇಲಾಗಿ ಇವರೆಲ್ಲ ರಾಜಕಾರಣಿಗಳು" ಎಂದು ಬಾಯಿ ಮುಚ್ಚಿಸಿದ್ರು. ಮಗ ಬದುಕಿದ್ದಾಗ ನಾನೇ "ಇವುನು ಸತ್ತಾದ್ರು ಹೋಗಬಾರದೇ!" ಎಂದು ಸಾವಿರ ಸಲ ಅಂದುಕೊಂಡಿದ್ದೆ. ಕಾಶಿಂಬಿ, ಹೇಣ್ತಿ ಮಗ ಹಿಂಗ ವಾರದಲ್ಲಿ ಸಾಯ್ತಾರಂತ ಯಾರು ಕನಸು ಕಂಡಿದ್ದರು? ಹಂಗ ನೋಡಿದ್ರೆ ನನ್ನನ್ನು ಬದುಕಿನ್ಯಾಗ ಗಟ್ಟಿಗೊಳಿಸಿದವರೇ ಈ ಪಾಪಿಗಳು! ಚಂದ್ರಮ್ಮ, ಮಗನನ್ನು ಸ್ವರ್ಗಕ್ಕೆ ಕಳಿಸಿದ ಆ ರಾಜಕಾರಣಿ, ಡಿ.ಸಿ. ಕೂಡಿಯೇ "ಪರಿಹಾರ ಎಂದು ಒಂದು ಲಕ್ಷ ರೂಪಾಯಿ ಚೆಕ್ ಕೊಟ್ಟಾರ. ಅದು ನಿನಗ ಸೇರಬೇಕು! ಮಗ ನಮಗಾಗಿ ಈ ಒಂದು ಲಕ್ಷ ರೂಪಾಯಿ ಗಳಿಸಿಟ್ಟು ಹೋದ...." ಎಂದು ವಿಷಾದದಿಂದ, ವ್ಯಂಗ್ಯದಿಂದ ನಕ್ಕ. ಚೆಕ್ಕನ್ನು ಟೇಬಲ್ ಮೇಲಿಟ್ಟು ಎದ್ದು ಸ್ನಾನ ಮಾಡಿ ಮಲಗಲು ಮಾಳಿಗೆ ಏರಿ ಬಯಲಲ್ಲಿ ಮಲಗಿದ.

ನಿತ್ಯದಂತೆ ಎದ್ದು, ನಿತ್ಯಕರ್ಮಗಳನ್ನು ಮುಗಿಸಿ ದೊಡ್ಡ ಹಾಲಿನಲ್ಲಿ ಬಂದು ಕುಂತ. ಬಿಳಿ ಅಂಗಿ, ಬಿಳಿ ಪಂಚೆ ಧರಿಸಿದ್ದ. ಸಿದ್ಧವೀರಪ್ಪನಿಗೆ ಕುಡಿಯಲು ತಂಬಿಗೆ ನೀರು ತಂದು ಚಂದ್ರಮ್ಮ ಕೊಟ್ಟಳು. ನೀರು ಕುಡಿದು ಚಂದ್ರಮ್ಮನನ್ನು ನೋಡಿದ, ದುಗುಡಗೊಂಡಿದ್ದಳು. ರಾತ್ರಿ ಟೇಬಲ್ ಮೇಲಿಟ್ಟದ್ದ ಒಂದು ಲಕ್ಷ ರೂಪಾಯಿಯ ಚೆಕ್ ಅಲ್ಲೇ ಇತ್ತು. ಕಾಶಿಂಬಿ ಅಲ್ಲಿಗೆ ಬಂದು ನಿಂತಿದ್ದಳು. "ಕಾಶಿಂಬಿ, ನಾನು ಖಾಜ ಮಾಸ್ತರನಿಂದ ಈ ಸಲ ಹಿಮಾಲಯಕ್ಕೆ ಹೋಗಿ ಬರ್ತೀನಿ. ನಿನ್ನ ಋಣ ನನ್ನ ಮ್ಯಾಲೆ ಭಾಳದ. ನಿಮಗ ಖಾನಾವಳಿ ನಡಸಲು ಶಕ್ತಿಯಿದ್ರ ನಡಿಸಿಕೊಂಡು ಹೋಗ್ರಿ. ಇಲ್ಲದಿದ್ರ ಉಂಡು ತಣ್ಣಗ ಇದ್ದುಬಿಡಿ. ಇದನ್ನೆಲ್ಲ ನಿಮಗ ಒಪ್ಪಿಸಿದ್ದೀನಿ," ಅಂದ.

"ಮಾವ" ಅಂದಳು ಗಟ್ಟಿಯಾಗಿ ಸೊಸೆ. "ಮಾವ ..... ನನ್ನನ್ನ ಗಂಡ-ಅತ್ತೆಯಿಂದ ಕಾಪಾಡಿದಿರಿ. ನೀವು ಇಲ್ಲದಿದ್ರೆ ನಾನು ಗಂಡ ಅತ್ತೆಗಿಂತ ಮೊದ್ಲೇ ಸಾಯ್ತಿದ್ದೆ. ನಿಮ್ಮ ಋಣವನ್ನು ನಾನು ಹೊತ್ತಿದ್ದೇನೆ. ಮಾವ....ಮಾವ..... ನೀವು ಇಲ್ಲೇ ಇದ್ದು ಬಿಡ್ರಿ. ಇನ್ನ ಮ್ಯಾಲೆ ನಿರುಮ್ಮಳ ವಾಗಿರ್ರಿ. ಮಾವ..... ಜನಕ್ಕಂಜಬೇಕೋ, ಮನಕ್ಕಂಜ ಬೇಕೋ ನನ್ಗ ತಿಳಿವಲ್ದು! ನನ್ಗ ಏನೂ ಬ್ಯಾಡ! ನನ್ಗ ಏನೇನೂ ಬ್ಯಾಡ! ನನ್ಗ ನೀವು ಬೇಕು!" ಎಂದು ದುಃಖಿಸುತ್ತ ಅಡಿಗೆ ಮನೆ ಸೇರಿಕೊಂಡಳು. ಕಾಶಿಂಬಿ ಸಿದ್ಧವೀರಪ್ಪನನ್ನು ನೋಡಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದಳು. ಸಿದ್ಧವೀರಪ್ಪ ಕಣ್ಣು ಮುಚ್ಚಿಕೊಂಡು ಕುಂತಿದ್ದ, ಗೌರಮ್ಮ ನೆನಪಾದಳು. ಚಂದ್ರಮ್ಮನ ಮಾತುಗಳು ಕಿವಿಯಲ್ಲಿ ತುಂಬಿದ್ದವು. ಬೆಳಿಗ್ಗೆ ನಿರ್ಧರಿಸಿ ಕೊಂಡಂತೆ ಖಾಜ ಮಾಸ್ತರನ ಕಾಣಲು ಎದ್ದು ಹೊರ ಬಂದ. ಬೇವಿನ ಗಿಡ ಎಲ್ಲ ಸಂಭ್ರಮ ಹೊತ್ತು ಎಳೆ ಬಿಸಿಲಿಗೆ ಹೊಳೆಯುತ್ತಿತ್ತು.

ಅಮರೇಶ ನುಗಡೋಣಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ (ಬಳ್ಳಾರಿ)-೫೮೩೨೭೬

ಮಗಳ ಕಾಲ್ಗುಣ

ಸಂಡೂರು ವೆಂಕಟೇಶ್

ಚಿಕ್ಕಣ್ಣನ ಮನೆಯಲ್ಲಿ ಹರಟೆ ಹೊಡೆಯುತ್ತ ಕುಳಿತಿದ್ದೆ. ಹರಟೆ ಬರೆಯುವುದು ಕಷ್ಟದ ಕೆಲಸ, ಆದ್ರೆ ಹರಟೆ ಹೊಡೆಯುವುದು ? - ನೀರು ಕುಡಿದಷ್ಟೇ ಸುಲಭದ ಕೆಲಸ. ಕಾಲೇಜಿನ ದಿನಗಳಲ್ಲಿ ಸಂಜೆ ೫ರಿಂದ ೭ರವರೆಗೆ ಗಾಂಧಿಬಜಾರ್‌ನ ಆ ತುದಿಯಿಂದ ಈ ತುದಿಯವರೆಗೆ ಎರಡು ಬಾರಿ 'ವಾಕಿಂಗ್'ನ ನೆಪದಲ್ಲಿ ಹುಡುಗಿಯರನ್ನು ನೋಡುತ್ತ –ಅಂದರೆ ಅದೆಲ್ಲೋ ನೋಡುತ್ತಿರುವವರಂತೆ ನಡೆದು, ಅವರಿಗೆ ಡಿಕ್ಕಿ ಹೊಡೆದು 'ಸಾರಿ ಮೇಡಮ್' ಎನ್ನುತ್ತ – ಹೋಗುತ್ತಿದ್ದ ದಿನಗಳ ಬಗ್ಗೆ ತುಂಬ ಉತ್ಸಾಹದ ಹರಟೆಯಲ್ಲಿ ತೊಡಗಿದ್ದಾಗ –

''ಚಿಕ್ಕಣ್ಣ... ಚಿಕ್ಕಣ್ಣಾ''

ಎಂದರಚುತ್ತಾ ಶ್ಯಾಮ ಗಡಬಡಿಸಿ ಒಳಗೆ ಬಂದ. ಮುಖವೇಕೋ ಬಾಡಿ ವಿಕಾರವಾಗಿತ್ತು. ಮೊದಲೇ ಅ ಲಕ್ಷಣ, ಈಗಂತೂ 'ಶ್ಯಾಮ, ಶ್ಯಾಮಾ' ನೋಡುವಂತೆ ಇರಲಿಲ್ಲ, ಆ ಸುಂದರ ಮುಖಾರವಿಂದವನ್ನು.

''ಸದ್ಯ ವೆಂಕ ಇಲ್ಲೇ ಇದ್ದಾನೆ.. ಒಳ್ಳೇದಾಯ್ತು'' ಎಂದ ಶ್ಯಾಮ ಕುರ್ಚಿಯೊಂದನ್ನು ಅಲಂಕರಿಸಿದ್ದ. ಅವನ ಗಾಬರಿ, ಕಳವಳ, ತಳಮಳ ನನಗೆ ಅರ್ಥವಾಯ್ತಾದರೂ ''ವೆಂಕ ಇಲ್ಲೇ ಇದ್ದಾನೆ.... ಒಳ್ಳೇದಾಯ್ತು'' ಅಂತ ಅವನು ಹೇಳಿದ್ದು ಕೇಳಿ ನನಗೆ ಸಂತೋಷವೇ ಆಯ್ತು. ಕೆಲವರ ಮುಖ ಲಕ್ಷಣವೇ ಅಂತಹುದು. ನೋಡಿದ ತಕ್ಷಣ ಮನಸ್ಸಿಗೆ ಉಲ್ಲಾಸವಾಗುತ್ತದೆ, ಕಷ್ಟಗಳ ಸರಮಾಲೆಯೇ ಕಡಿದು ಬೀಳುತ್ತದೆ ಮತ್ತು.... ಮತ್ತು ಇತ್ಯಾದಿ ಇತ್ಯಾದಿ ಆಗುತ್ತದೆ. ಅಂತಹ ಕೋಟಿಗೊಬ್ಬ ವ್ಯಕ್ತಿ, ಅಪರೂಪದ ವ್ಯಕ್ತಿಯಂತೆ ನನ್ನನ್ನು ಶ್ಯಾಮ ಕಂಡನಲ್ಲಾ ಅಂತ ಸಂತೋಷವಾಯ್ತು. ಆದರೆ ನಾನದನ್ನು ತೋರಿಸಿಕೊಳ್ಳಲಿಲ್ಲ ಅನ್ನಿ.

ಅವನು ಸ್ವಲ್ಪ ದಣಿವಾರಿಸಿಕೊಂಡ ಮೇಲೆ ಚಿಕ್ಕಣ್ಣ ಕೇಳಿದ -

''ಈಗ ಹೇಳು ಏನಾಯ್ತು ?... ನಿಂಗೇ ಗೊತ್ತಿದೆ. ನಾನೂ ಸ್ವಲ್ಪ ಹಣದ ಅಡಚಣೆಯಲ್ಲಿದ್ದೀನಿ... ವೆಂಕನೂ ಪಾಪ! ಬಿಸಿನೆಸ್‌ನಲ್ಲಿ ಈ ವರ್ಷ ಭಾಳಾ ದುಡ್ಡು ಲಾಸ್ ಮಾಡಿಕೊಂಡಿದ್ದಾನೆ.''

ದುಡ್ಡು ಬಿಟ್ಟು ಏನು ಬೇಕಾದ್ರೂ ಕೇಳು ಎಂಬರ್ಥದಲ್ಲಿ ಚಿಕ್ಕಣ್ಣ ಹೇಳಿದ. ನಮಗೆ ಗೊತ್ತಿಲ್ವೇ ಶ್ಯಾಮನ ಪರಿಸ್ಥಿತಿ ? ಹದಿನೈದು ದಿನದ ಕೆಳಗೆ ಮಗಳು ರಜನಿಯ ಮದುವೆ ಮಾಡಿದ್ದಾನೆ. ಮದುವೆ ಸಮಯದಲ್ಲಿ ನಾನು ಇಪ್ಪತ್ತು ಸಾವಿರ ಮತ್ತು ಚಿಕ್ಕಣ್ಣ ಮುವತ್ತು ಸಾವಿರ ರೂಪಾಯಿ ಕೊಟ್ಟಿದ್ದೆವು, ಸಾಲವಾಗಿ. ಈಗಿವನು ಮತ್ತೆ ನಮ್ಮ ಮೇಲೆ ಧುಮುಕಿದ್ದಾನೆ. ಉಸಿರು ಬಿಗಿಹಿಡಿದು ಶ್ಯಾಮ ಅದೇನು ಹೇಳುತ್ತಾನೋ ಎಂದು ಕಾದೆವು.

''ಛೇ ಛೇ, ದುಡ್ಡು ಕಾಸು ಬೇಡ್ರಯ್ಯಾ.. ಸ್ವಲ್ಪ ನನ್ ಜೊತೆ ನಮ್ಮ ಬೀಗರ ಮನೆಗೆ ಬನ್ರೋ, ನೀವಿಬ್ರು ಜೊತೇಲಿದ್ರೆ ನಂಗೆ ಧೈರ್ಯ.''

''ಯಾಕಪ್ಪಾ ಶ್ಯಾಮ, ಬೀಗ್ರು ಏನಾದ್ರೂ ತಕರಾರು, ಗಿಕರಾರು ಸುರೂ ಮಾಡಿದ್ರಾ ?'' ಎಂದು ಕೇಳಿ ಮುಂದುವರೆಸಿದ – ''ಮತ್ತೆ ಮದುವೇಲಿ ಅದ್ದೂರಿ ಮುಗಿಸ್ಕೊಂಡು ಚೆನ್ನಾಗಿ ಮಾಡಿಕೊಟ್ಟ ಮದ್ವೆ ಅಂತೆ ಹೇಳಿದರಲ್ಲೋ!''

''ಹೌದೋ ವೆಂಕಾ, ಮದ್ವೆ ಗ್ರಾಂಡಾಗೇ ಆಯ್ತು, ಬೀಗರೂ ಸಂತೋಷ ಪಟ್ರು.''

''ಮತ್ತೇನಂತೆ ಅವ್ರ ಗೋಳಾಟ ? ನೀನ್ಯಾಕೆ ಹೀಗಿದ್ದಿ ?''

''ನೆನ್ನೆ ಸಾಯಂಕಾಲ ನಮ್ ರಜ್ನಿ-ರಮೇಶ್ ಊಟಿಯಿಂದ ಹನಿಮೂನು ಮುಗಿಸಿ ಬಂದ್ರು... ಇವತ್ತು ಬೆಳಿಗ್ಗೆ ರಮೇಶನ ದೊಡ್ಡಕ್ಕ ತೀರಿಕೊಂಡ್ರಂತೆ ಕಣ್ರೋ.''

''ಅಯ್ಯೋ ಪಾಪ ! ಏನಾಗಿತ್ತಂತೆ ? ಆಕೆ ಸತ್ರೆ ನೀನ್ಯಾಕೋ ಮಗನೇ ಹೀಗೆ ಅಳ್ತೀಯಾ ?... ಒಳ್ಳೆ ಹೆಂಡ್ತಿ ಸತ್ತವನ ಹಾಗೆ ?'' ಎಂದು ಚುಡಾಯಿಸಿದೆ.

''ಲೇ ವೆಂಕಾ, ಸೀರಿಯಸ್ಸಾಗಿ ಮಾತನಾಡ್ಲಿಕ್ಕೆ ನಿಂಗೆ ಬರಲ್ಲವಲ್ಲೋ ?... ನಿನ್ನೆ ತಾನೇ ಅವ್ರ ಮನೆಗೆ ರಜ್ನಿ ಹೋಗಿದ್ದಾಳೆ, ಇವತ್ತು ಅವಳ ಗಂಡನ ಅಕ್ಕ ಸತ್ತಿದ್ದಾಳೆ... ಅಂದ್ರೆ ನಮ್ ರಜ್ನಿ ಕಾಲ್ಗುಣದಿಂದಾನೇ ಹೀಗಾಯ್ತು ಅಂತ ಅವ್ರು ಹೇಳ್ತಾರೆ ಅಂತ ಭಯ ಆಗಿದೆ ಕಣೋ.''

''ಏನು ? ಏನು ?'' ಚಿಕ್ಕಣ್ಣನ ರಕ್ತದೊತ್ತಡ ಏರಿತು, ಗಟ್ಟಿಯಾಗಿ ಕಿರುಚಿ ಕೇಳಿದ- ''ನಮ್ ಹುಡ್ಗೀ ಕಾಲ್ಗುಣದಿಂದ ಹೀಗಾಯ್ತು ಅಂತ ಹೇಳ್ತಾರಾ ಆ ಮಕ್ಳು... ನಡೀ ಅವ್ರ ಮನೆಗೆ, ಅವ್ರನೆಲ್ಲ ನೆಲಕ್ಕೆ ಹಾಕಿ ತುಳಿದುಬಿಡ್ತೀನಿ... ಏನಂತ ತಿಳಿದಿದ್ದಾರಂತೆ ಅವ್ರೆಲ್ಲ !''

ಚಿಕ್ಕಣ್ಣನನ್ನು ಸಮಾಧಾನ ಮಾಡುವುದರಲ್ಲಿ ಸಾಕು ಸಾಕಾಯ್ತು.

❖ ❖ ❖

ಬೀಗರ ಮನೆಯ ಮುಂದೆ ಚಿಕ್ಕಣ್ಣ ಕಾರು ಪಾರ್ಕು ಮಾಡಿದಾಗ ನಮಗೆ ಏನೋ ದಿಗಿಲು. ಶ್ಯಾಮ ಬಹಳ ಟೆನ್ಷನ್ ಆಗಿದ್ದ. ಚಿಕ್ಕಣ್ಣನ ರಕ್ತದೊತ್ತಡ ಆಕಾಶಕ್ಕೇರಿತ್ತು. ಮೊದಲೇ ಆವೇಶದ, ಸಿಟ್ಟಿನ ಮನುಷ್ಯ. ಇರುವುದರಲ್ಲಿ ನಾನೇ ವಾಸಿ. ನಾನು ಸದಾ ಲೋ ಬಿ.ಪಿ. ಪೇಷಂಟು. ಸ್ವಲ್ಪ ಮನಸ್ಸಿಗೆ ಯೋಚನೆ ಚಿಂತೆ ಮೂಡಿದರೆ ಸಾಕು ೧೦೦-೧೩೦ ಇರುವ ರಕ್ತದ ಒತ್ತಡ ೭೦-೧೦೦ಕ್ಕೆ ಇಳಿದು, ಎಲ್ಲೆಂದರಲ್ಲಿ ನೆಲಕ್ಕೆ ಉರುಳಿ ಬೀಳುತ್ತೇನೆ. ಹಾಗಾಗಿ ಆದಷ್ಟೂ ಚಿಂತೆ ಮಾಡದೆ ಸ್ಥಿತಪ್ರಜ್ಞ ಬೆಳೆಸಿಕೊಂಡಿದ್ದೇನೆ.

ನಾವು ಗೇಟು ತೆಗೆದಾಗ ರಜನಿಯ ತಾಯಿ ಅನುರಾಧಾ ಎದುರುಗೊಂಡರು.

''ಬನ್ನಿ ಬನ್ನಿ, ಬಹಳಾ ಅಪರೂಪ ನೀವು ಬಂದಿದ್ದು... ನಿನ್ನೆ ರಮೇಶಾ, ರಜನಿ ಬಂದ್ರು. ಊಟಿಯಿಂದ... ಏನಾದ್ರು ಮಗಳ್ನ ನೋಡಕ್ಕೆ ಬಂದ್ರಾ?'' ಎಂದು ಮೂವರನ್ನೂ ವಿಚಾರಿಸುತ್ತಾ ಒಳಗೆ ಕರೆದೊಯ್ದರು. ಒಳಗೆ ಕುರ್ಚಿಗಳಲ್ಲಿ ಕುಳಿತೆವು; ಅನುರಾಧಾ ಕಾಫಿ ತರಲು ಒಳಗೆ ಹೋದರು. ಬೀಗರ ಮನೆಯಲ್ಲಿ ಯಾರೂ ಇರದಿದ್ದುದು ಆಗ ಗಮನಕ್ಕೆ ಬಂತು.

ಚಿಕ್ಕಣ್ಣ ಶ್ಯಾಮನನ್ನು ದುರುಗುಟ್ಟಿ ನೋಡುತ್ತ ಗೊಣಗಿದ–

''ಎಲಾ ನಿನ್ನ, ಕತೆ ಹೇಳ್ತೀಯಾ ? ನೋಡಿಲ್ಲಿ ಏನೂ ಆಗಿಲ್ಲ, ಹೋಗಿಲ್ಲ.''

ಏನೂ ಆಗಿಲ್ಲವೆಂಬ ಸಿಟ್ಟು ಚಿಕ್ಕಣ್ಣನಿಗೆ ಈಗ. ರಮೇಶನ ಅಕ್ಕ ಸತ್ತಳೆಂಬ ಚಿಹ್ನೆಯೂ ಕಾಣಲಿಲ್ಲ ನಮಗಲ್ಲಿ.

ಅಷ್ಟರಲ್ಲಿ ಕಾಫಿ ಬಂತು. ಕುಡಿಯುತ್ತ ಕೇಳಿದೆ :

''ಏನಮ್ಮಾ ಯಾರೂ ಕಾಣ್ತಿಲ್ಲವಲ್ಲ, ಎಲ್ಲಿ ನಮ್ಮ ಹುಡುಗಿ ?''

''ನಿಮಗೆ ಗೊತ್ತಿಲ್ವಾ ಸಾರ್... ನಮ್ ದೊಡ್ಡತ್ತಿಗೆ ವಸಂತಮ್ಮ ಅಂತ, ಅವ್ರು ಹೋಗಿಬಿಟ್ರು ಇವತ್ತು ಬೆಳಿಗ್ಗೆ... ಅವ್ರ ಮನೆಯಿಂದ ನಾನು ಈಗ ಹತ್ತು ನಿಮಿಷದ ಕೆಳ್ಗೆ ಬಂದೆ. ಎಲ್ಲಾರ್ಗೂ ಸ್ನಾನದ ವ್ಯವಸ್ಥೆ ಮಾಡಬೇಕಲ್ಲಾ..''

''ಅಯ್ಯೋ ಪಾಪ ! ಏನಾಗಿತ್ತಮ್ಮಾ ಆ ಯಾರೂ... ವಸಂತ ಅವ್ರಿಗೆ ?''

''ಎರಡು ತಿಂಗಳ ಕೆಳ್ಗೆ ಅವ್ರಿಗೆ ಹಾರ್ಟ್ ಅಟ್ಯಾಕ್ ಆಗಿತ್ತು ಸರ್... ಅವತ್ತಿನಿಂದ ಅವ್ರ ಆರೋಗ್ಯಾನೇ ಸರಿಯಿರ್ಲಿಲ್ಲ. ಎರಡು ತಿಂಗಳಿಂದ ಭಾಳಾ ನೋವು ತಿಂದು, ನರಳಿ, ನರಳಿ ಸತ್ರು... ಇವತ್ತು ಬೆಳಿಗ್ಗೆ. ಅವರ ಒದ್ದಾಟ ನೋಡ್ಲಿಕ್ಕೇ ಆಗ್ತಿರಲಿಲ್ಲ. ಸದ್ಯ ಇವತ್ತು ಮುಕ್ತಿ ಸಿಕ್ಕಿತು.... ನಾವಂತೂ ಎಲ್ಲಿ ಅವ್ರು ಸತ್ತು ರಮೇಶನ ಮದ್ವೆ ನಿಂತು ಹೋಗತ್ತೋ ಅಂತ ಭಯಪಟ್ಟಿದ್ವಿ. ರಜನಿ ಅದೃಷ್ಟವಂತೆ ಸಾರ್... ಮದ್ವೇಗೆ ಏನೂ ತೊಂದರೆಯಾಗ್ಲಿಲ್ಲ...

ರ-ಜ-ನಿ ಅ-ದೃ-ಷ್ಟ-ವಂ-ತೆ !!

ಮಂಜಿನ ಬೆಟ್ಟದಂತೆ ಕಂಡದ್ದು ಮಂಜಿನಂತೆ ಕರಗಿಹೋಗಿತ್ತು.

ಸಂಡೂರು ವೆಂಕಟೇಶ್
ಕುಸುಮಾ ಪ್ರಕಾಶನ ೭೨೪/ಎ. ೧೫ನೇ ಮುಖ್ಯರಸ್ತೆ, ೭ನೇ ಅಡ್ಡರಸ್ತೆ
ಶ್ರೀನಿವಾಸನಗರ ೨ನೇ ಹಂತ, ಬೆಂಗಳೂರು - ೫೬೦ ೦೫೦

ದೇಶಭಕ್ತಿ

೧

ದೇಶದ ಬುಡ ಸುಳಿ ಕಲಕಿ ರಾಡಿ ಒಗ್ಗೂಡಿಸುವ ಶಕ್ತಿ
ದೇಶಭಕ್ತಿ ಸಮಾನ ಧರ್ಮ ನಮ್ಮಲ್ಲಿ
ದೇಶಧರ್ಮಗಳಿಗೆ ಬೇಧವಿಲ್ಲ.

ಥಳಕ್ಕಲ್ಲ ನೆಲಕ್ಕಾಗಿಯೇ ಹರಡುವ ಅತಿರೇಕ
ಪಾರಂಪರ್ಯ ಲೂಟಿ ಚೈತನ್ಯ
ರಾಮರಸದ ಪಡಿಯಚ್ಚು, ಚರಿತ್ರೆಯ ಅಣಕ
ಭಾರತ ಧರ್ಮಯುದ್ಧದ ಮೂಲದ್ರವ್ಯ.

ಗಡಿ ಮೀರಿದ ಸಾಂಕ್ರಾಮಿಕ ರೋಗ ಇದು
ದೇಶದುದ್ದಗಲ ಯುದ್ಧ ಬೀಜಾಸುರನನ್ನ
ಬಹುರೂಪಗಳಲ್ಲಿ ಬಿತ್ತುವ ಗಾಳಿ

ಭಿಕ್ಷೆ, ದಾನ, ಚಂದಾ, ದಂಧೆಗಳಿಗೆ
ಹೊಸ ಬಣ್ಣ ಹಚ್ಚುವ ಆ ವೇಶ-
ದಿಂದ ಭಾರತಮಾತೆಗೆ ಜೈ ಎಂದು ಕೂಗಿಸುವ
ಅವರಿವರ ಸುವರ್ಣಾವಕಾಶ


೨

ಯುದ್ಧ ಬೀಜದಿಂದ ಮಾತ್ರ ಹುಟ್ಟುವ ಕೂಸು
ಈ ದೇಶ ಭಕ್ತಿ
ಕೊಲ್ಲುವ ಸಾವ ಕ್ರಿಯೆಯೊಳಗೆ ಮಮ್ಮತ್ತೆ
ಜೀವ ತಳೆಯುತ್ತದೆ
ಒಳಗೇ ತಿನ್ನುವ ಹುಳಗಳ ಹೊಸದಾರಿಯಾಗಿ
ಬೆಳೆಯುತ್ತದೆ
ತಮ್ಮವರ ಸಾವಿನ ಸಂದರ್ಶನಗಳಲ್ಲಿ
ಕಣ್ಣೀರನ್ನು ಸ್ವಚ್ಛ ಒರೆಸಿಕೊಂಡು
ಹೆಮ್ಮೆ ಪಡುವಂತೆ ಮಾಡುತ್ತದೆ
ಅಣ್ಣ ಪೀರ ಅಕ್ಕ ಪಾತುಮ್ಮರಿಗೆ
ಭಕ್ತಿಯೇ ದುಃಸ್ವಪ್ನವಾಗಿ ಕಾಡುತ್ತದೆ.

೩

ದೇಶಭಕ್ತಿಯು ತುಳುಕಿ
ಯುದ್ಧಬೀಜಾಸುರನು ಹದ್ದು ಮೀರಿದಾಗೆಲ್ಲ
ಬೊಂಬಾಯಿ, ಪಂಜಾಬ, ಅಸ್ಸಾಮ, ಕಾಶ್ಮೀರ
ಇಂಥ ಹಲವು ವೀರ ಸ್ವರ್ಗಗಳಲ್ಲಿ
ನಮ್ಮ ರಕ್ತ ಮಾಂಸಗಳು ಚೆಲ್ಲಿಕೊಳ್ಳುತ್ತವೆ


ಆಗಾಗ ಶಂಕರ ಬಿಘಾ ಮನೋಹರ ಪುರಗಳ ದಾಟಿ
ಗೈಸಾಲ್‌ನಂತಹ ಗೈಸಾಲ್ ಹಳಿಗಳಿಗೆ ಕೂಡ



ಇದರ ಗಾಳಿ ಬಡಿಯುತ್ತದೆ
ಒರಿಸ್ಸಾದ ಬಿರುಗಾಳಿಯಲ್ಲಿ ಬತ್ತಿ ಹೋಗುತ್ತದೆ.

ರಾಮಲಿಂಗಪ್ಪ ಟಿ. ಬೇಗೂರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಕನೂರು, ಕೊಪ್ಪಳ ಜಿಲ್ಲೆ

ಹೊಳೀಯ ಮುತ್ಯಾ



ಮಿಸ್ಸಿಸಿಪೀಯ ದಂಡ್ಯಾಗ ಮುಂಜಾವು ಎದ್ದಾಗ ಡಫ್
ಬಿಳಿಯೋರ ನಾವೀಯು ಆಡುವ ಹೊತ್ತೀಗ ಎದ್ದಾನ ಡಫ್
ಅಳ್ಳಿ ಪಿಂಡೀಯ ಹೊತ್ತ ಹೊತ್ತ ಹಾಕ್ಯಾನ ನಾವೀಗ ಹೊತ್ತ
ಮುಣಗೂವ ತನಕ
ನಿಲಲಿಲ್ಲ ಅಂವ ಮೊಣಕಾಲೂರಿ ಆ ದ್ಯಾವಾನ ಮುಂದ
ನಿಲ್ಲೂವ ತನಕ [ಮೇಳ]

ಎಡಕ ಬಲಕ ಕೆಳಕ ಮ್ಯಾಲಕ ನೋಡೀಯ ಅಂತಾನ
ಬಿಳಿಯೋರ ಒಡೆಯ ಬೆನ್ನೀಗ ನಿಂತಾನ
ಅತ್ತಿತ್ತ ನೋಡಿದರ ತೆಲಿ ಪಿಡಪಿಡದ ಜಗ್ಗತಾನ
ಬಡಿತಾನ ಜೀವ ತೆಗಿತಾನ

ಮಿಸ್ಸಿಸಿಪೀಯ ಬಿಟ್ಟ ಓಡಿಹೋಗಬೇಕಂತ ಮಾಡೇನಿ
ಬಿಳಿಯೋರ ದಣೀಯಿಂದ ತೈಪಿಸಿಕೊಂಡ ಹೋಗಬೇಕಂತ
ಮಾಡೇನಿ
ಸಾವ ತರೂವ ಆ ಹೊಳೀಯು ಎಲ್ಲಂತ ಕೇಳತೇನಿ
ಆ ಹಳೀ ಜೋರಡಾನ ದಾಟಬೇಕಂತ ಯಿಚ್ಚಾ ಮಾಡೇನಿ
[ಮೇಳ]

ಹೊಳೀಯು ಮುತ್ಯಾ, ಆ ಹೊಳೀಯು ಮುತ್ಯಾ,
ನಿಲ್ಲುವ ತಿಳೀಲಿಲ್ಲ ಅಂವಗ
ಮುಂಜೇಲಿ ಸಂಜೇಲಿ ಜಿಗಿತಾನ
ಮಂಡೀಗ ನಾವೀಗ ಮತ್ತ

(ಪಾಲ್ [illegible])

ಹೊಳೀಹಾಂಗ ಹರದಾನ
ಹೊಳೀಹಾಂಗ ಉರುಳುತ್ತ ಹೋಗ್ಯಾನ

ಹೊಳೀಗುಂಟ ಸರೂವೊತ್ತ ಉರುಳುತ್ತ ಹೋಗ್ಯಾನ
ಹೊಳೀಯ ಮುತ್ಯಾ, ಅಂವನ ಹೊಳೀಯು ಕಟ್ಟೀಯು,
ಕಟ್ಟೀಗ ಬಡಿದೈತಿ ಹೊಳೀಯು,
ಕಲ್ಲೀಗ ಬಡಿದಾ ನೀರಾಗ ಎದ್ದೈತಿ ಅಲಿಅಲಿಯೂ
ಅಂವ ಆರೀದ ಉರುಳುತ್ತ ಹೋಗ್ಯಾನ
ಹೊಳೀಯ ಮುತ್ಯಾ
ಹೊಳೀಗುಂಟ ಕೇಳೇವಿ ಆ ಹಾಡ ಕೇಳೇವಿ
ನಾನು ನೀನೂವೆ, ಬೆವರ ಸುರಸೂತ ಪಾಡಪಟ್ಟೂತ
ನೋಂವ ತಿಂದ ಮಯ್ಯ ಹೊತ್ತ ಬ್ಯಾನಿ ಮಯ್ಯ ಹೊತ್ತ
ತೈಪ್ಪಾವ ಕಟ್ಟಾಕ ಅಳ್ಳಿಪಿಂಡೀಯ ಎತ್ತಾಕ ಹೋಗೇವಿ
ಒಂದೀಟು ಕುಡಿತೇವಿ
ಜೇಲಿನಾಗ ಬೀಳತೇವಿ
ದುಡದುಡ್ಡ ಜಡ್ಡುಪಿಡದೈತಿ, ಮನಸ [illegible]
[illegible]
ಅಂದಾನ ಹೊಳೀಯ ಮುತ್ಯಾ

ಹಿಂಗಾದರೂ ವೆ ಹೋಳೀಗುಂಟ ಉರುಳುತ್ತ ಹೋಗ್ಯಾನ
[illegible]
[illegible]
[illegible] ಮುತ್ಯಾ

ಮೂಲ: [illegible]
ಕನ್ನಡಕ್ಕೆ: [illegible]

ಪರಿಸರ ಪ್ರಜ್ಞೆಯ ತಾತ್ವಿಕ ನೆಲೆಗಟ್ಟು

ಪಾರ್ಥಸಾರಥಿ

ಮಾನವ ತನ್ನ ಪರಿಸರದ ಒಂದು ಅವಿಭಾಜ್ಯ ಅಂಗ. ಇದೊಂದು ಅವಿನಾಭಾವ ಸಂಬಂಧ. ಈ ತಿಳಿವು ಅವನು ನಾಗರಿಕನೆನಿಸಿಕೊಂಡ ಕಾಲಕ್ಕೂ ಹಿಂದಿನದು. ಆದರೆ ಅಂದಿನ ಆ ಪರಿಸರ ಪ್ರಜ್ಞೆಯಲ್ಲಿ ತಿಳಿವಿಗಿಂತ, ಕಾರಣವರಿಯದ ಭಯ ಸಂಮಿಶ್ರಿತ ಒಲವಿನದೇ ಹೆಚ್ಚಳವಿತ್ತೇನೋ. ''ಭೂಮಿಗೆ ಭಾರವಾಗಿ ಬದುಕ ಬೇಡ'' ಎಂಬ ಮಾತಿನಲ್ಲಿ ತಿಳಿವಿನ ಸೆಲೆಯೂ ತಲೆ ಹಾಕುತ್ತದೆ. ಇಂದು ನಾವು ಮಾತನಾಡುವ ''ವಿಶ್ವ ಪರಿಸರ ಪ್ರಜ್ಞೆ'' ಇದರಿಂದ ತೀರಾ ವಿಭಿನ್ನವಾದುದು. ಪ್ರಾದೇಶಿಕತೆಯ ಸಾಮೀಪ್ಯ ದೃಷ್ಟಿಯನ್ನು ಮೀರಿ ವಿಶ್ವ ಪ್ರಜ್ಞೆಯಾಗಿರುವ ಈ ಸಂದರ್ಭ ಆಕಸ್ಮಿಕವಲ್ಲ. ವೈಜ್ಞಾನಿಕ ಪ್ರಗತಿಯಿಂದಾಗಿ ವಿವಿಧ ದೇಶಗಳ ಹಲವಾರು ಜನ ದಿಕ್ಕುದಿಕ್ಕಿನಲ್ಲಿ ನಿರಂತರ ಚಲಿಸುತ್ತಿದ್ದು, ವಿಶ್ವವೆಲ್ಲಾ ಒಂದೇ ಮಾರುಕಟ್ಟೆಯಾಗಿ ಪರಿವರ್ತಿತವಾಗಿರುವ ಪರಿಣಾಮ. ಭೂಗೋಳ ಎಷ್ಟು ಪುಟ್ಟ ಗ್ರಾಮದಂಥದು ಎಂಬ ಗ್ರಹಿಕೆಯಿಂದ ಬಂದ ಪ್ರಜ್ಞೆ. ದೂರವನ್ನು ಗೆದ್ದು, ಭಾಷೆಯ, ಬುಡಕಟ್ಟಿನ, ವರ್ಣದ ಕಂದಕಗಳನ್ನು ಮೀರಿ, ಮನುಷ್ಯ ಮನುಷ್ಯನನ್ನು ಮಾನವನಾಗಿಯೇ ಸಂಧಿಸುತ್ತಿರುವುದು ಸಾಧ್ಯವಾಗಿರುವುದರಿಂದ ಬಂದ ಪ್ರಜ್ಞೆ. ತಮ್ಮನ್ನೆಲ್ಲಾ ಒಟ್ಟಿಗೆ ಬೆಸೆದಿರುವ ಪ್ರಾಕೃತಿಕ ಪರಿಸರ ಪರಸ್ಪರ ಅವಲಂಬಿತ ವ್ಯವಸ್ಥೆ ಎಂಬ ಗ್ರಹಿಕೆ, ಸರಳ, ಸ್ಪಷ್ಟ. ''ನಮ್ಮೂರಿನ ಚಿಟ್ಟೆ ರೆಕ್ಕೆ ಬಡಿದರೆ, ದಕ್ಷಿಣ ಅಮೆರಿಕದ ತುತ್ತ ತುದಿಯಲ್ಲಿ ಬಿರುಗಾಳಿ'' ಎಂದು ನಂಬುವಷ್ಟು.

ಮಾನವ ನಾಗರಿಕನಾದಂತೆಲ್ಲಾ ತನ್ನ ಪರಿಸರದೊಡನೆ, ಅದನ್ನು ಅರಿತು, ಕೂಡಿ ಬಾಳುವುದರ ಬದಲು, ಅದರ ಮೇಲೆ ನಿರಂತರ ದಬ್ಬಾಳಿಕೆ, ಯಾಜಮಾನ್ಯ ನಡೆಸಿ ಅಧಿಕಾರ ಸ್ಥಾಪಿಸಲು ಹೆಣಗಾಡಿದ್ದಾನೆ. ಪರಿಣಾಮ ಕಮರಿಹೋದ ಪರಿಸರ, ಪ್ರಕೃತಿಯ ವಿಕೃತಿ, ಅದರ ನಡುವೆ ಮಾನವನ ಅಸ್ತಿತ್ವ ಅಸಂಗತವೋ ಎನಿಸುವ ಪರಿಸ್ಥಿತಿ. ಪರಿಸ್ಥಿತಿ ಹೀಗೆ ಮುಂದುವರೆದರೆ, ಮಾನವ ಒಂದು ಜೀವಿಯಾಗಿ ನಿರ್ನಾಮವಾಗಿ ಹೋಗಬಹುದೇನೋ. - ಇದಕ್ಕೆ ಮುಂಚೆ ಜೈವಿಕ ವಿಕಾಸದ ಹಾದಿಯಲ್ಲಿ ಆಗಿಹೋದ ಅನೇಕ ಜೀವಿಗಳಂತೆ, ಎಂಬ ಅರಿವು - ಆತಂಕ ಉಂಟಾಗಿದೆ. ವಿಶ್ವ ಪರಿಸರ ಚಳುವಳಿಯ ಹಿಂದೆ ಈ ಭಯದ ನೆರಳಿದೆ.

ಪರಿಸರದ ಮೇಲಿನ ಆಘಾತದ ಪರಿಣಾಮಕ್ಕೆ ಹಲವು ಆಯಾಮಗಳುಂಟು. ಮುಖ್ಯವಾಗಿ ಎರಡು ಸೆಲೆಗಳನ್ನು ಗುರುತಿಸಬಹುದು. ಗಿಡ, ಮರ, ನೀರು, ಮಣ್ಣು, ಬೆಟ್ಟ, ಕಡಲುಗಳನ್ನು, ಚರಾಚರಗಳನ್ನು ಹಾಳುಮಾಡಿ ಮಲಿನಗೊಳಿಸುವ ರೂಪ. ಇನ್ನೊಂದು ಮಾನವನ ನಿರಂತರ ಚಟುವಟಿಕೆಗಳಿಂದಾಗಿ, ಅದರಲ್ಲೂ ಪ್ರಕೃತಿಯಲ್ಲಿ ಕಾಣದ ಹೊಸವಸ್ತುಗಳನ್ನು ಸೃಷ್ಟಿಸುವ ಚಟುವಟಿಕೆಯಿಂದ ಉಂಟಾಗುವ ಪ್ರತ್ಯಕ್ಷ - ಪರೋಕ್ಷ ಪರಿಣಾಮಗಳು: ಕೈಗಾರಿಕೆಗಳು, ವ್ಯವಸಾಯಕ್ರಮ - ವೈಜ್ಞಾನಿಕ ಚಟುವಟಿಕೆಗಳು, ಯುದ್ಧಾಸ್ತ್ರ ಪ್ರಯೋಗಗಳು ಮುಂತಾದ, ಮಾನವನನ್ನು ಬಿಟ್ಟು ಮಿಕ್ಕ ಜೀವಿಗಳಿಗೆ ಸಹಜವಲ್ಲದ ಕೆಲಸ ಕಾರ್ಯಗಳ ಪರಿಣಾಮ. ಪಂಚಭೂತಗಳ ನಡುವೆ ಈ ಚಟುವಟಿಕೆಗಳಿಂದಾಗಿ ಬಿಡಲ್ಪಡುವ ವಿಷವಸ್ತುಗಳು: ಪೆಟ್ರೋಲಿಯಂನ ಸೀಸ, ರಾಸಾಯನಿಕ ಗೊಬ್ಬರಗಳ-ಕ್ರಿಮಿನಾಶಕಗಳ ವಿಷ, ಪಾದರಸ ಮುಂತಾದ ಭಾರ ಲೋಹಗಳ ವಿಸರ್ಜನೆ, ಸಯನಾಯ್ಡ್, ಯುರೇನಿಯಂ ಹಾವಳಿ, ಇಂಗಾಲಾಮ್ಲ, ಆಕ್ಸೈಡ್‌ಗಳು, ಸಲ್ಫೇಟ್‌ಗಳು ಕೈಗಾರಿಕಾ ಘಟಕಗಳ ವಿಸರ್ಜಿತ ವಿಷವಸ್ತುಗಳು, ಜೈವಿಕ ವಿಭಜನೆಯಾಗಲಾರದ ಪ್ಲಾಸ್ಟಿಕ್ ವಸ್ತುಗಳು, ಅನೇಕ ವಿಧವಾದ ಗ್ಯಾಸ್‌ಗಳು ಮುಂತಾದವುಗಳು, ಗಿಡ ಮರ ಪಕ್ಷಿ ಪ್ರಾಣಿ ಸಂಕುಲದ ಮೇಲೆ ಮಾಡುವ ಮಾರಕ ಪರಿಣಾಮಗಳು, ಕುಡಿಯಲು ಶುದ್ಧ ನೀರಿಲ್ಲದ, ಉಸಿರಾಡಲು ಶುದ್ಧ ಗಾಳಿಯಿಲ್ಲದ, ಬೆಳೆಯಲು ಶುದ್ಧ ಮಣ್ಣಿಲ್ಲದ, ತಿನ್ನಲು ಶುದ್ಧವಾದ ಆಹಾರವಿಲ್ಲದ ಪರಿಸ್ಥಿತಿ. ಈ ಪರಿಸ್ಥಿತಿಯಲ್ಲಿ ಸಂತ್ರಸ್ತ ಪ್ರಕೃತಿ ತಾನೇ ವಿಕೃತಿಯಾಗುವಾಗ, ತನ್ನ ಅವಿಭಾಜ್ಯ ಭಾಗವಾದ ಮಾನವನನ್ನು ತನ್ನೊಡನೆ ಸೆಳೆದುಕೊಂಡು ಹೋಗಬಹುದು. ಅಥವಾ ತನ್ನ ಅಸ್ತಿತ್ವಕ್ಕೇ ಮಾರಕವಾದ ಮಾನವನೆಂಬ ಜೀವಿಯನ್ನು ಮಾತ್ರ ನಾಶಪಡಿಸಿ, ತಾನು ಮಾತ್ರ ಮುಕ್ತನಾಗಬಹುದು. ಪ್ರಕೃತಿಯನ್ನು ಸೋಲಿಸುವುದೆಂದರೆ ಮಾನವನು ತಾನೂ ಸೋತಂತೆಯೆ ಎಂಬುದೇ ಪರಿಸರ ಪ್ರಜ್ಞೆಯೇ? ಆಗ ಪರಿಸ್ಥಿತಿಯ ವಿಷಮತೆಯನ್ನು ಅರಿತು, ತಿದ್ದಿಕೊಂಡು, ಪ್ರಕೃತಿಯೊಡನೆ ಸಹಬಾಳ್ವೆಯ ದಾರಿಯನ್ನು ಮಾನವ ಕಂಡುಕೊಳ್ಳುವುದು ಮೂರನೆಯ ಸಾಧ್ಯತೆ. ಇದಕ್ಕೆ ಆಧುನಿಕ ವಿಜ್ಞಾನ ದಾರಿದೀಪವಾಗಬಲ್ಲದು. ನಾವು ಹಳಿ ತಪ್ಪಿರುವುದು ವಿಜ್ಞಾನದಿಂದಲ್ಲ . ಅದನ್ನು ಬಳಸಿಕೊಂಡ ರಾಜಕೀಯ ಸಾಮಾಜಿಕ ವ್ಯವಸ್ಥೆಯಿಂದಾಗಿ.

ವಿಶ್ವವ್ಯಾಪಾರ, ಮಾರುಕಟ್ಟೆ, ಆರ್ಥಿಕ ಪ್ರಗತಿ, ಉದಾರೀಕರಣದ ಗಲಭೆಯ ಹಿನ್ನೆಲೆಯಲ್ಲಿ ಗಮನಿಸಬಹುದಾದ ಮತ್ತೊಂದು ವಿಷಯ ಪ್ರಸ್ತುತವಿರಬಹುದು. ''ನಮ್ಮ ಆರ್ಥಿಕ ಬೆಳವಣಿಗೆಯ ಮಟ್ಟ ಪಾಶ್ಚಿಮಾತ್ಯರ ಮಟ್ಟಕ್ಕೆ ಏರಬೇಕು. ಆದರೆ ಅವರ ಹಾದಿ ಹಿಡಿದರೆ, ಪರಿಸರ ಮಾಲಿನ್ಯ ಹೆಚ್ಚಾಗುವುದು ಅನಿವಾರ್ಯ.'' ಈ ವಾದದಲ್ಲಿ ತರ್ಕಕ್ಕಿಂತ, ಹಿಂದೆ ಪಾಶ್ಚಿಮಾತ್ಯ ದೇಶಗಳಲ್ಲಿ ಏನಾಯ್ತು ಎಂಬುದರ ಆಭಾಸ ಅಡಗಿದೆ. ನಿಜ, ಅವರ ನದಿಗಳು ಕೆಟ್ಟಿವೆ. ಕಾಡುಗಳು ಹಾಳಾಗಿವೆ. ಆದರೆ ಅದು ಅನಿವಾರ್ಯವಾಗಿರದೆ, ಅವಿವೇಕದ ಪರಿಣಾಮವಾಗಿತ್ತು ಎಂಬುದು ಇಂದಿನ ತಿಳಿವಳಿಕೆ. ಅದೊಂದು ವೈಜ್ಞಾನಿಕ ಗ್ರಹಿಕೆ. ಇದರಷ್ಟಕ್ಕೆ ಈ ವಾದದ ಹಿಂಬದಿಯಲ್ಲಿ ಸಾಮ್ರಾಜ್ಯವಾದದ ಹುನ್ನಾರವನ್ನೂ ಹುಡುಕಬೇಕಾಗಿಲ್ಲ. ಆದರೆ ಇಂದಿನ ಸಾಮ್ರಾಜ್ಯಶಾಹಿ ಶಕ್ತಿಗಳು ಹಿಂದುಳಿದ ರಾಷ್ಟ್ರಗಳ ಆರ್ಥಿಕ ಪ್ರಗತಿಗೆ ಅಡ್ಡಿಮಾಡಲು ಈ ವಾದವನ್ನು ಬಳಸಿಕೊಳ್ಳುತ್ತಿವೆ, ಅಷ್ಟೆ. ಇಂದು ನಾವು ಅವರ ತಾಂತ್ರಿಕ ಜ್ಞಾನ-ವಿಜ್ಞಾನದ ಮಾರ್ಗವನ್ನು ಅಳವಡಿಸಿಕೊಂಡು, ಪರಿಸರವನ್ನು ಸಂರಕ್ಷಿಸಿಕೊಂಡು ಬೆಳೆಯುವುದು ಸಾಧ್ಯ. ಇದಕ್ಕೆ ಅವರ ಸಾಮಾಜಿಕ ರಾಜಕೀಯ ಮಾದರಿಗಳನ್ನೇನೂ ಅಳವಡಿಸಿಕೊಳ್ಳಬೇಕಾಗಿಲ್ಲ. ಅಷ್ಟೇ ಅಲ್ಲ, ಅವರ ಆ ಮಾದರಿಗಳಿಂದಾಗಿಯೇ ಅಲ್ಲಿಯ ಪರಿಸರ ಮಾಲಿನ್ಯ ಉಂಟಾಗಿದ್ದು. ಪಾಶ್ಚಿಮಾತ್ಯ ಪ್ರಗತಿ ಒಂದು ಸ್ತರದಲ್ಲಿ ವಸಾಹತುಗಳ ಶೋಷಣೆಯಿಂದ ಸಾಧಿತವಾದುದು. ಇದನ್ನು ನಾವು ಪುನರಾವರ್ತಿಸುವುದು ಸಾಧ್ಯವಿಲ್ಲ. ಯುದ್ಧ ಮಾಡಿದರೂ, ಅಣ್ವಸ್ತ್ರ ಸಂಪಾದಿಸಿಕೊಂಡರೂ, ಉಪಯೋಗಿಸಿದರೂ ಸಾಧ್ಯವಿಲ್ಲ. ಇನ್ನೂ ಹೇಳಬೇಕಾದರೆ, ಈ ಮಾರ್ಗ ಹಿಡಿದರೆ, ಬೆಳೆಯುವ ಬದಲು, ನಮ್ಮ ಆರ್ಥಿಕ ವ್ಯವಸ್ಥೆ ಅಂತರ್ಯದಲ್ಲೇ ಕುಸಿದು ಹೋಗುತ್ತದೆ. ಪಾಶ್ಚಿಮಾತ್ಯ ವಿಜ್ಞಾನ-ತಂತ್ರಜ್ಞಾನದ ಜತೆಗೆ, ನಮ್ಮ ಸಾಮಾಜಿಕ ಸಂದರ್ಭಕ್ಕೆ; ನಮ್ಮ ಮಣ್ಣಿಗೆ, ನಮ್ಮ ಬುದ್ಧಿವಂತಿಕೆಗೆ, ಅನುಭವಕ್ಕೆ ಒಗ್ಗುವ ಮಾದರಿಯನ್ನು ಸೃಷ್ಟಿಸಿಕೊಳ್ಳಬೇಕು. ಉದಾಹರಣೆಗೆ, ಜೈವಿಕ ಗೊಬ್ಬರಗಳೂ ಬೇಕು, ದೊಡ್ಡ ಅಣೆಕಟ್ಟುಗಳೂ ಬೇಕು, ಕ್ರಿಮಿನಾಶಕಗಳೂ ಬೇಕು, ಅಣೆಕಟ್ಟಿನಿಂದ ಸಂತ್ರಸ್ತರಿಗೆ ಪುನರ್ವಸತಿಯೂ ಆಗಬೇಕು, ಸಾಂಪ್ರದಾಯಿಕ ತಿಳಿವಳಿಕೆಗಳನ್ನೂ ರಕ್ಷಿಸಿಕೊಳ್ಳಬೇಕು. ಈ ಮಾರ್ಗದಲ್ಲಿ ಪರಿಸರ ಮಾಲಿನ್ಯ ಆಗದಂತೆ ಸತತ ಎಚ್ಚರಿಕೆ ವಹಿಸಬೇಕು. ಈ ಮಾರ್ಗಕ್ಕೆ ಅನುಕರಣೀಯ ಹಿಂದಿನ ಉದಾಹರಣೆಗಳು ದೊರಕುವುದಿಲ್ಲ. ಆದರೆ ಇದನ್ನು ಸಾಧ್ಯವಾಗಿಸಲು ಬೇಕಾದ ಬಿಡಿ ಬಿಡಿ ಮಾದರಿಗಳು ಈಗಾಗಲೇ ಸಿದ್ಧವಾಗಿವೆ.

> *ಇನ್ನೇನು ಪ್ರಳಯವೇ ಬಂದು, ಭೂಮಿಯ ಅಂತಿಮ ಘಳಿಗೆಯೇ ಸನ್ನಿಹಿತವಾಗಿದ್ದರೂ, ಒಂದು ಮರ ನೆಡು.*
> **-ಖುರಾನ್**

> *ದೇವರು ಅವರನ್ನು ಆಶೀರ್ವದಿಸಿ ಹೇಳಿದ: ನಿಮ್ಮ ಫಲವಂತಿಕೆ ವೃದ್ಧಿಸಿ, ನೂರ್ಮಡಿಯಾಗಿ ಭೂಮಿಯನ್ನು ತುಂಬಿಕೊಳ್ಳಿ. ಅದನ್ನು ಸ್ವಾಯತ್ತಪಡಿಸಿಕೊಳ್ಳಿ. ಮೀನು ಮತ್ತು ಸಮುದ್ರ, ಕೋಳಿ ಮತ್ತು ನಾಳಿ, ಮತ್ತು ಭೂಮಿಯ ಮೇಲೆ ಚಲಿಸುವ ಪ್ರತಿಯೊಂದನ್ನೂ ನಿಮ್ಮ ಅಂಕೆಗೆ ಒಳಪಡಿಸಿಕೊಳ್ಳಿ......*
> *- ಜೆನಿಸಿಸ್*

ಮಧ್ಯವರ್ತಿ

ಬುದ್ಧಿ ತಿಳಿದಂದಿನಿಂದ ನಾನು ಒಂದು ತರಹದ ಮಧ್ಯವರ್ತಿಯೇ ಆಗಿಬಿಟ್ಟಿದ್ದೇನೆ ಅನ್ನಿಸುತ್ತದೆ.

ನಾನು ಪುಟ್ಟ ಮಗುವಾಗಿ ಪುಟ ಪುಟದು ಅಡ್ಡಾಡುವಾಗ, ''ಪುಟ್ಟ ಇದನ್ನು ಪಪ್ಪಗೆ ಕೊಡಮ್ಮ'' ಎಂದು ಅಮ್ಮ ಸಣ್ಣ ಪುಟ್ಟ ಸಾಮಾನನ್ನು ನನ್ನಿಂದ ಪಪ್ಪನಿಗೆ ಕೊಡಿಸುತ್ತಿದ್ದಳೇ ವಿನಃ ತಾನೇ ಹೋಗಿ ಕೊಡುತ್ತಿರಲಿಲ್ಲ.

''ಪುಟ್ಟೀ ಅಮ್ಮನ್ನ ಕರಿ; ಪುಟ್ಟೀ ಅಮ್ಮಂಗೆ ಕಾಫಿ ತರಲು ಹೇಳು; ಪುಟ್ಟೀ ನಿಮ್ಮಮ್ಮಂಗೆ ತಿಂಡಿ ಮಾಡಲು ಎರಡು ದಿನ ಬೇಕಾ ಕೇಳು,'' ಇತ್ಯಾದಿ ಎಲ್ಲಾ ಹೇಳಿಕೆಗಳ ರವಾನೆಗೂ ನಾನೇ ಮಧ್ಯವರ್ತಿ.

ಆಗ ನನಗೆ ಇದೊಂದು ಹೆಮ್ಮೆಯ ವಿಷಯ. ಅಪ್ಪ-ಅಮ್ಮ ಇಬ್ಬರಿಗೂ ನಾನೆಷ್ಟು ಬೇಕಾದವಳೆಂಬ ಹೆಮ್ಮೆ. ಆದರೆ ಮತ್ತಷ್ಟು ದೊಡ್ಡವಳಾದಾಗ ''ಇದೆಷ್ಟು ರಗಳೆ'' ಎಂದು ಅರಿವಾಗತೊಡಗಿತು.

ಅಪ್ಪ-ಅಮ್ಮನ ಜಗಳದಲ್ಲಿ ಇಬ್ಬರೂ ನನ್ನನ್ನು ತಮ್ಮ ಪಾರ್ಟಿಗೆ ಕರೆದಾಗ ನನ್ನ ಅವಸ್ಥೆಯನ್ನು ಯಾರಿಗೆ ಹೇಳುವುದು? ಅಪ್ಪನ ಪಾರ್ಟಿ ಸೇರಿದರೆ, ಅಮ್ಮನ ಪಾಕದಲ್ಲಿ ಪಾಲಿಲ್ಲ, ಅಮ್ಮನ ಪಾರ್ಟಿ ಸೇರಿದರೆ ಪುಡಿ ಖರ್ಚಿಗೂ ದುಡ್ಡಿಲ್ಲ. ಅಮ್ಮನ ಪಾಕೆಟ್ ಮನಿಯಲ್ಲಿ ಅವಳಿಗೇ ಸಾಕಷ್ಟು ಖರ್ಚು ಇರುವುದರಿಂದ, ಅದರಲ್ಲಿ ನನಗೆ ಎಂದಿಗೂ ಪಾಲಿಲ್ಲ. ಅಪ್ಪ ಮಾತ್ರ ಕಡ್ಡಾಯವಾಗಿ ನನಗೂ, ಅಮ್ಮಗೂ ಪಾಕೆಟ್ ಮನಿ ನೀಡಿಯೇ ಆಗಬೇಕು. ಇದು ನಮ್ಮ ಮನೆ ಸಿಸ್ಟಮ್. ಅಪ್ಪನ ಪರ ವಹಿಸಿದಾಗ ಹೆಚ್ಚಿನ ಪಾಕೆಟ್ ಮನಿ ಸಿಕ್ಕಿ, ಕಪ್ಪಗಿನ ನನ್ನ ಮೋರೆಯನ್ನು ಬಿಳಿಯಾಗಿಸುವ ಫೇರ್ ಅಂಡ್ ಲವ್‌ಲಿ ಅಂಥ ಮತ್ತೆರಡು ಸಾಧನಗಳನ್ನು ತರಲು ನನಗೆ ಅನುಕೂಲವಾಗುತ್ತಿತ್ತು. ಆದರೆ ಮನೆಯಲ್ಲಿ ಅಡಿಗೆ-ತಿಂಡಿಗಳು ಅಧ್ವಾನವಾಗಿರುತ್ತಿದ್ದವು –ಅಮ್ಮನ ಕೋಪ ಇಳಿಯುವ ತನಕ.

ಈ ಮಧ್ಯವರ್ತಿತನದಲ್ಲಿ ಭಡ್ತಿ ಸಿಕ್ಕಿದ್ದು ಮದುವೆಯ ನಂತರ. ನನ್ನೆಜಮಾನರೂ, ಮಾವನವರೂ ಒಟ್ಟಿಗೇ ನೋಡಿಕೊಳ್ಳುತ್ತಿದ್ದ ಬಟ್ಟೆ ಅಂಗಡಿಯ ವ್ಯಾಪಾರದಲ್ಲಿ ಅವರಿಗೇನಾದರೂ ಭಿನ್ನಾಭಿಪ್ರಾಯ ಬಂದಾಗ ನನಗೆ ಗ್ರಹಚಾರ ವಕ್ಕರಿಸುತ್ತಿತ್ತು.

''ನಾನು ಬಟ್ಟೆ ಅಂಗಡಿ ಇಟ್ಟಾಗ, ನಿನ್ನ ಗಂಡ ಹುಟ್ಟೇ ಇರಲಿಲ್ಲ, ಈಗ ನನಗೇ ಬುದ್ಧಿ ಹೇಳಕ್ಕೆ ಬರ್‍ತಾನೆ. ಇದೆಲ್ಲಾ ಚೆನ್ನಾಗಿರಲ್ಲ ಅಂತ ಅವನಿಗೆ ನೀನೊಂದಿಷ್ಟು ಹೇಳಮ್ಮ.'' – ಮಾವನ ಆಜ್ಞೆ!

''ಯಾಕೋ ವಯಸ್ಸಾಗ್ತಾ ಆಗ್ತಾ ಈ ನಿನ್ನ ಪ್ರೀತಿಯ ಮಾವಂಗೆ ಬುದ್ಧಿ ಮಂಕಾಗ್ತಿದೆ ಕಣೆ. ಹಳೇ ಒಬೀರಾಯನ ಕಾಲದ್ದೇ ಮಾಡು ಅಂದರೆ, ಈಗಿನವರು ನಮ್ಮಂಗಡಿಗೆ ಬರ್‍ತಾರಾ? ಎಲ್ಲಾ ಲೇಟೆಸ್ಟ್ ಮಾಡೆಲ್ ತರಿಸಿ ಇಡಬೇಕು ಅದಕ್ಕೆ ಸರಿಯಾಗಿ ಅಂಗಡೀನೂ ಇಂಟೀರಿಯರ್ ಡೆಕೊರೇಶನ್‌ನಿಂದ ಚಂದ ಮಾಡ್ಬೇಕು. ಹಾಗಂತ ಹೇಳಿದ್ದಕ್ಕೆ ನಾನು ಹಾಳುಗೇಡಿ ಅಂತ ಹಾರಾಡ್ತಾರೆ. ನೀನಾದ್ರೂ ನಿನ್ನ ಮಾವಂಗೆ ಹೇಳಿ ಸ್ವಲ್ಪ ನನ್ನ ಮಾತು ಕೇಳೋ ಹಾಗೆ ಮಾಡು.'' ಇದು ಪತಿಯಾಜ್ಞೆ!

ಅಕಟಕಟಾ! ಇದೆಂಥ ವಿಕಟ ಪರಿಸ್ಥಿತಿ! ಇಂಥಾ ಕಷ್ಟಕಾಲದಲ್ಲಿ ಉದ್ಧರಿಸುವವರಾರೆಂದು ಚಡಪಡಿಸುತ್ತಿದ್ದ ನನ್ನನ್ನು ರಕ್ಷಿಸಲೋ ಎಂಬಂತೆ ಅತ್ತೆಯವರು ಆಗಲೇ ಅಲ್ಲಿ ಸುಳಿದರು. ಅವರ ಹಿಂದೆಯೇ ಅಡಿಗೆ ಮನೆಗೆ ನುಗ್ಗಿ, ನನ್ನ ಸಂಕಷ್ಟವನ್ನು ವಿವರಿಸಿದೆ.

''ನೀನು ಮದುವೆ ಆಗಿ ಬರುವ ಮೊದಲು ಈ



ರಾಯಭಾರ ನನ್ನ ಪಾಲಿಗೇ ಬರ್‍ತಿತ್ತು ಮಗಳೆ! ನೀನೀಗ ಇಬ್ಬರು ಹೇಳಿದ್ದಕ್ಕೂ 'ಹೂಂ' ಗುಟ್ಟಿ ಮೌನ ತಾಳು. ಅವರವರೇ ಎಲ್ಲಾ ಸರಿಮಾಡಿಕೊಳ್ಳುತ್ತಾರೆ.'' ಅತ್ತೆಯ ಅನುಭವಾಮೃತವೇ ದಾರಿದೀಪವಾಯಿತು.

ಮುಂದೆ ಮಕ್ಕಳು-ಮರಿ ಎಲ್ಲಾ ಹುಟ್ಟಿ, ಅಕ್ಕಪಕ್ಕ ಮನೆಗಳ ಮಕ್ಕಳೊಂದಿಗೆ ಜಗಳವಾಡಿ, ದೂರನ್ನು ತಂದಾಗ ಪುನಃ ಮಧ್ಯಸ್ಥಿಕೆ ಮಾಡುವ ಸಂದರ್ಭ. ನನ್ನ ಮಕ್ಕಳ ತಪ್ಪಾಗಿದ್ದರೆ, ಅವುಗಳನ್ನು ಬಯ್ದುಕೊಂಡು, ಬೇರೆ ಮಕ್ಕಳ ತಪ್ಪಾಗಿದ್ದರೆ, ಅದು ಅವುಗಳಿಗೆ ತಿಳಿಯದೇ ಆಗಿರಬೇಕೆಂದು ಸಮಾಧಾನ ಹೇಳುತ್ತಾ, ಶಾಂತಿಗಾಗಿ ರಾಯಭಾರ ಮಾಡುತ್ತಾ ಉತ್ತಮ ಮಧ್ಯವರ್ತಿಯಾಗಲು ವ್ಯರ್ಥ ಹಾಗೂ ಸಮರ್ಥ ಪ್ರಯತ್ನಗಳು ನಡೆಸಿದ್ದಾಯ್ತು.

ನನ್ನ ಮಕ್ಕಳು ಓದಿ ಕೆಲಸ ಹಿಡಿದು ಕುಳಿತ ಮೇಲೆ ಎಲ್ಲಾ ಮಾತೆಯರಂತೆ, ನಾನೂ ಅತ್ತೆಯ ಪಟ್ಟವನ್ನೇರಲು [illegible] ಸಂದರ್ಭಬಂದ.

ಜಾತಕ ಹೊಂದಿಕೆಯಾದರೆ [illegible] ಸಂಬಂಧ ಸರಿಯಿದ್ದರೆ ಹುಡುಗ ಯಾ ಹುಡುಗಿ ಚೆಂದ ಇಲ್ಲ; ಎಲ್ಲವೂ ಸರಿ ಇದೆ ಎಂದು ನಮ್ಮ ಅಭಿಪ್ರಾಯವಾದರೆ ತಮಗೆ ಇಷ್ಟವಾಗಲಿಲ್ಲವೆಂಬ ವರ-ವಧುಗಳ ನಿರ್ದಾಕ್ಷಿಣ್ಯ ನಿರಾಕರಣೆ ಮುಂತಾದುವುಗಳೆಲ್ಲ ನಿರಂತರವಾಗಿ ಸಾಗುತ್ತಿರಲು, ಸುಮ್ಮನಿರಲಾಗದೆ, ನನ್ನ ಮಕ್ಕಳಿಗೆ ಬಂದು, ಸರಿ [illegible] ಸಂಬಂಧಗಳನ್ನು ನನ್ನ [illegible] ಮಕ್ಕಳಿಗೆ [illegible] ಮದುವೆ [illegible] ಮದುವೆಗಳೂ [illegible] ನನ್ನ [illegible] ಪಟ್ಟುಕೊಂಡೆ.

ಆದರೆ ಆಗಾಗ್ಗೆ ಕೆಲವರು ಹುಡುಕಿಕೊಂಡು ಬಂದು ''ನೀವು ಮದುವೆ ದಳ್ಳಾಳಿ ಅಂತಲ್ವಾ? ಕಮೀಷನ್ ಎಷ್ಟು?'' ಎಂದು ಕೇಳಿದಾಗ ಅಥವಾ ನನ್ನ ಹೊಸಾ ಸೀರೆಯನ್ನು ಕಂಡು ''ಇದು ಮದುವೆಗಾಗಿ ನೀನು ತೆಗೆದುಕೊಂಡ ಲಂಚಾನಾ?'' ಎಂದು ತಿಳಿದವರು ಛೇಡಿಸಿದಾಗ, ಮದುವೆಗಾಗಿ ಮಧ್ಯವರ್ತಿಯಾಗಬಾರದೆಂದು ತೋರತೊಡಗಿತು.

ಅದರೆಡೆಯಲ್ಲಿ ನಾನು ತೋರಿಸಿಕೊಟ್ಟು ಮದುವೆ ಆದ ಮನೆಗಳಲ್ಲಿ ಅತ್ತೆ-ಸೊಸೆ, ಸೊಸೆ-ನಾದಿನಿ, ಗಂಡ-ಹೆಂಡತಿ ಇವರುಗಳಲ್ಲಿ ಮನಸ್ತಾಪ ಬಂದ ಕೂಡಲೇ ಇದಕ್ಕೆಲ್ಲಾ ನಾನೇ ಕಾರಣವೆಂಬ ಕಿರೀಟ ದೊರಕಿತು.

ಕೆಲವರು ಅವರ ಮನೆಯ [illegible] ಹಾಕಿದೆನೆಂದು ಜರೆದರೆ, ಮತ್ತೆ ಕೆಲವರು ರಾಜಿ ಪಂಚಾಯಿತಿಗೆ ಕರೆಯತೊಡಗಿದರು.

ಇದರಿಂದ ಗಾಬರಿಗೊಂಡು, ಈ ವಿವಿಧ ರೀತಿಯ ಮಧ್ಯವರ್ತಿಯ ಕೆಲಸಕ್ಕೆ [illegible] ಆಲೋಚನೆಗೆ ಶರಣಾಗಿ, ನನ್ನ ಸೊಸೆ ನನ್ನ ಮನೆಗೆ ಬರುತ್ತಿದ್ದಂತೆಯೇ, ನನ್ನ ಮಗ ಅಮ್ಮ ಮತ್ತು ಪತ್ನಿಯ ನಡುವೆ (ಮಧ್ಯವರ್ತಿಯೆಂಬ) ಚಟ್ನಿಯಾಗುವುದು ಬೇಡವೆಂದು ನೆನೆಸಿ, ಪತಿದೇವರೊಂದಿಗೆ ತೀರ್ಥಯಾತ್ರೆ [illegible]

ಸತ್ಯವತಿ
W/o ಡಾ॥ [illegible]
ಸುರತ್ಕಲ್ [illegible]

ಸ್ತ್ರೀ ವಿಮೋಚನಾ

ಲೇ: ಮಂಗಲಾ ಕಾಳೆ

ಅನಾರ್ಯ ಪ್ರಕಾಶನ, ಧಾರವಾಡ

ಪುಟ: ೧೧೧ ಬೆಲೆ: ೫೦

ಮಂಗಲಾ ಕಾಳೆ ಅವರ ಪುಸ್ತಕದಲ್ಲಿನ ಸ್ತ್ರೀ ವಿಮೋಚನಾ ಹೋರಾಟಗಳನ್ನು ಮುಖ್ಯವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಒಂದು: ಬುದ್ಧನ ಕಾಲದಲ್ಲಿ ಹಾಗೂ ಬುದ್ಧನ ನಂತರದ ಕಾಲದಲ್ಲಿ ಸ್ತ್ರೀಯ ಸ್ಥಾನಮಾನ. ಎರಡು: ಶರಣ ಚಳುವಳಿಯಲ್ಲಿ ಸ್ತ್ರೀಯರ ಪಾತ್ರ. ಮೂರು: ಆಧುನಿಕ ಭಾರತದಲ್ಲಿ ಸ್ತ್ರೀ ವಿಮೋಚನೆಗಾಗಿ ಸಾವಿತ್ರಿ ಬಾಯಿ ಫುಲೆ, ಮಹಾತ್ಮ ಜ್ಯೋತಿರಾವ್ ಫುಲೆ, ದೇವರಾಯ ಇಂಗಳೆ ಮತ್ತು ಮಹಾಮಾನವತಾವಾದಿ ಅಂಬೇಡ್ಕರ್ ಅವರುಗಳು ನಡೆಸಿದ ಹೋರಾಟಗಳು.

ಮಂಗಲಾ ಅವರು ಸ್ತ್ರೀ ವಿಮೋಚನಾ ಚಳುವಳಿಯ ಹೋರಾಟಗಳನ್ನು ಗುರುತಿಸುವ ಸಲುವಾಗಿ ಬುದ್ಧನ ಹಿಂದಿನ ಕಾಲದವರೆಗೂ ತಲುಪಿ ಅಲ್ಲಿಂದ ಇಂದಿನವರೆಗೆ ಮತ್ತು ಮಧ್ಯೆ ಮನು, ಶಂಕರ ಮತ್ತು ಪೇಶ್ವೆಗಳ ಕುಕೃತ್ಯಗಳನ್ನು ಜಾಲಾಡಿ ಸ್ತ್ರೀ ಶೋಷಣೆ ಮತ್ತು ವಿಮೋಚನೆಯ ಎಳೆ ಎಳೆಗಳನ್ನು ತಡಕಾಡಿ ದಾಖಲಿಸಿದ್ದಾರೆ. ಜೊತೆಗೆ ತನ್ನ ಮೊದಲ ಲೇಖನಗಳ ಸಂಕಲನದಲ್ಲಿಯೇ ವಸ್ತು ನಿರೂಪಣೆ, ಭಾಷಾ ಶೈಲಿ ಹಾಗೂ ವಿಷಯ ಮಂಡನೆಗಳಿಂದ ನಮ್ಮನ್ನು ಬೆರಗುಗೊಳಿಸುತ್ತಾರೆ. ಸ್ತ್ರೀ ವಿಮೋಚನಾ ಸಾಹಿತ್ಯದಲ್ಲಿ ಅಪರೂಪದ ಪುಸ್ತಕವಾಗುವ ಎಲ್ಲಾ ಸಾಧ್ಯತೆಗಳು ಈ ಕೃತಿಗೆ ಇದ್ದು ಸ್ತ್ರೀ ಸಾಹಿತ್ಯ ಚಳುವಳಿಯಲ್ಲಿ ಮಂಗಲಾ ತನ್ನ ಮೊದಲ ಹೆಜ್ಜೆಯನ್ನೇ ಗಟ್ಟಿಯಾಗಿ ಊರಿದ್ದಾರೆ.

ಒಂದು ನಾಗರಿಕತೆಯ ಹೀನ ಮತ್ತು ಉಚ್ಛ್ರಾಯ ಸ್ಥಿತಿಗಳೆರಡೂ ಆ ನಾಗರಿಕತೆಯಲ್ಲಿ ಸ್ತ್ರೀ ಹೊಂದಿರುವ ಸ್ಥಾನಮಾನದ ಮೇಲೆ ಅವಲಂಬಿಸಿರುತ್ತವೆ. ಯಾವ ನಾಗರಿಕತೆಯಲ್ಲಿ ಸ್ತ್ರೀಯನ್ನು ಗುಲಾಮಳನ್ನಾಗಿ, ಅವಳ ಹಕ್ಕುಗಳನ್ನು ದಮನಗೊಳಿಸಲಾಗುವುದೋ ಅಂತಹ ನಾಗರಿಕತೆ ನಾಗರಿಕತೆಯೆನಿಸಲಾರದು, ಎನ್ನುವ ಮಾತುಗಳ ಜೊತೆಗೆ ವೇದ ಸ್ಮೃತಿಗಳಲ್ಲಿ ಹೆಣ್ಣನ್ನು ಯಾವ ರೀತಿಯಲ್ಲಿ ನೋಡಲಾಗಿದೆ ಎನ್ನುವ ವಿಚಾರಗಳಿಂದ ಈ ಕೃತಿ ಪ್ರಾರಂಭಗೊಳ್ಳುತ್ತದೆ. ಎಲ್ಲಾ ಲೇಖನಗಳೂ ಓದುವವರ ಗಮನವನ್ನು ಸೆಳೆದುಕೊಳ್ಳುತ್ತಾ ಆಳವಾದ ಸಂಶೋಧನೆಯ ಧಾಟಿಯಲ್ಲಿ ನಮ್ಮನ್ನು ಕಾಡಲು ಪ್ರಾರಂಭಿಸುತ್ತವೆ.

ಆರ್ಯರ ಯಜ್ಞಗಳಲ್ಲಿ ಯಜಮಾನ ಇಲ್ಲವೇ ರಾಜನು ಪುರೋಹಿತನನ್ನು ತಣಿಸುವಾಗ ಮಹಿಳೆಗೆ ಎಷ್ಟೋ ವಿಧದ ಅವಮಾನ ಪ್ರಸಂಗಗಳು ಎದುರಾಗುತ್ತಿದ್ದವು. ಇಂತಹ ವಿಕಟ ಪರಿಸ್ಥಿತಿ ಬೇರಾವ ನಾಗರಿಕತೆಗಳಲ್ಲೂ ಅತಿಯಾಗಿ ಉದ್ಭವಿಸಿಲ್ಲವೆಂದು ತೋರುತ್ತದೆ. ನಂತರದ ಕಾಲದಲ್ಲಿ ಮನು, ಶಂಕರಾಚಾರ್ಯರಂತಹ ಧರ್ಮಶಾಸ್ತ್ರಕಾರರು ಮತ್ತು ತತ್ವವೇತ್ತರು ಮಹಿಳೆಯ ಹಾಗೂ ಅಸ್ಪೃಶ್ಯರ ಸ್ಥಾನಮಾನಗಳನ್ನು ಇನ್ನೂ ಅಧೋಗತಿಗೆ ತಂದರು. ಶಕ್ತಿ ಪೀಠಗಳು ಮತ್ತು ಗುಡಿಗಳು ಸಹ ಮಹಿಳೆಗೆ ಅವಮಾನದ ಭಾರವನ್ನು ಹೇರಿದವು. ಅಲ್ಲಿಯ ಮೂಢನಂಬಿಕೆಗಳನ್ನು ನೂರಾರು ವರ್ಷಗಳಿಂದ ತಮ್ಮ ಮೇಲೆ ಹೇರಿಕೊಂಡಿರುವ ಮಹಿಳೆಯರನ್ನು ಕುರಿತು ಅಂಬೇಡ್ಕರ್ ಹೀಗೆ ಹೇಳಿದ್ದಾರೆ: ''ಹಳೆಯ ಗೊಡ್ಡು ಸಂಪ್ರದಾಯ ಮತ್ತು ನಂಬಿಕೆಗಳನ್ನು ನೀವು ಬಿಡಬೇಕಾಗಿದೆ. ಮಣಗಟ್ಟಲೆ ನಿಮ್ಮ ಕತ್ತಿನಲ್ಲಿರುವ ಸರಗಳು, ಕೈತುಂಬಿರುವ ಬಳೆಗಳು ನಿಮ್ಮ ಗುಲಾಮಗಿರಿಯ ಸಂಕೇತವಾಗಿವೆ.'' ಇವುಗಳಿಂದ ಬಿಡುಗಡೆಗೆ ಇನ್ನೆಷ್ಟು ಕಾಲ ಕಾಯಬೇಕೋ!

ಬುದ್ಧ, ಬಸವ, ಜ್ಯೋತಿರಾವ್ ಫುಲೆ, ಸಾವಿತ್ರಿಬಾಯಿ ಫುಲೆ, ದೇವರಾಯ ಇಂಗಳೆ ಮತ್ತು ಅಂಬೇಡ್ಕರ್ ಅವರ ಸಮಸ್ತ ಚಿಂತನೆ ಮತ್ತು ತತ್ವಗಳನ್ನು ಅರಗಿಸಿಕೊಂಡಿರುವ ಮಂಗಲಾ ತಮ್ಮ ಮೊದಲ ಪುಸ್ತಕದಲ್ಲಿಯೇ ಪ್ರಬುದ್ಧತೆಯ ಕಡೆಗೆ ಸಾಗಿದ್ದು ಧರ್ಮ, ದೇವರು, ಪುರುಷ ಪ್ರಾಧಾನ್ಯಗಳೆಂಬ ಹೆಸರಿನಿಂದ ಸ್ತ್ರೀ ಶೋಷಣೆಯ ಹಲವು ಮುಖಗಳನ್ನು ಹೊರಗೆಡಹಿದ್ದಾರೆ. 'ನಿಮ್ಮ ಉದ್ಧಾರವನ್ನು ನೀವೇ ಮಾಡಿಕೊಳ್ಳಬೇಕಿದೆ' ಎಂಬ ಅಂಬೇಡ್ಕರ್ ವಾಣಿಯಂತೆ ಮಂಗಲಾ ಸ್ತ್ರೀ ವಿಮೋಚನಾ ಚಳುವಳಿಯ ಒಂದು ಕಿಡಿಯಾಗಿ ಈಗ ಹೊತ್ತುಕೊಂಡಿದ್ದು ಅದು ಬುದ್ಧ, ಬಸವ, ಫುಲೆ, ಅಂಬೇಡ್ಕರ್ ಅವರು ನಿರ್ಮಿಸಿದ ಕ್ರಾಂತಿಕಾರಕ ವಿಚಾರಗಳ ವೇದಿಕೆಯಾಗಿದ್ದು ಅದನ್ನು ಮಂಗಲಾರಂತಹ ಹೆಣ್ಣುಮಕ್ಕಳು ಮುಂದೊಯ್ಯಬೇಕಾಗಿದೆ. ಪೆರಿಯಾರ್ ಅವರ ವಿಚಾರಗಳ ಬಗ್ಗೆ ಎಲ್ಲಿಯೂ ಉಲ್ಲೇಖವಾಗಿಲ್ಲ. ಮಂಗಲಾ ಅವರು ಪೆರಿಯಾರ್ ವಿಚಾರಧಾರೆಯನ್ನು ಈ ಕೃತಿಯಲ್ಲಿ ಉಲ್ಲೇಖಿಸುವ ಅವಶ್ಯಕತೆ ಇತ್ತು.



ಬಹುಶಃ ಹೆಣ್ಣಿಗೆ ಪೂರ್ವಕಾಲದಲ್ಲಿ ಪ್ರಥಮವಾಗಿ ತನ್ನ ಸ್ಥಾನಮಾನಗಳನ್ನು ಗಳಿಸಿಕೊಟ್ಟವನು ಬುದ್ಧನಾದರೆ, ಮಧ್ಯಕಾಲದಲ್ಲಿ ಬಸವ ಎನ್ನಬಹುದು; ಅಂತಿಮವಾಗಿ ಆ ಕಿಚ್ಚನ್ನು ಮತ್ತೊಮ್ಮೆ ಹಚ್ಚಿ ಇಲ್ಲಿಯತನಕ ನಡೆಸಿಕೊಂಡು ಬಂದವರೆಂದರೆ ಫುಲೆ ಮತ್ತು ಅಂಬೇಡ್ಕರ್. ಮನುಷ್ಯನ ಅನಂತ ಚರಿತ್ರೆಯಲ್ಲಿ ಮೇಲಿನ ಮಹಾಪುರುಷರಂತಹವರು ಜೀವಿಸಿದ್ದ ಕೆಲವು ಕಾಲಘಟ್ಟಗಳನ್ನು ಬಿಟ್ಟರೆ ಮಹಿಳೆ ನಾಗರಿಕತೆಯ ರಾಡಿ ಹುಟ್ಟಿಕೊಂಡ ಕ್ಷಣದಿಂದ ಇಂದಿನ ವರೆಗೂ ಶೋಷಣೆಯ ವಸ್ತುವಾಗಿಬಿಟ್ಟಿದ್ದಾಳೆ.

ಜಾತಿ, ಅಸ್ಪೃಶ್ಯತೆ ಮತ್ತು ಸ್ತ್ರೀ ಅಧಃಪತನದ ವಿಷಯಗಳು ಒಂದಕ್ಕೊಂದು ತಳುಕು ಹಾಕಿಕೊಂಡಿವೆ. ಜಾತಿ ಹೋದರೆ ಅಸ್ಪೃಶ್ಯತೆ ಅಳಿಯುವುದು, ಇವೆರಡೂ ಹೋದರೆ ಸ್ತ್ರೀಯ ಉದ್ಧಾರ ತನ್ನಿಂದ ತಾನೆ ಆಗುವುದೆಂಬ ಭಾವನೆ ಅಂಬೇಡ್ಕರರಲ್ಲಿತ್ತು. ಹೀಗಾಗಿ ಭಾರತದ ಉದ್ಧಾರ ಚಾತುರ್ವರ್ಣ್ಯದ ವಿನಾಶದಲ್ಲಿ ಅಡಗಿದೆ. ಸಾಮಾನ್ಯವಾಗಿ ಮಹಿಳೆ ಪುರುಷ ಪ್ರಧಾನ ಸಮಾಜದಲ್ಲಿ ಎಲ್ಲಾ ರೀತಿಯಲ್ಲೂ ಶೋಷಣೆಗೊಳಗಾಗಿದ್ದಾಳೆ ಎನ್ನುವುದು ನಿರ್ವಿವಾದ. ಆದರೆ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಹಿಳೆ ಸಾಮಾಜಿಕ ಶೋಷಣೆಯ ಜೊತೆಗೆ ದೈಹಿಕವಾಗಿಯೂ ಶೋಷಣೆಗೊಳಪಟ್ಟಿದ್ದಾಳೆ. ಇವಳು ಗಂಡಸರ ಜೊತೆ ದಿನವಿಡೀ ದುಡಿಯಬೇಕಿದೆ. ಆದರೆ ಸಾಮಾಜಿಕ ಸ್ಥಾನಮಾನ ಮಾತ್ರ ಕಳಪೆಯಾದ್ದು.

ಸಾಹಿತ್ಯವು ಮನುಷ್ಯನ ಜ್ಞಾನ, ಚಳುವಳಿ, ಹೋರಾಟಗಳ ಒಂದು ಅಂಗವಾಗಿದ್ದು ದಲಿತ, ಬಂಡಾಯ, ಸ್ತ್ರೀ ವಿಮೋಚನಾ ಚಳುವಳಿ ಬಗ್ಗೆ ವಿಸ್ತಾರವಾಗಿ ತಿಳಿಯಲು ಈ ಪುಸ್ತಕವನ್ನು ಒಮ್ಮೆ ಓದಬೇಕು. ಮಂಗಲಾ ಅವರು ತಮ್ಮ ಮುಂದಿನ ಹೆಜ್ಜೆ ಇಡುವಾಗ ಸ್ತ್ರೀ ವಿಮೋಚನಾ ಸಾಹಿತ್ಯದ ಹೋರಾಟಗಳ ಜೊತೆಗೆ ಹೇಗೆ ಸ್ಪಂದಿಸುತ್ತಾರೆ ಎನ್ನುವುದನ್ನು ಕಾದು ನೋಡಬೇಕಾಗಿದೆ.

ಎಂ. ವೆಂಕಟಸ್ವಾಮಿ
೪೨೭, ೧೩ನೇ ಮುಖ್ಯರಸ್ತೆ, ಎಂ. ಸಿ. ಬಡಾವಣೆ, ವಿಜಯನಗರ,
ಬೆಂಗಳೂರು-೫೬೦ ೦೪೦

ಪಾಲ್ ರೋಬ್ಸನ್

''ಕಡೆಯ ಉಸಿರಿರುವವರೆಗೂ ಹೋರಾಡುತ್ತಲೇ ಇರುತ್ತೇನೆ'' ಎಂದು ಘೋಷಿಸಿದ್ದ ಪಾಲ್ ರೋಬ್ಸನ್ ಬದುಕಿದ್ದು ಹಾಗೆಯೇ! ಅಮೆರಿಕದಲ್ಲಿ ವರ್ಣದ್ವೇಷ ಮತ್ತು ಶೋಷಣೆಗೆ ಗುರಿಯಾದ ಕರಿಯರ ಹೋರಾಟಕ್ಕೆ ಸ್ಫೂರ್ತಿ ಸೆಲೆಯಾಗಿದ್ದ ರೋಬ್ಸನ್ ಮಹಾನ್ ಜಾನಪದ ಹಾಡುಗಾರ, ಪ್ರತಿಭಾವಂತ ನಟ, ಕ್ರೀಡಾಪಟು. ಆತನ ಒಥೆಲೋ ಪಾತ್ರವನ್ನು ಯಾರೂ ಸರಿಗಟ್ಟಲ್ಲವೆಂಬ ಮಾತೊಂದಿದೆ. ಅಷ್ಟೇ ಅಲ್ಲ, ಪಾಲ್ ರೋಬ್ಸನ್‌ನ ನೆನಪು ಚಿರನಿರಂತರವಾಗಿರುವುದು ಫ್ಯಾಸಿಸಂ ವರ್ಣದ್ವೇಷಗಳ ವಿರುದ್ಧದ ಹೋರಾಟಗಳಲ್ಲಿ ತನ್ನನ್ನು ತಾನು ಪೂರ್ಣವಾಗಿ ತೊಡಗಿಸಿಕೊಂಡದ್ದರಿಂದ ಹಾಗೂ ವಿಶ್ವಶಾಂತಿ, ರಾಷ್ಟ್ರೀಯ ವಿಮೋಚನಾ ಚಳವಳಿ, ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಮೌಲ್ಯಗಳ ಪರವಾದ ದಿಟ್ಟ ನಿಲುವು ತೆಗೆದುಕೊಂಡದ್ದರಿಂದ.

೫೦ರ ದಶಕದಲ್ಲಿ ಪ್ಯಾರಿಸ್‌ನಲ್ಲಿ ವಿಶ್ವ ಶಾಂತಿ ಸಮ್ಮೇಳನ ನಡೆಯುವುದಿತ್ತು. ವಿಶ್ವ ಶಾಂತಿ ಸಮಿತಿಯ ಆಹ್ವಾನದ ಮೇರೆಗೆ ರೋಬ್ಸನ್ ಸಮ್ಮೇಳನದಲ್ಲಿ ಹಾಡಬೇಕಿತ್ತು. ಅಮೆರಿಕದ ಸರ್ಕಾರ ಅವರಿಗೆ ವೀಸಾ ನಿರಾಕರಿಸಿತು. ಪಾಲ್ ರೋಬ್ಸನ್ ಅಮೆರಿಕ-ಕೆನಡಾ ಸರಹದ್ದಿನಲ್ಲಿಯೇ ನಿಂತು ಶಾಂತಿ ಗೀತೆ ಹಾಡಿದ. ರೇಡಿಯೋ ಪ್ರಸಾರದಿಂದ ಪ್ಯಾರಿಸ್ ಸಮ್ಮೇಳನದ ಪ್ರತಿನಿಧಿಗಳಿಗೆ ತನ್ನ ಶಾಂತಿ ಪರ ನೀತಿಯನ್ನು ಸಾರಿದ.




ಕಪ್ಪು ದೇವತೆ (ಕಾದಂಬರಿ)

ಉದಯಕುಮಾರ ಹಬ್ಬು

ಪುಟ : 127 **ಬೆಲೆ : ರೂ. 30**

ಅನಂತ ಪ್ರತಿಭಾ ಪ್ರಕಾಶನ, 'ಅಭಿಷೇಕ' ಕಿನ್ನಿಗೋಳಿ - 574 150

ಸಹಬಾಳ್ವೆ ಮಾಡಬೇಕಾದ ಜನತೆ ಮುಕ್ತವಾಗಿ ಉಸಿರಾಡಲೂ ಆಗದಂಥ ವ್ಯವಸ್ಥೆಯನ್ನು ನಿರ್ಮಿಸಿಕೊಂಡು, ಅಪ್ಪ ನೆಟ್ಟ ಆಲದ ಮರಕ್ಕೇ ನೇಣು ಹಾಕಿಕೊಳ್ಳುವ ಸಂಪ್ರದಾಯಶೀಲ ಸಮಾಜದ ಬಗ್ಗೆ ಚಿಂತಿಸಿರುವ, ಕ್ರಾಂತಿಯನ್ನು ಬಯಸಿರುವ ಹೆಣ್ಣೊಂದು ಇಲ್ಲಿ ರೂಪುಗೊಂಡಿದೆ. ಶೋಷಕ-ಶೋಷಿತ ವರ್ಗಗಳು ಎರಡು ಸಮಾನಾಂತರ ರೇಖೆಗಳಲ್ಲೇ ಚಲಿಸುತ್ತಿದ್ದು ಯಾವ ಸಮಾಜ ಸುಧಾರಕನ ಹಿಡಿತಕ್ಕೂ ಇಲ್ಲಿ ಸಿಗುವುದಿಲ್ಲ.



ಕನಕನ ಅಪ್ಪ (ಗದ್ಯ ಸಂಕಲನ)

ಡಾ|| ಸಿ. ಪಿ. ನಾಗರಾಜ

ಪುಟ : 84 **ಬೆಲೆ : ರೂ. 35**

ನಾಗು ಸ್ಮಾರಕ ಪ್ರಕಾಶನ, ಕಾಳಮುದ್ದನ ದೊಡ್ಡಿ, [illegible] ತಾಲ್ಲೂಕು, ಮಂಡ್ಯ ಜಿಲ್ಲೆ - 571 422

ಈ ಲೇಖನಗಳ ನಿರೂಪಣಾ ಶೈಲಿ ಅತ್ಯಂತ ಲವಲವಿಕೆಯಿಂದ ಕೂಡಿದೆ. ನಿಜ ಜೀವನದ ಅನೇಕ ಘಟನೆಗಳನ್ನವಲೋಕಿಸಿ ಆಯ್ದುಕೊಂಡ ನೀತಿಯುತ 'ಸತ್ವಯುತ' ಕೆಲವೊಮ್ಮೆ ವಿನೋದ ಪ್ರಸಂಗಗಳನ್ನು ಓದುಗರ ಜೊತೆ ಲೇಖಕರು ಹಂಚಿಕೊಂಡಿದ್ದಾರೆ. ಇಲ್ಲಿ ಯಾವುದೇ ಕೃತ್ರಿಮದ ಲೇಪನವಿಲ್ಲ; ಬದಲಾಗಿ ಜೀವನದ ಸತ್ಯದರ್ಶನವಿದೆ. ಕೇಳಬಯಸುವವರಿಗೆ ಕಿವಿ ಮಾತುಗಳಿವೆ.



ನೀವು ಬಳಸುವ ಔಷಧಗಳು

ಡಾ|| ಸಿ. ಆರ್. ಚಂದ್ರಶೇಖರ್

ಪುಟ : 168 **ಬೆಲೆ : ರೂ. 60**

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು - 1

ವೈದ್ಯಕೀಯದ ಜತೆಗೆ ಸಾಮಾಜಿಕ ಕಳಕಳಿ ಇರುವ ವೈದ್ಯ ಸಾಹಿತಿ ಡಾ|| ಸಿ. ಆರ್. ಚಂದ್ರಶೇಖರ್ ಅವರಿಂದ ಇನ್ನೊಂದು ಮಹತ್ವದ ಕೃತಿ. ಅಗತ್ಯಕ್ಕಿಂತ ಹೆಚ್ಚಿನ ಔಷಧ ಸೇವನೆ ಪ್ರಾಣವುಳಿಸುವ ಬದಲು ಪ್ರಾಣಾಂತಿಕವಾಗಬಲ್ಲುದು. ಮಾರುಕಟ್ಟೆಯಲ್ಲಿ ಲಭ್ಯವಿರುವ ಔಷಧಗಳಲ್ಲಿ ನಿಜವಾಗಿ ಏನಿರುತ್ತದೆ? ಅವುಗಳ ಅಡ್ಡಪರಿಣಾಮಗಳೇನು? ವೈದ್ಯರ ಪಾತ್ರವೇನು ? ಸುವಿವರವಾಗಿ ಇಲ್ಲಿ ತಿಳಿಸಲಾಗಿದೆ.

ಕತ್ತಲಿಗೆ ಎಷ್ಟು ಮುಖ? (ಕಿರು ನಾಟಕಗಳು)

ಎಚ್. ಎಸ್. ವೆಂಕಟೇಶ ಮೂರ್ತಿ

ಪುಟ : 168 **ಬೆಲೆ : ರೂ. 65**

ಲಿಪಿ ಪ್ರಕಾಶನ, ಬ್ಯೂಗಲ್ ರಾಕ್ ರಸ್ತೆ, ಬಸವನಗುಡಿ ಬೆಂಗಳೂರು- 560 004.

ಕವಿತೆ ಹಾಗೂ ನಾಟಕ ರಚನೆಯಲ್ಲಿ ಸಿದ್ಧಹಸ್ತರಾಗಿರುವ ಶ್ರೀ ಎಚ್.ಎಸ್. ವೆಂಕಟೇಶ ಮೂರ್ತಿ ಆ ಮಾಧ್ಯಮಗಳ ಮೂಲಕ ವಾಸ್ತವಿಕತೆಗೆ ಕನ್ನಡಿ ಹಿಡಿಯಬಲ್ಲ ಮೇಧಾವಿ. ಚುರುಕಾದ ಸಂಭಾಷಣೆಯನ್ನೊಳಗೊಂಡ ಇಲ್ಲಿನ ಏಳು ಕಿರು ನಾಟಕಗಳಲ್ಲಿ ಬದಲಾಗುತ್ತಿರುವ ಅಭಿರುಚಿಗೆ ತಕ್ಕಂತೆ ಪಾತ್ರವರ್ಗ ರೂಪುಗೊಂಡಿದೆ. ನಾಟಕಗಳ ಮೂಲ ಸೆಲೆಯಾದ ಸನ್ನಿವೇಶ ನಿರ್ಮಾಣ ಪಾತ್ರಪೋಷಣೆ ಇಲ್ಲಿ ಮೇಲುಗೈ ಸಾಧಿಸಿದೆ.



ಸೂತ್ರಧಾರ ಬಿ. ವಿ. ಕಾರಂತ

ಸಂಪಾದಕ : ಬಿ. ಎಸ್. ಕೇಶವರಾವ್

ಪುಟ : 146 **ಬೆಲೆ : ರೂ. 80**

ಲಿಪಿ ಪ್ರಕಾಶನ, ಬ್ಯೂಗಲ್ ರಾಕ್ ರಸ್ತೆ, ಬಸವನಗುಡಿ, ಬೆಂಗಳೂರು -560 004

ದೇಶದಾದ್ಯಂತ ನಾಟಕ ರಂಗ ಹಾಗೂ ಸಂಗೀತ ಕ್ಷೇತ್ರಗಳ ರಡರಲ್ಲೂ ಸವ್ಯಸಾಚಿಯಂತೆ ಸಮರ್ಥ ನಿರ್ದೇಶಕರಾಗಿ, ಶ್ರೇಷ್ಠ ನಟರೂ ಆಗಿ ಹೆಸರುಮಾಡಿದ ಬಹುಮುಖ ಪ್ರತಿಭೆ ಶ್ರೀ ಬಿ. ವಿ. ಕಾರಂತರದ್ದು. ಬಾಲ್ಯದಿಂದಲೂ ಬಹಳ ನೋವನ್ನುಂಡು, ಕಲಾ ಜೀವನದುದ್ದಕ್ಕೂ ಹೊಗಳಿಕೆ - ತೆಗಳಿಕೆ ಎರಡನ್ನೂ ಸ್ವೀಕರಿಸಿ ಬಹು ಎತ್ತರಕ್ಕೆ ಏರಿದ ಇವರ ಸಮಗ್ರ ಪರಿಚಯವನ್ನಿಲ್ಲಿ ನೀಡಲಾಗಿದೆ.



ಸದ್ದು (ಕಾದಂಬರಿ)

ಮಹಾಬಲಮೂರ್ತಿ ಕೊಡ್ಲೆಕೆರೆ

ಪುಟ : 152 **ಬೆಲೆ : ರೂ. 64.00**

ಶಶಿ ಪ್ರಕಾಶನ, ಹನುಮಂತನಗರ, ಬೆಂಗಳೂರು- 19.

ದೈನಂದಿನ ವ್ಯವಹಾರಗಳಲ್ಲಿ ನಡೆದುಹೋಗುವ ತೀರಾ ಸಾಮಾನ್ಯವೆಂದೆನಿಸುವ ಅನೇಕ ಘಟನೆಗಳ ಸುತ್ತ ಈ ಕಾದಂಬರಿಯು ಹೆಣೆಯಲ್ಪಟ್ಟಿದೆ. ಸದ್ದಿಲ್ಲದೆ ನಡೆದು ಹೋಗುವ ಇಂಥ ಘಟನೆಗಳು ಸಮುದ್ರದಿಂದೆದ್ದು ಬಂದು ದಡದವರೆಗೆ ಮಾತ್ರ ಬಡಿದು ಹಿಂದೆ ಸರಿಯುವ ತೆರೆಗಳಂತೆ ಎಲ್ಲ ಪಾತ್ರಗಳೂ ಕಂಡುಬರುತ್ತವೆ. ಎಲ್ಲ ಪಾತ್ರಗಳಲ್ಲೂ ಒಂದು ಪರಿಧಿಯನ್ನು ಮೀರಲಾಗದ ಅಸಹಾಯಕತೆ ಇದೆ.



ಸುಮ್ ಸುಮ್ಮೆ ಬಸಯ್ಯ (ಜಾನಪದ ಕಥೆಗಳು)

ಸಂಪಾದಕ : ಜೀನಹಳ್ಳಿ ಸಿದ್ದಲಿಂಗಪ್ಪ

ಪುಟ : 184 **ಬೆಲೆ : ರೂ. 80**

ಪ್ರೇಮಾ ಪ್ರಕಾಶನ, ಜೀನಹಳ್ಳಿ ಅಂಚೆ - 577 223 ನ್ಯಾಮತಿ ಮಾರ್ಗ, ದಾವಣಗೆರೆ ಜಿಲ್ಲೆ

ಜೀವನದ ಅನುಭವಗಳಿಂದಲೇ ಸಹಜವಾಗಿ ರೂಪುಗೊಂಡ ಜನಪದ ಸಾಹಿತ್ಯ ಗ್ರಾಮೀಣ ಪ್ರದೇಶದ ಅಮೂಲ್ಯ ಕೊಡುಗೆ. ಇಲ್ಲಿನ ಜಾನಪದ ಕಥೆಗಳು ಪರೋಕ್ಷವಾಗಿ ಬೋಧಿಸುವ ನೀತಿ ಬಹಳ ಸೂಕ್ಷ್ಮವಾದುದು. ಹಾಲಿನೊಳಗಿರುವ ಬೆಣ್ಣೆಯಂತೆ ಅದನ್ನು ಮಥಿಸಿಯೇ ಪಡೆಯಬೇಕು. ಇಲ್ಲಿನ ಹದಿನಾರು ಕಥೆಗಳನ್ನು ಶ್ರೀ ಕಣಕಟ್ಟೆ ಚೆನ್ನಮಲ್ಲಪ್ಪ ಎಂಬುವವರಿಂದ ಸಂಪಾದಿಸಲಾಗಿದೆ.



ಇಂಗ್ಲಿಷ್ ಕವನಗಳು

ಜಿ. ಎಂ. ಮಲ್ಲಿಕಾರ್ಜುನ ಸ್ವಾಮಿ

ಪುಟ : 112 **ಬೆಲೆ : ರೂ. 36**

ಜ್ಯೋತ್ಸ್ನಾ ಪ್ರಕಾಶನ, ಹರಿಹರ - 577 601

ಇಂಗ್ಲಿಷ್ ಭಾಷೆಯ [illegible] ಕವನಗಳನ್ನು ಮೂಲ ಸಾಹಿತ್ಯಕ್ಕೆ ಚ್ಯುತಿಬಾರದಂತೆ ಕನ್ನಡಕ್ಕೆ ಅನುವಾದಿಸಲಾಗಿದೆ. ಅನ್ಯ ಭಾಷಾ ಸಾಹಿತ್ಯದ ಆಳವಿಸ್ತಾರ, ತೂಕಗಳನ್ನರಿಯಲು ಅನುವಾದ ಸಾಹಿತ್ಯ ತುಂಬಾ ಪ್ರಯೋಜನಕಾರಿ. ಶ್ರೀ [illegible] ಯವರ ಅನುವಾದಗಳ [illegible] ಕೊರತೆಯನ್ನು ಶ್ರೀಯುತ ಜಿ. ಎಂ. ಎಂ. ಸ್ವಾಮಿ ತುಂಬಿಕೊಟ್ಟಿದ್ದಾರೆ.

- [illegible]

ಜ್ಞಾನದಾಹಿಗಳ ಸ್ಫೂರ್ತಿಯ ಸೆಲೆ- ಮಹಾಪರ್ಯಟಕ
ಪಂಡಿತ ರಾಹುಲ ಸಾಂಕೃತ್ಯಾಯನ

ಏಪ್ರಿಲ್ ೯ ರಾಹುಲ ಸಾಂಕೃತ್ಯಾಯನರ ೧೦೮ನೆಯ ಜನ್ಮದಿನ. ಭಾರತೀಯ ಸಾಹಿತ್ಯ, ವೇದಕಾಲದ ಜೀವನ ಅಧ್ಯಯನ ಮತ್ತು ಬೌದ್ಧ ಧರ್ಮಗ್ರಂಥಗಳ ಸಂಗ್ರಹಣೆಗೆ ಶ್ರಮಿಸಿದ, ಸುಮಾರು ೧೫೦ಕ್ಕೂ ಹೆಚ್ಚು ಉದ್ಗ್ರಂಥಗಳನ್ನು ರಚಿಸಿದ ಮಹಾಪರ್ಯಟಕ, ತ್ರಿಪಿಟಕಾಚಾರ್ಯ ಪಂಡಿತ ರಾಹುಲ ಸಾಂಕೃತ್ಯಾಯನರ ಪರಿಚಯ ನಮ್ಮ ಯುವಜನರಿಗೆ ಅಗತ್ಯವಾಗಿ ಆಗಬೇಕಾಗಿದೆ. ನಾಲ್ಕಾರು ವಿಶ್ವವಿದ್ಯಾಲಯಗಳು ಒಟ್ಟು ಸೇರಿ ಮಾಡುವ ಕೆಲಸವನ್ನು ಕೇವಲ ಒಬ್ಬ ವ್ಯಕ್ತಿ ಮಾಡುವ ಪರಿಶ್ರಮ ಜನರಿಗೆ ತಿಳಿಯಬೇಕಾಗಿದೆ.



ಬೇದ್ರೆ, ಎನ್. ಮಂಜುನಾಥ

ಸೈರ್‌ಕರ್ ದುನಿಯಾ ಕೀ ಗಾಫಿಲ್ ಜಿಂದಗಾನೀ ಫಿರ್ ಕಹಾಂ।
ಜಿಂದಗೀ ಗರ್ ಕುಚ್ ರಹೀ ತೋ ನೌಜವಾನೀ ಫಿರ್ ಕಹಾಂ॥

(ಅಯ್ಯೋ ಮಂದಮತಿ ಸೋಮಾರಿಯೇ, ಹೋಗಿ ಪ್ರಪಂಚದಲ್ಲೆಲ್ಲಾ ಸುತ್ತಾಡು, ಇದಕ್ಕಾಗಿ ನಿನಗೆ ಮತ್ತೊಂದು ಬದುಕೇನೂ ಸಿಗುವುದಿಲ್ಲ. ಒಂದು ಪಕ್ಷ ಹೆಚ್ಚು ದಿನ ಬದುಕುವೆ ಎನ್ನುವೆಯಾದರೂ ಈ ಯೌವನ ಮತ್ತೆ ಎಲ್ಲಿಂದ ಸಿಗುತ್ತೆ?)

ಬಹುಶಃ ಈ ಮಾತುಗಳು ಎಳೆಯ ಸಾಧಕನ ತಲೆಯಲ್ಲಿ ಹೊಕ್ಕರೆ ಏನೆಲ್ಲಾ ಅದ್ಭುತಗಳು ಘಟಿಸುತ್ತವೆಯೋ ಅವಕ್ಕೆ ಜೀವಂತ ಉದಾಹರಣೆಯಾಗಿ ಜೀವನವಿಡೀ **ಪ್ರವಾಸ - ಅಧ್ಯಯನ - ಚಿಂತನೆ** - ಸಾಧನೆಗಳಲ್ಲಿ ತೊಡಗಿದ ಮಹಾಪಂಡಿತ ರಾಹುಲ ಸಾಂಕೃತ್ಯಾಯನ ನಮ್ಮೆದುರು ನಿಲ್ಲುವುದಷ್ಟೇ ಅಲ್ಲ, ಜಡ್ಡುಗಟ್ಟಿರುವ ಇಂದಿನ ಯುವಚೇತನಗಳಲ್ಲಿ ಚಲನೆಯನ್ನು ತರುತ್ತಾರೆ, ಸಾಧನೆಯ ಛಲವನ್ನು ತುಂಬುತ್ತಾರೆ, ಕಠಿಣ ಪರಿಶ್ರಮದ ಸಾಕ್ಷಿಯಾಗುತ್ತಾರೆ, ಕೂಪ ಮಂಡೂಕ ಪ್ರವೃತ್ತಿಯಿಂದ ನಿವೃತ್ತಿಗೊಳಿಸಿ ವಿಶಾಲ ವಿಶ್ವದ ಪರಿಚಯ ಮಾಡಿಕೊಟ್ಟು, ಅರಿವಿನ ಗುರುವಾಗುತ್ತಾರೆ. ಕಷ್ಟ ಪರಂಪರೆಗಳಿಗೆ ಜಗ್ಗದ, ನಿರುತ್ಸಾಹಗೊಳಿಸುವ ಸನ್ನಿವೇಶಗಳಲ್ಲಿ ಕುಗ್ಗದ, ಧೀಮಂತ ವ್ಯಕ್ತಿಯಾಗಿ ನಮ್ಮ ಮುಂದೆ ನಿಲ್ಲುತ್ತಾರೆ. ಅವರು ಬದುಕಿದ್ದರೆ ಏಪ್ರಿಲ್ ೯ಕ್ಕೆ ೧೦೮ ವರ್ಷದ ಚಿರಯುವಕರಾಗಿರುತ್ತಿದ್ದರು. ನಮ್ಮ ಇಂದಿನ ಯುವ ಪೀಳಿಗೆಯವರಿಗಿರಲಿ, ಹಿರಿಯ ಪೀಳಿಗೆಯವರಿಗೂ ಈ ಹಿಮಾಲಯ ಸದೃಶ ವ್ಯಕ್ತಿಯ ಪರಿಚಯ ಇಲ್ಲವೇನೋ ಎನ್ನುವಷ್ಟು ಕಡಿಮೆಯಾಗಿದೆ.

ಲೋಹಿಯಾರಿಗೂ ಮೊದಲಿಗೇ ಹಿಂದಿಯನ್ನು ರಾಷ್ಟ್ರಭಾಷೆಯ ಸ್ಥಾನದಲ್ಲಿರಿಸಲು ಶ್ರಮಿಸಿದ, ಹಿಂದಿ ಕೋಶಗಳನ್ನು ರಚಿಸಿದ, ಹಿಂದಿಯಲ್ಲಿಯೇ ೧೨೫ಕ್ಕೂ ಹೆಚ್ಚು ಸೃಜನಶೀಲ ಕೃತಿಗಳನ್ನು ರಚಿಸಿದ, ''ಪದ್ಮಭೂಷಣ'', ''ಸಾಹಿತ್ಯ ಅಕಾಡೆಮಿ ಪ್ರಶಸ್ತಿ'' ಪುರಸ್ಕೃತರಾದ, ಶ್ರೀಲಂಕಾದ ವಿದ್ಯಾಲಂಕಾರ ಪರಿವೇಣ ವಿಶ್ವವಿದ್ಯಾಲಯದಿಂದ ''ತ್ರಿಪಿಟಕಾಚಾರ್ಯ'', ಕಾಶಿಪಂಡಿತ ಸಭಾದಿಂದ ''ಮಹಾಪಂಡಿತ'', ಅಲಹಾಬಾದ್ ಹಿಂದಿ ಸಾಹಿತ್ಯ ಸಮ್ಮೇಳನದಲ್ಲಿ ''ಸಾಹಿತ್ಯ ವಾಚಸ್ಪತಿ'' ಬಿರುದು ಗಳಿಸಿದ ''ವೋಲ್ಗಾ - ಗಂಗಾ'' ಕೃತಿಯ ಮೂಲಕ ಸುಮಾರು ೬೦೦೦ ವರ್ಷಗಳ ಪುರಾತನ ಜನಜೀವನವನ್ನು ಕಥಾರೂಪದಲ್ಲಿ ಉಣಬಡಿಸಿದ, ಆರ್ಯಕಾಲದ ಜೀವನವನು ತಮ್ಮ ಹತ್ತಾರು ಕಾದಂಬರಿಗಳಲ್ಲಿ ಕಟ್ಟಿಕೊಟ್ಟ, ೧೬ಕ್ಕೂ ಹೆಚ್ಚು ಜೀವನ ಚರಿತ್ರೆಗಳನ್ನು, ೨೦ಕ್ಕೂ ಹೆಚ್ಚು ಪ್ರವಾಸ ಕೃತಿಗಳನ್ನು ಸಾಹಿತ್ಯ ಮತ್ತು ಸಾಹಿತ್ಯೇತರ ಕೃತಿಗಳನ್ನು ರಚಿಸಿದ ರಾಹುಲ ಸಾಂಕೃತ್ಯಾಯನರ ಪರಿಚಯ ಇಂದಿನ ಬಿಸಿರಕ್ತದ ತರುಣರಿಗೆ ಅಗತ್ಯವಾಗಿ ಆಗಬೇಕಿದೆ.

ಹಿಮಾಲಯದ ಗಿರಿಕಂದರಗಳಲ್ಲಿ ಪರಿವ್ರಾಜಕರಾಗಿ ಸಂಚರಿಸಿ ನಾಲ್ಕು ಬಾರಿ ಟಿಬೆಟ್‌ಗೆ ಹೋಗಿ ಪ್ರಾಚೀನ ಬೌದ್ಧಕೃತಿಗಳನ್ನು ಮರಳಿ ಭಾರತಕ್ಕೆ ತರುವ ಪ್ರಯತ್ನಮಾಡಿ ಯಶಸ್ವಿಯಾದವರು ರಾಹುಲರು. ನೇಪಾಳ, ಚೀನ, ಮಂಗೋಲಿಯಾ, ಜಪಾನ್, ಕೊರಿಯಾ, ಮಂಚೂರಿಯಾ, ರಷ್ಯಾ, ಶ್ರೀಲಂಕಾ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಇರಾನ್ ಹೀಗೆ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ದೇಶಗಳನ್ನು ಸುತ್ತಿ ಅಧ್ಯಯನ, ಸಂಶೋಧನೆ ಕೈಗೊಂಡ ಪಂಡಿತರಿವರು. ರಷ್ಯಾ ಮತ್ತು ಶ್ರೀಲಂಕಾಗಳಲ್ಲಿ ಬೌದ್ಧ ಧರ್ಮದ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸಿದ, ಕೆಲವು ವಿಶ್ವವಿದ್ಯಾಲಯಗಳು ಮಾಡುವಷ್ಟು ಸಂಶೋಧನಾ ಕಾರ್ಯವನ್ನು ಏಕಾಂಗಿಯಾಗಿ ಕೈಗೊಂಡು ಯಶಸ್ವಿಯಾಗಿ ಪೂರೈಸಿದವರು. ಸುಮಾರು ೫೫,೦೦೦ಕ್ಕೂ ಹೆಚ್ಚು ಪುಟಗಳಷ್ಟು ಬೃಹತ್ ವಾಙ್ಮಯ ಲೋಕವನ್ನು ಸೃಷ್ಟಿಸಿದವರು. ಸುಮಾರು ೩೦ಕ್ಕೂ ಹೆಚ್ಚು ಭಾಷೆಗಳನ್ನು ಚೆನ್ನಾಗಿ ಬಲ್ಲ, ಸಂಸ್ಕೃತ, ಹಿಂದಿ, ಪಾಳಿ, ಟಿಬೆಟನ್ ಮತ್ತು ಭೋಜಪುರಿ ಭಾಷೆಗಳಲ್ಲಿ ಕಥೆ, ಕಾದಂಬರಿ, ನಾಟಕ, ಪ್ರಬಂಧ, ನಿಘಂಟುರಚನೆ, ವ್ಯಾಕರಣ, ಗ್ರಂಥಸಂಪಾದನೆ, ದರ್ಶನ, ಇತಿಹಾಸ, ಸಮಾಜಶಾಸ್ತ್ರ, ವಿಜ್ಞಾನ, ಪ್ರವಾಸ, ಆತ್ಮಚರಿತ್ರೆ, ಜೀವನ ಚರಿತ್ರೆ, ಸಂಶೋಧನೆ, ಜಾನಪದ, ರಾಜನೀತಿ, ಧರ್ಮ ಇತ್ಯಾದಿ ವಿಷಯಗಳನ್ನೊಳಗೊಂಡ ಸುಮಾರು ೧೫೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದವರು ಈ ಪಂಡಿತ ಸಾಂಕೃತ್ಯಾಯನರು.

ಸಂಪ್ರದಾಯಬದ್ಧ ವೈದಿಕ ಆಚರಣೆಗಳ ವಿರುದ್ಧ ತಿರುಗಿಬಿದ್ದು, ಸಾಧುವಾಗಿ ಲೋಕಸಂಚಾರ ಕೈಗೊಂಡು ಅಧ್ಯಯನ, ಸಂಶೋಧನೆಗಳಲ್ಲಿ ತೊಡಗಿ, ಬೌದ್ಧ ಧರ್ಮದ ಸೆಳೆತಕ್ಕೆ ಸಿಕ್ಕು ಬೌದ್ಧ ಭಿಕ್ಷುವಾಗಿ ಪರಿವರ್ತನೆಯಾಗಿ ತ್ರಿಪಿಟಕಾಚಾರ್ಯ, ಮಹಾಪಂಡಿತ ಎನಿಸಿಕೊಂಡ ಸಾಧು ರಾಹುಲರು ಮಾರ್ಕ್ಸ್‌ವಾದಿಗಳು, ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು, ಸಮಾಜವಾದಿಗಳು, ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಸಂಘಟಕರಲ್ಲಿ ಓರ್ವರಾಗಿ ದುಡಿದು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳಾಗಿದ್ದವರು, ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿ ಹತ್ತಾರು ಬಾರಿ ಜೈಲುವಾಸ ಅನುಭವಿಸಿದವರು, ಬಿಹಾರದ ರೈತ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರು. ನ್ಯಾಯನಿಷ್ಠುರವಾಗಿ ಸದಾ ಜನಪರ ಕೆಲಸಗಳಲ್ಲಿ ತೊಡಗಿದ್ದ ರಾಹುಲರು ಯಾವಾಗಲೂ ಜ್ಞಾನದ ಒಂದು ಮೇರೆಯಿಂದ ಇನ್ನೊಂದು ಮೇರೆಗೆ, ನಂಬಿಕೆಗಳ ಒಂದು ಸರಣಿಯಿಂದ ಇನ್ನೊಂದು ಸರಣಿಗೆ ಪಯಣಿಸುತ್ತಲೇ ಇದ್ದವರು. ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸೆ, ವೇದಾಂತಗಳೆಂಬ ಷಡ್‌ದರ್ಶನಗಳನ್ನು, ಪಾಶ್ಚಾತ್ಯ ದರ್ಶನ, ಸಾಕ್ರೆಟಿಸ್, ಪ್ಲೇಟೋ, ಅರಿಸ್ಟಾಟಲ್, ಮಾರ್ಕ್ಸ್, ಎಂಗೆಲ್ಸ್, ಜೀನ್ ಪಾಲ್ ಸಾರ್ತ್ರ್ ಮೊದಲಾದವರ ಕೃತಿಗಳನ್ನು ಅರಗಿಸಿಕೊಂಡವರು. ಇದೇ ಅವರ ಏಕಾಗ್ರಚಿತ್ತತೆ, ಸ್ವತಂತ್ರ ಪ್ರವೃತ್ತಿ ಮತ್ತು ಜ್ಞಾನದಾಹದ ಗುಟ್ಟು.

ಸ್ವಾಮಿ ವಿವೇಕಾನಂದರನ್ನು ಬಿಟ್ಟರೆ ಭಾರತದಾದ್ಯಂತ ಸುತ್ತಾಡಿ, ಸಭೆಗಳನ್ನು ಸಂಘಟಿಸಿ, ನ್ಯಾಯಕ್ಕಾಗಿ ಹೋರಾಟ ನಡೆಸಿದವರು, ರಾಹುಲರೊಬ್ಬರೇ. ಎಷ್ಟೋ ವಿಷಯಗಳಲ್ಲಿ ಇವರಿಬ್ಬರಿಗೂ ಸಾಮ್ಯತೆ ಉಂಟು. ದಣಿವರಿಯದ ಜೀವಗಳು; ಲೋಕಹಿತಕ್ಕಾಗಿ, ದರಿದ್ರ ನಾರಾಯಣರ ಸೇವೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ಸದಾ ಚಲನಶೀಲ ರಾಹುಲರು ಪ್ರವಾಸ ಕುರಿತೇ ಒಂದು ಶಾಸ್ತ್ರಗ್ರಂಥವನ್ನು ರಚಿಸಿದ್ದಾರೆ. ''ಘುಮ್ಮಕ್ಕರ್ ಶಾಸ್ತ್ರ'' (ಪರ್ಯಟನ ಶಾಸ್ತ್ರ) ಕೃತಿಯಲ್ಲಿ ಅವರು, ''ನನ್ನ ಈ ಕೃತಿಯನ್ನು ಓದಿ ಕೋಟಿ ಕೋಟಿ ತಾಯಂದಿರು ತಮ್ಮ ಮಕ್ಕಳನ್ನು ದೂರ ಮಾಡಿಕೊಳ್ಳಬಹುದು. ಆ ಆಪಾದನೆಯನ್ನು ನಾನು ಪ್ರೀತಿಯಿಂದಲೇ ಭರಿಸುತ್ತೇನೆ. ಇದಕ್ಕಾಗಿ ಏಸುವಿನಂತೆ ಶಿಲುಬೆ ಏರಲಿಕ್ಕೂ ನಾನು ಸಿದ್ಧ. ಪರ್ಯಟಿಸುವುದಕ್ಕಾಗಿ ತಂದೆ ತಾಯಿಗಳ ಬಂಧನವನ್ನು ಹರಿದುಕೊಳ್ಳಬೇಕು'' ಎಂದಿದ್ದಾರೆ. ಹಾಗೆಯೇ, ''ಮಹಿಳೆಯರೂ ಸಂಚಾರ ಮಾಡಬೇಕು. ಪುರುಷನಷ್ಟೇ ಅಲ್ಲದೆ ಪ್ರಕೃತಿ ಕೂಡ ಮಹಿಳೆಯರಿಗೆ ವಿರುದ್ಧವಾಗಿ ವರ್ತಿಸುತ್ತಿದೆ. ಪ್ರಕೃತಿ ಪುರುಷನಿಗಿಂತ ಹೆಚ್ಚಾಗಿ ಸ್ತ್ರೀಯರನ್ನು ಹೆಚ್ಚು ಹಿಂಸಿಸುತ್ತದೆ. ಆದರೂ ಮಹಿಳೆಯರು ಪರ್ಯಟಕರಾಗಬೇಕು'' ಎಂದು ಹೇಳಿದ್ದಾರೆ. ಇದು ಅವರೊಬ್ಬ ಸ್ತ್ರೀವಾದಿ ಚಿಂತಕ ಎಂಬುದನ್ನು ಎತ್ತಿ ತೋರಿಸುತ್ತದೆ.

''ಜ್ಞಾನ ಮನುಷ್ಯನನ್ನು ಹೊತ್ತೊಯ್ಯುವ ನೌಕೆಯೇ ಹೊರತು ಆತನ ತಲೆಗೆ ಏರಿದ ಹೊರೆಯಲ್ಲ'' ಎಂಬ ಬುದ್ಧನ ಮಾತನ್ನು ಅವರು ಜೀವನದಲ್ಲಿ ಅಳವಡಿಸಿಕೊಂಡಿದ್ದರು.

ಜ್ಞಾನದ ಸಾಗರವೇ ಆಗಿದ್ದರೂ ಕೂಡ ಎಲ್ಲೂ ಬೀಗಿದುದಿಲ್ಲ. ಪ್ರತಿಯೊಂದು ಸಂದರ್ಭದಲ್ಲಿಯೂ ವಿಧೇಯ ವಿದ್ಯಾರ್ಥಿಯಂತೆ ವರ್ತಿಸುತ್ತಿದ್ದರು. ಚಲಿಸುವ ವಿಶ್ವಕೋಶದ ಮಾದರಿಯ ರಾಹುಲರ ಬುದ್ಧಿಮತ್ತೆ ವಿಶ್ವದ ಮಹಾನ್ ಇತಿಹಾಸಜ್ಞ ವಿಲ್ ಡ್ಯೂರಾ ಅವರನ್ನು ಹೋಲುತ್ತಿತ್ತು. ಬಹುಮುಖ ಪ್ರತಿಭೆಯ ದೈತ್ಯ ಜಿಜ್ಞಾಸುವನ್ನು ಸಮಗ್ರವಾಗಿ ಪರಿಚಯಿಸಿಕೊಳ್ಳಬೇಕೆಂದರೆ ಅವರೇ ಬರೆದ ಪುಸ್ತಕಗಳನ್ನು ಮತ್ತು ಅವರ ಆತ್ಮ ಚರಿತ್ರೆ ''ಮೇರಿ ಜೀವನ್ ಯಾತ್ರಾ'' ಓದಿ ತಿಳಿಯಬೇಕಷ್ಟೇ!

೧೮೯೩ರ ಏಪ್ರಿಲ್ ೯ರಂದು ಉತ್ತರ ಪ್ರದೇಶದ ಆಜಮ್‌ಘಡ್ ಜಿಲ್ಲೆಯ ಮಚ್ಛೆಯಾ ಗ್ರಾಮದ ಪಂದಹಾದಲ್ಲಿ ಗೋವರ್ಧನ ಮತ್ತು ಕುಲವಂತಿ ದಂಪತಿಗಳಿಗೆ ಜನಿಸಿದ ಶಿಶುವನ್ನು ಕೇದಾರನಾಥ ಪಾಂಡೆ ಎಂದು ಕರೆಯಲಾಗಿತ್ತು. (ಮುಂದೆ ರಾಮ ಉದಾರದಾಸನಾಗಿ ನಂತರ ರಾಹುಲ ಸಾಂಕೃತ್ಯಾಯನನಾಗಿ ಬದಲಾದದ್ದು ಈ ಕೇದಾರನಾಥನೇ!). ಚಿಕ್ಕಂದಿನಲ್ಲಿಯೇ ತಾಯಿ ತೀರಿಕೊಂಡಿದ್ದರಿಂದ ಬಾಲ್ಯವನ್ನು ಅಜ್ಜಿಯ ಆಸರೆಯಲ್ಲಿ, ಅಜ್ಜ ರಾಮಶರಣ ಪಾಠಕರ ಮಾರ್ಗದರ್ಶನದಲ್ಲಿ ಕಳೆದರು. ೧೮೯೭ರ ಭೀಕರ ಕ್ಷಾಮದ ದಿನಗಳಲ್ಲಿ ಜನರ ಕಷ್ಟಗಳನ್ನು ನೋಡಿ ಅನುಭವಿಸಿದರು. ಪಂದಹದ ಉರ್ದು ಮದ್ರಸಾದಲ್ಲಿ ಕಲಿಕೆ ಆರಂಭಿಸಿದ ಕೇದಾರನಾಥ ಒಂದು ವರ್ಷದ ನಂತರ ರಾನಿಸರಾಯ್ ಎಂಬಲ್ಲಿನ ಉರ್ದು ಶಾಲೆಗೆ ಸೇರಿ ಉರ್ದು, ಪರ್ಶಿಯನ್ ಮತ್ತು ಹಿಂದಿ ಅಭ್ಯಾಸ ಮಾಡಿದರು. ''ಕಲಿಯುವ ಕೆಲಸ ಏನೂ ಕಷ್ಟವಾಗುತ್ತಿರಲಿಲ್ಲ. ಕೇವಲ ನಾಲ್ಕು ತಿಂಗಳಲ್ಲಿ ಕಲಿಯಬಹುದಾದುದಕ್ಕೆ ಒಂದು ವರ್ಷ ಸುಮ್ಮನೇ ಹಾಳು ಮಾಡಬೇಕಾಗುತ್ತಿತ್ತು'' ಎಂದು ಚಿಕ್ಕಂದಿನಲ್ಲಿ ಅವರು ಆಡಿದ ಮಾತು ಅವರ ಕಲಿಕೆಯ ರೀತಿಯ ಪ್ರತೀಕವಾಗಿತ್ತು. ಮುಂದೆ ಅವರು ಸ್ವಂತ ಪರಿಶ್ರಮದಿಂದ ೩೦ಕ್ಕೂ ಹೆಚ್ಚು ಭಾಷೆಗಳನ್ನು ಕಲಿತರು. ಆಂಧ್ರಪ್ರದೇಶದಲ್ಲಿ ಅವರು ಪ್ರವಾಸ ಮಾಡುವಾಗ ಪುಲ್ಲಾರೆಡ್ಡಿ ಗೂಡೆಂ ಎಂಬ ಕುಗ್ರಾಮದ ಲಂಬಾಣಿ ತಾಂಡದಲ್ಲಿ ಬಿಡಾರ ಮಾಡಿ ಕೇವಲ ನಾಲ್ಕೈದು ದಿನಗಳಲ್ಲಿ ಲಂಬಾಣಿ ಭಾಷೆ ಕಲಿತು ಅವರೊಡನೆ ನಿರರ್ಗಳವಾಗಿ ಮಾತನಾಡಿದುದೇ ಅಲ್ಲದೆ ಲಂಬಾಣಿ ಭಾಷೆ ಮರಾಠಿ ಭಾಷೆಯ ಅಪಭ್ರಂಶವೆಂದೂ, ಗುಜರಾತ್ ಮತ್ತು ರಾಜಸ್ಥಾನಗಳಲ್ಲಿ ವಾಡಿಕೆಯಲ್ಲಿರುವ ಭಾಷೆಯನ್ನು ಹೋಲುವುದೆಂಬುದನ್ನೂ ಅವರಿಗೇ ತೋರಿಸಿಕೊಟ್ಟರು. ಮಡಿಕೇರಿಯಲ್ಲಿದ್ದು ಕನ್ನಡವನ್ನೂ ಕೂಡ ಕಲಿತವರು ಇವರು.

ಕೇದಾರನಾಥರನ್ನು ೧೧ನೇ ವರ್ಷದಲ್ಲಿ ಬಲವಂತದಿಂದ ಬಾಲ್ಯವಿವಾಹ ಬಂಧನಕ್ಕೆ ಒಳಪಡಿಸಿದರು. ಇದನ್ನು ಧಿಕ್ಕರಿಸಿ ಮನೆಯಿಂದ ಓಡಿಹೋಗುವ ನಿರ್ಧಾರಕ್ಕೆ ಬಂದ ಅವರು ಕ್ಷುಲ್ಲಕ ನೆವವೊಂದನ್ನು ಒಡ್ಡಿ ಕಲ್ಕತ್ತೆಗೆ ಹೋಗಿ ಶಾಲೆಗೆ ಸೇರಿದರು. ಓದಿನಲ್ಲಿ ಮನಸ್ಸು ನಿಲ್ಲದೆ ರೈಲು ಬೋಗಿಗಳಲ್ಲಿ ಸಾಮಾನು ಸಾಗಿಸುವ ಡಬ್ಬಿಗಳಿಗೆ ಗುರುತು ಹಾಕುವ ಮಾರ್ಕ್‌ಮ್ಯಾನ್ ಆಗಿ ಕೆಲಸ ಮಾಡಿದರು. ನಂತರ ಸುಂಘಿನಿ ಸಾಹು ಎಂಬ ಸಾಹುಕಾರರ ಅಂಗಡಿಯಲ್ಲಿ ಲೆಕ್ಕ ಬರೆಯುವ ಕೆಲಸ ಮಾಡಿದರು. ಜೊತೆಯಲ್ಲಿ ಹಿಂದಿಯಲ್ಲಿ ಪತ್ರ ವ್ಯವಹಾರ, ಇಂಗ್ಲಿಷ್ ಪತ್ರಗಳ ನಕಲು ತೆಗೆಯುವಿಕೆ, ಮೊದಲಾದ ಕೆಲಸ ಮಾಡಬೇಕಾಯಿತು. ಅನಿಯಮಿತ ಓದು ಹಾಗೂ ಕೆಲಸದ ಒತ್ತಡದಿಂದ ಖಾಯಿಲೆ ಬಿದ್ದವರು ಕೆಲಸ ಬಿಟ್ಟು ತಂದೆಯ ಮನೆಯಿದ್ದ ಕನ್ವೆಲಾ ಎಂಬ ಗ್ರಾಮಕ್ಕೆ ಹಿಂದಿರುಗಿದರು.

ಆರೋಗ್ಯ ಸುಧಾರಿಸುವ ವೇಳೆಯಲ್ಲಿ ಆ ಗ್ರಾಮದ ಬಾಬಾ ಪರಮಹಂಸರ ಗುಡಿಸಲಲ್ಲಿ ಆಧ್ಯಾತ್ಮಕ್ಕೆ ಸಂಬಂಧಿಸಿದ ಪುಸ್ತಕಗಳ ಓದು, ವ್ರತ ನಿಯಮಗಳ ಅನುಸರಣೆ, ಸ್ತೋತ್ರ, ಪ್ರಾರ್ಥನೆಗಳನ್ನು ಅಭ್ಯಾಸ ಮಾಡಿಕೊಂಡರು. ಈ ಆಧ್ಯಾತ್ಮದ ಗುಂಗಿನಲ್ಲಿ ಮತ್ತೆ ಮನೆ ಬಿಟ್ಟು ಹೊರಟವರು ಹರಿದ್ವಾರ, ದೇವಪ್ರಯಾಗ, ಟಿಹರಿ, ಜಮುನೋತ್ರಿ, ಗಂಗೋತ್ರಿ, ಕೇದಾರನಾಥಗಳವರೆಗೆ ಪ್ರಯಾಣ ಮಾಡಿ ಸಾಧುಗಳ ಜೊತೆ ಸೇರಿದರು. ಮತ್ತೆ ಕಾಶಿಗೆ ಬಂದು ಅಲ್ಲಿಂದ ಪರಸಾ ಮಠಕ್ಕೆ ಹೋಗಿ ರಾಮ ಉದಾರ ದಾಸ ಎಂಬ ಸಾಧುವಾಗಿ ದೀಕ್ಷೆ ಪಡೆದು ಅಲ್ಲಿನ ಮಠದ ಪಾರುಪತ್ಯೆದಾರರಾಗಿ ಕೆಲಸ ಮಾಡಿದರು. ರಾಮಾವತಾರ ಶರ್ಮ ಎಂಬ ಪಂಡಿತರಿಂದ ಹೊಸ ವಿಷಯಗಳನ್ನು ಕಲಿತು ಹಿಂದಿ ಮತ್ತು ಇಂಗ್ಲಿಷ್ ಭಾಷೆಯ ಸಾಹಿತ್ಯ ಪತ್ರಿಕೆಗಳನ್ನು ಕೊಂಡು ಓದಲಾರಂಭಿಸಿದರು. ಹೀಗೆ ಅನ್ವೇಷಣೆ ಮತ್ತು ಅಧ್ಯಯನದ ಗುಂಗಿನಲ್ಲಿದ್ದವರು ಪರಸಾ ಮಠವನ್ನು ಬಿಟ್ಟು ಉತ್ತರ ಭಾರತದ ಆಗ್ರಾದಿಂದ ಆರಂಭಿಸಿ ರಾಮೇಶ್ವರದವರೆಗೆ ತಿರುಮಲ್ಲೆ, ಪುನ್ನಾಮಲ್ಲೆ, ಪಚ್ಚ ಪೆರುಮಲ್ಲೆ, ತಿನ್ನಾನೂರ್, ರಾಮ್ನಾಡ್, ಬೆಂಗಳೂರು, ಬಾಗಲಕೋಟೆ, ಪಂಡರಾಪುರ, ಪೂನಾ, ಮುಂಬಯಿ, ನಾಸಿಕ್, ಕಪಿಲಧಾರಾ, ಮಾಂದಾಂತ, ಉಜ್ಜೈನಿ- ಮೊದಲಾದ ಪ್ರಮುಖ ಕ್ಷೇತ್ರಗಳನ್ನು ಸಂದರ್ಶಿಸಿ, ಅಲ್ಲಿನ ಭಾಷೆ, ಪರಿಸರ, ವೈವಿಧ್ಯತೆಗಳನ್ನು ಅಭ್ಯಾಸ ಮಾಡಿ ಅಲಹಾಬಾದ್ ಮಾರ್ಗವಾಗಿ ಪರಸಾ ಮಠಕ್ಕೆ ಮರಳಿದರು.

ಪರಸಾ ಮಠಕ್ಕೆ ಭೇಟಿ ನೀಡುತ್ತಿದ್ದ ವಿದ್ವಾಂಸರಿಂದ, ಪ್ರವಾಸಿಗಳಿಂದ ಹೊಸ ವಿಷಯಗಳನ್ನು ಕಲಿತರು. ಫೋಟೋಗ್ರಫಿ ಅವರ ಹವ್ಯಾಸವಾದದ್ದು ಇಲ್ಲಿಯೇ. ಮಠದ ಪರಿಸರದಲ್ಲಿ ಹೆಚ್ಚು ಅಧ್ಯಯನಕ್ಕೆ ಅವಕಾಶ ಸಿಗದಿದ್ದರಿಂದ ಅದನ್ನು ಬಿಟ್ಟು ಆರ್ಯಸಮಾಜದವರ ಮುಸಾಫಿರ್ ವಿದ್ಯಾಲಯ ಸೇರಿ ಆರ್ಯಸಮಾಜದ ಸಿದ್ಧಾಂತಗಳನ್ನು ಅಧ್ಯಯನ ಮಾಡಿದರು. ಹೆಚ್ಚಿನ ಅಧ್ಯಯನಕ್ಕಾಗಿ ಮತ್ತೆ ಸಂಚಾರ. ಜಬಲ್‌ಪುರದಲ್ಲಿ ''ವೇದ ಮಾಧ್ಯಮಾ'', ಲಾಹೋರಿನಲ್ಲಿ ''ಶಾಸ್ತ್ರಿ'', ಕಾಶಿಯಲ್ಲಿ ''ಮೀಮಾಂಸಾ'' [illegible] ತರ್ಜುಮೆ ಮಾಡಿದರು. ಕ್ರೈಸ್ತ ಮಿಶನರಿಗಳ ಪುಸ್ತಕಗಳನ್ನು, ಇಸ್ಲಾಂ [illegible] ಗ್ರಂಥಗಳನ್ನು ಓದಿದರು. ಈ ಓದು ಕ್ರಮೇಣ ರಷ್ಯಾದ ಕ್ರಾಂತಿ[illegible] ಸಮಾಚಾರಗಳು, ಬ್ರಿಟಿಷ್ ಸಾಮ್ರಾಜ್ಯದ ದಬ್ಬಾಳಿಕೆ ವಿರೋಧಿಸಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ [illegible] ಸಮಾಚಾರಗಳ ಕಡೆಗೆ ತಿರುಗಿತು. ಜನಸಭೆಗಳನ್ನು ಸಂಘಟಿಸಿ ಭಾಷಣ ಮಾಡುವವರೆಗೂ ಮುಂದುವರೆಯಿತು. ಪರಿಣಾಮ ಜೈಲುವಾಸ. ಜೈಲಿನಲ್ಲಿ ಸಹಚರನೊಬ್ಬನಿಂದ [illegible] ಭಾಷೆ ಹೇಳಿಸಿಕೊಂಡು ಬೌದ್ಧ ಗ್ರಂಥಗಳನ್ನು ಅಧ್ಯಯನ ಮಾಡಿದರು. ಬಿಡುಗಡೆಯ ನಂತರ ಹೆಚ್ಚು ಬೌದ್ಧಗ್ರಂಥಗಳನ್ನು ಓದುವ, ತೀರ್ಥ ಸ್ಥಾನಗಳನ್ನು ನೋಡುವ ಅವಕಾಶ ಸಿಕ್ಕು ಬುದ್ಧ ಗಯಾ, ಕುಶೀನಾರ, ನಾಲಂದಾ, ರಾಜಗಿರಿ, ಜೇತವನಗಳನ್ನು ಸಂದರ್ಶಿಸಲು ಸಾಧ್ಯವಾಯಿತು.

೧೯೨೧ರಲ್ಲಿ ಸಾಲೆಂಪುರದ ಕಾಂಗ್ರೆಸ್ ಕಮಿಟಿಯನ್ನು ಸೇರಿ ಪರಸಾದಿಂದ ಪೂರ್ಣಾವಧಿ ಕಾರ್ಯಕರ್ತನಾಗಿ ದುಡಿಯುವ ನಿರ್ಧಾರ ಕೈಗೊಂಡ ಕೇದಾರನಾಥರು ಬ್ರಿಟಿಷ್ ಶಾಸನದ ವಿರುದ್ಧ ಜನಸಂಘಟನೆ, ಭಾಷಣ, ಪ್ರಭಾತ್‌ಫೇರಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಛಪರಾದಲ್ಲಿ ನೆರೆಹಾವಳಿಯಿಂದ ಸಂತ್ರಸ್ತರಾದವರ ಸೇವೆ ಮಾಡಿದರು. ಎಕ್ಮಾ ಎಂಬಲ್ಲಿ ಕಾಂಗ್ರೆಸ್‌ವತಿಯಿಂದ ಚರಕಗಳನ್ನು ವಿತರಣೆ ಮಾಡಿ ಗಾಂಧೀಜಿಯವರ ಸಂದೇಶವನ್ನು ಬಿತ್ತರಿಸಿದರು. ದೇಶೀಯ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಭೋಜಪುರಿ, ಮಲ್ಲಿಕಾ, ಅವಧಿ ಮೊದಲಾದ ಗ್ರಾಮೀಣ ಭಾಷೆಗಳಲ್ಲಿ ಆಯಾಯ ಪ್ರದೇಶಗಳಲ್ಲಿ ಭಾಷಣ ಮಾಡಿದರು. ಪರಿಣಾಮ, ೧೯೨೨ರ ಫೆಬ್ರವರಿಯಲ್ಲಿ ದಸ್ತಗಿರಿ, ಬಕ್ಸರ್ ಜೈಲಿನ ವಾಸ. ಅಲ್ಲಿ ಕೂಡ ಸಹಚರರನ್ನು ಒಟ್ಟಿಗೆ ಸೇರಿಸಿ ರಾಜಕೀಯ ಭಜನೆ, ನಾಟಕ ಏರ್ಪಡಿಸಿದರು. ಟ್ರಾಟ್‌ಸ್ಕಿಯ ''ಬೊಲ್ಷೆವಿಸಂ ಅಂಡ್ ವರ್ಲ್ಡ್ ರೆವೊಲ್ಯೂಷನ್'' ಕೃತಿಯನ್ನು ಅಲ್ಲಿ ಓದಿದರು.

೧೯೨೨ರ ಅಕ್ಟೋಬರ್ ೨೯ರಂದು ಛಪರಾ ಜಿಲ್ಲೆಯ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಾ ಚಿತ್ತರಂಜನ್ ದಾಸರತ್ತ ಆಕರ್ಷಿತರಾದರು. ಸಂಪ್ರದಾಯಸ್ಥ ಹಿಂದುಗಳ ಹಿಡಿತದಲ್ಲಿದ್ದ ಬುದ್ಧ ಗಯಾವನ್ನು ಬೌದ್ಧರಿಗೆ ಕೊಡಿಸುವ ವಿಷಯದಲ್ಲಿ ಕಾಂಗ್ರೆಸ್‌ನವರ ವಿರೋಧವಿದ್ದುದರಿಂದ ಇವರು ಕಾಂಗ್ರೆಸ್‌ಗೆ ರಾಜಿನಾಮೆ ಸಲ್ಲಿಸಿ ನೇಪಾಳಕ್ಕೆ ಹೋದರು. ಅಲ್ಲಿ ಲಾಮಾಗಳ ಸಂಪರ್ಕ ದೊರಕಿಸಿಕೊಂಡು ಬೌದ್ಧಧರ್ಮದ ಬಗ್ಗೆ ಹೆಚ್ಚು ತಿಳಿಯಲು ಪ್ರಯತ್ನಿಸಿದರು. ೧೯೨೩ರಲ್ಲಿ ಅವರು ನೇಪಾಳದಿಂದ ಪರಸಾಕ್ಕೆ ಬರುತ್ತಿದ್ದಂತೆಯೇ ಕಾಂಗ್ರೆಸ್ ಸಭೆಯೊಂದರಲ್ಲಿ ಹಿಂದೊಮ್ಮೆ ಭಾಷಣ ಮಾಡಿದ್ದಕ್ಕಾಗಿ ಬಂಧಿಸಿ ಎರಡು ವರ್ಷಗಳ ಕಾಲ ಹಜಾರಿಬಾಗ್ ಸೆಂಟ್ರಲ್ ಜೈಲಿನಲ್ಲಿರಿಸಿದರು. ಅಲ್ಲಿ ಸಿಂಹಳ ಭಾಷೆಯಲ್ಲಿದ್ದ ಬೌದ್ಧಕೃತಿಯ ಮಜ್ಝಿಮನಿಕಾಯ, ಗಣಿತ, ಭೂಗೋಳ, ಇಂಗ್ಲಿಷ್ ಕಾದಂಬರಿಗಳು, ಫ್ರೆಂಚ್ ಭಾಷೆಯ ಕೃತಿಗಳನ್ನು ಅಧ್ಯಯನ ಮಾಡಿದರು. ತಮ್ಮ ಸಮಾಜವಾದಿ ಕನಸುಗಳನ್ನು ಹೊತ್ತ ''ಬಾಯಿಸಮೀಂ ಸದಿ'' ಕೃತಿ ರಚಿಸಿದರು.

ಜೈಲಿನಿಂದ ಬಿಡುಗಡೆಯಾಗಿ ಕೇದಾರದ ಮಾರ್ಗವಾಗಿ ಕಾರ್ಗಿಲ್ ಮೂಲಕ ಲಡಕ್‌ಗೆ ಹೋದರು. ಅಲ್ಲಿಂದ ಖಾರ್‌ಡೋಂಗ್ ಲಾ ಪಾಸ್ ಮೂಲಕ ಮಾನ್ ಪಾಂಗ್ ಗಾಂಗ್ ಸರೋವರದ ದಾರಿಯಾಗಿ ಚುಮೂರ್ತಿ, ಕಿನಾರ್‌ಗೆ ಹೋಗಿ ಸಿಮ್ಲಾಕ್ಕೆ ಬಂದರು. ಸ್ವಾತಂತ್ರ್ಯ ಸಂಗ್ರಾಮ ಕಾಲವಾದ್ದರಿಂದ ನೇರ ಬಿಹಾರ್‌ಗೆ ಹೋಗಿ ಬಾಬು ರಾಜೇಂದ್ರ ಪ್ರಸಾದರೊಂದಿಗೆ ಸೇರಿ ದೊಡ್ಡ ದೊಡ್ಡ ರೈತರ ಸಭೆಗಳಲ್ಲಿ ಮಾತನಾಡಿದರು. ಜಮೀನ್ದಾರಿ ಪದ್ಧತಿಯನ್ನು ನಾಶಮಾಡುವ ಬಗ್ಗೆ ಉಗ್ರವಾಗಿ ಮಾತನಾಡಿದರು. ೧೯೨೬ರ ಗೌಹಟಿ ಕಾಂಗ್ರೆಸ್ ಸಭೆಯಲ್ಲೂ ಭಾಗವಹಿಸಿದರು.

ಮಾರ್ಕ್ಸ್‌ವಾದಿ ಚಿಂತನೆಗಳ ಪ್ರಭಾವದಿಂದ ಕಮ್ಯುನಿಸ್ಟರಾಗುವತ್ತ ವಾಲಿದ

[illegible] ಬೌದ್ಧ ಧರ್ಮದ [illegible] ಶ್ರೀಲಂಕೆಗೆ ತೆರಳಿದರು. ೧೯೨೭-೨೮ರಲ್ಲಿ ಅಲ್ಲಿನ ವಿದ್ಯಾಲಂಕಾರ ಪರಿವೇಣದಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಲೇ ಮೂಲ ಪಾಲಿ ಭಾಷೆಯಲ್ಲಿದ್ದ ತ್ರಿಪಿಟಕಗಳನ್ನು ಅಧ್ಯಯನ ಮಾಡಿ, ಬೌದ್ಧ ದರ್ಶನದ ಪ್ರಮುಖ ಕೃತಿ "ಅಭಿಧರ್ಮಕೋಶ"ಕ್ಕೆ ಸಂಸ್ಕೃತ ವ್ಯಾಖ್ಯಾನ ಬರೆದರು. ತ್ರಿಪಿಟಕಗಳ ಬಗ್ಗೆ ಅವರ ಪ್ರಕಾಂಡ ವಿದ್ವತ್ತನ್ನು ಗೌರವಿಸಿ ಶ್ರೀಲಂಕಾ ವಿದ್ಯಾ ಪರಿವೇಣವು ಅವರಿಗೆ "ತ್ರಿಪಿಟಕಾಚಾರ್ಯ" ಎಂಬ ಬಿರುದನ್ನಿತ್ತಿತ್ತು. ಇಲ್ಲಿಂದ ಮುಂದೆ ಅವರು ರಾಹುಲ ಸಾಂಕೃತ್ಯಾಯನ ಎಂದೇ ಖ್ಯಾತರಾದರು. ಸಿಂಹಳೀ ಭಾಷೆಯನ್ನು ಕಲಿತು ಅಧ್ಯಯನ ಮಾಡಿ ಪ್ರಾಚೀನ ಭಾರತದ ಬಗ್ಗೆ ಜ್ಞಾನ ಹೆಚ್ಚಿಸಿಕೊಂಡರು. ಹಿಂದಿಯಲ್ಲಿ ಸಿಂಹಳದ ಬಗ್ಗೆಯೇ ಬೃಹತ್ ಗ್ರಂಥವೊಂದನ್ನು ರಚಿಸಿದರು.

ಬಿಹಾರದ ನಾಳಂದ ಮತ್ತು ವಿಕ್ರಮಶಿಲಾ ವಿಶ್ವವಿದ್ಯಾಲಯಗಳ ಮೇಲೆ ಬಖ್ತಿಯಾರ್ ಖಿಲ್ಜಿ ದಾಳಿಮಾಡಿದ್ದಾಗ ಬೌದ್ಧ ಭಿಕ್ಷುಗಳು ಬೌದ್ಧ ಧರ್ಮದ ನೂರಾರು ತಾಳೆಯೋಲೆ ಗ್ರಂಥಗಳು, ಚಿತ್ರಪಟಗಳೊಂದಿಗೆ ಟಿಬೆಟ್ ಕಡೆಗೆ ಹೋಗಿದ್ದರು. ಭಾರತದಿಂದ ಹೊರಹೋಗಿದ್ದ ಈ ಬೌದ್ಧ ಗ್ರಂಥಗಳ ಶೋಧನೆಯಲ್ಲಿ ಮನಸ್ಸು ತೊಡಗಿಸಿ ಶ್ರೀಲಂಕಾದ ಆಚಾರ್ಯ ಹುದ್ದೆ ತ್ಯಜಿಸಿ, ಟಿಬೆಟ್‌ಗೆ ಪ್ರಯಾಣ ಬೆಳೆಸಿದರು. ದಾರಿಯಲ್ಲಿನ ಕಷ್ಟಗಳನ್ನು ಸಾಹಸದಿಂದ ಪರಿಹರಿಸಿಕೊಂಡು ಟಿಬೆಟ್ಟನ್ನು ತಲುಪಿದರು. ಲಾಮಾಗಳಂತೆ ವೇಷ ಹಾಕಿ ಅಲೆದಾಡಿ ಸುಮಾರು ಭಾರತೀಯ ಬೌದ್ಧ ಗ್ರಂಥಗಳ ಟಿಬೆಟನ್ ಅನುವಾದದ ೩೩೩ ಗ್ರಂಥಗಳು, ೧೬೧೯ ಬೋಟ್ ಭಾಷೆಯ ಬರಹಗಳು, ೧೩೦ ಬಟ್ಟೆ ವರ್ಣಚಿತ್ರಗಳು ಇತ್ಯಾದಿಗಳನ್ನು ಸಂಗ್ರಹಿಸಿ ೧೮ ಹೇಸರಗತ್ತೆಗಳ ಮೇಲೆ ಹೊರಿಸಿ ಭಾರತಕ್ಕೆ ತಂದರು. ಇವೆಲ್ಲವೂ ಇಂದು ಪಾಟ್ನಾ ವಸ್ತು ಸಂಗ್ರಹಾಲಯದ ಕಾಶಿಪ್ರಸಾದ್ ಜೈಸ್ವಾಲ್ ವಿಭಾಗದಲ್ಲಿ ಸುರಕ್ಷಿತವಾಗಿವೆ.

ಟಿಬೆಟ್‌ನಿಂದ ಮರಳಿದ ರಾಹುಲರು ೧೯೩೬ರಲ್ಲಿ ಬಿಹಾರದಲ್ಲಿ ರೈತ ಚಳುವಳಿಗಳಲ್ಲಿ ಭಾಗವಹಿಸಿ ಭಾಷಣಗಳನ್ನು ಮಾಡಿದರು. ಜೈಲುವಾಸ ಅನುಭವಿಸಿದರು. ೧೯೪೦ರಲ್ಲಿ ಮೋತಿಹಾರಿಯಲ್ಲಿ ನಡೆದ ರೈತ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಬಂಧನಕ್ಕೊಳಗಾಗಿ ೧೯೪೦-೪೨ರ ಅವಧಿಯಲ್ಲಿ ೨೯ ತಿಂಗಳ ಕಾಲವನ್ನು ಹಜಾರಿಬಾಗ್ ಮತ್ತು ದೇವಲಿ ಜೈಲುಗಳಲ್ಲಿ ಕಳೆದರು. ಇಲ್ಲಿಯೇ ಅವರು ೮೪೭ ಪುಟಗಳ "ದರ್ಶನ್-ದಿಗ್ದರ್ಶನ್" ಗ್ರಂಥ ರಚಿಸಿದರು. ಈ ಕೃತಿಯಲ್ಲಿ ವಿದೇಶೀಯ ಮತ್ತು ಭಾರತೀಯ ದರ್ಶನ ಶಾಸ್ತ್ರಗಳನ್ನು ತೌಲನಿಕವಾಗಿ ವಿವೇಚಿಸಿದ್ದಾರೆ.

೧೯೩೭ರಲ್ಲಿ ರಷ್ಯಾದ ಲೆನಿನ್‌ಗ್ರಾಡ್‌ನ ಪ್ರಾಚ್ಯ ಸಂಶೋಧನಾ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಆಹ್ವಾನಿತರಾಗಿ ಅಲ್ಲಿಗೆ ಹೋದಾಗ ಟಿಬೆಟ್-ಸಂಸ್ಕೃತ ಕೋಶದ ರಚನೆಯಲ್ಲಿ ತೊಡಗಿದ್ದ ಇಂಡೋ ಟಿಬೆಟನ್ ವಿಭಾಗದ ಕಾರ್ಯದರ್ಶಿ ಎಲೆನಾ ನರ್‌ವೆತೋವ್ನಾ ಕೋಜೋರ್‌ವಸ್ಕಿಯಾ (ಲೋಲಾ) ಅವರ ಭೇಟಿಯಾಯಿತು. ಆಕೆ ರಾಹುಲರಿಗೆ ರಷ್ಯನ್ ಭಾಷೆ ಕಲಿಸಿದಳು. ಈ ಪರಿಚಯ ಪ್ರೇಮವಾಗಿ ತಿರುಗಿ ಮದುವೆಯಲ್ಲಿ ಮಿಲನವಾಯಿತು. ಸೆಪ್ಟೆಂಬರ್ ೫, ೧೯೩೮ರಲ್ಲಿ ಇವರಿಗೆ ಜನಿಸಿದ ಮಗನಿಗೆ ಇಗೋರ್ ರಾಹುಲೋವಿಚ್ ಎಂದು ನಾಮಕರಣ ಮಾಡಿದ್ದರು. ೧೯೩೮ರ ಜನವರಿಯಲ್ಲಿಯೇ ಭಾರತಕ್ಕೆ ಮರಳಿದ ರಾಹುಲರು ಮತ್ತೆ ೧೯೪೭ರ ಜೂನ್‌ನಲ್ಲಿ ಲೆನಿನ್‌ಗ್ರಾಡ್‌ಗೆ ಮರಳಿ ಸಂಸ್ಕೃತ, ಹಿಂದಿ ಮತ್ತು ಟಿಬೆಟನ್ ಭಾಷೆಯ ತರಗತಿಗಳನ್ನು ತೆಗೆದುಕೊಳ್ಳತೊಡಗಿದರು. ರಷ್ಯಾದಲ್ಲಿಯೂ ತಮ್ಮ ಸಂಶೋಧನೆ ಮತ್ತು ಅಧ್ಯಯನ ಮುಂದುವರೆಸಿದ್ದ ರಾಹುಲರು ಆಗಸ್ಟ್ ೧೯೪೮ರಲ್ಲಿ ಭಾರತಕ್ಕೆ ಹಿಂದಿರುಗಿದರು.

ಸ್ವಾತಂತ್ರ್ಯ ಹೋರಾಟದ ಸಭೆಗಳು, ಸಾಹಿತ್ಯ ರಚನೆ, ಪ್ರವಾಸ, ಸಂಶೋಧನೆಗಳಲ್ಲಿ ತೊಡಗಿದ ರಾಹುಲರು ಒಟ್ಟು ೧೫೦ಕ್ಕೂ ಮಿಕ್ಕು ಗ್ರಂಥಗಳನ್ನು ರಚಿಸಿದ್ದಾರೆಂಬುದು ಆಶ್ಚರ್ಯಕರವಾದ ಸತ್ಯ. ಹತ್ತಾರು ವಿಶ್ವವಿದ್ಯಾಲಯಗಳು ಮಾಡುವ ಕೆಲಸವನ್ನು ಒಬ್ಬರೇ ಮಾಡುವ ಕ್ಷಮತೆಯುಳ್ಳ ರಾಹುಲರಿಗೆ ಪಾರಿಭಾಷಿಕ ಶಬ್ದಕೋಶ ರಚನೆ ಮಾಡುವ ಸಂದರ್ಭದಲ್ಲಿ ಬೆರಳಚ್ಚು ಸಹಾಯಕಿಯಾಗಿ ದುಡಿಯುವ ಅವಕಾಶ ಸಾಹಿತ್ಯದಲ್ಲಿ ಡಾಕ್ಟರೇಟ್ ಪಡೆದಿದ್ದ ಕಮಲಾ ಪೆರಿಯಾರ್ ಅವರಿಗೆ ಸಿಕ್ಕಿತು. ಸದಾ ಕೆಲಸದಲ್ಲಿ ಮಗ್ನರಾಗಿದ್ದು ಆರೋಗ್ಯದ ಕಡೆ ಹೆಚ್ಚು ಗಮನ ನೀಡದಿದ್ದರಿಂದ ರಾಹುಲರಿಗೆ ಸಿಹಿಮೂತ್ರರೋಗ ಅಂಟಿಕೊಂಡಿತ್ತು. ಅವರ ಅನಾರೋಗ್ಯದ ಸಂದರ್ಭದಲ್ಲಿ ಶ್ರದ್ಧೆಯಿಂದ ಸೇವೆ ಸಲ್ಲಿಸಿದ ಕಮಲಾರನ್ನು ಅವರು ೧೯೫೦ರ ವೇಳೆಗೆ ಪತ್ನಿಯಾಗಿ ಸ್ವೀಕರಿಸಿ ಡಾರ್ಜಿಲಿಂಗ್‌ನಲ್ಲಿ ನೆಲೆನಿಂತರು. ಅವರಿಗೆ ಜಯ ಎಂಬ ಮಗಳು, ಜೇತ ಎಂಬ ಮಗ ಹುಟ್ಟಿದರು.

ಟಿಬೆಟಿನ ಭಾಷೆ ಮತ್ತು ಸಾಹಿತ್ಯಕ್ಕೆ ರಾಹುಲರು ನೀಡಿದ ಅಪಾರ ಕೊಡುಗೆಯನ್ನು ಗುರುತಿಸಿದ ಚೀನಾ ಸರ್ಕಾರದ ಸಾಹಿತ್ಯ ಅಕಾಡೆಮಿಯು ೧೯೫೮ರಲ್ಲಿ ಟಿಬೆಟ್ ಸಾಹಿತ್ಯದ ಅನುಶೀಲನಕ್ಕೆ ಮಹಾಪಂಡಿತ ರಾಹುಲರನ್ನು ಆಹ್ವಾನಿಸಿತು. ೧೯೫೯ರಲ್ಲಿ ಶ್ರೀಲಂಕಾದ ವಿದ್ಯಾಲಂಕಾರ ಪರಿವೇಣ ವಿಶ್ವವಿದ್ಯಾಲಯ ಉದ್ಘಾಟನೆಯಾದಾಗ ದರ್ಶನ ಶಾಸ್ತ್ರದ ಮಹಾಚಾರ್ಯರಾಗಿ ರಾಹುಲ ಸಾಂಕೃತ್ಯಾಯನರು ಸೇವೆ ಸಲ್ಲಿಸಿದರು. ಸುಮಾರು ಎರಡು ವರ್ಷ ಕಾಲ ಸೇವೆಯಲ್ಲಿದ್ದು ೧೯೬೧ರ ಆಗಸ್ಟ್‌ನಲ್ಲಿ ತಮ್ಮ ೬೮ನೆಯ ವರ್ಷದಲ್ಲಿ ಡಾರ್ಜಿಲಿಂಗ್‌ಗೆ ಹಿಂದಿರುಗಿದರು.

ಅತಿಯಾದ ಕೆಲಸದ ಒತ್ತಡದಿಂದ ಆಗಾಗ್ಗೆ ಅವರ ಆರೋಗ್ಯ ಕೆಡುತ್ತಿತ್ತು. ಡಿಸೆಂಬರ್ ೧೧, ೧೯೬೧ರಂದು ಅವರು ಅಮ್ನೆಸಿಯಾ (ಸ್ಮೃತಿಲೋಪ)ಕ್ಕೆ ತುತ್ತಾದರು. ಅವರನ್ನು ರಷ್ಯಾಕ್ಕೆ ಚಿಕಿತ್ಸೆಗಾಗಿ ಕರೆದೊಯ್ದರು. ರಷ್ಯಾದಲ್ಲಿದ್ದ ಅವರ ಪತ್ನಿ ಲೋಲ ಮತ್ತು ಮಗ ರಾಹುಲೋವಿಚ್ ಅವರೂ ಕೂಡ ರಾಹುಲರ ಸೇವೆಗೆ ನಿಂತರು. ಏಳು ತಿಂಗಳ ಕಾಲ ನಡೆದ ಚಿಕಿತ್ಸೆ ಫಲಕಾರಿಯಾಗದೆ ಅವರನ್ನು ಮಾರ್ಚ್ ೨೩, ೧೯೬೩ರಲ್ಲಿ ಭಾರತಕ್ಕೆ ಮರಳಿ ಕರೆತರಲಾಯಿತು. ಏಪ್ರಿಲ್ ೯, ೧೯೬೩ ರ ಅವರ ಜನ್ಮದಿನದಂದು ಮೂರ್ಛೆ ಹೋದವರು ಐದುದಿನಗಳ ನಂತರ ಏಪ್ರಿಲ್ ೧೪ರಂದು ಹಿಮಾಲಯದ ಮಡಿಲಿನಲ್ಲಿ ನಿರ್ವಾಣ ಹೊಂದಿದರು. ಅವರ ಪತ್ನಿ ಕಮಲಾ ರಾಹುಲರ ಸಂಸ್ಕಾರ ನಡೆದ ಸ್ಥಳದಲ್ಲಿ ರಾಹುಲ ಚೈತ್ಯವನ್ನು ಕಟ್ಟಿಸಿದರು.

ಬದುಕೊಂದು ಸಾಧನೆ ಎಂಬುದಕ್ಕೆ ಜೀವಂತ ಉದಾಹರಣೆಯಾಗಿರುವ ರಾಹುಲರನ್ನು ಭಾರತದ ಯಾವ ವಿಶ್ವವಿದ್ಯಾಲಯವೂ ಪ್ರಾಧ್ಯಾಪಕನನ್ನಾಗಿ ಆಹ್ವಾನಿಸಲಿಲ್ಲ. ಶ್ರೀಲಂಕಾ ಮತ್ತು ರಷ್ಯಾಗಳಲ್ಲಿ ದರ್ಶನ ಶಾಸ್ತ್ರ ಮತ್ತು ಸಂಸ್ಕೃತದ ಪ್ರಾಧ್ಯಾಪಕರಾಗಿ ಬೋಧಿಸುತ್ತಿದ್ದಾಗ ಧ್ವನಿಮುದ್ರಿಸಿಕೊಂಡ ಧ್ವನಿಸುರುಳಿಗಳು ಇನ್ನೂ ಅಲ್ಲಿಯೇ ಇವೆ. ಬೌದ್ಧ ಧರ್ಮದ ಸಹಸ್ರಾರು ಗ್ರಂಥಗಳನ್ನು ಭಾರತಕ್ಕೆ ಹೊತ್ತು ತಂದ ಇವರ ಪರಿಶ್ರಮ ನೆನಪಿನಲ್ಲಿ ಮಾತ್ರ ಉಳಿದಿದೆಯೇನೋ! ರಾಹುಲರ ಬಗ್ಗೆ ಕನ್ನಡದಲ್ಲಿ ನಾಲ್ಕಾರು ಕೃತಿಗಳು, ಅವರ ಒಂದೆರಡು ಕೃತಿಗಳ ಅನುವಾದಗಳು ಬಂದದ್ದು ಬಿಟ್ಟರೆ ಅವರ ಸಾಧನೆಯನ್ನು ನಮ್ಮ ಯುವಜನರಿಗೆ ಪರಿಚಯಿಸುವ ಕೆಲಸ ನಡೆದೇ ಇಲ್ಲವೆಂದರೂ ತಪ್ಪಾಗಲಾರದು. ಈಗಲಾದರೂ ಅವರ ಬಗ್ಗೆ ಕುತೂಹಲ ಕೆರಳಿ ಅವರ ಕೃತಿಗಳ ಅಧ್ಯಯನ ನಡೆಯಲಿ ಎಂಬುದೇ ಈ ಲೇಖನದ ಆಶಯ.

ಚೇದ್ರ ಎನ್. ಮಂಜುನಾಥ
ಪ್ರಸಾರ ನಿರ್ವಾಹಕರು, ಆಕಾಶವಾಣಿ ಕೇಂದ್ರ,
ಚಿತ್ರದುರ್ಗ-೫೭೭೫೦೧

ಭೂತ ಮತ್ತು ಅವಳ ಪ್ರಶ್ನೆ

ಗೆಳೆಯಾ,
ಭೂತಕ್ಕೊಂದು
ವಿಸ್ಮೃತಿಯೇ ಇಲ್ಲವೇನೊ?

ನಿನ್ನೆಗಳೆಲ್ಲವ ಕೂಡಿ
ಕೋಳಿ ಜಲ್ಲಿಯಲ್ಲಿ ಮುಚ್ಚಿ
ಕುಂಟೋ ಬಿಲ್ಲೆಯಾಡುವ
ಆಡುತ್ತಾಡುತ್ತಲೇ
ಕಾಣದ ಕೈಗಳ ಗೆರೆದಾಟುವ
ದಾರ್ಷ್ಟ್ಯಕ್ಕೆ ಹುಚ್ಚೇರಿಸಿ

ಮುಖದ ಸುಕ್ಕುಗಳ ಬಲೆ ಹೆಣೆಯುವುದೇಕೊ?
ನಿನ್ನ 'ಮನು'ವಜ್ಜನ ಕುಲದ ರಕ್ತ
ಇನ್ನೂ ನೀರಾಗದೇ ಇದೆಯಲ್ಲೊ
ಮೊಲೆಹಾಲು ಕುಡಿದು
ಹಾಲು ಹಿಂದಿನ ಉಸಿರ ಪಾಡ ಮರೆಸುತ್ತಿದೆಯಲ್ಲೊ
ಸೀರೆ ಸೆಳೆದಾಗ ಕೃಷ್ಣ
ಬಂದರೂ ಅದು 'ಮಾಯೆ'ಯೇನೊ?

ಹೌದು, ಅಮೃತಮತಿ 'ಪಾಪಿ'ಯಾದದ್ದು
ಈ ನೆಲದ ಅಚ್ಚರಿಯಲ್ಲ ಬಿಡು
ಎಷ್ಟಾದರೂ ಇದು
ವಿಸ್ಮೃತಿ-ಹೀನ ಭೂತದ ನಾಡು ನೋಡು!
ವರ್ತಮಾನದ ಬಾಣಲೆಯಲಿ
ಭೂತದ ಬೆಂಕಿ ತಾಗಿ ಬೇಯುವುದೇ ಪಾಡು ಇಲ್ಲಿ!!

ಶಶಿ ಸಂಪಳ್ಳಿ
ಸಾಗರ


ವಂಶವಾಹಿ ಕುರಿತ ಒಂದು ಕಲ್ಪನಾ ವಿಲಾಸ

ಮಾನವ ವಂಶವಾಹಿ ಸಂಕುಲದ ಮೂಲ ಘಟಕಗಳ ಇಡೀ ಶ್ರೇಣಿಯನ್ನು ಇನ್ನು ಕೆಲವೇ ವರ್ಷಗಳಲ್ಲಿ ಖಚಿತವಾಗಿ ನಿರ್ಧರಿಸಲಾಗುವುದು. ಈ ಮಹೋನ್ನತ ಸಾಧನೆ 'ಮಾನವನ ಒಂದು ಪುಟ್ಟ ಹೆಜ್ಜೆ' ಅಲ್ಲದಿದ್ದರೂ 'ಮಾನವಕುಲದ ಒಂದು ದೈತ್ಯ ಲಂಘನ' ಖಂಡಿತ ಆಗಲಿರುವುದು.

ನಮ್ಮ ಒಂದೊಂದೂ ಜೀವಕೋಶದ ಬೀಜ ಕೇಂದ್ರದಲ್ಲಿ ೨೩ ಜೊತೆ ಕ್ರೊಮೊಸೋಮುಗಳು ಇರುತ್ತವೆ. ಒಂದೊಂದು ಕ್ರೊಮೊಸೋಮಿನಲ್ಲೂ ಒಂದೊಂದು ಬೃಹತ್ ಡಿಎನ್ಎ (ಡಿ ಆಕ್ಸಿ ರೈಬೊ ನ್ಯೂಕ್ಲಿಯಿಕ್ ಆ್ಯಸಿಡ್ - ಜೀವಕೋಶದ ಬೀಜದಲ್ಲಿದ್ದು ಆನುವಂಶಿಕ ಗುಣ ಸಾಗಿಸಲು ಕಾರಣವಾಗಿರುವ, ಜಲವಿಭಜನೆಗೊಳಪಡಿಸಿದಾಗ ಡಿ ಆಕ್ಸಿ ರೈಬೋಸ್ ಸಕ್ಕರೆಯನ್ನು ಕೊಡುವ ಒಂದು ಬಗೆಯ ನ್ಯೂಕ್ಲಿಯಿಕ್ ಆಮ್ಲ) ಅಣು ಇರುತ್ತದೆ. ವಂಶವಾಹಿ ಡಿಎನ್ಎಯ ಒಟ್ಟು ಉದ್ದ ೨ ಬಿಲಿಯನ್ (ಎರಡು ಶತಕೋಟಿ) ಬೇಸ್(ಒಂದು ಪೀಳಿಗೆಯಿಂದ ಮುಂದಿನದಕ್ಕೆ ಆನುವಂಶಿಕ ಸಂದೇಶ ಒಯ್ಯುವ ಅಕ್ಷರ)ಗಳಿಗೂ ಹೆಚ್ಚಿರುತ್ತದೆ. ಈ ವಂಶವಾಹಿ ಸಂಕುಲದ ಡಿಎನ್ಎಯ ಹೆಚ್ಚಿನ ಭಾಗವನ್ನು ಈಗ 'ನಿರುಪಯುಕ್ತ' ವೆಂದು ಭಾವಿಸಲಾಗಿದೆ. ಅವು ನಿಜಕ್ಕೂ ಏನು ನಿರ್ವಹಿಸಬಲ್ಲವು ಎಂಬುದರ ಅರಿವು ನಮಗೆ ಇಲ್ಲದಿರುವುದರಿಂದ ನಾವು ಬಹುಶಃ ಹೀಗೆ ಭಾವಿಸಿದ್ದೇವೆ. 'ವಂಶವಾಹಿಗಳು' ಎಂದು ಕರೆಯಲಾಗುವ ಬೇಸ್ ಶ್ರೇಣಿಗಳ ನಡುಗಡ್ಡೆಗಳು ಪ್ರೊಟೀನ್‌ಗಳ ಅಥವಾ ಇತರ ನ್ಯೂಕ್ಲಿಯಿಕ್ ಆಮ್ಲ ಅಣುಗಳ ಸಂಶ್ಲೇಷಣೆಗೆ ಅವಶ್ಯವಾದ, ಇಲ್ಲವೇ ಇತರ ವಂಶವಾಹಿಗಳ ಅಭಿವ್ಯಕ್ತಿ ಮಟ್ಟವನ್ನು ನಿಯಂತ್ರಿಸಲು ಅವಶ್ಯವಾದ ಮಾಹಿತಿಯನ್ನು ಗೊತ್ತುಪಡಿಸುತ್ತವೆ. ಈ ವಂಶವಾಹಿ ಉತ್ಪನ್ನಗಳು, ತಮ್ಮ ಸರಣಿಯಲ್ಲಿ, ಎಲ್ಲ ಕೋಶೀಯ ಚಟುವಟಿಕೆ, ಅದರ ಬೆಳವಣಿಗೆ ಹಾಗೂ ಭಿನ್ನವಾಗುವಿಕೆಗಳ ನಮೂನೆ, ಕೋಶ-ಕೋಶಗಳ ನಡುವಿನ ಸಂವಹನ, ಇತ್ಯಾದಿಗಳನ್ನು ನಿಯಂತ್ರಿಸುತ್ತವೆ. ಬೇರೆ ಮಾತುಗಳಲ್ಲಿ, ಇವು ನಮ್ಮೆಲ್ಲ ಜೀವ ವೈಜ್ಞಾನಿಕ ಚಟುವಟಿಕೆಗಳನ್ನು ಸಮಗ್ರವಾಗಿ ನಿಯಂತ್ರಿಸುತ್ತವೆ.

ನಮ್ಮ ವಂಶವಾಹಿ ಸಂಕುಲವು ೧೦೦,೦೦೦ ವಂಶವಾಹಿಗಳನ್ನು ಒಳಗೊಂಡಿದೆ. ಈ ವಂಶವಾಹಿಗಳು ಅಷ್ಟೇ ಸಂಖ್ಯೆಯ ಪ್ರೊಟೀನ್‌ಗಳ ಅಥವಾ ನ್ಯೂಕ್ಲಿಯಿಕ್ ಆಮ್ಲಗಳ ಜೈವ ಸಂಶ್ಲೇಷಣೆಗೆ ಅವಶ್ಯವಾದ ಸಮಾಚಾರವನ್ನು ಒದಗಿಸುತ್ತವೆ. ಹಾಗಾಗಿ ಒಂದೊಂದು ವಂಶವಾಹಿಯೂ ಒಂದೊಂದು ತುಣುಕು ವಂಶವಾಹಿ-ಮಾಹಿತಿಯಾಗಿರುತ್ತದೆ, ಕೋಶೀಯ ವರ್ತನೆಯ ಒಂದು ಸ್ವರೂಪವನ್ನು ನಿಯಂತ್ರಿಸುವ ವಂಶವಾಹಿ ಮಾಹಿತಿಯ ಒಂದು ತುಣುಕಾಗಿರುತ್ತದೆ. ನಾನು ನನ್ನ ಕೋಶಗಳಲ್ಲಿ ಹೊಂದಿರುವ ವಂಶವಾಹಿಗಳು ನಾನು ಎಂತಹ ಮನುಷ್ಯ ಎಂಬುದನ್ನು ನಿರ್ಧರಿಸುತ್ತವೆ. ಅವು ನನಗೆ ಒಂದು ವ್ಯಕ್ತಿತ್ವವನ್ನು, ನನ್ನತನದ ಒಂದು ಭಾವನೆಯನ್ನು ವೈಯಕ್ತಿಕತೆಯನ್ನು ನೀಡುತ್ತವೆ. ನೀವು ನನ್ನಿಂದ ಭಿನ್ನವಾಗಿರುವುದಕ್ಕೆ ಮುಖ್ಯ ಕಾರಣ, ನೀವು ನಿಮ್ಮ ಕೋಶಗಳಲ್ಲಿ ಒಯ್ಯುತ್ತಿರುವ ವಂಶವಾಹಿಗಳು ನಾನು ನನ್ನ ಕೋಶಗಳಲ್ಲಿ ಒಯ್ಯುತ್ತಿರುವ ವಂಶವಾಹಿಗಳಿಂದ ಭಿನ್ನವಾಗಿರುವುದೇ ಆಗಿದೆ.

ನನ್ನ ಕೋಶಗಳ ಬೀಜಕೇಂದ್ರ (ನ್ಯೂಕ್ಲಿಯಸ್)ಗಳಲ್ಲಿ ಒಟ್ಟಾಗಿ ಜೀವನ ನಡೆಸುತ್ತಿರುವ ವಂಶವಾಹಿಗಳು ಹಿಂದೆಂದೂ ಯಾವುದೇ ಒಂದು ಕೋಶದ ನಿವಾಸಿಗಳಾಗಿರಲಿಲ್ಲ. ನನ್ನ ಕ್ರೊಮೊಸೋಮ್‌ಗಳನ್ನು ಸಂಘಟಿಸಿರುವ ನಿರ್ದಿಷ್ಟ ವಂಶವಾಹಿಗಳ ಸಂಯೋಜನೆಯು ನನ್ನ ತಾಯಿ ನನ್ನನ್ನು ಗರ್ಭ ತಾಳಿದಾಗ ಉಂಟಾದುದು. ಇಂಥ



ಸಂಯೋಜನೆ ಬ್ರಹ್ಮಾಂಡದ ಇತಿಹಾಸದಲ್ಲೇ ಮೊತ್ತ ಮೊದಲಿಗೆ ಆದುದು. ನನ್ನ ವಿಷಯದಲ್ಲಷ್ಟೇ ಅಲ್ಲ, ಎಲ್ಲರ ವಿಷಯದಲ್ಲೂ ಇದು ಸತ್ಯ. ನನ್ನ ವಂಶವಾಹಿಗಳಲ್ಲಿ ಅರ್ಧದಷ್ಟು ನನ್ನ ತಂದೆಯ ಜೀವಕೋಶದಲ್ಲೂ ಉಳಿದರ್ಧ ನನ್ನ ತಾಯಿಯ ಜೀವಕೋಶಗಳಲ್ಲೂ ನಾನು ಹುಟ್ಟುವ ಮುನ್ನವೇ ಇದ್ದವು. ನನ್ನ ವಂಶವಾಹಿಗಳ ಕಾಲು ಭಾಗದಷ್ಟು ಒಂದೊಂದೂ ಎರಡು ಪೀಳಿಗೆಗಳ ಹಿಂದೆ ನನ್ನ ನಾಲ್ಕು ವಿಶಿಷ್ಟ ಅಜ್ಜ ಅಜ್ಜಿಯರ ಬಿಡಿ ಆದರೆ ವಿಭಿನ್ನ ಜೀವಕೋಶಗಳಲ್ಲಿ ವಾಸಿಸುತ್ತಿದ್ದಿತು. ಅದಕ್ಕೂ ಹಿಂದಿನ ಪೀಳಿಗೆಗಳಲ್ಲಿ ನನ್ನ ವಂಶವಾಹಿಗಳು ನನ್ನ ಮುತ್ತಾತ ಮುತ್ತಜ್ಜಿಯರು ವಿಸ್ತೃತವಾಗಿ ವ್ಯಾಪಿಸುತ್ತಿದ್ದ ಸಮುದಾಯದಲ್ಲಿ ಹರಡಿ ಹಂಚಿಹೋಗಿದ್ದವು. ನನ್ನ ಇಂದಿನ ಎಲ್ಲ ವಂಶವಾಹಿಗಳೂ ವಿಭಿನ್ನ ವ್ಯಕ್ತಿಗಳ ಜೀವಕೋಶಗಳಲ್ಲಿ - ಈ ವ್ಯಕ್ತಿಗಳು ನನ್ನ ತೀರ ದೂರದ ಪೂರ್ವಜರಾಗಿದ್ದರೂ

ಪ್ರೊ|| ಎಂ. ಆರ್. ಎನ್. ಮೂರ್ತಿ

ಸಹ - ವಾಸಿಸುತ್ತಿದ್ದ ಸಂಭವನೀಯತೆ [illegible] ಗಮನಕ್ಕೆ ತಂದುಕೊಂಡಾಗ, [illegible] ಪೀಳಿಗೆಗಳನ್ನು ಹಿಂದಿರುಗಿ ನೋಡಬೇಕು ಅನ್ನುವುದಕ್ಕೆ [illegible] ಮಾಡಬೇಕಾದುದಿಲ್ಲ. ಒಂದೊಂದು [illegible] ಪೂರ್ವಿಕರ ಸಂಖ್ಯೆಯನ್ನು ಇಮ್ಮಡಿಗೊಳಿಸಿದಾಗ ಕೇವಲ ೧೭ ಪೀಳಿಗೆಗಳು ೧,೩೧,೦೭೨ ಮಹಾ ಮಹಾ... ಮಹಾ ಮುತ್ತಜ್ಜ ಮುತ್ತಜ್ಜಿಯರತ್ತ ಕರೆದೊಯ್ಯುತ್ತವೆ. ಈ ಸಂಖ್ಯೆ ನನ್ನ ಕ್ರೊಮೊಸೋಮುಗಳಲ್ಲಿರುವ ವಿಶಿಷ್ಟ ವಂಶವಾಹಿಗಳ ಸಂಖ್ಯೆಯನ್ನು ಮೀರಿಸುತ್ತದೆ 'ನಾನು' ಎಂಬಂಥ ಈ ಆಶ್ಚರ್ಯಕರ ವ್ಯಕ್ತಿಯನ್ನು ರಚಿಸಿರುವಂಥ ವಂಶವಾಹಿಗಳ ಸಂಯೋಜನೆಯು ಕೇವಲ ೧೭ ಅಥವಾ ೧೮ ಪೀಳಿಗೆಗಳ ಹಿಂದೆ ವಾಸ್ತವವಾಗಿ ವಿಭಿನ್ನ ವ್ಯಕ್ತಿಗಳ ಬೀಜಕೋಶಗಳಲ್ಲಿ ವಾಸಿಸುತ್ತಿದ್ದ ಸಾಧ್ಯತೆ ಇದೆ! ಒಂದು ಪೀಳಿಗೆಯ ಕಾಲಾವಧಿ ೨೫ ವರ್ಷಗಳು ಎಂದು ತೆಗೆದುಕೊಂಡಲ್ಲಿ ಒಟ್ಟು ಕಾಲಾವಧಿ ಸುಮಾರು ನಾಲ್ಕು ಶತಮಾನಗಳು ಎಂದಾಗುತ್ತದೆ; ಅಂದರೆ ಬ್ರಿಟಿಷರು ಮೊಗಲರನ್ನು ಪದಚ್ಯುತಿಗೊಳಿಸಿ ಭಾರತವನ್ನು ತಮ್ಮ ವಶಪಡಿಸಿಕೊಳ್ಳಲು ಹವಣಿಸುತ್ತಿದ್ದ ಕಾಲ.

ನಿಜ, ಈ ಹಿಂದಿನ ಪ್ಯಾರಾದಲ್ಲಿ ನಾವು ಮಾಡಿರುವ ಲೆಕ್ಕಾಚಾರ ಸ್ವಲ್ಪ ಅತಿಸರಳ ಹಾಗೂ ಸರಿಯಾಗಿರಲು ಸಾಧ್ಯವಿಲ್ಲ ಎಂದೆನಿಸಬಹುದು. ನನ್ನ ಪೂರ್ವಿಕರು ತಮಿಳುನಾಡಿನಿಂದ ಬಂದು ಕರ್ನಾಟಕದ ಮಧ್ಯದಲ್ಲಿ ತಮ್ಮ ವಾಸ್ತವ್ಯ ಸ್ಥಾಪಿಸಿಕೊಂಡರೆಂದು ಹೇಳಲಾಗುತ್ತದೆ. ಅದು ಸುಮಾರು ೮೦೦ ವರ್ಷಗಳ ಹಿಂದೆ. ಆ ಕಾಲದಿಂದ ನನ್ನ ಪೂರ್ವಿಕರು – ಭೌಗೋಳಿಕವಾಗಿ ನಿಕಟವಾದ ಹಳ್ಳಿಗಳಲ್ಲಿ ವಾಸಿಸುತ್ತಿದ್ದವರು – ಸಾಮಾನ್ಯವಾಗಿ ತಮ್ಮ ಸೋದರ ಸಂಬಂಧಿಗಳನ್ನೇ ವಿವಾಹವಾಗುತ್ತ ಬಂದಿದ್ದಾರೆ. ಆದ್ದರಿಂದ ನನ್ನನ್ನು ಇಂದು ರಚಿಸಿರುವಂಥ ಅನೇಕ ವಂಶವಾಹಿಗಳು ಎಂಟುನೂರು ವರ್ಷಗಳ ಹಿಂದೆ ನಮ್ಮ ವಂಶಸಂಸ್ಥಾಪಕ ತಂದೆ ತಾಯಿಯರಲ್ಲಿ ಆಗಲೇ ಒಟ್ಟಾಗಿದ್ದ ಸಂಭವವಿದೆ. ಹಾಗಾಗಿ ಕಳೆದ ನೂರಾರು ವರ್ಷ ನಮ್ಮ ಪುಟ್ಟ ಗ್ರಾಮೀಣ ಸಮುದಾಯವನ್ನು ರಚಿಸಿರುವಂಥ ವಂಶವಾಹಿಗಳು ನಾನಾ ಸಂಯೋಜನೆಗಳಲ್ಲಿ ಕೂಡಿ ನಮ್ಮ ಸಮುದಾಯದ ಎಲ್ಲ ಸದಸ್ಯರ ಪಾತ್ರಗಳನ್ನು ನಿರ್ವಹಿಸುತ್ತಿವೆ. ಈ ಮುನ್ನಿನ ಪೀಳಿಗೆಗಳಲ್ಲಿ ನನ್ನ ಒಂದು ಭಾಗವು ನಮ್ಮ ಗ್ರಾಮ ಸಮುದಾಯದ ನೂರು-ಚಿಲ್ಲರೆ ಕುಟುಂಬಗಳ ಒಂದೊಂದೂ ಸದಸ್ಯನಾಗಿದ್ದಿತು. ಈ ವಂಶವಾಹಿಗಳು ಆ ಪೀಳಿಗೆಗಳ ಜೀವನ ಲಕ್ಷಣ, ಅವರ ಮನೋಧರ್ಮ, ಅವರ ಸಂಗೀತ ಹಾಗೂ ಲಲಿತಕಲಾ ಪ್ರಜ್ಞೆ, ಅವರ ಬೌದ್ಧಿಕತೆ ಹಾಗೂ ಸಂಕ್ಷೇಮ ಭಾವನೆ [illegible] ನಿರ್ಧರಿಸಿಕೊಂಡು ಬಂದವು. [illegible] ನನ್ನನ್ನು ಸೃಜಿಸಲು ಒಂದುಗೂಡಿರುವಂತೆ [illegible] [illegible]

ವಾಗಿ ಗ್ರಾಮ ಸಮುದಾಯವೊಂದರ ರೈತರ ಮತ್ತವರ ಪತ್ನಿಯರ ವಂಶವಾಹಿಗಳ ಭಾಗವಾಗಿದ್ದವು ಎಂಬುದು ಸತ್ಯ ಸಂಗತಿ.

ನಾನು ಈ ಹಿಂದಿನ ವಿಭಾಗದಲ್ಲಿ ಏನು ಹೇಳಿದೆನೋ ಅದಕ್ಕೂ ವಾಸ್ತವಿಕತೆಗೂ ತುಂಬ ಅಂತರವಿದೆ. ನಿಜ, ಸಾಮಾನ್ಯ ಕಾಲಗಳಲ್ಲಿ ನನ್ನ ಪೂರ್ವಿಕರು ತಮ್ಮ ಸೋದರ-ಸಂಬಂಧಿಗಳನ್ನು ಮದುವೆಯಾಗುತ್ತಿದ್ದರು. ಆದರೆ ನಮ್ಮ ಹಳ್ಳಿಯಲ್ಲಿ ಆ ಕಾಲದಲ್ಲಿ ಸಿಡುಬು ಪ್ಲೇಗುಗಳು ಅನಪೇಕ್ಷಿತ ಅತಿಥಿಗಳಾಗಿರುತ್ತಿದ್ದವು. ಒಂದೊಂದು ಬಾರಿ ಕಾಣಿಸಿ ಕೊಂಡಾಗಲೂ ಅವು ಹಳ್ಳಿಯ ಅರ್ಧದಷ್ಟು ನಿವಾಸಿಗಳ ಪ್ರಾಣ ಹರಣ ಮಾಡುತ್ತಿದ್ದವು. ದೃಢಕಾಯರಾದ ಗಂಡಸರು ಉಳಿದುಕೊಳ್ಳುತ್ತಿದ್ದರು. ಹೆಂಗಸರೇ ಹೆಚ್ಚಾಗಿ ಸಾಯುತ್ತಿದ್ದರು. ಮದುವೆಯಾಗಲು ಗಂಡಸರಿಗೆ ಸೋದರ ಸಂಬಂಧಿ ಹೆಂಗಳೆಯರೇ ಇರುತ್ತಿರಲಿಲ್ಲ. ಹಾಗಾಗಿ ''ವಿದೇಶಿ'' ಗ್ರಾಮಗಳಿಂದ ಹೊಸ 'ಹೆಂಡತಿಯರ'ನ್ನು ಆಮದು ಮಾಡಿಕೊಳ್ಳಲಾಗುತ್ತಿದ್ದಿತು. ಹೀಗೆ ನಮ್ಮ ಹಳ್ಳಿಯ ಕೊಳ್ಳಕ್ಕೆ ಹೊಸ ವಂಶವಾಹಿಗಳ ಸೇರ್ಪಡೆಯಾಗ ತೊಡಗಿತು. ಈ ರೀತಿ ನಮ್ಮ ಗ್ರಾಮಕ್ಕೆ ಭಾರಿ ಪ್ರಮಾಣದಲ್ಲಿ ಹೊಸ ವಂಶವಾಹಿಗಳು ಕ್ರಮಬದ್ಧವಾಗಿ ಬಂದು ಸೇರಿಕೊಂಡವು. ಈಚೆಗಂತೂ ನಮ್ಮ ಹಳ್ಳಿಯಲ್ಲಿ ತಮ್ಮ ಸ್ವಂತ ಸೋದರ ಸಂಬಂಧಿಗಳ ಬದಲು 'ವಿದೇಶೀ' ಯುವತಿಯರನ್ನು ಪ್ರೇಮಿಸುವುದೇ ಒಂದು ಫ್ಯಾಷನ್ ಆಗಿ ಬಿಟ್ಟಿದೆ. ಆದರೂ ಈ ಪ್ರೇಮ ವ್ಯವಹಾರವೂ ಬಹುಮಟ್ಟಿಗೆ ಪೂರ್ವನಿಯೋಜಿತವಾಗಿದ್ದು ತಾಯಿ ತಂದೆಯರ ನಿಕಟ ನಿಗಾವಣೆಯಲ್ಲೇ ನಡೆಯುತ್ತಿವೆ. ಹಾಗಾಗಿ ಈ ದಿನಗಳಲ್ಲಿ ನಮ್ಮ ಹಳ್ಳಿಯ ವಂಶವಾಹಿ ಕೊಳ್ಳ ತನ್ನೆಲ್ಲ ಶುದ್ಧ ಆದಿರೂಪವನ್ನು ಕಳೆದುಕೊಳ್ಳುತ್ತಿದೆ. ಅದು ಸರಿ, ಸಾಂಕ್ರಾಮಿಕ ರೋಗ ಬಂದಾಗ, ಗಂಡಸರು ಸತ್ತಾಗ, ಉಳಿದ ಹೆಂಡತಿಯರ ಪಾಡು ಏನಾಗುತ್ತಿತ್ತು ಎಂದು ನೀವು ಕೇಳಬಹುದು. ಅವರು ವಿಕಟ ನಿರ್ಧಾರ ಮಾಡಿ ತಮ್ಮ ಪತಿಯರ ದಾರಿಯನ್ನೇ ಹಿಡಿದು ಹೋಗದಿದ್ದರೆ, ಅಂದರೆ ಆತ್ಮಾಹುತಿ ಮಾಡಿಕೊಳ್ಳದಿದ್ದರೆ. ಅವರಿಗೆ ಜೀವಂತವಾಗಿ ರಲೇನೋ ಅನುಮತಿ ನೀಡಲಾಗುತ್ತಿದ್ದಿತು. ಆದರೆ 'ವಿದೇಶೀ' ಗಂಡಸರನ್ನು ಆಮದು ಮಾಡಿಕೊಳ್ಳದಂತೆ ಅವರ ಮೇಲೆ ನಿಷೇಧ ಹೊರಿಸಲಾಗುತ್ತಿದ್ದಿತು. ಹೀಗೆ ನಮ್ಮ ಸಮುದಾಯಕ್ಕೆ ಹೊಸ ವಂಶವಾಹಿಗಳನ್ನು ಸೇರಿಸುವುದ ರಲ್ಲಿ ಸ್ತ್ರೀಯರು ಅಂತಹ ದೊಡ್ಡ ಪಾತ್ರ ನಿರ್ವಹಿಸಿಲ್ಲ. ಆದರೂ ಕೆಲವು ದಿಟ್ಟ ಧೈರ್ಯಶಾಲಿ ಹೆಂಗಳೆಯರು ಆಗೊಮ್ಮೆ ಈಗೊಮ್ಮೆ 'ಅಜ್ಞಾತ ಪ್ರದೇಶ'ದ 'ಎತ್ತರದ, ಕಪ್ಪು' ವಿದೇಶಿಯರಿಂದ ಆಕರ್ಷಿತರಾದ ಸಾಧ್ಯತೆಯೂ ಇದೆಯೆನ್ನಿ. ಹೀಗೆ ಹೆಂಗಳೆಯರೂ ನಮ್ಮ ವಂಶವಾಹಿ ಕೊಳ್ಳಕ್ಕೆ ಹೊಸ ವಂಶವಾಹಿಗಳ ಕಾಣಿಕೆ ನೀಡಿರಬಹುದು. ಇದು ಎಷ್ಟು ಆಗಾಗ್ಗೆ ಸಂಭವಿಸುತ್ತಿದ್ದಿತು ಎಂಬುದನ್ನು ಅಂದಾಜು ಮಾಡುವ ಉತ್ತಮ ವಿಧಾನ ನನ್ನ ಬಳಿ ಇಲ್ಲ!

ನನ್ನ ವ್ಯಕ್ತಿತ್ವವನ್ನು ರೂಪಿಸಿರುವಂಥ ಎಲ್ಲ ವಂಶವಾಹಿಗಳೂ ಈ ಮುನ್ನ ಎಷ್ಟು ಪೀಳಿಗೆಗಳ ವಿಭಿನ್ನ ವ್ಯಕ್ತಿಗಳಲ್ಲಿ ಹೀಗೆ ಹರಡಿ ಹಂಚಿದವು ಎಂಬುದನ್ನು ನಿರ್ಧರಿಸುವುದರಲ್ಲಿ ಈ ಎಲ್ಲ ತೊಂದರೆಗಳಿದ್ದಾಗ್ಯೂ ಹಾಗೆ ಹರಡಿಹಂಚಿದ್ದ ಕಾಲ ತೀರ ಹಿಂದೇನೂ ಅಲ್ಲ ಎಂಬುದಂತೂ ಸುಸ್ಪಷ್ಟ. ಬಹುಶಃ ಅದು ಒಂದು ಸಾವಿರ ವರ್ಷಕ್ಕೂ ಹಿಂದೇನೂ ಅಲ್ಲ. ಅದಕ್ಕೆ ಮುನ್ನ ಈ ಒಂದೊಂದು ವಂಶವಾಹಿಯೂ ಒಂದು ಪೀಳಿಗೆಯಲ್ಲಿ ಸುಮಾರು ೨೫ ವರ್ಷಗಳವರೆಗಿದ್ದು ಅನಂತರ ಅದನ್ನು ಒಯ್ಯುತ್ತಿದ್ದ ವ್ಯಕ್ತಿ ಸಾವನ್ನಪ್ಪುವುದಕ್ಕೆ ಮುನ್ನ ಮತ್ತೊಂದು ಪೀಳಿಗೆಗೆ ಯಶಸ್ವಿಯಾಗಿ ನೆಗೆಯುತ್ತಿದ್ದಿತು. ಈ ವಂಶವಾಹಿಗಳು ಇಂತಹ ಬದುಕಿ ಉಳಿಯುವ ತಂತ್ರವನ್ನು ಈಗ ಮಿಲಿಯಾಂತರ ವರ್ಷಗಳಿಂದ ಅನುಸರಿಸಿಕೊಂಡು ಬಂದಿವೆ. ಮತ್ತು ತಮ್ಮನ್ನು ಒಯ್ಯುತ್ತಿದ್ದ ವ್ಯಕ್ತಿಗಳ ಖರ್ಚಿನಲ್ಲಿ (ಅಂದರೆ ಅವರ ಅವಸಾನದಿಂದ) ತಮ್ಮ ನಿತ್ಯ ಯೌವನವನ್ನು ಕಾಪಾಡಿಕೊಂಡು ಬಂದಿವೆ. ಇವು ಎಷ್ಟು ಭೌಗೋಳಿಕ ಎಲ್ಲೆಗಳನ್ನು ದಾಟಿ ಹೋಗಿವೆ, ಎಂತಹ ಮಾನವ ಅನುಭವದಿಂದ ಬಹುಶಃ ವಂಚಿತವಾಗಿವೆ, ಎಂಬುದು ಚಿಂತನಾರ್ಹ.

ನನ್ನ ಬಳಿ ಒಂದು ಚಳಿಗಾಲದಲ್ಲಿ ತೊಡುವ ಕೋಟು ಇದ್ದಿತು. ಇಪ್ಪತ್ತು ವರ್ಷಗಳಿಗೂ ಹಿಂದೆ ನಾನು ಅಮೆರಿಕಾದಲ್ಲಿ ಕೆಲಸ ಮಾಡುತ್ತಿದ್ದಾಗ ಕೊಂಡದ್ದು. ನನ್ನ ಅನೇಕಾನೇಕ ಮಿತ್ರರೂ ವಿದ್ಯಾರ್ಥಿಗಳೂ ಚಳಿ ದೇಶಗಳಲ್ಲಿ ಅಲ್ಪಾವಧಿ ಪ್ರವಾಸ ಕೈಕೊಳ್ಳಬೇಕಾಗಿ ಬಂದಾಗ ನನ್ನಿಂದ ಈ ಕೋಟನ್ನು ಎರವಲು ಪಡೆದಿದ್ದುದುಂಟು. ನಾನು ಒಂದೇ ದೇಶದಲ್ಲಿ ಕಟ್ಟು ಬಿದ್ದಿದ್ದಾಗ ನನ್ನ ಕೋಟು ಮಾತ್ರ ನಾನಾ ದೇಶಗಳಿಗೆ ಭೇಟಿ ನೀಡುತ್ತಿದ್ದುದನ್ನು ಕಂಡು ನನ್ನ ಕೋಟಿನ ಬಗೆಗೆ ನನಗೆ ನಿಜಕ್ಕೂ ಅಸೂಯೆ ಉಂಟಾಗುತ್ತಿತ್ತು. ಅದೂ ಯಾವ ವೀಸಾ ಪಡೆದುಕೊಳ್ಳುವ ಹಾಗೂ ವಿದೇಶಿ ಪ್ರವಾಸಕ್ಕಾಗಿ ಸಾಲ ಎತ್ತುವ ಯಾವ ತೊಂದರೆಯೂ ಇಲ್ಲದೆ! ನನ್ನ ಕೋಟಿನ ವಿಷಯದಲ್ಲಿ ನನಗೆ ಇಷ್ಟು ಅಸೂಯೆ ಉಂಟಾದಲ್ಲಿ ನನ್ನ ವಂಶವಾಹಿಯ ವಿಷಯದಲ್ಲಿ ಇನ್ನೂ ಎಷ್ಟು ಹೆಚ್ಚು ಅಸೂಯೆ ಉಂಟಾಗಬೇಡ, ನೀವೆ ಹೇಳಿ! ನನ್ನ ಕೋಟು ಎಲ್ಲೋ ಸಣ್ಣ ಪುಟ್ಟ ಪ್ರವಾಸ ಕೈಗೊಂಡಲ್ಲಿ ನನ್ನ ವಂಶವಾಹಿಗಳಾದರೋ ಎಷ್ಟೊಂದು ಭಾರಿ ಸಾಹಸ ಯಾತ್ರೆಗಳನ್ನು ಕೈಗೊಂಡಿವೆ, ಕೈಗೊಳ್ಳುತ್ತಿವೆ. ಇವೆರಡರ ನಡುವಿನ ಹೋಲಿಕೆ, ನಮ್ಮ ಹಳ್ಳಿ ಬೀದಿಗಳಲ್ಲಿ ಎತ್ತಿನ ಬಂಡಿಯ ಪ್ರಯಾಣವನ್ನು ದೂರ ಗ್ಯಾಲಕ್ಸಿಗಳಿಗೆ ಕೈಗೊಳ್ಳುವ ಅಂತರಿಕ್ಷ ಯಾತ್ರೆಗಳಿಗೆ ಹೋಲಿಸುವುದಕ್ಕೆ ಸಮ! 'ನಾನು' 'ನನ್ನವು' ಎಂದು ಹೇಳಿಕೊಳ್ಳುವ ವಂಶ ವಾಹಿಗಳು ಎಷ್ಟೊಂದು ಬಾರಿ ಸುಪ್ರಸಿದ್ಧ ರಾಜಮಹಾ ರಾಜರುಗಳ, ಸುಂದರ ರಾಣಿಯರ, ಮಹಾನ್‌ಗಾಯಕರ ಹಾಗೂ ನರ್ತಕರ, ಲೋಭಿಗಳ, ಕಳ್ಳಕೋರರ, ದರೋಡೆ ಕೋರಮರ, ನಿರಂಕುಶ ಪ್ರಭುಗಳ ಹಾಗೂ ಕೊಲೆಪಾತಕರ ವಂಶವಾಹಿಗಳ ಭಾಗವಾಗಿದ್ದವೋ ಹೇಗೆ ಹೇಳುವುದು?

ನಾಲ್ಕು ಸಾವಿರ ವರ್ಷಗಳ ಹಿಂದೆ ಸಿಂಧೂ ನದಿಯ ದಡದ ಮೇಲೆ ಸೊಗಸಾದ ಒಂದು ಬೆಳಿಗ್ಗೆ ಭವ್ಯ ಸಮಾರಂಭವೊಂದಕ್ಕೆ ಸಿದ್ಧತೆಗಳು ಬಹುಮಟ್ಟಿಗೆ ಮುಗಿದಿದ್ದವು. ಈ ಪವಿತ್ರ ಸಮಾರಂಭದಲ್ಲಿ ಭಾಗವಹಿಸಲು ಹತ್ತಿರ ಹಾಗೂ ದೂರ ಪ್ರದೇಶಗಳಿಂದ ಭಾರಿ ಸಂಖ್ಯೆಯಲ್ಲಿ ಜನ ಆಗಮಿಸಿದ್ದರು. 'ಉದ್ಗಾತೃ'ವು ಸಾಮವೇದದ ಮಂತ್ರ ಪಠಣ ಮಾಡುತ್ತಾ, ದೇವ ದೇವತೆಗಳನ್ನು ಅವರ ಪ್ರಾಮುಖ್ಯತೆಗೆ ಅನುಗುಣವಾಗಿ ಕರೆಯುತ್ತಾ, ಬಂದು ಹವಿಸ್ಸು ಸ್ವೀಕರಿಸುವಂತೆ ಪ್ರಾರ್ಥಿಸುತ್ತಿದ್ದನು. ಯಜ್ಞಾಶ್ವ ಗಾಂಭೀರ್ಯದಿಂದ ಹೆಜ್ಜೆ ಹಾಕುತ್ತಾ ವೇದಿಕೆಯತ್ತ ನಡೆದಿದ್ದಿತು. ಅದನ್ನನುಸರಿಸಿ ಮೇಕೆಯೊಂದು ಅರಚುತ್ತಾ ನಡೆದಿದ್ದಿತು. ಮುಹೂರ್ತ ಸಮೀಪಿಸುತ್ತಿದ್ದಿತು. ಎಲ್ಲರೂ ಭಾವೋದ್ರಿಕ್ತರಾಗಿದ್ದರು. ನನ್ನ ವಂಶವಾಹಿಗಳೂ ಈ ವರ್ಣರಂಜಿತ ಸಮಾರಂಭ ವನ್ನು ವೀಕ್ಷಿಸಿದ್ದಿರಬಹುದೇ?

ಗೌತಮನು ಪುರೋಹಿತರ ದಬ್ಬಾಳಿಕೆ ಮತ್ತವರ ಮಿತಿ ಮೀರಿದ ಆಚಾರ ವಿಧಿಗಳ ವಿರುದ್ಧ ಬಂಡಾಯ ವೆದ್ದಿದ್ದ. ಅವನು ಜನರಿಗೆ ಒಂದು ಹೊಸ ಸಂದೇಶ ಬೋಧಿಸುತ್ತಿದ್ದ. ಅಂದು ಸಂಜೆ ಅವನು ಗಂಗಾ ನದಿ ತಟಕ್ಕೆ ಸಮೀಪವಿದ್ದ ಉದ್ಯಾನವನದಲ್ಲಿ ಉಪದೇಶ-ಭಾಷಣ ಮಾಡುವುದಿದ್ದಿತು. ಅನೇಕರು ಈ ಜಗತ್ತಿನ ಜಂಜಾಟ ಗಳಿಂದ ಬೇಸತ್ತು ಮನಶ್ಶಾಂತಿ ಅರಸಿ ಅಲ್ಲಿಗೆ ಬಂದಿದ್ದರು. ಇನ್ನು ಕೆಲವರು ಗೌತಮನ ಲೋಪದೋಷ ಗಳನ್ನು ಪತ್ತೆ ಹಚ್ಚಿ ಅವನ ಬೋಧೆಗಳನ್ನು ಹಳಿಯಲೆಂದೇ ಅಲ್ಲಿಗೆ ಆಗಮಿಸಿದ್ದರು. ಮತ್ತೆ ಕೆಲವರು ಕೇವಲ ತಮ್ಮ ಕುತೂಹಲ

'ಪ್ರೇಮ'



ಪ್ರೇಮವೊಂದು
ಪಾತರಗಿತ್ತಿಯಂತೆ
ಬೆನ್ನಟ್ಟಿದರೆ
ಓಡುತ್ತದೆ
ಹೂ ಬನಗಳಲ್ಲಿ
ಕೆಲವೊಮ್ಮೆ
ಕಲ್ಲು ಮುಳ್ಳುಗಳಲ್ಲಿ

ಜಿ. ಪ್ರೇಮಾನಂದ, ಅಂಕೋಲಾ

ತಣಿಸಿಕೊಳ್ಳಲು ಮತ್ತು ಸಂಜೆಯನ್ನು ಆರಾಮದಿಂದ ಕಳೆಯಲು ಬಂದಿದ್ದರು. ಗೋತಮನು ಎತ್ತರ ವೇದಿಕೆಯ ಮೇಲಕ್ಕೆ ಹತ್ತಿ ನಡೆದಂತೆ ಸಭಿಕರ ಅಂತರ್ಯದಲ್ಲಿ ಭಾವೋದ್ವೇಗವಿದ್ದರೂ ಸಭೆಯಲ್ಲಿ ಮೌನ ಆವರಿಸಿತು. ನನ್ನ ವಂಶವಾಹಿಗಳು ಈ ಸಭಿಕರ ಅಂತರ್ಯದಲ್ಲಿ ಭಾವೋದ್ವೇಗದಲ್ಲಿ ಪಾಲ್ಗೊಂಡಿದ್ದವೆ?

ಫೇರೋ (ಈಜಿಪ್ಟಿನ ದೊರೆ) ಮುದುಕನಾಗಿ ಸಾವನ್ನು ಸಮೀಪಿಸಿದ್ದ. ಅವನ ಶವ ಸಂಸ್ಕಾರಕ್ಕಾಗಿ ಬೇಗ ಬೇಗ ಭಾರಿ ಪಿರಮಿಡ್ ನಿರ್ಮಿಸಲು ಸಾವಿರಾರು ಗುಲಾಮ ಕೆಲಸಗಾರರನ್ನು ನೇಮಿಸಲಾಗಿದ್ದಿತು. ನಿರ್ಮಾಣ ಕಾರ್ಯ ಬಹುಬೇಗ ಮುಗಿಯಬೇಕಿದ್ದಿತು. ಗುಲಾಮರು ಅವಿಶ್ರಾಂತವಾಗಿ ದಿನಕ್ಕೆ ೧೬ ಗಂಟೆ ದುಡಿಯುವ ಬಲಾತ್ಕಾರಕ್ಕೊಳಗಾಗಿದ್ದರು. ನನ್ನ ವಂಶವಾಹಿಗಳಲ್ಲಿ ಯಾವುದೇ ಒಂದು ಈ ಗುಲಾಮರ ವಂಶವಾಹಿಗಳ ಭಾಗವಾಗಿದ್ದಿತೇ? ಅಥವಾ ಕೆಲಸ ನಿಧಾನ ಮಾಡಿದಂತೆ ಕಂಡ ಗುಲಾಮನನ್ನು ಛಡಿಯಿಂದ ಥಳಿಸುತ್ತಿದ್ದ ಕ್ರೂರ ಅಧಿಕಾರಿಯ ವಂಶವಾಹಿಯ ಭಾಗವಾಗಿದ್ದಿತೆ? ಫೇರೋ ಕುಟುಂಬದ ಗಂಡಸರು ರಾಜಕುಟುಂಬದ ಪಾವಿತ್ರ್ಯತೆಯನ್ನು ಕಾಪಾಡಲೋಸುಗ ತಮ್ಮ ಸೋದರಿಯರನ್ನಷ್ಟೆ ವಿವಾಹವಾಗಬೇಕೆಂಬ ನಂಬಿಕೆ ಆಗ ಬೇರೂರಿದ್ದಿತು. ಇಂಥ ಅಗಮ್ಯ ಗಮನದ ವಿವಾಹವನ್ನು ಕೆಲವೇ ಪೀಳಿಗೆಗಳವರೆಗೆ ಆಚರಣೆಗೆ ತಂದರೂ ಸಹ ಬಹು ವಿಪತ್ಕಾರಿ ಪರಿಣಾಮಗಳನ್ನು ಉಂಟುಮಾಡುವುದೆಂದು ತಳಿ ಶಾಸ್ತ್ರಜ್ಞರು ಹೇಳುತ್ತಾರೆ. ಅಂತಹ ವಿವಾಹದಿಂದ ಹುಟ್ಟಿದ ಮಕ್ಕಳು ಆರೋಗ್ಯವಂತ ಜೀವನ ನಡೆಸಲು ಅಸಮರ್ಥರಾಗಿರುತ್ತಾರೆ. ಅಂತಹ ವಿವಾಹವು ಬಹು ಪ್ರತಿಭೆಯ ಲಾವಣ್ಯಯುತ ಕ್ಲಿಯೋಪಾತ್ರಳಂಥ, ಶಾರೀರಿಕವಾಗಿಯೂ ಮಾನಸಿಕವಾಗಿಯೂ ಬಲಶಾಲಿಗಳಾದಂಥ ಮಕ್ಕಳಿಗೆ ಎಂದೂ ಜನ್ಮ ನೀಡಲಾರದು. ಹಾಗಾಗಿ ಕ್ಲಿಯೋಪಾತ್ರಳು ಅವಳ ತಾಯಿ ರಾಣಿಯ ಹಾಗೂ ದೃಢಕಾಯನಾದ ಸುಂದರನಾದ ಗುಲಾಮನೊಬ್ಬನ ಸಂಗಮನದಿಂದ ಜನಿಸಿದವಳಾಗಿರಬಹುದೆ? ನನ್ನ ವಂಶವಾಹಿಗಳು ಈ ಅತ್ಯಪಾಯಕಾರಿ ರಾಜದ್ರೋಹ ಚರ್ಯೆಯಲ್ಲಿ ಯಾವುದೇ ರೀತಿಯಲ್ಲಾದರೂ ಭಾಗವಹಿಸಿದ್ದಿರಬಹುದೆ?

ನನ್ನ ಜೀವಕೋಶಗಳಲ್ಲಿ ವಾಸವಾಗಿರುವ ಹೆಚ್ಚಿನ ವಂಶವಾಹಿಗಳು ಈಗ ಮಿಲಿಯಾಂತರ ವರ್ಷಗಳಿಂದ ಹೀಗೆಯೇ ಇದ್ದುಕೊಂಡು ಬಂದಿವೆ. ಅಲ್ಲಿ-ಇಲ್ಲಿ ಕೆಲವು ವಂಶವಾಹಿಗಳಲ್ಲಿನ ಅಂಗಭಾಗಗಳು ಬೇರೆಯಾಗಿರಬಹುದು. ಹಾಗಾಗಿ ನನ್ನ ಹೆಚ್ಚಿನ ವಂಶವಾಹಿಗಳು ೫೦ ಮಿಲಿಯನ್ ವರ್ಷಗಳ ಹಿಂದೆ, ಹೋಮೊ ಸೇಪಿಯನ್‌ರು ಕಾಣಿಸಿಕೊಂಡು ಜೀವವಲಯ ಎಂದು ನಾವು ಕರೆಯುವಂಥ ನಮ್ಮ ಭೂಮಿಯ ಜೀವಸಂರಕ್ಷಕ ತೆಳು ಹೊರಪದರವನ್ನು ಅವಿಪರ್ಯಾಯವಾಗಿ ಬದಲಿಸತೊಡಗುವುದಕ್ಕೂ ಮುನ್ನ ಹೆಚ್ಚು ಕಮ್ಮಿ ಈಗ ಇದ್ದಂತೆಯೇ ಇದ್ದವು. ನನ್ನ ಇಂದಿನ ವಂಶವಾಹಿಗಳು ಆ ಪ್ರಾಚೀನ ಕಾಲದ ತಮ್ಮ ಮಕ್ಕಳನ್ನೇ ನುಂಗುತ್ತಿದ್ದ ಮೃಗೀಯ ಮಾನವರ ವಂಶವಾಹಿಗಳ ನಕಲುಗಳಾಗಿದ್ದರೂ ಇರಬಹುದು.

ಒಟ್ಟಿನಲ್ಲಿ ಜೀವ, ನಿರ್ದಿಷ್ಟವಾಗಿ ಸಂತಾನೋತ್ಪತ್ತಿ ಒಂದು ಅದಕ್ಷ ಹಾಗೂ ವ್ಯರ್ಥ ವ್ಯವಹಾರ. ಕಾಡಿನಲ್ಲಿರುವ ಹುಣಿಸೆಮರವೊಂದು ಪ್ರತಿ ವರ್ಷವೂ ಹತ್ತಾರು ಸಾವಿರ ಬೀಜಗಳನ್ನು ಉತ್ಪಾದಿಸುತ್ತದೆ. ಇವುಗಳ ಪೈಕಿ ಕೊನರುವುದು ಕೆಲವಷ್ಟೆ. ಅಂತೆಯೇ ಮಾನವರಲ್ಲೂ ಸಂಭೋಗ ಸಮಯದಲ್ಲಿ ಹೊರಬೀಳುವ ರೇತಸ್ಸಿನಲ್ಲಿ ಒಂದೆರಡು ರೇತ್ರಾಣುಗಳಷ್ಟೇ ಹೊಸ ಪೀಳಿಗೆಗೆ ಜನ್ಮ ನೀಡಬಲ್ಲವು. ನಾನು ಹುಟ್ಟಿದ್ದೂ ಹಾಗೆಯೇ. ಹತ್ತು ಲಕ್ಷದ ಹತ್ತು ಲಕ್ಷದ ಹತ್ತುಲಕ್ಷ ರೇತ್ರಾಣುಗಳಲ್ಲೊಂದು ಬದುಕಿ ಉಳಿದುದರ ಫಲವಾಗಿ ನಾನು ಜನ್ಮ ತಾಳಿದೆ. ನನಗೆ ಜನ್ಮ ನೀಡಿದ ರೀತಿ [illegible] ಬೇರೆ [illegible] [illegible] [illegible] [illegible] [illegible] [illegible] [illegible] [illegible]

ವಂಶವಾಹಿಗಳು [illegible] ಬಹುಮಟ್ಟಿಗೆ ಈ ಭೂಮಂಡಲವನ್ನೆ [illegible] ಹಾಗೂ ಬ್ರಹ್ಮಾಂಡಕ್ಕೆ [illegible] ವಿಭಿನ್ನ ಜೀವನ ವಿಧಾನ, ವಿಭಿನ್ನ ಸಂಸ್ಕೃತಿಗಳನ್ನು [illegible] ನಮ್ಮ ಭೂಮಂಡಲದ ಎಲ್ಲ ಮೂಲೆ ಮೂಲೆಗಳಲ್ಲೂ ಹಾಸಿವೆ ಹಾಗೂ ಖಂಡಾಂತರಗಳ ಚಲನೆಯ ಅನೇಕ ಭೂ ವೈಜ್ಞಾನಿಕ ಘಟನೆಗಳನ್ನು ಕಂಡಿವೆ. [illegible] ಕ್ರಿಯಾವಿಧಿಗಳಲ್ಲೂ ಸಂತಾನಶೀಲ [illegible] ಭಾಗವಹಿಸಿವೆ. ತುಂಬ ರಹಸ್ಯಾತ್ಮಕ ಆಕರಗಳಿಂದ ಬಂದು ಒಂದುಗೂಡಿ ನನ್ನ ವ್ಯಕ್ತಿತ್ವ ಹಾಗೂ ಹೆಸರನ್ನುಳ್ಳಂಥ ಈ ಯಂತ್ರವನ್ನು ನಿರ್ಮಿಸಿವೆ. ನನ್ನ ವಂಶವಾಹಿಗಳು ಕಂಡಿರುವಂಥ ಸ್ಥಳಗಳ ಘಟನೆಗಳ ಅತ್ಯಂತ ಹ್ರಸ್ವ ಭಾಗವನ್ನೂ ಎಂಥದೇ ಅಗಾಧ ಕಲ್ಪನಾಶಕ್ತಿ ಅಥವಾ ಹಗಲುಗನಸುಗಳಿಂದಲೂ ಊಹಿಸಿ ತಿಳಿಯುವುದು ಅಸಾಧ್ಯ. ಇದು ಬಹು ಭಾರಿ ವಿಲಕ್ಷಣವಲ್ಲವೇ? ಆದರೆ ತಾಳಿ, ಮಾನವ ವಂಶವಾಹಿ ಸಂಕುಲವನ್ನು ಸಂಪೂರ್ಣವಾಗಿ ಅನುಕ್ರಮಗೊಳಿಸಿ ವಿಶ್ಲೇಷಿಸಿದಾಗ ಹೊರಬೀಳುವ ಸತ್ಯ ಸಂಗತಿಗಳು ಈ ಎಂಥವೇ ಅದ್ಭುತ ವಿಲಕ್ಷಣಗಳನ್ನೂ ಖಂಡಿತ ಮೀರಿಸಲಿರುವುವು.

ಪ್ರೊ॥ ಎಂ. ಆರ್. ಎನ್. ಮೂರ್ತಿ
ಅಣು ಜೀವಭೌತ ವಿಜ್ಞಾನ ಘಟಕ, ಭಾರತೀಯ ವಿಜ್ಞಾನ ಸಂಸ್ಥೆ,
ಬೆಂಗಳೂರು

(ಈ ಲೇಖನವನ್ನು ಕನ್ನಡ ರೂಪಕ್ಕೆ ತರುವುದರಲ್ಲಿ ಸಹಕಾರ ನೀಡಿದ ಶ್ರೀ ಕೆ. ಎಲ್. ಗೋಪಾಲಕೃಷ್ಣರಾವ್ ಅವರಿಗೆ ನಾನು ಕೃತಜ್ಞ. ಲೇ.)

ಸಾದರ ಸ್ವೀಕಾರ

ನಾನು, ಹಕ್ಕಿ, ಧರ್ಮ (ಕವನ ಸಂಕಲನ)
ಅರ್ಜುನ ಕೋರಟಕರ
ಪುಟ: ೮೬ **ಬೆಲೆ:** ರೂ. ೪೦
ಅರ್ಜುನ ತಾ. ಕೋರಟಕರ, ಜಮಖಂಡಿ-೫೮೭೩೦೧, ಬಾಗಲಕೋಟ ಜಿಲ್ಲೆ

ಕನ್ನಡ ಕುಮಾರಸಂಭವ (ಕಾವ್ಯ) *ಸಿ. ಪಿ. ಕೆ.*
ಪುಟ: ೧೦೮ **ಬೆಲೆ:** ರೂ. ೬೦
ಚಿತ್ರಭಾನು ಪ್ರಕಾಶನ, ೨೨೬೫/೧೯, 'ಭಾರತಿ' ೬ನೇ ಕ್ರಾಸ್, ವಿನಾಯಕ ನಗರ, ಮೈಸೂರು-೫೭೦ ೦೧೨

ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ (ವ್ಯಾಕರಣ)
ಡಿ. ಎನ್. ಶಂಕರ ಭಟ್
ಪುಟ: ೨೪೦ **ಬೆಲೆ:** ರೂ. ೭೫
ಭಾಷಾ ಪ್ರಕಾಶನ, ಮೈಸೂರು. ವಿತರಣೆ: ಅತ್ರಿ ಬುಕ್ ಸೆಂಟರ್, ೪, ಶರಾವತಿ ಕಟ್ಟಡ, ಬಲ್ಮಠ, ಮಂಗಳೂರು-೫೭೫ ೦೦೧

ಮೂಡಣದ ಹಾಡುಗಳು (ಕವನ ಸಂಕಲನ)
ನಿಂಗು ಸೊಲಗಿ
ಪುಟ: ೫೮ **ಬೆಲೆ:** ರೂ. ೨೦
ಸೃಷ್ಟಿ ಪ್ರತಿಸೃಷ್ಟಿ ಸಾಹಿತ್ಯ ವೇದಿಕೆ, ಮುಂಡರಗಿ- ೫೮೨೧೧೮ ಗದಗ ಜಿಲ್ಲೆ

ಮುತ್ತು ಮೆಣಸು (ಕವನ ಸಂಕಲನ)
ರತ್ನಂ ಪನ್ನೀರ್ ಸೆಲ್ವಂ
ಪುಟ: ೬೪ **ಬೆಲೆ:** ರೂ.೩೦
ದುಃಖ ನಿವಾರಣ ಕೇಂದ್ರ, 'ಸಿರಿಗಂಧ', ೬೪೫, ಟಿ.ಕೆ. ಬಡಾವಣೆ, ಸರಸ್ವತಿಪುರಂ; ಮೈಸೂರು

ಬಾನಂಗಳಕೆ ಬಾ ಗೆಳತಿ (ಕವನ ಸಂಕಲನ)
ಸಹ್ಯಾದ್ರಿತನಯ
ಪುಟ: ೭೮ **ಬೆಲೆ:** ರೂ. ೩೦
ಕಲಾಗಂಗಾಧರ ಪ್ರಕಾಶನ, ಚಡಚಣ-೫೮೬೨೦೫ (ಧಾರವಾಡ)

ಸಂಶೋಧನ ಸ್ವರೂಪ (ಲೇಖನ ಸಂಗ್ರಹ)
ಡಾ॥ ಬಿ. ವ್ಹಿ. ಶಿರೂರ
ಪುಟ: ೨೬೬ **ಬೆಲೆ:** ರೂ. ೧೦೦
ಅನ್ನಪೂರ್ಣ ಪ್ರಕಾಶನ, ನಂ. ೧೩, ಮಂಜುನಾಥನಗರ, ಹುಬ್ಬಳ್ಳಿ

ಲಂಕೇಶ ನೆನಪು (ಲೇಖನ ಸಂಗ್ರಹ)
ಸಂ. ನರೇಂದ್ರ ರೈ ದೇರ್ಲ
ಪುಟ: ೧೫೪ **ಬೆಲೆ:** ರೂ. ೭೫
ಕರ್ನಾಟಕ ಸಂಘ, ಪುತ್ತೂರು-೫೭೪೨೦೧-(ದ.ಕ)

ಜಾನಪದ ಕ್ರೀಡೆ (ಲೇಖನ ಸಂಗ್ರಹ)
ಡಾ॥ ಎಲ್. ಆರ್. ಹೆಗಡೆ
ಪುಟ: ೯೮ **ಬೆಲೆ:** ರೂ. [illegible]
ಡಾ॥ ಎಲ್. ಆರ್. ಹೆಗಡೆ ಕೃತಿ ಪ್ರಕಾಶನ ಸಮಿತಿ, ಶಿರಸಿ

ವಿಶೇಷ ಉಡುಪುಗಳ ವಿನ್ಯಾಸಕಿ ದುರ್ಗಾ ಗಂಗೂಲಿ

ನೇಮಿಚಂದ್ರ

ಇತ್ತೀಚೆಗೆ ದಿಲ್ಲಿಗೆ ಹೋದಾಗ ನಾನು ಹುಡುಕಿ ಹೋಗಿ ಓರ್ವ 'ಡ್ರೆಸ್ ಡಿಸೈನರ್' ಅನ್ನು ಭೇಟಿಯಾದೆ. 'ಡ್ರೆಸ್ ಡಿಸೈನಿಂಗ್' ಎಂದೊಡನೆ ನಮಗೆ ಹೊಳೆಯುವುದು ಥಳಥಳಿಸುವ ರೂಪದರ್ಶಿಗಳು, ಸೌಂದರ್ಯ ರಾಣಿಯರು, ಹೇರಳ ಹಣ ತರುವ ಗ್ಲಾಮರ್ ಜಗತ್ತು, ದಿನವೆಲ್ಲ ಬರುವ 'ಎಫ್' ಟಿ.ವಿ. ಚಾನೆಲ್ ನೋಡಿದರೆ



ಸೊಂಟದ ಮೇಲೆ ಸ್ವಾಧೀನವಿಲ್ಲದ ಮಗುವಿಗೆ ಸಹಾಯಕ ಸಾಧನ

ನಿಮಗೆ ಕಾಣಸುವುದು ಚಿತ್ರ ವಿಚಿತ್ರ ವಿನ್ಯಾಸಗಳು, ಮುಚ್ಚುವುದಕ್ಕಿಂತ ಬಿಚ್ಚಿರುವುದೇ ಹೆಚ್ಚಾದ, ಗ್ಲಾಮರ್ ಒಂದೇ ಉದ್ದೇಶವಾದ ಉಡುಪುಗಳು.

ಆದರೆ ದಿಲ್ಲಿಯ ಲೇಡಿ ಇರ್ವಿನ್ ಕಾಲೇಜಿನಲ್ಲಿ, ಚಿತ್ತರಂಜನ್ ಪಾರ್ಕ್‌ನಲ್ಲಿಯ ತುಂಬು ಕುಟುಂಬದ ಮನೆಯಲ್ಲಿ ನಾನು ಭೇಟಿಯಾದ ಡ್ರೆಸ್ ಡಿಸೈನರ್ ಡಾ॥ ದುರ್ಗಾ ಗಂಗೂಲಿ, ಇಂಥಾ ಗ್ಲಾಮರ್ ಜಗತ್ತಿನಿಂದ ಬಲುದೂರ. ಈಕೆ ಬಲು ವಿಭಿನ್ನ ವಿನ್ಯಾಸಕಿ. ಈಕೆ ಸೌಂದರ್ಯ ರಾಣಿಯರಿಗೆ ಉಡುಪು ವಿನ್ಯಾಸ ಮಾಡಿ ಕಿರೀಟ ಕೊಡಿಸುವ ಸನ್ನಾಹದಲ್ಲಿಲ್ಲ. ಈಕೆಯ ಉಡುಪುಗಳಿಗೆ ಅತ್ಯಂತ ಮಾನವೀಯ ಉದ್ದೇಶವಿದೆ. ಈಕೆ ಅಂಗವಿಕಲರಿಗೆ, ಬುದ್ಧಿಮಾಂದ್ಯರಿಗೆ ಉಡುಪನ್ನು ವಿನ್ಯಾಸ ಮಾಡುತ್ತಾರೆ. ಈಕೆ ''ಅಂಗವಿಕಲರು'' ಎಂಬ ಪದವನ್ನು ಬಳಸುವುದಿಲ್ಲ. ಆಕೆಯ ಮಾತಿನಲ್ಲಿ ಅವರು ''ಸ್ಪೆಷಲ್ [illegible]''. ''ವಿಶೇಷ ಜನರಿಗೆ ವಿಶೇಷ ಉಡುಗೆ'' ಅವರ ಡ್ರೆಸ್ ಡಿಸೈನಿಂಗ್ ಉದ್ದೇಶ.

ನನಗೀಗಲೂ ನೆನಪಿದೆ, ಆಗಷ್ಟೇ ಹುಟ್ಟಿದ ನನ್ನ ಪುಟ್ಟ [illegible] [illegible] [illegible] ಕೊರಳಿನ ತುಂಬು ತೋಳಿನ ಫ್ರಾಕ್ ಕೊಟ್ಟಿದ್ದರು. ಆ ಪುಟ್ಟ [illegible] [illegible] ತಲೆ ತೂರಿಸಿ ತುಂಬು ತೋಳುಗಳಿಂದ ಕೈ ಕಿತ್ತು ಹೊರತರುವಷ್ಟರಲ್ಲಿ ಸಾಕು ಸಾಕಾಗಿತ್ತು. ನನ್ನ ಗೆಳತಿ ಸ್ಪಾಸ್ಟಿಕ್ ಮಗುವಿಗೆ ಬಟ್ಟೆ ತೊಡಿಸಲು ಪಡುವ ಪಾಡು ಕಂಡಿದ್ದೆ. ಕೈ ಮತ್ತು ಕಾಲುಗಳು ಸ್ವಾಧೀನವಿಲ್ಲದ ಆ ಮಗುವನ್ನು ಬಹಳಷ್ಟು ಬಾರಿ ಬರೀ ಬಟ್ಟೆಯಲ್ಲಿ ಸುತ್ತಿ ಇಟ್ಟದ್ದು ನೋಡಿದ್ದೆ. ಪ್ರತಿಬಾರಿ ಶೌಚಕ್ಕೆ ಚಡ್ಡಿ ಬಿಚ್ಚಿ ತೊಡಿಸುವ ಶ್ರಮವನ್ನು ವಿವರಿಸುವುದು ಕಷ್ಟವಿತ್ತು. ''ಅಂಧರ ಸಂಸ್ಥೆ''ಯಲ್ಲಿ ಕುರುಡು ಮಕ್ಕಳು ಅನೇಕ ಬಾರಿ ಹಿಂದು ಮುಂದಾಗಿ ಬಟ್ಟೆ ತೊಟ್ಟದ್ದು ನೋಡಿದ್ದೆ. ಯಾರಿಗೂ ಈ ಅಂಗವಿಕಲರಿಗೆ ಅನುಕೂಲಕರವಾದ, ಸುಲಭವಾಗಿ ಸ್ವತಃ ಹಾಕಿಕೊಳ್ಳಲು ಸಾಧ್ಯವಾಗುವಂಥಾ ಆರಾಮದ ಉಡುಗೆಯನ್ನು ವಿನ್ಯಾಸ ಮಾಡುವುದು ಹೊಳೆದಿರಲೇ ಇಲ್ಲ. ಯುಕ್ತಾ ಮುಖಿಯ ಡಿಸೈನರ್ ಉಡುಗೆ ಪತ್ರಿಕೆಗಳ ಮುಖಪುಟಗಳ ವಿಷಯವಾಗುತ್ತದೆ; ಆದರೆ ಅಂಗವಿಕಲರಿಗೆ ಉಡುಪು ತಯಾರಿಸುವುದು ಸುದ್ದಿಯಾಗದು. ಯಥೇಚ್ಛ ಸಂಖ್ಯೆಯಲ್ಲಿ 'ಮಾಸ್ ಪ್ರೊಡಕ್ಷನ್' ಮಾಡಿ ಮಾರುಕಟ್ಟೆಗೆ ತಳ್ಳಲಾಗದು. ಹಣ, ಗ್ಲಾಮರ್ ಎರಡೂ ಇಲ್ಲದ ಈ ರಂಗ ಬಹುಶಃ ಯಾರನ್ನೂ ಆಕರ್ಷಿಸಿರಲಿಲ್ಲ. ಆದರೆ ಇಂಥಾ ವಿಶೇಷ ಕಾರ್ಯಕ್ಕೆ ದುರ್ಗಾ ಬಾಲ್ಯದಲ್ಲಿಯೇ ಕೈ ಹಾಕಿದ್ದರು. ಹವ್ಯಾಸವಾಗಿ ಆರಂಭವಾದ ದುರ್ಗಾರವರ ಉಡುಪಿನ ವಿನ್ಯಾಸ ನಂತರ ವೃತ್ತಿಯಾಗಿ ಹೊಸ ತಿರುವು ಕಂಡಿತು.

ದುರ್ಗಾ ಹುಟ್ಟಿ ಬೆಳೆದದ್ದೆಲ್ಲ ದಿಲ್ಲಿಯಲ್ಲಿ. ಓದಿದ್ದು ಲೇಡಿ ಇರ್ವಿನ್ ಶಾಲೆಯಲ್ಲಿ, ನಂತರ ಸೇರಿದ್ದು ಲೇಡಿ ಇರ್ವಿನ್ ಕಾಲೇಜು. ಇಲ್ಲಿ ಗೃಹ ವಿಜ್ಞಾನದಲ್ಲಿ ಬಿ.ಎಸ್ಸಿ. ಮಾಡಿದರು. ಬಿ.ಎಸ್ಸಿ.ಯಲ್ಲಿ ಡಿಸ್ಟಿಂಕ್ಷನ್ ಪಡೆದ ದುರ್ಗಾ ಅವರಿಗೆ ಕಾಲೇಜು ಎಂ.ಎಸ್ಸಿ. ಮಾಡಲು ಅನುಕೂಲ ಒದಗಿಸಿತು. ಆ ಕಾಲದಲ್ಲಿ ದಿಲ್ಲಿಯಲ್ಲೆಲ್ಲೂ ''ಟೆಕ್ಸ್‌ಟೈಲ್ ಅಂಡ್ ಕ್ಲೋತಿಂಗ್'' ವಿಷಯದಲ್ಲಿ ಸ್ನಾತಕೋತ್ತರ ಪದವಿ ಇರಲಿಲ್ಲ. ಬರೋಡಾದ 'ಮಹಾರಾಜಾ ಸಯ್ಯಾಜಿ ರಾವ್ ವಿಶ್ವವಿದ್ಯಾಲಯ'ದಲ್ಲಿ ವಿದ್ಯಾರ್ಥಿವೇತನ ಪಡೆದು ದುರ್ಗಾ ಓದಲು ಹೋದರು. ಎಂ.ಎಸ್ಸಿ. ಮುಗಿಸಿ ಹಿಂತಿರುಗಿ ಬಂದು ತಾವು ಓದಿದ ಲೇಡಿ ಇರ್ವಿನ್ ಕಾಲೇಜಿನ ''ಟೆಕ್ಸ್‌ಟೈಲ್ ಅಂಡ್ ಕ್ಲೋತಿಂಗ್'' ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇರಿದರು.

ಹನ್ನೆರಡು ಮಕ್ಕಳ ಮನೆಯಲ್ಲಿ ಹಿರಿಯ ಮಗಳಾಗಿ ಹುಟ್ಟಿದ ದುರ್ಗಾರವರದು ತುಂಬು ಕುಟುಂಬ. ಅವರ ಕೊನೆಯ ತಮ್ಮನಿಗೆ ಬಲ ಕೈ ಮತ್ತು ಕಾಲು ಸ್ವಾಧೀನವಿರಲಿಲ್ಲ. ಈ ತಮ್ಮ ಪ್ಯಾಂಟು , ಶರಾಯಿ ಮತ್ತು ಒಳ ಉಡುಪು ತೊಡಲು ಹೆಣಗುವುದನ್ನು ಕಂಡಿದ್ದರು. ಬೆಳೆದಂತೆ ಸಹಾಯಕ್ಕೆ ಇತರರನ್ನು ಅವಲಂಬಿಸುವುದು ಮತ್ತಷ್ಟು ಸಂಕೋಚ, ಮುಜುಗರ ವಿಷಯವಾಗಿತ್ತು. ಅಂಗವಿಕಲರಿಗೆ ಸ್ವಾವಲಂಬನೆ ನೀಡಬಲ್ಲ ಉದ್ದೇಶ ಬಹುಶಃ ದುರ್ಗಾರವರ ಮನಸ್ಸಿನಲ್ಲಿ ಆಗಲೇ ಮೂಡಿತ್ತು. ಕೈಕಾಲು ನೆಟ್ಟಗಿರುವ ನಾವು ಉಡುಪು ತೊಡುವ ಕ್ರಿಯೆ ಅಂಗವಿಕಲರಿಗೆ, ಪಾರ್ಶ್ವವಾಯು ಬಡಿದವರಿಗೆ, ಸೊಂಟದ ಮೇಲೆ ಅಥವಾ ಕೆಳಗೆ ಸ್ವಾಧೀನ ಕಳಕೊಂಡವರಿಗೆ ಎಷ್ಟು ಪ್ರಯಾಸದ್ದು ಎಂದು ಊಹಿಸಲಾರೆವು. ಕೈಯ ಸ್ವಾಧೀನವಿಲ್ಲದ ಮಗುವಿಗೆ ಕೈ ತೂರಿಸುವುದು ಸುಲಭದ್ದಲ್ಲ. ಪ್ರತಿ ಬಾರಿ ಶೌಚಕ್ಕೆ ಹೋದಾಗ ಪ್ಯಾಂಟು ತೆಗೆದು ಮತ್ತೆ ಹಾಕುವುದು ಕಷ್ಟದ ಕೆಲಸ. ತಮ್ಮದೇ ಆದ ವೃತ್ತಿ ಹಿಡಿದು ಆರ್ಥಿಕವಾಗಿ ಸ್ವಾವಲಂಬಿಗಳಾದ ಅಂಗವಿಕಲರನ್ನೂ ದಿನದಿನದ ಉಡುಪು ತೊಡುವ ಕ್ರಿಯೆ ಕಾಡಿಸುತ್ತದೆ, ಪರಾವಲಂಬಿಗಳನ್ನಾಗಿಸುತ್ತದೆ. ಉಡುಪು ತೊಡಿಸುವಂಥಾ ಅತ್ಯಂತ ವೈಯಕ್ತಿಕ ಕೆಲಸಕ್ಕೆ ತನ್ನವರು ಜೊತೆ ಇರದೆ ಅಂಗವಿಕಲರು ಹೊರ ಜಗತ್ತಿನಲ್ಲಿ ಮುನ್ನುಗ್ಗಲಾರದ ಪ್ರಸಂಗಳಿವೆ. ಅಂಗವಿಕಲ ಮಕ್ಕಳನ್ನು ನೋಡಿಕೊಳ್ಳುವವರಿಗೂ

ದುರ್ಗಾ ಗಂಗೂಲಿ, ಪತಿಯೊಡನೆ



ಸಾಮಾನ್ಯ ಉಡುಗೆಗಳನ್ನು ತೊಡಿಸುವುದು, ತೆಗೆಯುವುದು ಅತಿ ಪ್ರಯಾಸದ ಕೆಲಸ. ಅಂಗವಿಕಲರ ಅಗತ್ಯಗಳು ದುರ್ಗಾರವರಿಗೆ ಅತ್ಯಂತ ನಿಕಟವಾಗಿ ಪರಿಚಯವಾಗಿತ್ತು. ಅಂಗವಿಕಲರ ಸಂಸ್ಥೆಗಳಿಗೆ ಸ್ಪಾಸ್ಟಿಕ್ ಸೊಸೈಟಿಗಳಿಗೆ ಭೇಟಿಕೊಟ್ಟ ದುರ್ಗಾ, ಅವರ ಅಗತ್ಯಗಳನ್ನು ಮತ್ತಷ್ಟು ಅರಿತರು.

ದುರ್ಗಾ ವಿವಾಹವಾದದ್ದು ಬೆಂಗಾಲಿ ಯುವಕನನ್ನು. ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ಕೆಲಸ ಮಾಡುವ ಪತಿಯೊಡನೆ ಅವರಿಗೆ ಬೆಹ್ರೇನ್, ಲಂಡನ್‌ಗಳಲ್ಲಿ ಕೆಲವು ವರ್ಷ ಕಳೆಯುವ ಅವಕಾಶ ದೊರೆಯಿತು. ಲಂಡನ್‌ನಲ್ಲಿ ಇದ್ದ ಸಮಯ, ದುರ್ಗಾ ''ಡಿಸೆಬಿಲಿಟಿ ಅವೇರ್‌ನೆಸ್ ಕೋರ್ಸ್'' ಮಾಡಿದರು. ಲಂಡನ್‌ನಲ್ಲಿ ಅಂಗವಿಕಲರ ಅಗತ್ಯಗಳ ಬಗ್ಗೆ ಇದ್ದ ಜಾಗೃತಿಯನ್ನು ಗಮನಿಸಿದಾಗ, ಅಂಥಾ ವಿಶೇಷ ಉಡುಪುಗಳು ಅಂಗಡಿಯಲ್ಲಿ ಸಿಗುವುದನ್ನು ನೋಡಿದಾಗ, ಬಾಲ್ಯದಿಂದಲೇ ಅಂಗವಿಕಲರ ಅಗತ್ಯಗಳ ಅರಿವಿದ್ದ ದುರ್ಗಾ ಅವರಿಗೆ ಮತ್ತಷ್ಟು ಸ್ಫೂರ್ತಿ ಸಿಕ್ಕಿತು. ಭಾರತದಲ್ಲೂ ಇಂಥಾ ಉಡುಪುಗಳ ಅಗತ್ಯವಿದೆ ಎನಿಸಿತು. ಭಾರತಕ್ಕೆ ಹಿಂತಿರುಗಿದ ದುರ್ಗಾ, ಅಂಗವಿಕಲರಿಗೆ ವಿಶೇಷ ಉಡುಪುಗಳನ್ನು ವಿನ್ಯಾಸ ಮಾಡುವತ್ತ ತಮ್ಮ ಗಮನವನ್ನು ಹರಿಸಿದರು. ಇವರು ಪಿಎಚ್.ಡಿ. ಗೆ ಆರಿಸಿಕೊಂಡ ವಿಷಯ, ''ಸ್ಪೆಷಲ್ ವೇರ್ ಫಾರ್ ಸ್ಪೆಷಲ್ ಪೀಪಲ್''.

ದುರ್ಗಾ ಅವರು ಉಡುಪನ್ನು ಕೋಣೆಯಲ್ಲಿ ಕುಳಿತು ವಿನ್ಯಾಸ ಮಾಡುವುದಿಲ್ಲ. ಒಬ್ಬೊಬ್ಬ ಅಂಗವಿಕಲರ ಅಗತ್ಯವೂ ಬೇರೆ ಬೇರೆಯಾಗಿರುತ್ತದೆ. ಯಾರಿಗೋ ಬಲ ಕೈ ಸ್ವಾಧೀನದಲ್ಲಿರಬಹುದು, ಇನ್ಯಾರಿಗೋ ಎಡ ಕೈ. ಯಾರಿಗೋ ಸೊಂಟದ ಕೆಳಗೆ ನಿಯಂತ್ರಣ ಇಲ್ಲದಿರಬಹುದು. ಯಾರಿಗೋ ಕೇವಲ ಎರಡು ಬೆರಳುಗಳಲ್ಲಿ ಕೊಂಚ ಶಕ್ತಿ ಇರಬಹುದು. ಆಯಾ ವ್ಯಕ್ತಿಯ ದೈಹಿಕ ಬಲವನ್ನು ಮೊದಲು ಅಧ್ಯಯನ ಮಾಡುತ್ತಾರೆ. ಆಯಾ ವ್ಯಕ್ತಿಯ ತಂದೆ ತಾಯಿಗಳೊಡನೆ, ವೈದ್ಯರು, ಥೆರಪಿಸ್ಟ್ ಜೊತೆಯಲ್ಲಿ ಮಾತನಾಡಿ ಆತನ ಅಗತ್ಯಗಳನ್ನು ಗುರುತುಹಾಕಿಕೊಳ್ಳುತ್ತಾರೆ. ನಂತರ ಆಯಾ ವ್ಯಕ್ತಿಯ ವಿಶೇಷ ಅಗತ್ಯಕ್ಕೆ ತಕ್ಕಂತೆ ಉಡುಪನ್ನು ವಿನ್ಯಾಸ ಮಾಡುತ್ತಾರೆ. ಅಂಗವಿಕಲರ ಸಂಸ್ಥೆಗಳ ನಿಕಟ ಸಂಪರ್ಕದಲ್ಲಿರುವ ದುರ್ಗಾ, ಅವರ ಅಗತ್ಯಗಳನ್ನು ಗಮನಿಸುತ್ತಾರೆ. ಅವರು ವಿನ್ಯಾಸ ಮಾಡುವ ಉಡುಪುಗಳು ಅಂಥಾ ಸಂಸ್ಥೆಗಳಲ್ಲಿ ಪರಿಶೀಲನೆಗೆ ಒಳಪಡುತ್ತವೆ. ಅಗತ್ಯದ ಮಾರ್ಪಾಡುಗಳನ್ನು ಅಳವಡಿಸಲಾಗುತ್ತದೆ.



ಲೇಡಿ ಇರ್ವಿನ್ ಕಾಲೇಜಿನಲ್ಲಿ ದುರ್ಗಾ ಗಂಗೂಲಿ, ತಮ್ಮ ವಿದ್ಯಾರ್ಥಿನಿಯರೊಡನೆ

ದುರ್ಗಾ ತಮ್ಮ ಮಲಗುವ ಕೋಣೆಗೆ ಕರೆದೊಯ್ದು, ಅಲಮಾರಿನ ತುಂಬಾ ಒಟ್ಟಿದ್ದ ಉಡುಪುಗಳನ್ನು ಗುಡ್ಡೆ ಹಾಕಿದರು. ಒಂದು ಸ್ಕರ್ಟ್ ಎತ್ತಿಕೊಂಡೆ. ನೋಡಲು ನಾರ್ಮಲ್ ಕಾಣುವ ಈ ಸ್ಕರ್ಟಿನ ಹಿಂಭಾಗ ಮೇಲೆತ್ತಿ [illegible]ಗಿಸುವಂತಿತ್ತು. ಚಡ್ಡಿಗಳಲ್ಲಿ ಶೌಚಕ್ಕೆ ಅನುಕೂಲವಾಗಿ, ತಳ ಭಾಗ ಮಾತ್ರ ತೆರೆದು ಮುಚ್ಚುವಂತಿತ್ತು. ಮಗುವಿಗೆ ಪ್ಯಾಂಟಿನಲ್ಲಿ, ಇಲ್ಲ ಲಂಗದಲ್ಲಿ ಹಿಂಭಾಗ ಅಥವಾ ಮುಂಭಾಗ ಪ್ಯಾಂಟ್ ಬಿಚ್ಚದೆಯೇ ಎತ್ತಿಕೊಳ್ಳುವಂತಿತ್ತು. ಉದ್ದನೆಯ ತೋಳಿನಲ್ಲಿ ಕೈ ತೂರಿಸಲಾಗದಿರುವ ಅಂಗವಿಕಲರಿಗೆ, ಬೇರ್ಪಡಬಲ್ಲ ತೋಳುಗಳಿದ್ದ ಶರಾಯಿಗಳಿದ್ದವು. ಎರಡು ತುಂಡುಗಳ ಫ್ರಾಕ್, ಒಂದು ತುಂಡಿನ ಮೇಲೆ ಮಗುವನ್ನು ಮಲಗಿಸಿ ಇನ್ನೊಂದನ್ನು ಹೊದಿಸಿ ಪಕ್ಕೆಗಳಲ್ಲಿರುವ ಮೃದುವಾದ ವೆಲ್ಕ್ರೋ ಅಥವಾ ಗುಂಡಿಗಳ ಸಹಾಯದಿಂದ ಜೋಡಿಸಬಹುದಿತ್ತು. ಗುಂಡಿ ಹಾಕಿಕೊಳ್ಳಲಾರದವರಿಗೆ ವಿಶೇಷ ದಾರದ ಲಾಡಿಗಳಿದ್ದವು. ಲೂಪ್‌ಗಳಿದ್ದವು. ಎಳೆದು ತೆಗೆಯುವ, ಇಲ್ಲ ಮೃದುವಾದ ವೆಲ್ಕ್ರೋ ಬಳಸಿ ಒತ್ತಿದರೆ ಕೂಡಿಕೊಳ್ಳುವಂಥಾ ಉಡುಗೆಗಳಿದ್ದವು.

ಸಾಕಷ್ಟು ಪ್ರವಾಸ ಮಾಡಿರುವ ದುರ್ಗಾ ತಾವು ಹೋದಲ್ಲೆಲ್ಲಾ ಆ ಜಾಗದ ಉಡುಪುಗಳ ವೈಶಿಷ್ಟ್ಯವನ್ನು ಗಮನಿಸುತ್ತಾರೆ. ಗುರುತು ಹಾಕಿಕೊಳ್ಳುತ್ತಾರೆ. ಒಮ್ಮೆ ಹಿಮಾಲಯದ ಗುಡ್ಡಗಾಡುಗಳ ಪಹಾಡಿ ಜನರು ಉದ್ದನೆಯ ನಿಲುವಂಗಿಯ ಒಳಗೆ ಹಾಕುವ ಪೈಜಾಮ ಗಮನಿಸಿದಾಗ, ಸಾಧಾರಣ ಕಾಣುವ ಅವರ ಪೈಜಾಮದಲ್ಲಿ ಶೌಚ ಭಾಗದಲ್ಲಿ ದೊಡ್ಡ ರಂಧ್ರವಿರುವುದನ್ನು ನೋಡಿದರು. ವಿಪರೀತದ ಚಳಿಯ ಪರಿಸರದಲ್ಲಿ ಪೈಜಾಮ ಬಿಚ್ಚಿ ಶೌಚಕ್ಕೆ ಹೋಗುವುದು ಪ್ರಯಾಸದ ಕೆಲಸ. ಹಾಗಾಗಿ ಈ ರೀತಿಯ ವಿನ್ಯಾಸ ವಿರಬೇಕು. ದುರ್ಗಾರವರಿಗೆ ತಟ್ಟನೆ ಹೊಸ ಉಪಾಯ ಹೊಳೆದಿತ್ತು. ಇದೇ ವಿನ್ಯಾಸವನ್ನು [illegible] [illegible] [illegible] [illegible] ಬಿಚ್ಚ[illegible]

ದುರ್ಗಾ ಗಂಗೂಲಿ, ತಮ್ಮ ವಿದ್ಯಾರ್ಥಿನಿಯರೊಡನೆ



[illegible]ಬಲ್ಲ ಗುಂಡನೆಯ ತುಂಡನ್ನು ಆ ಭಾಗಕ್ಕೆ ಅಳವಡಿಸಿ ವಿನ್ಯಾಸ ಮಾಡಿದರು. ಇದೀಗ ಅಂಗವಿಕಲರು ಪೈಜಾಮ ಬಿಚ್ಚದೆ, ಶೌಚಕ್ಕೆ ಹೋಗಬಹುದಾಯಿತು. ತೊಡಲು ಸುಲಭವಾದ, ತೊಟ್ಟಾಗ ಹಿಂಸೆಯಾಗದೆ ಆರಾಮವಿರುವ, ಶೌಚಕ್ಕೆ ಬಿಚ್ಚಬೇಕಿಲ್ಲದ, ಅನುಕೂಲಕರ ಉಡುಪುಗಳನ್ನು ದುರ್ಗಾ ವಿನ್ಯಾಸ ಮಾಡಿದರು. ಕುರುಡರಿಗೆ ಬಟ್ಟೆಯ ಹಿಂಭಾಗ-ಮುಂಭಾಗ ತಿಳಿಯುವಂಥಾ ವಿನ್ಯಾಸಗಳನ್ನು ಅಳವಡಿಸಿದ್ದಾರೆ.

ಇವರ ಉಡುಪುಗಳ ಇನ್ನೊಂದು ಮುಖ್ಯ ಗುಣ ಅವು ಅಂಗವಿಕಲರಿಗೆ ವಿನ್ಯಾಸ ಮಾಡಿದ್ದಾದರೂ, ಅವು ಸಾಧಾರಣ ವ್ಯಕ್ತಿ ತೊಡುವ ಉಡುಗೆಯಂತೆ ಕಾಣುತ್ತವೆ. ಈ ಬಗ್ಗೆ ದುರ್ಗಾ ವಿಶೇಷ ಜಾಗರೂಕತೆ ವಹಿಸುತ್ತಾರೆ. ಈ ಉಡುಪು ತೊಟ್ಟ ವ್ಯಕ್ತಿ ಹೊರಗೆ ತಿರುಗಾಡುವಾಗ ಆತನ ಉಡುಗೆ ಬೇರೆಯವರ ಉಡುಪುಗಳಿಗಿಂತ ಭಿನ್ನವಾಗಿ ಕಾಣುವುದಿಲ್ಲ. ಬರೀ ಉಡುಪುಗಳಷ್ಟೇ ಅಲ್ಲ ಮಕ್ಕಳ ವಿಶೇಷ ''ಸಹಾಯಕ ಸಾಧನ''ಗಳನ್ನು ದುರ್ಗಾ ವಿನ್ಯಾಸ ಮಾಡಿದ್ದಾರೆ. ಸೊಂಟದ ಮೇಲ್ಭಾಗ ಸ್ವಾಧೀನವಿಲ್ಲದ ಮಗುವಿಗೆ, ಕುರ್ಚಿಯಲ್ಲಿ ಕೂರಿಸಿ, ಕುರ್ಚಿಗೆ ಕಟ್ಟುವಂತೆ, ನೇರ ಕುಳಿತುಕೊಳ್ಳಲು ಅನುಕೂಲವಾದ, ಕಟ್ಟಿದರೆ ಹಿಂಸೆಯಾಗದ, ಮೃದುವಾದ ಪಟ್ಟಿಗಳನ್ನು ತೋರಿಸಿದರು.

ಇದೇ ವರ್ಷ ತಮ್ಮ ಪ್ರಾಧ್ಯಾಪಕ ಕೆಲಸದಿಂದ ನಿವೃತ್ತರಾಗಲಿರುವ ದುರ್ಗಾ ತಮ್ಮ ವಿಶೇಷ ವಿನ್ಯಾಸವನ್ನು ಸದಾಕಾಲಕ್ಕೂ ಮುಂದುವರಿಸಲಿದ್ದಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ ಕೆಳಸ್ತರದಿಂದ ಬಂದ ಹೆಣ್ಣು ಮಕ್ಕಳಿಗೆ ವಿಶೇಷ ಮಕ್ಕಳ ವಿಶೇಷ ಉಡುಗೆಗಳನ್ನು [illegible] ತರಪೇತು ನೀಡುವ ಯೋಜನೆಯನ್ನು ಹಮ್ಮಿಕೊಂಡಿದ್ದಾರೆ. ದುರ್ಗಾರೊಡನೆ ಹಲವು ಗಂಟೆಗಳನ್ನು ಕಳೆದು, ರಾತ್ರಿ ಹತ್ತು ಗಂಟೆಗೆ ಅವರ ಮನೆಯಿಂದ [illegible] ಇಲ್ಲಿಯವರೆಗೂ ಪತ್ರಿಕೆಯಲ್ಲಿ ಸುದ್ದಿಯಾಗದ ''[illegible] ಡಿಸೈನಿಂಗ್''ನ ಮತ್ತೊಂದು ಮುಖ ನನಗೆ ಪರಿಚಯವಾಗಿತ್ತು.

[illegible]

[illegible]

ಬಿಲ್ ಹ್ಯಾಮಿಲ್ಟನ್ - ಅಗಲಿದ ಜೀವವಿಕಾಸ ವಿಜ್ಞಾನಿಗೆ ನಮನ

ವಿನತೆ ಶರ್ಮಾ

ಐದು ವರ್ಷಗಳ ಹಿಂದೆ ನನ್ನದೊಂದು ಹಳೆಯ ವಿಳಾಸಕ್ಕೆ ಪತ್ರ ಬಂದಿತ್ತು - ಒರಾಂಗುಟಾನ್ ಎಂಬ ವಾನರದ ವಿಶಿಷ್ಟ ಭಂಗಿಯ ಫೋಟೋ ಜೊತೆಗೆ ಪರಿಚಯದ ಕೈ ಬರಹ - ''ಈ ಚಿತ್ರ ನನ್ನ ಮೇಜಿನ ಮೇಲಿದ್ದ ಪುಸ್ತಕಗಳ ರಾಶಿಯಲ್ಲಿತ್ತು. ನೀನು ವಾನರ ವರ್ತನೆಯನ್ನು ಅಭ್ಯಾಸ ಮಾಡುತ್ತಿರುವುದರಿಂದ ನಿನಗಿದು ಇಷ್ಟವಾಗುತ್ತದೆ ಎಂದು ಕಳಿಸುತ್ತಿದ್ದೀನಿ. ಈ ವಾನರ ಏನು ಹೇಳುತ್ತಿದೆ (ಸಂಕೇತ) ಎಂದು ನನಗೆ ತಿಳಿಸು''.

ಈ ಪತ್ರ ನೋಡಿ ನನಗೆ ಆಶ್ಚರ್ಯನಗು ಜೊತೆಗೆ ಸ್ವಲ್ಪ ಹೆಮ್ಮೆಯೂ ಆಯ್ತು. ಕಾರಣ ಅದನ್ನು ಕಳಿಸಿದ್ದವರು ಪ್ರಪಂಚದ ಸಮಕಾಲೀನ ಮಹಾನ್ ಜೀವವಿಕಾಸ ವಿಜ್ಞಾನಿಗಳಲ್ಲಿ ಒಬ್ಬರೆಂದು ಗುರುತಿಸಲ್ಪಟ್ಟ ವಿಲಿಯಂ ಡಗ್ಲಸ್ ಹ್ಯಾಮಿಲ್ಟನ್ ಅಥವಾ ಪರಿಚಿತರಿಗೆ 'ಬಿಲ್'. ನನ್ನಂತಹ ವರ್ತನಾವಿಜ್ಞಾನದ ಅತಿ ಕಿರಿಯಮಟ್ಟದ ವಿದ್ಯಾರ್ಥಿಯನ್ನು ಅವರು ನೆನಪಿಸಿಕೊಂಡಿದ್ದೇ ಪತ್ರದ ವಿಶೇಷತೆ. ಈ ಗುಣವೇ ಪ್ರೊ॥ ಹ್ಯಾಮಿಲ್ಟನ್‌ರು ವಿದ್ಯಾರ್ಥಿಗಳಲ್ಲಿ, ಕಿರಿಯ, ಹಿರಿಯ ಸಂಶೋಧಕ ವೃಂದಗಳಲ್ಲಿ ಬಹಳ ಪ್ರಿಯರಾಗುವಂತೆ ಮಾಡಿತ್ತು. ಸಂಶೋಧಕರಿಗೆ, ವಿಜ್ಞಾನಿಗಳಿಗೆ ಪ್ರೀತಿಯ ಸ್ವರ್ಗವಾದ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಹ್ಯಾಮಿಲ್ಟನ್ ಜೀವ ವಿಜ್ಞಾನದ ಪ್ರಮುಖ ವಿಭಾಗವಾದ ಜೀವ ವಿಕಾಸ ವಿಜ್ಞಾನ, ಜೆನೆಟಿಕ್ಸ್, ವರ್ತನೆಗೆ ಸಂಬಂಧಪಟ್ಟಂತೆ ಪರಿಸರ ವಿಜ್ಞಾನ - ಹೀಗೆ ಹಲವಾರು ಕ್ಷೇತ್ರಗಳಲ್ಲಿ ಮಹಾನ್ ವಿಷಯಗಳನ್ನು ನಮಗೆಲ್ಲಾ ತೋರಿಸಿಕೊಟ್ಟಿದ್ದಾರೆ. ಅವರು ತಿಳಿಸಿದ ವಿಷಯಗಳು ಜೀವಿಗಳು ಪರಿಸರದಲ್ಲಿ ಯಾಕೆ, ಹೇಗೆ ಬದುಕುತ್ತವೆ, ಪರಿಸರದ ಪ್ರತಿಯೊಂದು ಜೀವವೂ ತನ್ನ ವರ್ತನೆಯನ್ನು ರೂಢಿಸಿಕೊಂಡ ಬಗೆ ಹೇಗೆ ಎನ್ನುವುದರ ಮೇಲೆ ಬೆಳಕು ಚೆಲ್ಲುವುದರ ಜೊತೆಗೇ, ನಾವು ಜೀವಿಗಳನ್ನು, ಅವು ಇರುವ ಪರಿಸರವನ್ನು ಅರ್ಥಮಾಡಿಕೊಳ್ಳಲು ತುಂಬಾ ಸಹಾಯವಾಗುತ್ತವೆ. ಇದೇ ಅವರ ಸಂಶೋಧನೆಯ ಪ್ರಮುಖಾಂಶ ಎನ್ನಬಹುದು.

೧೮೫೯ರಲ್ಲಿ ಚಾರ್ಲ್ಸ್ ಡಾರ್ವಿನ್ ತನ್ನ ಜೀವವಿಕಾಸ ಮತ್ತು ಜೀವಿಗಳ ಉಗಮವನ್ನು ಪ್ರಕಟಿಸುವ ಸಮಯದಲ್ಲಿ ಒಂದು ವಿಷಯವನ್ನು ಹೊಸದಾಗಿ ಹೇಳಿದ್ದ: ಪ್ರಕೃತಿಯ ಸಹಜ ಪರಿಸರದಲ್ಲಿ ಜೀವಿಗಳು ಉಗಮಿಸಲು ತಾವಾಗೇ ಸಹಜವಾಗಿ ಪ್ರಕೃತಿಯಿಂದ ಆಯ್ಕೆಗೊಳ್ಳುತ್ತವೆ. ಇದೇ ಬಹಳ ಪ್ರಸಿದ್ಧವಾದ ಪ್ರಾಕೃತಿಕ ಆಯ್ಕೆ ವಿಧಾನ. ಅಂದರೆ ಜೈವಿಕವಾಗಿ ಹೆಚ್ಚು ಸಾಮರ್ಥ್ಯವಿರುವ ಅಥವಾ ಬಲಶಾಲಿಯಾದ ಜೀವಿಗಳನ್ನೇ ಪ್ರಕೃತಿ ಆಯ್ಕೆ ಮಾಡಿ, ದುರ್ಬಲರನ್ನು ಕ್ರಮೇಣ ನಾಶವಾಗುವಂತೆ ಮಾಡುತ್ತದೆ. ಈ ವಾದವನ್ನು ಮಂಡಿಸುತ್ತಾ ಡಾರ್ವಿನ್ ತನ್ನ ಈ ಸಿದ್ಧಾಂತಕ್ಕೆ ಮುಳ್ಳಾಗಿರುವ, ಬುಡಮೇಲು ಮಾಡುವ ಒಂದು ನಿದರ್ಶನವು ತನಗೆ ದೊಡ್ಡ ತಲೆನೋವಾಗಿದೆ ಎಂದಿದ್ದ. ಸಾಮಾಜಿಕ ಕೀಟಗಳಲ್ಲಿನ



ಪ್ರೊ॥ ಹ್ಯಾಮಿಲ್ಟನ್‌ರೊಂದಿಗೆ ಲೇಖಕಿ

ನಪುಂಸಕ ಕೆಲಸಗಾರರು ತಾವು ಸಂತಾನೋತ್ಪತ್ತಿ ಮಾಡಲಾರದೆ ಇದ್ದರೂ ಪ್ರಕೃತಿ ಅವುಗಳನ್ನು ಹೇಗೆ ಆಯ್ಕೆ ಮಾಡಿ ಉಳಿಸಿದೆ ಎಂಬುದು ತನಗೆ ಅರ್ಥವಾಗುತ್ತಿಲ್ಲ ಎಂದಿದ್ದ. ಹೆಚ್ಚು ಕಡಿಮೆ ನೂರು ವರ್ಷಗಳ ನಂತರ ೧೯೬೪ರಲ್ಲಿ ೨೭ರ ಹರೆಯದ ಯುವ ಜೀವ ವಿಜ್ಞಾನಿ ಹ್ಯಾಮಿಲ್ಟನ್ ಈ ಒಗಟನ್ನು ಬಿಡಿಸಿದರು. ಇರುವೆ, ಜೇನ್ನೊಣ, ಮುಂತಾದ ಸಾಮಾಜಿಕ ಕೀಟಗಳಲ್ಲಿ ಕಂಡು



1990ರ ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ನಡೆದ 'ಸಾಮಾಜಿಕ ಕೀಟಗಳ ಅಧ್ಯಯನ'ದ ಬಗ್ಗೆ ಸಮ್ಮೇಳನ

ಬರುವ ಕೆಲಸಗಾರ ನಪುಂಸಕ ವರ್ಗಕ್ಕೆ ಇರುವ ಒಂದೇ ಒಂದು ಜವಾಬ್ದಾರಿ ಗೂಡಿನ ಇತರ ಸದಸ್ಯರ ಕ್ಷೇಮಾಭಿವೃದ್ಧಿಗಾಗಿ ಅನುಕ್ಷಣವೂ ಕೆಲಸ ಮಾಡುತ್ತಿರುವುದು. ಸಂತಾನೋತ್ಪತ್ತಿ ಶಕ್ತಿಯಿಲ್ಲದ ಇವನ್ನು ಡಾರ್ವಿನ್ ಸಿದ್ಧಾಂತದ ಪ್ರಕಾರ ಪ್ರಕೃತಿ ನಿರಾಕರಿಸಿ, ನಾಶಪಡಿಸಬೇಕಿತ್ತು. ಆದರೆ ಹಾಗಾಗದೆ ಇವು ಪ್ರಕೃತಿಯ ಸಹಜ ಆಯ್ಕೆ ಕ್ರಿಯೆಗೆ ಒಳಪಟ್ಟು ಬದುಕಿ ಬಂದಿವೆ. ಇದು ಹೇಗೆ?

೧೯೬೪ರಲ್ಲಿ ಹ್ಯಾಮಿಲ್ಟನ್ ಬಹಳ ಸರಳವಾಗಿ ಆದರೆ ಅಷ್ಟೇ ಮಹತ್ತರವಾದ ಉತ್ತರವನ್ನು ನೀಡಿದರು. - ಅವರ ಸಿದ್ಧಾಂತದ ಹೆಸರೇ Inclusive Fitness ಅಂದರೆ ''ಒಳಗೊಂಡಂತಿರುವ ಸಾಮರ್ಥ್ಯ'' ಅಥವಾ ತ್ಯಾಗ/ಜೈವಿಕ ಸಹಾಯ. ತಾನೇ ಸ್ವತಃ ಸಂತಾನವನ್ನು ಹುಟ್ಟಿಸದಿದ್ದರೂ, ತನ್ನ ಸಂಕುಲದ, ತನ್ನ ಅತ್ಯಂತ ಹತ್ತಿರದ ಜೈವಿಕ ಬಂಧುಗಳು ಮಾಡುವ ಸಂತಾನಾಭಿವೃದ್ಧಿ ಕ್ರಿಯೆಗೆ ಸಂಪೂರ್ಣವಾಗಿ ಸಹಕರಿಸಿ, ತನ್ನ ಸಂಕುಲ/ವಂಶವು ಸ್ಥಿರವಾಗಿ, ಸದೃಢವಾಗಿ ಬೆಳೆಯುವಂತೆ ಮಾಡುವ ತ್ಯಾಗಬುದ್ಧಿ, ಇದು Inclusive Fitness ಸಿದ್ಧಾಂತದ ತಿರುಳು. ಅಂದರೆ ಗೂಡಿನ ಈ ಕೆಲಸಗಾರ ಇರುವೆಗಳು ತಾವು ತಂದೆತಾಯಿಗಳಾಗದಿದ್ದರೂ, ತನ್ನ ಗೂಡಿನ ಇತರ ಸಂತಾನೋತ್ಪತ್ತಿ ಸಾಮರ್ಥ್ಯ ಇರುವ ಸಹಚರರಿಗಾಗಿ, ಅವರ ಮಕ್ಕಳು ಮೊಮ್ಮಕ್ಕಳಿಗಾಗಿ ಸದಾ ದುಡಿದು ತನ್ನ ವಂಶವನ್ನು ಕಾಪಾಡಿಕೊಳ್ಳುವುದು. ಹಾಗಾಗಿ ಈ ಕೆಲಸಗಾರ ಇರುವೆಗಳ ಪಾತ್ರ ಮುಖ್ಯವಾದ್ದರಿಂದ ಪ್ರಕೃತಿ ಇವನ್ನು ಆಯ್ಕೆ ಮಾಡಿದೆ.

ಈ ವಾದವನ್ನು ಹ್ಯಾಮಿಲ್ಟನ್ ಮಂಡಿಸಿದಾಗ ಜೀವ ಹಾಗೂ ಜೀವವಿಕಾಸ ವಿಜ್ಞಾನಿಗಳು ಬೆರಗಾಗಿದ್ದರು. ಪ್ರಾಣಿ ಹಾಗೂ ಮನುಷ್ಯ ಪ್ರಪಂಚದಲ್ಲಿರುವ ''ಪರಸ್ಪರ ಸಹಕಾರ'' ವರ್ತನೆಗೆ ಜೈವಿಕ ಕಾರಣವನ್ನು ಅವರು ವಿವರಿಸಿದ್ದರು. ಮುಂದೆಯೂ ಹ್ಯಾಮಿಲ್ಟನ್ ಅನೇಕ ಜೀವವಿಕಾಸ, ವಿಜ್ಞಾನದ ರಹಸ್ಯಗಳನ್ನು, ನಿಗೂಢ ವರ್ತನೆಗಳ ಹಿಂದಿನ ಕಾರಣವನ್ನು, ಜೈವಿಕ ಹಿನ್ನೆಲೆಯಲ್ಲಿ ಅತ್ಯಂತ ಸರಳವಾಗಿ, ಸಾಮಾನ್ಯರಿಗೂ ಇಷ್ಟವಾಗುವಂತೆ ವಿವರಿಸಿದ್ದಾರೆ.

ಹ್ಯಾಮಿಲ್ಟನ್ ಆಗಾಗ ಹೇಳುತ್ತಿದ್ದಂತೆ ಭಾರತ ಅವರ ನೆಚ್ಚಿನ ಸಂಶೋಧನಾ ತಾಣಗಳಲ್ಲಿ ಒಂದು. ಇಲ್ಲಿನ ಸಮೃದ್ಧ ಜೀವ ಸಂಕುಲಗಳ ವೈವಿಧ್ಯತೆ ಅವರನ್ನು ಸದಾ ಕೈ ಬೀಸಿ ಕರೆಯುತ್ತಿತ್ತಂತೆ. ಆದರಲ್ಲೂ ಪ್ರತಿ ಬಾರಿ ಭಾರತಕ್ಕೆ ಬಂದಾಗಲೂ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಗೆ ಬಂದು ಅಲ್ಲಿಯ ಯುವ ಸಂಶೋಧಕರ ಜೊತೆ ತಾವು ತಂದಿರುತ್ತಿದ್ದ ಸಂಶೋಧನಾ ಸಮಸ್ಯೆಯನ್ನು ಬಿಡಿಸಲು ಕಾಡು ಸುತ್ತುತ್ತಿದ್ದರು.

೧೯೯೦ರ ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ಸಾಮಾಜಿಕ ಕೀಟಗಳ ಅಧ್ಯಯನದ ಬಗ್ಗೆ ಹತ್ತನೇ ಅಂತರರಾಷ್ಟ್ರೀಯ ಸಮ್ಮೇಳನ ನಡೆದಾಗ ಅದರಲ್ಲಿ ಭಾಗವಹಿಸಿದ್ದ ನನಗೆ ಅವರ ಸ್ನೇಹ ಲಭಿಸಿತು. ಆ ಮಹಾ ಸಮ್ಮೇಳನದ ಆರಂಭಿಕ ಪ್ರಾಸ್ತಾವಿಕ ಭಾಷಣವನ್ನು ಮಾಡಿದ ವ್ಯಕ್ತಿ ಹ್ಯಾಮಿಲ್ಟನ್. ಅಂತಹ ಗೌರವವನ್ನು ಜೀವವಿಜ್ಞಾನ ಪ್ರಪಂಚ ಅವರಿಗೆ ನೀಡಿತ್ತು. ಆ ವೇಳೆಯಲ್ಲಿ ಜೀವ ಮನೋವಿಜ್ಞಾನದ ವಿದ್ಯಾರ್ಥಿಯಾಗಿದ್ದ ನಾನು ಅವರ Inclusive fitness ಸಿದ್ಧಾಂತವನ್ನು ಓದಿಕೊಂಡು ಸಾಕಷ್ಟು ಪ್ರಭಾವಿತಳಾಗಿದ್ದೆ. ಸಮ್ಮೇಳನದ ನಂತರ ತಾವು ಅಭ್ಯಸಿಸುತ್ತಿದ್ದ dung beetle ಹುಡುಕಿಕೊಂಡು ಬಂಡೀಪುರ, ಮುದುಮಲೈ ಕಾಡುಗಳಿಗೆ ಹೊರಟಿದ್ದ ಅವರ ತಂಡದಲ್ಲಿ ನಾನೂ ಇದ್ದೆ. ಆ ಮೂರು ನಾಲ್ಕು ದಿನಗಳು ನೇರವಾಗಿ ಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿ ಜೀವಗಳ ವರ್ತನೆ, ಅವುಗಳು ಪರಿಸರಕ್ಕೆ ಹೊಂದಿಕೊಂಡ ಬಗೆ ಮುಂತಾದ ವಿಷಯಗಳ ಬಗ್ಗೆ ಹ್ಯಾಮಿಲ್ಟನ್‌ರಿಂದ ತಿಳಿದುಕೊಳ್ಳುವ ಸದವಕಾಶ ನನ್ನದಾಗಿತ್ತು. ಆಗ ನಾನು ನಡೆಸುತ್ತಿದ್ದ ಸಂಶೋಧನೆಗೂ ಅವರು ಕೊಟ್ಟ ಸಲಹೆಗಳು ಬಹಳ ನೆನಪಿನಲ್ಲಿ ಉಳಿಯುವಂಥವು.

ಹ್ಯಾಮಿಲ್ಟನ್‌ರಿಗೆ ಪ್ರಪಂಚದ ಒಬ್ಬ ಮಹಾನ್ ಜೀವ ವಿಜ್ಞಾನಿಯೆಂಬ ಸ್ಥಾನವಿದ್ದರೂ ಅವರದು ಸರಳತೆ, ತಾಳ್ಮೆ, ವಿನಯ. ಯಾವುದನ್ನೂ ತನ್ನದು ತಾನು ಎಂದು ಹೇಳಿಕೊಳ್ಳದೇ ಇರುವ ವಿನೀತ ಭಾವದವರು. ಈ ಗುಣಗಳಿಂದ ಪ್ರತಿಯೊಬ್ಬರಿಗೂ ಅಚ್ಚು ಮೆಚ್ಚಾಗಿದ್ದರು. ಮಗುವಿನ ಕುತೂಹಲ, ಪ್ರತಿಯೊಂದನ್ನೂ ಆಸಕ್ತಿ ವಹಿಸಿ ಆಳವಾಗಿ ಮಾಹಿತಿಯನ್ನು ಸಂಗ್ರಹಿಸಿ ಒರೆಹಚ್ಚಿ ನೋಡುವ ಅವರ ದೃಷ್ಟಿ ಇಂತಹವು ಅವರ ಸುತ್ತ ಸದಾ ನೆರೆದಿರುತ್ತಿದ್ದ ವಿದ್ಯಾರ್ಥಿಗಳಿಗೆ ತುಂಬಾ ಪ್ರಿಯವಾದದ್ದು.



ಹ್ಯಾಮಿಲ್ಟನ್ ಆಗಾಗ್ಗೆ ಭೇಟಿ ಕೊಟ್ಟ ಬಂಡೀಪುರ ಕಾಡು

ನಮ್ಮ ತಂಡದಲ್ಲಿದ್ದ ಅಮೆರಿಕಾದ ಸಂಶೋಧನಾ ವಿದ್ಯಾರ್ಥಿ ಬರ್ನಿ ಎಂಬಾತ ಹೇಳಿದಂತೆ "ಅಮೆರಿಕದಲ್ಲಿ ಅತ್ಯುನ್ನತ ಮಟ್ಟದ ಸಂಶೋಧನೆ ನಡೆಯುತ್ತಿದೆ. ಸಾಕಷ್ಟು ಸೌಕರ್ಯಗಳು, ಪ್ರಾಧ್ಯಾಪಕರೂ ಇದ್ದಾರೆ. ಆದರೆ ಒಬ್ಬ ಹ್ಯಾಮಿಲ್ಟನ್‌ರಂತಹ ವ್ಯಕ್ತಿ ಅಲ್ಲಿಲ್ಲ. ಅವರು ನನ್ನ ಮಾರ್ಗದರ್ಶಕರಾಗಿರುವುದು ನನ್ನ ಅದೃಷ್ಟ."

ಆ ಹತ್ತು ದಿನಗಳ ಅವಧಿಯಲ್ಲಿ ನನಗೆ ಹ್ಯಾಮಿಲ್ಟನ್‌ರ ಒಳನೋಟ, ಜೀವನದ ಬಗ್ಗೆ ಅವರಿಗಿರುವ ಒಳದೃಷ್ಟಿ, ತನ್ನ ಪರಿಚಯದ ವಿದ್ಯಾರ್ಥಿಗಳನ್ನು ಆಂತರಿಕವಾಗಿಯೂ ಬೆಳೆಸುವುದು- ಇಂತಹ ಗುಣಗಳ ಪರಿಚಯವಾಯಿತು. ಇವು ನನ್ನ ಮೇಲೆ ವ್ಯಕ್ತಿಗತವಾಗಿಯೂ ಸಾಕಷ್ಟು ಪ್ರಭಾವವನ್ನು ಬೀರಿದೆ. ಒಮ್ಮೆ ಅವರು ಭಾರತೀಯ ಇಂಗ್ಲಿಷ್ ಸಾಹಿತ್ಯದ ಬಗ್ಗೆ ಮಾತನಾಡುತ್ತಾ, ನನ್ನ ಬಳಿ ರುತ್ ಪ್ರಾವರ್ ಝಾಬವಾಲರ ಕಥೆಗಳು ಇವೆಯೇ, ನಾನದನ್ನು ಓದಿದ್ದೀನಾ ಎಂದು ಕೇಳಿದರು. ಅವರೆಗೂ ನಾನಾಕೆಯ ಹೆಸರನ್ನೇ ಕೇಳಿರಲಿಲ್ಲ. ಆಕೆಯೂ ಆಂಗ್ಲ ಮೂಲದವಳು. ಭಾರತೀಯನನ್ನು ಮದುವೆಯಾಗಿ ಭಾರತದಲ್ಲಿದ್ದು ಇಲ್ಲಿಯ ನೆಲೆಯಿಂದ ತನ್ನ ಕಥೆಗಳನ್ನು ಸೃಷ್ಟಿಸಿದವಳು. ಆಕೆಯ ಕಥೆಯೊಂದರಲ್ಲಿ ಬರುವ ಒಬ್ಬ ಹುಡುಗಿಯನ್ನು ನನ್ನ ಸ್ವಭಾವ ಹೋಲುವಂತಹವಳು ಎಂದರು. ಆಯ್ತು ಆ ಕಥಾ ಸಂಕಲನವನ್ನು ಕೊಂಡು ಓದುತ್ತೇನೆ ಎಂದಾಗ, ಅವರು ತನ್ನ ಬಳಿ ಇರುವ ಆ ಪುಸ್ತಕವನ್ನು ನನಗೆ ಕೊಡುವುದಾಗಿ ಹೇಳಿ, ಇಂಗ್ಲೆಂಡಿನಿಂದ ಮರೆಯದೇ ಅದನ್ನು ಕಳಿಸಿ, ಆಕೆಯ ಕಥೆಗಳನ್ನು ಓದಿದ ಮೇಲೆ ನನ್ನ ಅನಿಸಿಕೆಗಳನ್ನು ಅವರಿಗೆ ಬರೆಯುವಂತೆ ತಿಳಿಸಿದ್ದರು.

ಮತ್ತೊಂದು ಬಾರಿ ವಿಚಿತ್ರ ರೇಖಾಚಿತ್ರಗಳನ್ನು ಕಳಿಸಿ ಈ [illegible] ಅರ್ಥವಾಗುತ್ತದೆಯಾ, ಅದರ ಬಗ್ಗೆ ಬರೆದು ತಿಳಿಸಬೇಕೆಂದು [illegible] ಚಿತ್ರಗಳನ್ನು ಹಿಡಿದುಕೊಂಡು ನಾನು ಅನೇಕರ ಬಳಿ ಅದನ್ನು ತೋರಿಸಿ, [illegible] ಅದೇನೆಂದು ಸ್ವಲ್ಪ ತಿಳಿದಾಗ ನನಗೆ ಹ್ಯಾಮಿಲ್ಟನ್‌ರ ಜೀವನ ದೃಷ್ಟಿಯ ಬಗ್ಗೆ ಅಚ್ಚರಿಯಾಗಿತ್ತು. ಆ ಚಿತ್ರಗಳಿದ್ದ ಪುಸ್ತಕ Metamarginal Themesನ ಕರ್ತೃ ಡಗ್ಲಸ್ [illegible] ಈತನ ಮತ್ತೊಂದು ಕೃತಿ "ಗಾಡೆಲ್, ಏಷರ್ ಬಾಖ್" ಪುಲಿಟ್ಜರ್ ಪ್ರಶಸ್ತಿಯನ್ನು ಪಡೆದಿತ್ತು. ಸಂಗೀತ, ಕಲೆ, ಸಾಹಿತ್ಯ ಮತ್ತು ವಿಜ್ಞಾನಗಳ ತಿರುಳನ್ನು ಅಳವಡಿಸಿಕೊಂಡ [illegible] ದೃಷ್ಟಿಯ ಬಗ್ಗೆ, ದಾರ್ಶನಿಕತೆಯ ಬಗ್ಗೆ, ಮನಸ್ಸಿನ ಒಳನೋಟದ ಬಗ್ಗೆ ಹೇಳಲು ಈತ ಪ್ರಯತ್ನಿಸಿದ್ದ. ನಂತರ ಹ್ಯಾಮಿಲ್ಟನ್ ನನಗೆ ಪತ್ರ ಬರೆದಿದ್ದರು: "ಈ ಚಿತ್ರಗಳು, ಅದರ ಸೃಷ್ಟಿಕರ್ತ, ಅವರ ಬರಹಗಳು, ಅವರ ಮನಸ್ಸಿನ ಒಳ ಹರಿವು ಇದೆಲ್ಲವನ್ನೂ ನಾನು ಅರ್ಥಮಾಡಿಕೊಳ್ಳಲಾರದೆ ಪ್ರಯತ್ನಿಸುತ್ತಿದ್ದೀನಿ. ನೀನು ನಿನ್ನ ಹುಡುಕಾಟವನ್ನು ಮುಂದುವರೆಸು". ಹ್ಯಾಮಿಲ್ಟನ್‌ರು ಅಂತಹ ಹುಡುಕಾಟದ ಕಿಚ್ಚನ್ನು ಕಿರಿಯರಲ್ಲಿ ಹಚ್ಚುತ್ತಿದ್ದರು. ಅವರ ಪ್ರಭಾವದಿಂದ ಕೆಲ ಯುವ ವಿಜ್ಞಾನಿಗಳು ಅವರಿಂದ ತಪ್ಪಿಸಿಕೊಂಡಿದ್ದ dung beetle ಬಗ್ಗೆ ಸಂಶೋಧನೆಯನ್ನು ತಾವೇ ಮುಂದುವರೆಸಿದ್ದಾರೆ. ಇದಕ್ಕಿಂತಲೂ ಹ್ಯಾಮಿಲ್ಟನ್‌ರಿಗೆ ಸಂತೋಷ ಕೊಡುವ ವಿಷಯ ಮತ್ತೊಂದು ಇರಲಾರದು.

ಇತ್ತೀಚೆಗಷ್ಟೇ ಹ್ಯಾಮಿಲ್ಟನ್ ತಮ್ಮ ಆಕ್ಸ್‌ಫರ್ಡ್ ಪದವಿಯಿಂದ ನಿವೃತ್ತರಾಗಿದ್ದರೂ ತಮ್ಮ ಅವಿರತ ಸಂಶೋಧನೆಗಳನ್ನು, ಅದಕ್ಕಾಗಿ ತಮ್ಮ ಪ್ರಾಪಂಚಿಕ ಸುತ್ತಾಟವನ್ನು ಮುಂದುವರೆಸಿದ್ದರು. ಮಾನವ ಕುಲವನ್ನು ಪೀಡಿಸುತ್ತಿರುವ ಏಡ್ಸ್ ರೋಗದ ವೈರಾಣುವಿನ ಮೂಲವನ್ನು ಕುರಿತು ಕಾಂಗೋ ಪ್ರದೇಶದಲ್ಲಿ ಸಂಶೋಧನೆ ನಡೆಸುತ್ತಿದ್ದ ಕಾಲದಲ್ಲಿ ಅವರಿಗೆ ಮಲೇರಿಯಾ ರೋಗ ತಟ್ಟಿತ್ತು. ಮಲೇರಿಯಾದಿಂದ ಉಂಟಾದ, ವಿವಿಧ ರೀತಿಯಲ್ಲಿ ಉಲ್ಬಣಗೊಂಡ ಸ್ಥಿತಿಯಲ್ಲಿ ಅವರು ಮಾರ್ಚ್ ೭, ೨೦೦೦ದಂದು ನಿಧನ ಹೊಂದಿದರು. ದಿನೇ ದಿನೇ ಹುಟ್ಟುತ್ತಿರುವ ಹೊಸ ರೋಗಗಳ ವೈರಾಣುಗಳ ಮೂಲವನ್ನು ತಾನು ಸಂಶೋಧಿಸಬೇಕು ಎನ್ನುತ್ತಿದ್ದ ಹ್ಯಾಮಿಲ್ಟನ್ ತಮ್ಮ ಸಾವಿನಿಂದ ಅನೇಕರಿಗೆ ನಷ್ಟವನ್ನುಂಟುಮಾಡಿದ್ದಾರೆ.


ನಾನು ಯಾವಾಗಲೋ ಒಮ್ಮೊಮ್ಮೆ ಭಾರತೀಯ ವಿಜ್ಞಾನ ಸಂಸ್ಥೆಗೆ [illegible] ಅಲ್ಲಿಯ ನನ್ನ ಸ್ನೇಹಿತನೊಬ್ಬ ನನ್ನನ್ನು ನೋಡಿದ ತಕ್ಷಣ ರೇಗಿಸುತ್ತಿದ್ದ: "ಏನು ಹ್ಯಾಮಿಲ್ಟನ್ ಭೇಟಿಯಾಗಿದ್ದರಾ?" ಇಬ್ಬರೂ ಜೋರಾಗಿ ನಕ್ಕಾದ ಮೇಲೆ ನಾನು ಉತ್ತರಿಸುತ್ತಿದ್ದೆ "ಹೌದು, ಭೇಟಿಯಾಗಿದ್ದರು. ನನ್ನ ಆಂತರಿಕ ಆಲೋಚನೆಗಳಲ್ಲಿ [illegible] ಇರುತ್ತಾರೆ." ಆಗ ಆತನೂ ಗಂಭೀರನಾಗಿ ಹೇಳುತ್ತಿದ್ದ, "ಹೌದು. [illegible] ಮಾನವತಾವಾದಿ ವಿಜ್ಞಾನಿ. ಅಂಥವರು ಬಹಳ ಅಪರೂಪ." [illegible] ಸಾವಿರಾರು ವಿಜ್ಞಾನ ಪ್ರಪಂಚದ ಮನುಷ್ಯರು, ಮಾನವತಾವಾದಿಗಳು ತಮ್ಮದೇ ರೀತಿಯಲ್ಲಿ ಹ್ಯಾಮಿಲ್ಟನ್‌ರಿಗೆ ನಮನ ಸಲ್ಲಿಸುತ್ತಿರಬೇಕು.

ಗೊಂದಲಪುರದಿಂದ ಒಂದು ಪತ್ರ

ಪ್ರಿಯ ಯಜಮಾನಪ್ಪನವರಿಗೆ ಬೀರಣ್ಣನ ನಮಸ್ಕಾರಗಳು.

ನಿಮ್ಮ ಶಿಫಾರಸ್ಸಿನಿಂದ ನನ್ನ ಮಗ ರಾಮನಿಗೆ ಗುಲ್ಲೂರಿನ ಪ್ರತಿಷ್ಠಿತ ಜೂನಿಯರ್ ಕಾಲೇಜಿನಲ್ಲಿ ಸೀಟು ಸಿಕ್ಕಿದುದು ಗೊಂದಲಪುರದಲ್ಲಿ ಎಲ್ಲರ ಅಸೂಯೆಗೂ ಕಾರಣವಾಗಿತ್ತು. ನನ್ನ ಮಗ ಡೆಪ್ಟಿ ಕಮಿಷನರೋ, ಕಾಲೇಜು ಮೇಷ್ಟರೋ ಆದಂತೆ ನನಗೆ ಕನಸು ಬಿದ್ದು ಸಂತೋಷವೂ ಆಗಿತ್ತು. ಆದರೆ ಈ ಸಂತೋಷ ಬಹಳ ದಿನ ಉಳಿಯಲಿಲ್ಲ. ಮೊದಲನೇ ತಿಂಗಳು ಊರಿಗೆ ಬಂದಾಗ ಗುಲ್ಲೂರಿನ ಶೋಕಿವಾಲಾ ಹುಡುಗರ ಜೊತೆಯಲ್ಲಿ ನಾನು ಬಿಲ್‌ಕುಲ್ ಓದುವುದಿಲ್ಲ ಎಂದು ಮೊಂಡು ಹಿಡಿದ. ನಮ್ಮ ಮಾಸ್ತರ ಮೂಲಕ ಬುದ್ಧಿವಾದ ಹೇಳಿಸಿ, ಮತ್ತೊಂದು ಜೊತೆ ಅಂಗಿ, ಪಂಚೆ, ಹವಾಯಿ ಚಪ್ಪಲಿ ತೆಗೆಸಿಕೊಟ್ಟು ಪೂಸಿ ಮಾಡಿ ಕಳಿಸಿಕೊಟ್ಟೆ. ನಿಮ್ಮ ಗುಲ್ಲೂರು ಹುಡುಗರ ಮೇಲೆ ನನಗೆ ನಿಜವಾಗಿ ಅಸಮಾಧಾನವಾಗಿದೆ. ನನ್ನ ಮಗ ರಾಮನನ್ನು 'ಹಳ್ಳಿ ಗಮಾರ' ಎನ್ನುವಂತೆ ನೋಡುತ್ತಾರಂತಲ್ಲ! ಈಗ ಆತ ತಂದಿರುವ ಫೀಜಿನ ಲೆಕ್ಕ ನೋಡಿದರೆ, ನಾನು ಇಷ್ಟರಲ್ಲೇ 'ಜಯದೇವ'ಕ್ಕೆ ಅಡ್ಮಿಟ್ ಆಗಬಹುದು! ಆ ಪ್ರತಿಷ್ಠಿತ ಜೂನಿಯರ್ ಕಾಲೇಜಿನ ಯಾವ ಮಾಸ್ತರರೂ ತರಗತಿಯಲ್ಲಿ ಪಾಠ ಮಾಡುವುದಿಲ್ಲವಂತೆ. ಏನಿದ್ದರೂ ಮನೆಯಲ್ಲಿ ಬಂದು ಹೇಳಿಸಿಕೊಳ್ಳಿ ಎಂದು, ಹುಡುಗರಿಗೆ ಹಾಜರಿ ಹಾಕಿ ಅಲೆದಾಡಲು ಕಳಿಸಿಬಿಡುತ್ತಾರಂತೆ! ಅವರ ಲೆಕ್ಕಾಚಾರದಂತೆ ಪ್ರತಿಯೊಂದು ಸಬ್ಜೆಕ್ಟಿಗೆ ನಾಲ್ಕು ಸಾವಿರ ಎಣಿಸಿ ಮಡಗಬೇಕಂತೆ. ನಗರದ ಎಲ್ಲ ಹೈಸ್ಕೂಲು ಕಾಲೇಜುಗಳಲ್ಲಿ ಮನೆಪಾಠ ಕಡ್ಡಾಯವಾಗಿದೆಯೆಂದೂ, ಕೇಳಿದಷ್ಟು ಹಣ ಕೊಡದಿದ್ದರೆ ತಾನು ಕಾಲೇಜಿಗೇ ಹೋಗುವುದಿಲ್ಲವೆಂದೂ ರಾಮ ಹಟ ಸಾಧಿಸುತ್ತಾ ಕುಳಿತುಬಿಟ್ಟಿದ್ದಾನೆ. ಗುಲ್ಲೂರಿನಲ್ಲಿ ಆತನ ಊಟ, ವಸತಿಗೆ ಹಣ ಹೊಂದಿಸಲು ಪರದಾಡಬೇಕಾಗಿರುವಾಗ ಈ ಮನೆಪಾಠದ ಹೊಸ ಅಪಾಯ ಬಂದೆರಗಿದೆ. ಇದು ನಿಜವಾಗಿಯೂ ನಿಜವೋ ಅಥವಾ ಚೈನಿಹೊಡೆಯಲು ನನ್ನ ಮಗ ಮಾಡಿರುವ ಹಿಕಮತ್ತೋ ಎಂಬುದು ನನಗೆ ತಿಳಿಯದಾಗಿದೆ. ಅಥವಾ ಗೊಂದಲಪುರದಂಥ ಹಳ್ಳಿಗಳಲ್ಲಿರುವ ನಮ್ಮ ಗಮನಕ್ಕೆ ಬಾರದಂತೆ ಸರಕಾರದ ವಿದ್ಯಾ ಇಲಾಖೆ ಮನೆಪಾಠವನ್ನು ಕಡ್ಡಾಯಗೊಳಿಸಿ ಬಹುದೇ? ಮನೆಪಾಠಕ್ಕೆ ಹಣ ತುಂಬಿದವರಿಗೆ ಅಂಕೆಗಳ ಬದಲು ಸೊನ್ನೆಗಳನ್ನು ನೀಡಲು ತೀರ್ಮಾನಿಸಲಾಗಿದೆಯೇ? ಈ ಹೆದರಿಕೆಯಿಂದ ನಮ್ಮ ಗೊಂದಲಪುರದ ಹೈಕಳು ಶಾಲಾ- ಕಾಲೇಜು ಓದು ನಿಲ್ಲಿಸಿ ಕುರಿ ಎಮ್ಮೆ ಮೇಯಿಸುತ್ತ ಕಾಲ ಹಾಕುತ್ತಿರುವಂತೆ ಕೆಟ್ಟ ಕನಸು ಬೀಳತೊಡಗಿದೆ.

ಯಜಮಾನಪ್ಪನವರೇ, ನೀವು ಹೇಗೂ ಹತ್ತು ಜನಕ್ಕೆ ಬೇಕಾದವರು. ಸರಕಾರದಲ್ಲಿ ನಿಮ್ಮ ಮಾತು ನಡೆಯುತ್ತದೆ ಎಂದು ಕೇಳಿದ್ದೇನೆ. ಹಳ್ಳಿಯವರಾದ ನಮ್ಮ ಕಷ್ಟ-ಸುಖ ತಿಳಿದವರು. ಈ ಮನೆ ಪಾಠದ ಪಿಡುಗಿನಿಂದ ಪಾರಾಗಲು ಒಂದು ಮಾರ್ಗ ತೋರಿಸಲಾರಿರಾ? ನಾನು ಏನು ಮಾಡಬೇಕು? ಗುಲ್ಲೂರಿನ ಗಾಂಧಿ ಪ್ರತಿಮೆಯ ಮುಂದೆ ಉಪವಾಸ ಸತ್ಯಾಗ್ರಹ ಅಥವಾ ಮೌನ ಸತ್ಯಾಗ್ರಹ ಮಾಡಲೇ? ಅದಕ್ಕೆ ನಿಮ್ಮ ಸಹಕಾರ ಬೆಂಬಲ ನಿರೀಕ್ಷಿಸಬಹುದೇ? ಶಿಕ್ಷಣ ಮಂತ್ರಿ ವಿಶ್ವನಾಥರೇ ಮೇಷ್ಟರುಗಳ ಜೊತೆ ಮಾತಾಡಿ ಸಮಸ್ಯೆ ಬಗೆಹರಿಸಲಾಗದೆ ಗಾಂಧಿ ಪ್ರತಿಮೆಯ ಬಳಿ ಉಪವಾಸ ಕೂಡಬೇಕೆಂದಿದ್ದರಂತೆ. ಹೀಗಿರುವಾಗ ನನ್ನ ಉಪವಾಸದ ದಿನ ಅವರು ಬಂದು ನನಗೇನಾದರೂ ಸಮಜಾಯಿಷಿ ನೀಡಿಯಾರೆಂದು ನಿರೀಕ್ಷಿಸಬಹುದೆ? ಏನೂ ತೋಚದ ಗೊಂದಲದಲ್ಲಿದ್ದೇನೆ.



ಎಂದು, ನಿಮ್ಮ, ಬೀರಣ್ಣ

'ಸರ್ಕಾರಿ' ಶಿಕ್ಷಣ

ಸಂಪಾದಕರಿಗೆ,

ಮೇ ತಿಂಗಳ 'ಹೊಸತು' ಸಂಚಿಕೆಯಲ್ಲಿ ಪ್ರಕಟವಾದ 'ಸರ್ಕಾರಿ ಶಿಕ್ಷಣ ಮುಗ್ಗರಿಸಿದ್ದೆಲ್ಲಿ' ಎಂಬ ಪಾರ್ಥರವರ ಲೇಖನದಲ್ಲಿ ಅಭಿವ್ಯಕ್ತವಾಗಿರುವ ವೇದನೆ, ದೇಶದ ಭವಿಷ್ಯದ ಬಗ್ಗೆ ಕಾಳಜಿ ಇರುವ ಎಲ್ಲ ಚಿಂತಕರ ಅಂತರಾಳದ ವೇದನೆಯನ್ನು ಪ್ರತಿಫಲಿಸುತ್ತದೆ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಹಾಗೂ ಅದರ ನಂತರದ ಕೆಲವು ವರ್ಷಗಳಲ್ಲಿದ್ದ ಉನ್ನತ ಆದರ್ಶಗಳ ಆಶಯದೊಂದಿಗೆ ಕಟ್ಟಿದ ಅನೇಕ ಸಾರ್ವಜನಿಕ ಸಂಸ್ಥೆಗಳು ಅರ್ಧಶತಕದಲ್ಲಿ ಮಣ್ಣು ಪಾಲಾಗುತ್ತಿರುವ ದುರಂತದ ಉಲ್ಲೇಖಿತವಾದ ಪ್ರತೀಕವನ್ನು ಪಾರ್ಥರವರ ಲೇಖನದಲ್ಲಿ ಶಾಲೆಯ ಅಧಃಪತನದಲ್ಲಿ ಕಾಣಬಹುದಾಗಿದೆ. ಹಾಗೆ ನೋಡಿದರೆ, ಆ ಶಾಲೆಯ ಕತೆ ನಮ್ಮ ಬೇರೆಷ್ಟೋ ಶಾಲೆಗಳ ಕತೆಯೂ ಆಗಿದೆ.

''ಬೆಟ್ಟದ ಸೆಟ್ಟಿಗೆ ಕುಟ್ಟಿದ ಅಕ್ಕಿ, ಕುಟ್ಟಿದ ಒನಕೆಗೆ ಹೊಟ್ಟು ತೌಡು'' ಎಂಬಂತೆ ಶ್ರೀಮಂತರಿಗೆ ದೇಶದ ಸಂಪನ್ಮೂಲಗಳ ಹಕ್ಕನ್ನೂ, ಆ ಸಂಪತ್ತಿನ ಉತ್ಪಾದನೆಗೆಂದು ದುಡಿಯುವವರಿಗೆ ಬೆವರು ಸುರಿಸುವ ಹಕ್ಕನ್ನೂ ಹಂಚುತ್ತಾ ಬಂದಿರುವ ನಮ್ಮ ವರ್ಗಸಮಾಜದ ವ್ಯವಸ್ಥೆಯಲ್ಲಿ ಶಿಕ್ಷಣ ಕ್ಷೇತ್ರದಲ್ಲೂ ಅದೇ ನೀತಿ ಕಂಡುಬಂದರೆ ಆಶ್ಚರ್ಯವಿಲ್ಲ.

ಸಾಮಾಜಿಕ ಸಮಾನತೆ ಮತ್ತು ಭದ್ರತೆಗೆ ದಾರಿಯಾಗಬಹುದಾದ ಉತ್ತಮ ಶಿಕ್ಷಣ ಮತ್ತು ಉದ್ಯೋಗಾವಕಾಶಗಳು ಜನಸಾಮಾನ್ಯರಿಗೆ ಹಲವು ತಲೆಮಾರಿನವರೆಗೂ ದೊರಕದಂತೆ ನೋಡಿಕೊಳ್ಳಲು ಜಾಗತೀಕರಣದ ಇಂದಿನ ದಿನಗಳಲ್ಲಿ ವ್ಯವಸ್ಥಿತವಾದ ಪಿತೂರಿ ನಡೆಯುತ್ತಿದೆ.

ಅರಿತೋ ಅರಿಯದೆಯೋ, ಇಂತಹ ಕಾರ್ಯಕ್ರಮದಲ್ಲಿ ನಮ್ಮ ರಾಜಕಾರಣಿಗಳು, ಶಿಕ್ಷಣ ತಜ್ಞರು ಮನಃಪೂರ್ವಕವಾಗಿ ಸಹಕರಿಸುತ್ತಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿಯವರ ಕೊಡುಗೆ ಬಗ್ಗೆ ಭಟ್ಟಂಗಿಗಳಂತೆ ಬಾಯಿತುಂಬಾ ಹೊಗಳಿಕೊಂಡು ಓಡಾಡುವ ನಮ್ಮ ಮುಖ್ಯಮಂತ್ರಿಗಳು, ವಿದ್ಯಾಮಂತ್ರಿಗಳು ಹಾಗೂ ''ಸ್ವಯಂ ಹಣ ಭರಿಸಿಕೊಂಡು'' ನಡೆಯುವ ಹೆಸರಿನಲ್ಲಿ ವಿಶ್ವವಿದ್ಯಾನಿಯಗಳನ್ನು ಹಣವಂತರ ಪಾಲು ಮಾಡುತ್ತಿರುವ ಕುಲಪತಿಗಳ ವ್ಯವಹಾರಗಳನ್ನು ನೋಡಿದರೆ, ಜನಸಾಮಾನ್ಯನಿಗೆ ಕಳಪೆ ಶಿಕ್ಷಣವನ್ನು ವಿತರಿಸಿ ವರ್ಗಸಮಾಜದ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವ ಹುನ್ನಾರದಲ್ಲಿ ಅವರೆಲ್ಲ ಭಾಗಿಗಳಾಗಿರಬಹುದೇ ಎಂಬ ಪ್ರಶ್ನೆ ಏಳುತ್ತದೆ.

ಸಾರ್ವಜನಿಕ ರಂಗದ ಶಾಲಾಕಾಲೇಜುಗಳು ಹಾಗೂ ವಿಶ್ವವಿದ್ಯಾನಿಲಯಗಳು ದುರವಸ್ಥೆಗೆ ಈಡಾಗುತ್ತಿರುವ ಸಂದರ್ಭದಲ್ಲೇ ಬೆಂಗಳೂರು ಹಾಗೂ ಇತರ ನಗರಗಳ ಆಕರ್ಷಕ ಹೊರವಲಯಗಳಲ್ಲಿ ಪಬ್ಲಿಕ್, ರೆಸಿಡೆನ್ಶಿಯಲ್, ಎನ್.ಆರ್.ಐ.ಗಳ ಹೆಸರಿನಲ್ಲಿ ತಲೆಯೆತ್ತುತ್ತಿರುವ ಖಾಸಗಿ ವಿದ್ಯಾ ಸಂಸ್ಥೆಗಳ ಅಭಿವೃದ್ಧಿಯನ್ನು ಗಮನಿಸಿದರೆ ಆಳುವ ವರ್ಗವು ದೇಶದ ಸಂಪನ್ಮೂಲಗಳ ಮೇಲಿನ ತನ್ನ ನಿರಂಕುಶ ಪ್ರಭುತ್ವವನ್ನು ಎಂದೆಂದಿಗೂ ನಶಿಸಿ ಹೋಗದಂತೆ ಪ್ರಜ್ಞಾಪೂರ್ವಕವಾಗಿ ಯೋಜಿಸಿಕೊಳ್ಳುತ್ತಿದೆ ಎಂಬುದರಲ್ಲಿ ಸಂಶಯವಿಲ್ಲ.

ಈ ಪರಿಸ್ಥಿತಿಯಲ್ಲಿ ಜನಸಾಮಾನ್ಯರು 'ದಂಗೆ' ಎದ್ದು ವರ್ಗ ಸಂಘರ್ಷದಲ್ಲಿ ಭಾಗಿಗಳಾಗಿ ದುಡಿಯುವ ವರ್ಗಕ್ಕೆ ಅಂತಿಮ ಜಯ ದೊರಕಿಸುವ ಹೋರಾಟದಲ್ಲಿ ತೊಡಗುವುದೊಂದೇ ದಾರಿ. ಆದರೆ ಈ ದುಡಿಯುವ ಜನ ತಮಗೆ ಅನುಕೂಲ ಯಾವುದು, ಪ್ರತಿಕೂಲ ಯಾವುದು ಎಂಬುದನ್ನು ಲೆಕ್ಕಿಸದೆ ಆಳುವ ವರ್ಗದ ಪಕ್ಷಗಳ ಬಾಲಗಳಂತೆ ಕುಣಿಯುತ್ತಿರುವುದು ಬಹಳ ಆತಂಕದ ವಿಷಯವಾಗಿದೆ. ಇವರೇನೋ ಉದ್ಯೋಗಸ್ಥರಾಗಿದ್ದರೆ ಇವರ ಮಕ್ಕಳು ಕಂಪ್ಯೂಟರ್ ಶಿಕ್ಷಣ ಪಡೆಯುತ್ತಿರಬಹುದು. ಅವರ ಮಕ್ಕಳ ಸರದಿ ಬರುವಾಗ್ಗೆ ಭಿಕ್ಷಾಪಾತ್ರೆ ಹಿಡಿಯುವ ಸಂಭವ ನಿಚ್ಚಳವಾಗಿರುತ್ತದೆ. ಆದರೆ ಭಿಕ್ಷಾಪಾತ್ರೆಗೆ ಹಿಡಿ ಅಕ್ಕಿ ಹಾಕುವವರು ಎಲ್ಲಿರುತ್ತಾರೋ ತಿಳಿಯುವುದಿಲ್ಲ!

ಬೆಂಗಳೂರು

- ಯಕ

ದೊಡ್ಡ ಬರ

ದೇಶದ ಹತ್ತಾರು ಕಡೆಗಳಲ್ಲಿ ಭೀಕರ ಬರದ ಅನುಭವ ಆಗುತ್ತಿರುವುದು ಇಂದು ನಮ್ಮ ಮುಂದಿದೆ. ಬರ ಬಂದಾಗ ಏನೆಲ್ಲಾ ಸಾಂತ್ವನದ ಮಾತುಗಳು, ಅದನ್ನು ನೀಗಿಸಲು ಏನೆಲ್ಲಾ ಯೋಜನೆಗಳು, ಹಳ್ಳಿಹಳ್ಳಿಗೂ ನೀರು ಒದಗಿಸುತ್ತೇವೆಂದು ಏನೆಲ್ಲಾ ಪ್ರಚಾರ..... ಕಡೆಗೆ, ಆ ನೀರಿನಿಂದ ಆಸು ನೀಗಿಕೊಳ್ಳುವ ದೌರ್ಭಾಗ್ಯವೂ ಕೆಲವರದು. ಅಂತಹ ವಿಷಪೂರಿತ ರೈಲ್ವೆ ಡಬ್ಬಗಳಲ್ಲಿ ನೀರಿನ ಸರಬರಾಜು! ಆದರೆ ಇದು ಮುಗಿಯಿತೋ ಮತ್ತೆ ಬರ ಬರುವವರೆಗೆ ಭೀಕರ ಮೌನ, ಅಸಡ್ಡೆ....

ನವಕರ್ನಾಟಕ ಪ್ರಕಾಶನದವರು ಹೊರತರಲಿರುವ ಸ್ವಾತಂತ್ರ್ಯಸಂಗ್ರಾಮದ ಕುರಿತಾದ ಬೃಹತ್ ಕಾದಂಬರಿಯಿಂದ ಒಂದೆರಡು ಪುಟಗಳನ್ನು ಈ ಸಂದರ್ಭದಲ್ಲಿ ಓದುಗರಿಗೆ ಪರಿಚಯಿಸಲು 'ಹೊಸತು' ಹರ್ಷಿಸುತ್ತದೆ. ಅದನ್ನು ಬರೆದವರು ಖ್ಯಾತ ಲೇಖಕರಾದ ಶ್ರೀ ಕೋ. ಚೆನ್ನಬಸಪ್ಪನವರು.

ಯಾರ ಬಾಯಲ್ಲೂ ಅದೇ ಮಾತು : ''ಗಾಂಧೀಜಿ ಚಳುವಳಿ ನಿಲ್ಲಿಸಿದರಂತೆ''.

ಎಲ್ಲಿ ಕೇಳಿದ್ರೂ ಅದೇ ಮಾತು : ''ಗಾಂಧೀಜಿ ಚಳುವಳಿ ನಿಲ್ಲಿಸಿಬಿಟ್ರಂತೆ''.

ಚಳುವಳಿ ಹೂಡಬೇಕೆಂದಿದ್ದವರಿಗೆ ನಿರಾಸೆ, ಹೂಡಬಾರದೆಂದಿದ್ದವರಿಗೆ ಒಂದು ಬಗೆಯ ಸಮಾಧಾನ. ಸಂತೋಷವೂ ಆಗಿತ್ತು. ಹೊಟ್ಟೆ ಬಟ್ಟೆಗೆ ಸಾಕಷ್ಟು ಆದಾಯವಿದ್ದು, ಆಸ್ತಿ, ಪಾಸ್ತಿ, ಐಶ್ವರ್ಯ, ನಗನಾಣ್ಯ ಕೂಡಿಟ್ಟ ಶ್ರೀಮಂತರಿಗೆ ಪರಕೀಯರ ಆಳ್ವಿಕೆಯಿಂದ ರಕ್ಷಣೆಯಿತ್ತು. ಅಂಥವರು :

''ಈಗ ಏನಾಗ್ಯೆತಿ, ದೇವರಂತಾ ಕೆಂಪು ಜನ ನಮ್ಮನ್ನು ಮಕ್ಕಳಂತೆ ಕಾಪಾಡ್ತಾರೆ. ಕಳ್ಳಕಾಕರ ಭಯವಿಲ್ಲ, ಪಂಜುಗಳ್ಳರು ಪಿಂಡಾರಿಗಳ ಉಪಟಳವಿಲ್ಲ.......

''ಆವಾಗ ಆವಾಗ ಬರ ಬಿದ್ರ ಸರ್ಕಾರ ಆದ್ರೂ ಏನು ಮಾಡಬೇಕು? ದೇವರು ಸಿಟ್ಟಾಗಿ ಮಳೆ ತರಿಸದಿದ್ರೆ ಯಾರೇನು ಮಾಡಬೇಕು....ಮಳೆ ತರಿಸೋದು ಸರ್ಕಾರದ ಕೈಯ್ಯಾಗ್ಯೆತೇನು? ಹುಕುಂ ಮಾಡಿ ಮಳೆ ತರಿಸೋ ದೊರೆ ಯಾರ‍್ಯೆದಾರೆ?''

ಇಂಥ ಮಾತು ದೇವೇಂದ್ರಪ್ಪನ ಕಿವಿಗೊ, ಅಜ್ಜಯ್ಯನವರ ಕಿವಿಗೊ, ರಮಣಯ್ಯನ ಕಿವಿಗೊ ಬಿದ್ದರೆ:

''ಮಳೆ ತರಿಸೋದಾಗಲ್ಲ ಸೈ. ಅದು ಎಂತ ಕತ್ತೆಗಾದರೂ ಗೊತ್ತಾಗ್ಯೆತೆ. ಅದನ್ನೇನು ಏಳ್ತಾರೆ ಈ ನನ್ನ ಮಕ್ಳು? ಆದರೆ ದೇವ್ರು ಮಳೆ ತರಿಸಿದಾಗ ಆ ಮಳೆ ನೀರನ್ನು ತುಂಬಿ ನಿಲ್ಲಿಸಾಕ ಕೆರೆ ಕಟ್ಟೆ ಕಟ್ಟೋದು ಮನಿಶ್ಯಾನ ಕೈಯ್ಯಾಗಿಲ್ಲೇನು? ಬಸವಣ್ಣ ಕಾಲುವೆ, ರಾಯ ಕಾಲುವೆ ಮಾಡ್ಲಿದ್ರಲ್ಲ ಆಗಿನ ಕಾಲದ ರಾಜರು. ಹಂಗ ಈಗಿನ ಸರ್ಕಾರ ಮಾಡ್ಲಾಕ ಬರಲ್ಲೇನು?......'' ದೇವೇಂದ್ರಪ್ಪನಾಗಲಿ ಅಜ್ಜಯ್ಯನವರಾಗಲಿ ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಓದಿದ್ದವರಲ್ಲ. ಸರ್ಕಾರ ಏನು ಮಾಡಬಹುದು ಏನು ಮಾಡಬೇಕು ಎಂಬುದನ್ನು ತಿಳಿದಿದ್ದರು. ಪರಕೀಯ ಸರ್ಕಾರ ಇಂಥ ಪ್ರಾಥಮಿಕ ಕರ್ತವ್ಯವನ್ನೂ ಮಾಡಿಲ್ಲ ಎಂಬುದು ಎಂಥ ಮೂರ್ಖನಿಗೂ ತಿಳಿದಿತ್ತು. ಅವರ ಅರಿವು ತಿಳಿವು ಓದಿನಿಂದ ಬಂದದ್ದಲ್ಲ. ಕಂಡದ್ದರಿಂದ ಕೇಳಿದ್ದರಿಂದ ಬಂದದ್ದು. ದೇವೇಂದ್ರಪ್ಪ ಇನ್ನೂ ಚಿಕ್ಕವರಿದ್ದಾಗ ಅವರವ್ವ ''ದೊಡ್ಡ ಬರ'' ಬಿದ್ದಾಗ ಅನುಭವಿಸಿದ ಆ ಕಡು ಕಷ್ಟವನ್ನು ಕಣ್ಮುಂದೆ ಕಟ್ಟುವಂತೆ ಹೇಳುತ್ತಿದ್ದಳು.

''ತಮ್ಮ ಗೋಳು ಬ್ಯಾಡಪ್ಪಾ ಬ್ಯಾಡ! ಕುಡಿಯಾಕ ಬಾವ್ಯಾಗ ನೀರಿಲ್ಲ ಅಂದ್ಮ್ಯಾಲೆ ಹೊಳೆಯಾಗ ಇನ್ನೆಲ್ಲಿ ಹರಿದಾವು...... ಒಂದು ವರುಸೇ? ಎಳ್ಡು ವರುಸೇ? ಮೂರು ವರುಸ ಮ್ಯಾಲಿಂದ ಮ್ಯಾಲೆ ಮಳೇನೆ ಒಂದ್ಸಲಿ ಬರಲಿಲ್ಲ! ಒಂದು ಬೀಜ ಬಿತ್ತಲಿಲ್ಲ. ಒಂದು ದಂಟು ಜ್ವಾಳ ಬೆಳೀಲಿಲ್ಲ. ಅಡಿವ್ಯಾಗ್ಳ ಗಿಡಾ ಮರಾ ಎಲ್ಲ ಕರಕರ



ಚಿತ್ರಕೃಪೆ : ಫ್ರಂಟ್‌ಲೈನ್

ಸುಟ್ಟು ಒದ್ವಲ್ಲೊ ಮಗನೆ....... ನಾವು ಮನಿಸ್ಯಾರು ಹ್ಯಂಗನ್ನ ಮಾಡ್ಯಾವು ...... ಉಳ್ಳೋರು ಅಂತು ಸೈಯ ಸೈಯಿ. ಆ ಪುಣ್ಯಾತ್ಮರು ಹಗೇದಾಗ ಕಣಜದಾಗ, ವಾಡ್ಯಾವದಾಗ ಕಾಳು ಕಡಿ ಹಾಕ್ಕೊಂಡಿದ್ರು. ಅವರು ಹ್ಯಂಗೋ ಜೀವ ಇಡಕಂಡಿದ್ರು...... ನಾವು ಬಡವ್ರು ಏನು ಮಾಡಾನ? ಉಪಾಸ ಬಣಾಸ ಸತ್ವಿ.''

ದೇವೇಂದ್ರಪ್ಪ ಈ ಕತೆಯೆಂಬಂತಿದ್ದ ಸಂಗತಿಯನ್ನು ಕೇಳುತ್ತ ಕೇಳುತ್ತ ಬಿಕ್ಕಿ ಬಿಕ್ಕಿ ಅತ್ತುಬಿಟ್ಟ. ಅವರವ್ವ ಮಗನ ಕಣ್ಣೀರು ಒರೆಸಿ :

''ಅಳು ಬ್ಯಾಡೋ ಮಗನೆ, ಅಳು ಬ್ಯಾಡ ..... ನಮ್ಮ ಕಷ್ಟಕ್ಕಿಂತ ಕಷ್ಟ ಅನುಬವಿಸಿದೋರು ಇದ್ರು. ಕೆಲವ್ರು ಸತ್ರು. ಕೆಲವರು ಗುಳೇ ಒದ್ರು. ಒದವರು ದಾರ‍್ಯಾಗ ಸತ್ರು ಅಂತ ಸುದ್ದಿ.......''

''ಅಯ್ಯಯ್ಯಪ್ಪ.....ಇದೇನು ಗೋಳೇ ಅವ್ವಾ ...'' ಎಂದಿದ್ದ ಹುಡುಗ ದೇವೇಂದ್ರಪ್ಪ.

''ಎಲ್ಲಿಗಂತ ಒಗ್ತಾರೆ? ಎಲ್ಲಾ ಕಡೀನೂ ಬರ.... ಬರ.... ಬರ.... ಎಲ್ಲೇತಂಕ ಒದ್ರೂ ಮರಗಿಡ ಎಲ್ಲಾ ಬರಲು ಬರಲು..... ನಿಂತಗೆಂಬಾಕ ನೆಳ್ಳು ಕೂಡಾ ಇಲ್ಲ... ಏನಾದ್ರೂ ನಾಕು ಎಲೆ ಇದ್ರೆ ದನ ತಿಂದಂಗ ಆ ಎಲೇನೇ ತರಕಂಡು ತಿಂದ್ರು..... ಮರದ ತೊಗಟೇನೆ ಸುಲಿದು ತಿಂದ್ರು.... ಕತ್ತಾಳಿ ಗಿಡದ ಬೇರು ಆಗದು ಅದರ ಗಡ್ಡೇನೆ ತಿಂದ್ರು.......''

''ಮನಿಶ್ಯಾರು ಕತ್ತಾಳಿ ಗಡ್ಡೇ ಹ್ಯಂಗ ತಿಂದರೇಯವ್ವಾ.....''

''ಕತ್ತಾಳಿ ಗಡ್ಡೆ ಸಿಕ್ರೇ ಪುಣ್ಣೇವು ಮಾಡಿದ್ರು, ಅದೂ ಸಿಗದಂಗಾತೂ.''

''ಆವಾಗ?''

''ಏನ್ ಮಾಡ್ತಾರೆ? ಎರೆಮಣ್ಣನ್ನು, ರುಮಾಲದ ಬಟ್ಯಾಗ ಜಲ್ಡಿ ಹಿಡ್ದು ಆ ತೆಳ್ಳನ್ನು ಮಣ್ಣನ್ನು ನೀರಿನಾಗ ಕಲ್ಸಿ ಮುದ್ದೆ ಮಾಡಿದಂಗ ಮಾಡಿ ತಿಂದ್ರು.....ಹೂ... ಮಣ್ಣನ್ನು ತಿಂದ್ರು ಮನಿಶ್ಯಾರು.....''

''ಮನಿಶ್ಯಾ ಮಣ್ಣು ಹ್ಯಂಗ ತಿಂದ್ನವ್ವ'' ಎಂದು ಕೇಳಿದ್ದ ಹುಡುಗ ದೇವೇಂದ್ರಪ್ಪ.

''ಹ್ಯಂಗ ಅಂದ್ರೆ.....ನಾನೇ ಒಂದೆರಡು ದಿನ ತಿಂದು ಜೀವ ಇಡಕಂಡಿದ್ದೆ.....''

''ಮಣ್ಣು ತಿಂದ್ರ ಹ್ಯಂಗ ಬದುಕಿರ್ತಾರವ್ವಾ?''

''ಎರೆಮಣ್ಣು ತಿನ್ನಾಕ ಒಂದು ತರಾ ರುಚಿ ಇರ‍್ತೈತಿ! 'ಬಿಮ್ಮೈ' ಎಣ್ಣು ಮಕ್ಕಳು ಆವಾಗ ಆವಾಗ ಮಣ್ಣು ತಿಮ್ತಾರೆ..... ಹಂಗೇ..... ಇಲ್ಲದಿದ್ರೆ.....'' ಎಂದು ದೇವೇಂದ್ರಪ್ಪನ ತಾಯಿ ಮಾತು ನಿಲ್ಲಿಸಿ, ಕಳೆದ ಆ ದುರ್ದಿನಗಳನ್ನು ನೆನೆಸಿಕೊಂಡು ಸುಮ್ಮನಾಗಿದ್ದಳು.

''ಅವ್ವಾ! ನೀ ಆ ಮಣ್ಣು ತಿಂದಮ್ಯಾಲೆ ನಾ ಹುಟ್ಟಿದ್ನೇನು....?'' ಎಂದು ಕೇಳಿದ್ದ ದೇವೇಂದ್ರಪ್ಪ.

''ಇಲ್ಲಪ್ಪ. ಆ 'ದೊಡ್ಡ ಬರ' ಬಿದ್ದಾಗ ನನಗಿನ್ನೂ ಮದ್ವಿ ಆಗಿದ್ದಿಲ್ಲ. ಹತ್ತು ಹನ್ನೆರಡು ವರುಸದವಳಿರಬೇಕು. ಬರ ಮುಗಿದ ಮ್ಯಾಲೆ ನೀ ಹುಟ್ಟಿದ್ದು. ನಿಮ್ಮಪ್ಪ ಬದುಕಿದ್ದೂ ಒಂದು ದೊಡ್ಡ ಮಾತು. ಅವರಪ್ಪ ಅವರಮ್ಮ ಇಬ್ರೂ ದೊಡ್ಡ ಬರದಲ್ಲೇ ಸತ್ರಂತೆ. ಅದನ್ನು ನಾ ಕಾಣೆ. ನಿಮ್ಮಪ್ಪ ಹೇಳತಿದ್ರು, ಇಬ್ಬರೂ ಸತ್ತಮ್ಯಾಲೆ ನಿಮ್ಮಪ್ಪನ್ನ ಯಾರೋ ಪುಣ್ಯಾತ್ಮರು ಸಾಕಿದ್ರಂತೆ.... ದೊಡ್ಡವರಾಗಿ ಇತ್ಲಾಗ ಬಂದು ಇಲ್ಲೆ ಉಳುಕಂಡ್ರು..... ಅವರು ಏಳ್ತಿದ್ದ ಬರದ ಕತೆ ಕೇಳಿದ್ರೆ ಎದೆ ವಡ್ದು ಸತ್ತೇ ಹೋಗ್ತೀವಿ.....''

''ಅದೇನವ್ವ? ನೀ ಹೇಳೋದ್ಕಿನ್ನ ಕೆಟ್ಟೇನು?''

(೬೭ನೇ ಪುಟ ನೋಡಿ)

ಕೋ. ಚೆನ್ನಬಸಪ್ಪ

ಕೃಷಿಯಲ್ಲಿ ಮಾಗಿ ಉಳುಮೆಯ ಮಹತ್ವ

ಎಸ್. ಎಸ್. ಕಟಗಿಹಳ್ಳಿಮಠ

ನಮ್ಮ ದೇಶದಲ್ಲಿ ಪ್ರತಿಶತ ೭೦ ರಿಂದ ೮೦ರಷ್ಟು ಭೂಮಿಯು ಮಳೆ ಆಶ್ರಿತ ಕೃಷಿಯಲ್ಲಿ ಬರುತ್ತದೆಂದು ಹೇಳಬಹುದು. ಮಳೆ ಆಶ್ರಿತ ಕೃಷಿಯಲ್ಲಿ ಕಪ್ಪು ಮಣ್ಣಿನಲ್ಲಿ ಮುಂಗಾರಿ (ಮಳೆಗಾಲದ) ಹಂಗಾಮಿನಲ್ಲಿ ಮತ್ತು ಹಿಂಗಾರಿ ಹಂಗಾಮಿನಲ್ಲಿ ಮಳೆಯ ಅನುಕೂಲವಿದ್ದಾಗ ಅನೇಕ ಕಡೆ ವರ್ಷದಲ್ಲಿ ಎರಡು ಬೆಳೆಗಳನ್ನು (ಹಿಂಗಾರಿ ಮತ್ತು ಮುಂಗಾರಿ) ತೆಗೆದುಕೊಳ್ಳುತ್ತಾರೆ. ಮಾರ್ಚ್ - ಏಪ್ರಿಲ್‌ಗೆ ಬಿಸಿಲಿನ ಪ್ರಖರತೆಯಿಂದ ಭೂಮಿಯು ಗಟ್ಟಿಯಾಗಿಬಿಡುತ್ತದೆ. ಮೊದಲು ಒಂದು ಮಳೆ ಬೀಳದೆ ಈ ಭೂಮಿಗಳಲ್ಲಿ ಉಳುಮೆ ಮಾಡಲು ಹದ ಸಿಕ್ಕುವುದಿಲ್ಲ. ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಮೊದಲ ಬಾರಿಗೆ ಮಳೆ ಬಿದ್ದ ತಕ್ಷಣ ಉಳುಮೆ ಮಾಡಲು ಹದ ಸಿಗುತ್ತದೆ. ರೈತರು ಈ ಮೊದಲ ಮಳೆಯ ಸುಸಂಧಿಯನ್ನು ಕಳೆದುಕೊಳ್ಳುವುದಿಲ್ಲ. ಈ ಮೊದಲು ಮಳೆಯಾದಾಕ್ಷಣ ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಮಾಡುವ ಉಳುಮೆಗೆ ಮಾಗಿ ಉಳುಮೆಯನ್ನುತ್ತಾರೆ.

ಕೃಷಿಯಲ್ಲಿ ಮಾಗಿ ಉಳುಮೆಯ ಎರಡು ಮಹತ್ವದ ಘಟನೆಗಳೆಂದರೆ, ಏಪ್ರಿಲ್ ತಿಂಗಳ ಉತ್ತರಾರ್ಧದಲ್ಲಿ ಮತ್ತು ಮೇ ತಿಂಗಳಲ್ಲಿ ಸಾಮಾನ್ಯವಾಗಿ ಎರಡು ಮೂರು ದೊಡ್ಡ ಮಳೆಗಳು ಆಗುತ್ತವೆ. ಈ ಮಳೆಗಳು ಬಹಳ ರಭಸದಿಂದ ಆಗುವ ಸಂಭವವು ಇರುತ್ತದೆ. ಈ ಮಳೆಗಳು ಆಗುವ ಪೂರ್ವದಲ್ಲಿಯೇ ಮಾಗಿ ಉಳುಮೆಯನ್ನು ಮಾಡಿದ್ದರೆ ಏಪ್ರಿಲ್ ಉತ್ತರಾರ್ಧ ಮತ್ತು ಮೇ ತಿಂಗಳಿನಲ್ಲಿ ಬರುವ ರಭಸದ ಮಳೆಗಳು ನೀರನ್ನು ಮಾಗಿ ಉಳುಮೆಯಾದ ಜಮೀನುಗಳು ಹೀರಿಕೊಂಡು ತಳ ಹಸಿಯಾಗುತ್ತದೆ. ಅದರಿಂದಾಗಿ ಮಳೆ ನೀರು ಭೂಮಿಯಲ್ಲಿ ಇಂಗಿ ಹೆಚ್ಚು ನೀರು ಹರಿದು ಒಡ್ಡುಗಳು ಒಡೆಯುವ ಸಂಭವ ಕಡಿಮೆಯಾಗುತ್ತದೆ. ಅದೂ ಅಲ್ಲದೆ ಭೂಮಿಯ ಮೇಲ್ಮೈಯು ಫಲವತ್ತಾದ ಮಣ್ಣು ನೀರಿನ ಜೊತೆಗೆ ಹರಿದುಹೋಗಿ ಹೊಲದಲ್ಲಿ ಕೊರಕಲು ಬಿದ್ದು ದಿಬ್ಬ ಮತ್ತು ತಗ್ಗುಗಳು ಆಗುವುದಿಲ್ಲ. ಆದುದರಿಂದ ಮಾಗಿ ಉಳುಮೆಯು ಒಣ ಬೇಸಾಯದ ರೈತನಿಗೆ ಒಂದು ವರಪ್ರದಾನವೆನ್ನಬಹುದು. ಇದರಿಂದ ಭೂ ಸಂರಕ್ಷಣೆಯೂ ಆಗುತ್ತದೆ. ಭೂ ಫಲವತ್ತತೆಯು ನಾಶವಾಗದಿರಲು ಇದು ಅನುಕೂಲ ಮಾಡಿಕೊಡುತ್ತದೆ. ಈ ಕಾರಣದಿಂದಲೇ ಅನೇಕ ಕೃಷಿಕರಲ್ಲಿ ಒಂದು ನಾಣ್ಣುಡಿಯು ಪ್ರಚಲಿತವಿರುತ್ತದೆ. ಅದೇನೆಂದರೆ, ''ಬಡವನ ಮಾಗಿ ಉಳುಮೆ ಸಾಹುಕಾರನ ಗೊಬ್ಬರಕ್ಕೆ ಸಮಾನ'' ಎಂದು.

ಮಾಗಿ ಉಳುಮೆಯಿಂದ ಕೃಷಿಕನಿಗೆ ಆಗುವ ಇನ್ನೊಂದು ಒಳ್ಳೆಯ ಲಾಭವೆಂದರೆ ಸಸ್ಯ ಕೀಟ ಪಿಡುಗುಗಳು ಹಾಗೂ ಸಸ್ಯ ರೋಗ ಹಾವಳಿಯು ಬಹಳೇ ಕಡಿಮೆಯಾಗುತ್ತದೆ. ಅದು ಹೇಗೆಂದರೆ, ಬೆಳೆಗೆ ಬೀಳುವ ಶತ ೫೦ರಷ್ಟು ಕೀಟ ಪಿಡುಗುಗಳು ತಮ್ಮ ಮೊಟ್ಟೆಗಳನ್ನು ೨ ರಿಂದ ೩-೪ ಅಂಗುಲದ ಆಳದ ಭೂಮಿಯಲ್ಲಿ ಇಟ್ಟು ಸತ್ತು ಹೋಗುತ್ತವೆ. ಇನ್ನೂ ಅನೇಕ ಕೀಟ ಪಿಡುಗುಗಳು (ತೊಗರಿ, ಅವರೆ, ಅಲಸಂದಿ ಮುಂತಾದ ಬೇಳೆ ಕಾಳುಗಳನ್ನು ಕಾಯಿಗಳನ್ನು ಕೊರೆಯುವ ಹುಳುಗಳು, ಟೊಮ್ಯಾಟೋ, ಬದನೆ, ಹತ್ತಿ ಕಾಯಿ ಕೊರೆಯುವ ಕೀಟಗಳು) ಭೂಮಿಯಲ್ಲಿ ೨ ರಿಂದ ೪ ಅಂಗುಲದ ಆಳದಲ್ಲಿ ಕೋಶಗಳನ್ನು ಇಡುತ್ತವೆ. ಬೆಳೆಗಳನ್ನು ಬಿತ್ತಿದ ಮೇಲೆ ಬೆಳೆಯು ಬೆಳೆಯುತ್ತಿರುವಾಗ ಭೂಮಿಯಲ್ಲಿ ಇಟ್ಟ ಕೀಟದ ಮೊಟ್ಟೆಗಳು ಒಡೆದು ಮರಿಗಳಾಗಿ ಬೆಳೆಯನ್ನು [illegible] (ಚಿಟ್ಟೆ)ಗಳು [illegible] ಮೇಲೆ ಮೊಟ್ಟೆಗಳನ್ನಿಡುತ್ತವೆ (ಕೋಸಿನ ಹುಳುಗಳು ಅಥವಾ ಕಂಬಳಿಹುಳುಗಳು).


ಅಲ್ಲದೆ, ಮಾಗಿ ಉಳುಮೆ ಮಾಡಿದಾಗ ಭೂಮಿಯ ಒಳಗಡೆ ಇದ್ದ ಕೀಟ ಮೊಟ್ಟೆಗಳು, ಕೀಟ ಕೋಶಗಳು ಮತ್ತು ಸಸ್ಯ ರೋಗಾಣುಗಳು ಮೇಲೆ ಬರುತ್ತವೆ. ಹೀಗೆ ಮೇಲೆ ಬಂದಾಗ ಅನೇಕ ಕೀಟ ಪಕ್ಷಿಗಳೂ, ಕಪ್ಪೆ, ಓತಿಕ್ಯಾತ ಮುಂತಾದವುಗಳು ಮೇಲೆ ಬಂದು ಮೊಟ್ಟೆಗಳನ್ನು ಕೋಶಗಳನ್ನು ತಿಂದುಹಾಕುತ್ತವೆ. ಇದಲ್ಲದೆ, ಅನೇಕ ಸಸ್ಯರೋಗಾಣುಗಳು ಏಪ್ರಿಲ್ ಮೇ ತಿಂಗಳ ಬೇಸಿಗೆಯ ಸೂರ್ಯನ ಬಿಸಿಲಿನ ಪ್ರಖರತೆಯಿಂದಲೂ ನಾಶ ಹೊಂದುತ್ತವೆ. ಮಾಗಿ ಉಳುಮೆ ಮಾಡುವುದರಿಂದ ಮತ್ತು ಬೆಳೆ ಪರಿವರ್ತನೆ ಮಾಡುವುದರಿಂದ (ಬೆಳೆಗಳ ಸಾಲುಗತ, ಮೇಲುಗತ ಮಾಡುವುದರಿಂದ) ಶೇಕಡಾ ೫೦ರಷ್ಟು ಕೀಟ ಪಿಡುಗುಗಳನ್ನು ನಿಯಂತ್ರಿಸಬಹುದು. ಹೀಗೆ ಮಾಡುವುದರಿಂದ ಅಪಾಯಕಾರಿಯಾಗಬಹುದಾದ ಕೀಟನಾಶಕಗಳ ಬಳಕೆಯನ್ನು ತಪ್ಪಿಸಲು ಸಹ ಸಾಧ್ಯವಾಗುತ್ತದೆ. ಜಲ ನೆಲ ಮಾಲಿನ್ಯ ಕಡಿಮೆಯಾಗುವುದಲ್ಲದೆ ರೈತನಿಗೆ ಮಿತ್ರರಂತೆ ಉಪಯೋಗವಾಗುವಂತಹ ಸಸ್ಯ ಕೀಟಗಳು, ಪರೋಪ ಜೀವಿಗಳು, ಪರಭಕ್ಷಕ ಜೀವಿಗಳು ನಾಶವಾಗದೆ ಅವುಗಳ ಸಂಖ್ಯೆ ಕಡಿಮೆಯಾಗುವುದೂ ತಪ್ಪುತ್ತದೆ.

ನಮ್ಮ ರಾಜ್ಯದ ಬಹಳಷ್ಟು ಭಾಗಗಳಲ್ಲಿ ಏಪ್ರಿಲ್ ತಿಂಗಳ ಎರಡನೇ ವಾರದಲ್ಲಿ ಸ್ವಲ್ಪ ಮಳೆಯಾಗಿರುವುದರಿಂದ ಮಾಗಿ ಉಳುಮೆ ಮಾಡಲು ಬಹಳೇ ಹದ ಬಂದಿರುತ್ತದೆ. ರೈತರು ಇದರ ಸದುಪಯೋಗ ಮಾಡಿಕೊಂಡು ಮಾಗಿ ಉಳುಮೆಯಿಂದ ಆಗತಕ್ಕ ಲಾಭವನ್ನು ಪಡೆಯಬಹುದು.

ಮಾಗಿ ಉಳುಮೆಯನ್ನು ಇಳುಕಲಿಕ್ಕೆ (ಇಳಜಾರು) ಅಡ್ಡಲಾಗಿ ಮಾಡಬೇಕೆಂಬುದನ್ನು ನಮ್ಮ ರೈತರಿಗೆ ಬೇರೆ ಹೇಳಬೇಕಾಗಿಲ್ಲವಷ್ಟೆ!

‘ಮಾತು’





ಅಕಾಲದಲ್ಲಿ
ಆಡಿದರೂ
ಸಕಾಲದಲ್ಲಿ
ಆಡದಿದ್ದರೂ
ಒಡೆದು ಹೋಗುವ
ಅಮೂಲ್ಯ ಮುತ್ತು.

ಜಿ. ಪ್ರೇಮಾನಂದ, ಅಂಕೋಲಾ

ರುಚಿಕರ - ಆರೋಗ್ಯಕರ ಮಾವಿನ ಹಣ್ಣು

ಬಹಳ ಹಣ್ಣುಗಳಂತೆಯೇ ಮಾವಿನ ಹಣ್ಣಿಗೆ ರಾಜ ಹಣ್ಣೆಂದು ಕರೆಯುವ ರೂಢಿಯಿದೆ. ಮಾವಿನ ಹಣ್ಣು ರುಚಿಕರ ಅಷ್ಟೇ ಅಲ್ಲ, ಪುಷ್ಟಿಕರವೂ ಹೌದು. ಆದರೆ ಈ ಹಣ್ಣು ಬೇಗನೆ ಜೀರ್ಣವಾಗುವುದಿಲ್ಲ. [illegible] ಹೂವು, ಕಾಯಿ, ಬೀಜ, ತೊಗಟೆ, ಬೇರು ಮುಂತಾದವುಗಳು ಔಷಧಕ್ಕೆ ಉಪಯುಕ್ತವೆಂದು ಆಯುರ್ವೇದ ಮೂಲಗಳಿಂದ ತಿಳಿದುಬರುತ್ತದೆ.

ಮಾವನ್ನು ಭಾರತದಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ. ಫೆಬ್ರವರಿ - ಮಾರ್ಚ್ ತಿಂಗಳುಗಳಲ್ಲಿ ಮಾವಿನ ಗಿಡಗಳು ಹೇರಳವಾಗಿ ಹೂಬಿಡುವುದು ಸಾಮಾನ್ಯ. ಮೇ-ಜೂನ್ ಜುಲೈ ತಿಂಗಳುಗಳು ಮಾವಿನ ಹಣ್ಣಿನ ಸುಗ್ಗಿ. ಮಾವಿನಲ್ಲಿ

(ಮುಂದುವರಿಯುವುದು)

ಮಾದರಿ ಹಣ್ಣುಗಳ ಮಧ್ಯೆ ನಲುಗುತ್ತಿರುವ ಸಾಂಪ್ರದಾಯಿಕ ಹಣ್ಣುಗಳು

ಬೇಸಿಗೆ ಬಂತೆಂದರೆ ಶಾಲಾ ಮಕ್ಕಳಿಗೆ ಖುಷಿಯೋ ಖುಷಿ. ಶಾಲೆಯ ನಾಲ್ಕು ಗೋಡೆಗಳ ಮಧ್ಯದಲ್ಲಿ ಕುಳಿತು ಪಾಠ ಕೇಳುತ್ತಿದ್ದವರಿಗೆ ಈ ಎಲ್ಲಾ ಕಟ್ಟುಪಾಡು ದಾಟಿ ರಜೆ ಕಳೆಯಲು ಹಳ್ಳಿಯಲ್ಲಿರುವ ಅಜ್ಜಿ, ತಾತನ ಮನೆಗೆ ಹೋಗುವುದು ಸಹಜವಲ್ಲವೇ? ಹಳ್ಳಿಯ ಪ್ರಕೃತಿಯ ಮಡಿಲಲ್ಲಿ ಆಕರ್ಷಿತರಾಗಿ ಅಲ್ಲಿಯ ವಿಶೇಷತೆ ನೋಡಲು, ಕುತೂಹಲದಿಂದ ಹಳ್ಳಿಯ ಅನ್ವೇಷಣೆಯನ್ನೇ ಮಾಡುತ್ತಾರೆ. ಅತ್ತ ಬೇಲಿಯ ಕಡೆ ನೋಡಿದರೆ ಕೆಂಪನೆಯ ತೊಂಡೆಹಣ್ಣು, ಇತ್ತ ಬೋರೆ ಹಣ್ಣು, ಆ ಕಡೆ ಸೊಗಡು ವಾಸನೆಯಿಂದ ಕೂಡಿದ ಮಾವು, ತಲೆ ಎತ್ತಿ ನೋಡಿದರೆ ನೇರಳೆ, ಪನ್ನೇರಳೆ ಮರ - ಇವೆಲ್ಲವೂ ಮಕ್ಕಳ ಗಮನ ಸೆಳೆಯದೇ ಇರುತ್ತವೆಯೇ? ಆಧುನಿಕ ತಂತ್ರಜ್ಞಾನದಿಂದ ಬೆಳೆದ ಮಾದರಿ ಹಣ್ಣುಗಳು ಮಾಧ್ಯಮದಲ್ಲಿ ಕೂಗು ಎಬ್ಬಿಸುತ್ತಿದ್ದರೂ ಸಾಂಪ್ರದಾಯಿಕ ಹಣ್ಣನ್ನು ಮರೆಯಲು ಸಾಧ್ಯವೇ? ಈ ಹಣ್ಣಿನ ಪೋಷಕಾಂಶಗಳ ಮಧ್ಯೆ ಅವುಗಳು ಲೆಕ್ಕಕ್ಕೇ ಇಲ್ಲ. ಬೇಸಿಗೆ ದಾಹ ಇಂಗಿಸಲು ಬೇಕಲ್ಲವೇ ಈ ಹಣ್ಣು. ಮಕ್ಕಳು ಆಟವಾಡಿ, ದಣಿದು ಎಲಚಿ ಹಣ್ಣಿನ ಕಡೆ ಹಣ್ಣು ಕಿತ್ತು ತಿನ್ನಲು ಓಡುತ್ತಾರೆ. ಹುಳಿಯಿಂದ ಕೂಡಿದ ಹಣ್ಣು ಎಷ್ಟು ರುಚಿ. ಇನ್ನು ಬೇಲದ ಹಣ್ಣು ಕೇಳಬೇಕೆ? ಬೇಲ ಮತ್ತು ಬೆಲ್ಲ ಸೇರಿದ ಪಾನಕ ಘಮಘಮಿಸುತ್ತದೆ. ಬಿಸಿಲಿನಿಂದ ಜೀವರಿನ ದುರ್ವಾಸನೆಯನ್ನು ನಿಯಂತ್ರಿಸುತ್ತದೆ. ದೇಹಕ್ಕೆ ಉಲ್ಲಾಸವನ್ನು ನೀಡುತ್ತದೆ.

ಬೇಸಿಗೆ ಎಂದರೆ ಬರೀ ಬಿಸಿಲೇ? ಬೇಸಿಗೆಯಲ್ಲಿ ಬರುವ ಕಲ್ಲಂಗಡಿ, ನೇರಳೆ, ಕವಳೆ, ಎಲಚಿ, ಬೇಲ, ಕರಬೂಜ, ಮಾವು ಬೇಸಿಗೆಯಲ್ಲಲ್ಲದೆ ಮಳೆಗಾಲದಲ್ಲಿ ಬರುತ್ತವೆಯೇ?

ಮಾವಿನ ಹಣ್ಣಿನ ರಸಾಯನ, ಬಾದಾಮಿಯ ರಸದೌತಣ, ನೀಲಂ, ತೋತಾಪುರಿ ಹೀಗೆ ಅನೇಕ ಜಾತಿಯ ಮಾವಿನ ರುಚಿಯು ನಮ್ಮ ದೇಶದ ಎಲ್ಲಾ ಜನತೆ ಸವಿಯದೇ ಇರುವುದಿಲ್ಲ.

ಬಾಯಾರಿಕೆ ಅಂದ ತಕ್ಷಣ ದಾಹ ಇಂಗಿಸಲು ಕಲ್ಲಂಗಡಿಯಾದರೆ, ಬಿಸಿಲಿನಿಂದ ದುಡಿದು ಒಳಗೆ ಬಂದಾಗ ಕರಬೂಜದ ಜೊತೆ ಬೆಲ್ಲ ಸೇರಿಸಿ ತಿನ್ನಲು ಎಷ್ಟು ರುಚಿ. ದೇಹಕ್ಕೆ ಉಲ್ಲಾಸವನ್ನೇ ನೀಡುತ್ತದೆ.



ಎಲ್ಲರಿಗೂ ಎಟುಕದ ಹಣ್ಣುಗಳು

ಒಂದು ಗುಂಪಿನ ಮಕ್ಕಳು ನೇರಳೆ ಮರದ ಹತ್ತಿರವೇ ಇದ್ದು, ನೇರಳೆ ಮರಕ್ಕೆ ಕಲ್ಲು ಎಸೆಯುವುದು, ಉದುರಿದ ಹಣ್ಣನ್ನು ತಿನ್ನುವುದು, ಇನ್ನೊಂದು ಗುಂಪಿನ ಮಕ್ಕಳು ಮರಕೋತಿ ಆಟದಲ್ಲಿ ಮುಳುಗಿ, ನೇರಳೆ, ಪನ್ನೇರಳೆ, ಸೀಬೆ ಮರದ ಮೇಲೆ ಇರುತ್ತಾರೆ. ಎಲ್ಲಾ ಹಣ್ಣುಗಳನ್ನು ತಿನ್ನುತ್ತಾ ಬೇಸಿಗೆ ಮುಗಿಯುತ್ತಾ ಬಂತಲ್ಲವೇ ಎಂದು ಕೊರಗುತ್ತಾರೆ. ನೈಸರ್ಗಿಕವಾಗಿ ಬೆಳೆಯುವ ಹಣ್ಣನ್ನು ನಿರಾಕರಿಸಿ ಇತ್ತೀಚಿನ ಸೇಬು ಬೆಳೆಗಾರರು ಮತ್ತು ಮಾರಾಟಗಾರರು ಸೇಬಿನ ಪ್ರಚಾರಕ್ಕಾಗಿ ನಿಂತಿದ್ದಾರೆ. ಆರೋಗ್ಯ ದೃಷ್ಟಿಗಿಂತ ಪ್ರಚಾರವೇ ಜಾಸ್ತಿಯಾಗಿದೆ. ಸೇಬು ಹಣ್ಣುಗಳಲ್ಲೇ ಶ್ರೇಷ್ಠ ಎನ್ನುವುದು ಅವರ ಪ್ರಚಾರವಾಗಿದೆ. ಸೇಬನ್ನು ಕೊಂಡು ತಿನ್ನಲು ದುಬಾರಿ. ಕೆಲವು ವೈದ್ಯರು ಒಂದು ಸೇಬು ತಿನ್ನಿ, ಆರೋಗ್ಯ ಹೆಚ್ಚಿಸಿಕೊಳ್ಳಿ ಎನ್ನುತ್ತಾರೆ. ನೈಸರ್ಗಿಕವಾಗಿ, ಸುಲಭವಾಗಿ ಸೇಬಿಗಿಂತಲೂ ಹೆಚ್ಚು ಪೌಷ್ಟಿಕಾಂಶ ಮತ್ತು ಕ್ಯಾಲೋರಿ ಇರುವ ಸೀಬೆ, ಕವಳೆ, ಎಲಚಿ, ಬೇಲ, ನೇರಳೆ, ಪನ್ನೇರಳೆ, ಹಣ್ಣುಗಳಿಲ್ಲವೆ? ಈ ಹಣ್ಣುಗಳನ್ನು ತಿನ್ನಬಾರದೇಕೆ? ಇದರಿಂದ ಆರೋಗ್ಯ ಹೆಚ್ಚಿಸಿಕೊಳ್ಳಲು ಸಾಧ್ಯತೆ ಇದೆ ಅಲ್ಲವೆ!

ಸೇಬು ಅನಾರೋಗ್ಯ ಸ್ಥಿತಿಯಲ್ಲಿ ಇರುವವರು ತಿನ್ನುವುದು ಉತ್ತಮ. ಇದರಲ್ಲಿ ಕೊಬ್ಬಿನಂಶ ಕಡಿಮೆ ಇರುತ್ತದೆ. ಸೋಡಿಯಂ ಕಡಿಮೆ ಇರುತ್ತದೆ. ಆದ್ದರಿಂದ ಇದು ರೋಗಿಯು ತಿನ್ನಲು ಒಳ್ಳೆಯ ಹಣ್ಣು. ಇದರಲ್ಲಿ ಪೊಟ್ಯಾಶಿಯಂ ಇರುವುದರಿಂದ ದೇಹದ ಸಮತೋಲನವನ್ನು ಕಾಪಾಡುತ್ತದೆ.

ಸೇಬು ಬೆಳೆಗಾರರು, ಮಾರಾಟಗಾರರು ಮತ್ತು ವೈದ್ಯರು ಹೇಳುವಂತೆ ಸೇಬು ತಿಂದು ಆರೋಗ್ಯ ಹೆಚ್ಚಿಸಿಕೊಳ್ಳುವುದಕ್ಕಿಂತ ಮೇಲ್ಕಂಡ ಸಾಂಪ್ರದಾಯಿಕ ಹಣ್ಣುಗಳು ಸುಲಭವಾಗಿ ಸುತ್ತಮುತ್ತಲೂ ಸಿಗುತ್ತವೆ. ಇವನ್ನು ತಿಂದು ಆರೋಗ್ಯ ಹೆಚ್ಚಿಸಿಕೊಳ್ಳೋಣವಲ್ಲವೆ!

ಕಾಯಿಲೆ ಬಂದಾಗ ಇತರೇ ಹಣ್ಣನ್ನು ತಿನ್ನದೆ, ಸೇಬು ತಿಂದು ದೇಹದ ಸಮತೋಲನವನ್ನು ಕಾಪಾಡಿಕೊಳ್ಳಬಹುದು.

ಎಚ್. ಕೆ. ಪುಷ್ಪ
ಬೈಫ್, ತಿಪಟೂರು, ತುಮಕೂರು ಜಿಲ್ಲೆ

(ಹಿಂದಿನ ಪುಟದಿಂದ)

ಅನೇಕ ಜಾತಿಗಳಿರುತ್ತವೆ. ರಸವನ್ನು ಸೀಪಿ ತಿನ್ನುವ ಸ್ಥಳೀಯ ತಳಿಗಳು ಅನೇಕ. ದೊಡ್ಡ ಅಡಿಕೆ ಗಾತ್ರದಿಂದ ಹಿಡಿದು ತೆಂಗಿನಕಾಯಿ ಗಾತ್ರದವರೆಗೂ ಈ ಹಣ್ಣುಗಳು ಇರುತ್ತವೆ. ಈ ಕೆಳಗೆ ಕಾಣಿಸಿದ ತಳಿಗಳ ಹಣ್ಣುಗಳು ಸಾಮಾನ್ಯವಾಗಿ ಹೆಚ್ಚು ಪ್ರಚಲಿತ: ರಸಪುರಿ (ಪಾಯಿರಿ), ಅಫೂಸ್ (ಬಾದಾಮಿ). ಮಲಗೋವ ಅಥವಾ ಸಣ್ಣೆತ್ತಿ, ತೋತಾಪುರಿ, ನೀಲಂ, ಜಾಮೂನ್, ಲಂಗರಾ, ಮಾಲಾ, ಕೃಷ್ಣಭೋಗ, ದಸರಿ ಮುಂತಾದವುಗಳು. ಸಂಕೀರ್ಣ ತಳಿಗಳೆಂದರೆ ಮಲ್ಲಿಕಾ, ಅಮ್ರಪಾಲಿ. ರತ್ನ, ಪ್ರಭಾಶಂಕರ, ರಾಜೇಂದ ಮುಂತಾದವು.

ಮಾವಿನ ಹಣ್ಣುಗಳನ್ನು ರಸ ಸೀಪಿ ತಿನ್ನುತ್ತಾರೆ. ಹೆಚ್ಚಿ [illegible] ತಿನ್ನುತ್ತಾರೆ. ರಸ [illegible] ಸೀಕರಣೆ ಮಾಡಿ [illegible]ತ್ತಾರೆ, ಕರ್ನಾಟಕದಲ್ಲಂತೂ ಮಾವಿನ ಹಣ್ಣಿನ [illegible] ಹೋಳಿಗೆ ಸೀಕರಣೆ ([illegible] ಸೀಕರಣೆ) ಊಟವು ರುಚಿಯಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಇದಲ್ಲದೆ ಮಾವಿನ ಹಣ್ಣಿನ ಜಲ್ಲಿ, ಜಾಮ್, ಪಾಕ್ ಮುಂತಾದವುಗಳು ಬಹಳ ರುಚಿಕರ. ಊಟಕ್ಕೆ ಮೊದಲು ಉಪ್ಪಿನ ಕಾಯಿಯೆಂಬ ಗಾದೆಯಂತೆ ಮಾವಿನ ಕಾಯಿಯ ಉಪ್ಪಿನಕಾಯಿಗೆ ಶ್ರೇಷ್ಠತೆ ಇದೆ. ಮಾವಿನ ಕಾಯಿಗಳನ್ನು ಸಾರು, ಪಲ್ಯ ಮತ್ತು ಚಟ್ನಿಗಾಗಿಯೂ ಬಳಸುವುದು ಅತಿಸಾಮಾನ್ಯ. ಮಾವಿನಕಾಯಿ ಚಿತ್ರಾನ್ನದ ರುಚಿ ಯಾರಿಗೆ ಹಿಡಿಸುವುದಿಲ್ಲ? ಹೀಗಾಗಿ ಮಾವು ರುಚಿಗೆ ಮತ್ತು ಮಧುರತೆಗೆ ಪ್ರಾಮುಖ್ಯತೆಯನ್ನು ಪಡೆದಿದೆ.


ಕರುಳು ಬೇನೆ, ಮಂದಾಗ್ನಿ, ಹೆಚ್ಚು ದೇಹದ ಉಷ್ಣತೆ, ಮೂಲವ್ಯಾಧಿ ಇವೆಲ್ಲಾ ಇದ್ದವರಿಗೆ ಮಾವಿನ ಹಣ್ಣು ಹಿತಕರವಲ್ಲ. ಮಿತಿಮೀರಿ ಮಾವಿನ ಹಣ್ಣು ತಿಂದರೆ ಮಲಬದ್ಧತೆ, ಕಣ್ಣಿನ ಬೇನೆಗಳು, ರಕ್ತದೋಷಗಳು ಮತ್ತು ಅಜೀರ್ಣ ಉಂಟಾಗಬಹುದು. ಮಾಗಿದ ಮಾವಿನ ಹಣ್ಣುಗಳಲ್ಲಿ ಕೆಳಗೆ ಕಾಣಿಸಿದಂತೆ ಪೌಷ್ಟಿಕಾಂಶಗಳು ಇರುತ್ತವೆ. ಸಸಾರಜನಕ (ಪ್ರೊಟೀನ್) ಶೇ. ೦.೬, ಕೊಬ್ಬು (ಫ್ಯಾಟ್) ಶೇ. ೦.೧, ಪಿಷ್ಟಮಯ (ಕಾರ್ಬೋಹೈಡ್ರೇಟ್ಸ್) ಶೇ. ೧೧.೮, ಖನಿಜ ಮತ್ತು ಖನಿಜ ಲವಣಗಳಾದ ಸುಣ್ಣ (ಕ್ಯಾಲ್ಸಿಯಂ) ಶೇ. ೧.೦೧, ಫಾಸ್‌ಫರಸ್ ಶೇ. ೦.೦೨, ಕಬ್ಬಿಣ ಶೇ. ೦.೩ ಮಿ.ಗ್ರಾಂ., ಜೀವಸತ್ವಗಳಾದ (ವಿಟಮಿನ್) ಎ ೪೮೦೦ ಐ.ಯು.ಗೆ ೧೩ ಮಿ.ಗ್ರಾಂ., ನೀರು ಶೇ. ೮೬.೧.

ಮಾವಿನ ಹಣ್ಣಿನ ಯೋಗ್ಯ ಬಳಕೆಯಿಂದ ನರದೌರ್ಬಲ್ಯವು ಕಡಿಮೆಯಾಗುತ್ತದೆ. ಈ ಹಣ್ಣು ಹೃದಯಕ್ಕೆ ಹಿತಕರ, ವಾತ-ಪಿತ್ತ ನಾಶಕ, ವೀರ್ಯವರ್ಧಕ ಎಂದು ಆಯುರ್ವೇದ ಗ್ರಂಥಗಳಲ್ಲಿ ಹೇಳಲಾಗಿದೆ.

ಕಟಗಿಹಳ್ಳಿಮಠ ಎಸ್. ಎಸ್.
ನಂ. ೧೨೩, ೧೬ನೇ ಕ್ರಾಸ್, ೧ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು - ೧೦



ಬೆಂಗಳೂರಿನ ಮಾ-ಲೆ ಪ್ರಕಾಶನದ ಆಶ್ರಯದಲ್ಲಿ ನಡೆದ ಡಾ|| ದೇವಿಪ್ರಸಾದ್ ಚಟ್ಟೋಪಾಧ್ಯಾಯ ಸಂಸ್ಮರಣ ಉಪನ್ಯಾಸ ಮಾಲೆಯಲ್ಲಿ ಪ್ರಸಿದ್ಧ ತೆಲುಗು ಲೇಖಕ, ವಿಮರ್ಶಕ, ಕಳೆದ ವರ್ಷ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿಜೇತರಾದ ಶ್ರೀ ವಲ್ಲಂಪಾಟಿ ವೆಂಕಟಸುಬ್ಬಯ್ಯ ಉಪನ್ಯಾಸ ನೀಡಿದರು. **ವಿಷಯ:** ಆಧುನಿಕ ತೆಲುಗು ಸಾಹಿತ್ಯದ ಮೇಲೆ ಚಳುವಳಿಗಳ ಪ್ರಭಾವ.




ಸಮಕಾಲೀನ ಅಧ್ಯಯನ ವೇದಿಕೆಯ ಆಶ್ರಯದಲ್ಲಿ 13-5-2000ದಂದು ನಡೆದ ವಿಚಾರಗೋಷ್ಠಿಯಲ್ಲಿ, ಖ್ಯಾತ ರಂಗ ನಿರ್ದೇಶಕ ಶ್ರೀ ಬಿ. ವಿ. ಕಾರಂತ ಅವರು ಜಾಗತಿಕ ಭಾಷೆಗಳ, ಸಾಹಿತ್ಯದ ಹಿನ್ನೆಲೆಯಲ್ಲಿ ನಾಟಕ - ಅನುವಾದಗಳಲ್ಲಿ 'ಧ್ವನಿ ವಿನ್ಯಾಸ' ಎಂಬ ವಿಷಯ ಕುರಿತು ಮಾತನಾಡಿದರು.

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಏಳನೇ ರಾಜ್ಯ ಸಮ್ಮೇಳನವು ಬೆಂಗಳೂರಿನಲ್ಲಿ ಏಪ್ರಿಲ್ 28ರಿಂದ ಮೇ 1ನೇ ತಾರೀಖಿನವರೆಗೆ ನಡೆಯಿತು. ರಾಜ್ಯದ ನಾನಾ ಕಡೆಗಳಿಂದ ಬಂದಿದ್ದ ಸಾವಿರಕ್ಕೂ ಹೆಚ್ಚು ಕಾರ್ಮಿಕ ಪ್ರತಿನಿಧಿಗಳು ಭಾಗವಹಿಸಿದ್ದರು. ಚಿತ್ರ : ಕಾರ್ಯಕ್ರಮ ನಿರ್ವಹಿಸುತ್ತಿರುವ ಕಾರ್ಮಿಕ ನಾಯಕರು.



ಹಿರಿಯ ಸಾಹಿತಿ, ಚಿಂತಕ, ಪ್ರಾಧ್ಯಾಪಕ ಸನ್ಮಾನ್ಯ ಶ್ರೀ ಎ. ಎನ್. ಮೂರ್ತಿರಾಯರು ಒಂದು ನೂರು ವರ್ಷಗಳ ಸಾರ್ಥಕ ಜೀವನವನ್ನು ಮುಗಿಸಿ ಜೂನ್ 16ರಂದು ನೂರೊಂದನೆಯ ವರ್ಷಕ್ಕೆ ಕಾಲಿರಿಸುತ್ತಿದ್ದಾರೆ. ಅವರಿಗೆ 'ಹೊಸತು' ಅಭಿನಂದನೆಗಳು, ಶುಭಕಾಮನೆಗಳು.







ಪುಸ್ತಕ ಸೊಗಸು ಬಹುಮಾನ





ಕನ್ನಡ ಪುಸ್ತಕ ಪ್ರಾಧಿಕಾರವು ಉತ್ತಮ ವಿನ್ಯಾಸ ಮತ್ತು ಮುದ್ರಣಕ್ಕಾಗಿ ಪ್ರತಿ ವರ್ಷ ಪ್ರಕಾಶಕರಿಗೆ ನೀಡುತ್ತ ಬಂದಿರುವ 'ಪುಸ್ತಕ ಸೊಗಸು' ಬಹುಮಾನ ವಿಭಾಗದಲ್ಲಿ 1998ನೇ ಸಾಲಿನಲ್ಲಿ ಪ್ರಕಟವಾದ **ನವಕರ್ನಾಟಕ ಜ್ಞಾನ-ವಿಜ್ಞಾನ ಕೋಶ** ಸಂಪುಟಗಳು, 1999ನೇ ಸಾಲಿನಲ್ಲಿ ಪ್ರಕಟವಾದ ವ್ಯಾಸರಾಯ ಬಲ್ಲಾಳರ **ಕಲಾವಿದ ಹೆಬ್ಬಾರರ ರೇಖಾಲಾವಣ್ಯ** ಕೃತಿ ಪ್ರಥಮ ಬಹುಮಾನ ಗಳಿಸಿವೆ. ಪ್ರೊ|| ಡಿ. ಆರ್. ಬಳೂರಗಿ ಅವರ **ಪ್ರತಿಬಿಂಬ** ಮಕ್ಕಳ ವಿಭಾಗದಲ್ಲಿ ಮತ್ತು ಡಾ|| ಪಿ. ಎಸ್. ರೈ ಅವರ **ಕೀಟಗಳು** ಎಂಬ ಕೃತಿ ಮೆಚ್ಚುಗೆ ಬಹುಮಾನ ಪಡೆದಿವೆ.

ಭಾರತೀಯ ಮತ್ತು ಐರೋಪ್ಯ ಅಶ್ವಮೇಧ- ಒಂದು ತೌಲನಿಕ ನೋಟ

ಅನೇಕ ಕ್ರಿಯಾವಿಧಿಗಳಲ್ಲಿ ಆಚರಣೆಗಳು ಸಾಂಕೇತಿಕವಾಗಿರುತ್ತವೆ. ಅದು ಯಾವುದೇ ಒಂದು ಸಂಸ್ಕೃತಿಗೆ ವಿಶಿಷ್ಟವಾದುದಲ್ಲ. ಅಶ್ವಮೇಧಯಾಗದ ಸಂದರ್ಭದಲ್ಲಿನ ಕೆಲವು ಆಚರಣೆಗಳತ್ತ ಇಲ್ಲಿ ಗಮನ ಹರಿಸಲಾಗಿದೆ.

ಸಂತಾನ, ಸಂಪತ್ತು, ಸಮೃದ್ಧಿಗಳಿಗಾಗಿ ಹಾಗೂ ಶತ್ರು ನಾಶಕ್ಕಾಗಿ ಪ್ರಾಚೀನ ಭಾರತದ ರಾಜರುಗಳು ಅಶ್ವಮೇಧ ಯಾಗವನ್ನು ಮಾಡುತ್ತಿದ್ದರು. ಯಜ್ಞದ ಪೌರಾಣಿಕತೆ ಮತ್ತು ಆಚರಣೆಗಳನ್ನು ಕುರಿತು ವೈದಿಕ ಸಾಹಿತ್ಯದಲ್ಲಿ ಮತ್ತು ಧರ್ಮಶಾಸ್ತ್ರ ಗ್ರಂಥಗಳಲ್ಲಿ ಸುದೀರ್ಘವಾದ ವರ್ಣನೆಗಳಿವೆ.

ಭಾರತೀಯ ಧರ್ಮಶಾಸ್ತ್ರ ಗ್ರಂಥಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿರುವ ಅನೇಕ ವಿದ್ವಾಂಸರು ಅಶ್ವಮೇಧದ ಆಚರಣೆ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ, ಆದರೆ ಗ್ರೀಕ್, ರೋಮನ್, ಐರಿಷ್, ರಷ್ಯನ್ ಮುಂತಾದ ಪಾಶ್ಚಾತ್ಯ ಪೌರಾಣಿಕ ಸಾಹಿತ್ಯದಲ್ಲಿ ಹೇರಳವಾಗಿ ಅಶ್ವಮೇಧದ ವಿವಿಧ ರೂಪಗಳು ಉಲ್ಲೇಖವಾಗಿವೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಕ್ರಿ.ಶ. ೧೧೮೫ರಲ್ಲಿ ಗಿರಾಲ್ಡಸ್ ಕ್ಯಾಂಬ್ರಿನ್‌ಸಿಸ್ ಎಂಬ ಪಾದ್ರಿ ಐರಿಷ್ ಅಶ್ವಮೇಧದ ಆಚರಣೆಯನ್ನು ಕಂಡು ಗಾಬರಿಗೊಂಡು ಈ ರೀತಿ ವರದಿ ಮಾಡಿದ್ದಾನೆ:

''ಬಿಳಿ ಬಣ್ಣದ ಒಂದು ಹೆಣ್ಣು ಕುದುರೆಯನ್ನು ಸಾರ್ವಜನಿಕರ ಸಮ್ಮುಖದಲ್ಲಿ ರಾಜನ ಬಳಿಗೆ ಕರೆತರಲಾಯಿತು. ಆಗ ಅವನು ತನ್ನ ರಾಜ ಪದವಿಯ ಉನ್ನತಿಗೆ ತಕ್ಕಂತೆ ವರ್ತಿಸದೆ ಪ್ರಾಣಿಯಾಗಿ, ಧರ್ಮವನ್ನು ಮರೆತು, ಪಶುವಿನಂತೆ ಕುದುರೆಯನ್ನು ಸಮೀಪಿಸುತ್ತಾ, ನಾಚಿಕೆ ತೊರೆದು, ವಿಚಾರಹೀನನಾಗಿ ತಾನೊಂದು ಮೃಗವೋ ಎಂಬಂತೆ ನಡೆದುಕೊಂಡ. ಆನಂತರ ಆ ಹೆಣ್ಣು ಕುದುರೆಯನ್ನು ಬಲಿಕೊಟ್ಟು ತುಂಡುಗಳಾಗಿ ಕತ್ತರಿಸಿ ಬೇಯಿಸಲಾಯಿತು. ಆ ಮಾಂಸದ ಸಾರಿನಲ್ಲಿ ರಾಜನು ಸ್ನಾನ ಮಾಡುತ್ತಾ ಪ್ರಾಣಿಯಂತೆ ತನ್ನ ಬಾಯಿಯಿಂದ ನೇರವಾಗಿ ಆ ಸಾರನ್ನು ಕುಡಿದ ಮತ್ತು ಮಾಂಸವನ್ನು ತಿಂದ.'' (*The Historic Works of Giraldus Cambrensis*, Trans. Hoare, London, 1905)

ರಾಜನು ಕುದುರೆಯೊಡನೆ ನಡೆಸಿದ ಸಂಭೋಗವನ್ನು ಸನ್ಯಾಸಿಯಾದ ಕ್ಯಾಂಬ್ರಿನ್‌ಸಿಸ್ ತನ್ನ ಸೌಮ್ಯೋಕ್ತಿಯಿಂದ ಮೇಲಿನಂತೆ ನಿರೂಪಿಸಿದ್ದಾನೆ. ಪಾದ್ರಿಯೊಬ್ಬನು ಅತ್ಯಂತ ಸಂಕೋಚದಿಂದ ಆ ದೃಶ್ಯವನ್ನು ನಿರೂಪಿಸಿದ್ದರೂ ಅದರಿಂದ ಮೂರು ಮುಖ್ಯ ಅಂಶಗಳು ಸ್ಪಷ್ಟವಾಗುತ್ತವೆ : ಹೆಣ್ಣು ಕುದುರೆಯೊಡನೆ ರಾಜನ ಸಂಭೋಗ, ಕುದುರೆಯ ಬಲಿ ಮತ್ತು ಅದರ ಮಾಂಸವನ್ನು ತಿನ್ನುವುದು ಹಾಗೂ ಅದರ ಜೀವರಸವನ್ನು ಕುಡಿಯುವುದು ಅತ್ಯಂತ ಅಶ್ಲೀಲ ಹಾಗೂ ಅನಾಗರಿಕವೆಂದು ಕಂಡ ಈ ದೃಶ್ಯವು ಸನ್ಯಾಸಿಯ ಬರವಣಿಗೆಯಲ್ಲಿ ಸೌಮ್ಯಗೊಂಡಿರುವುದು ನಿಚ್ಚಳವಾಗಿದೆ.

ಇಂಡೋ-ಯುರೋಪಿಯನ್ ಅಧ್ಯಯನದಲ್ಲಿ ಐರಿಷ್ ಪುರಾಣಗಳು ಅತ್ಯಂತ ಪ್ರಾಚೀನ ನುಡಿಗಟ್ಟು ಮತ್ತು ಪೌರಾಣಿಕ ಅಂಶಗಳನ್ನು ಉಳಿಸಿಕೊಂಡಿವೆ. ಐರಿಷ್ ಜನಾಂಗ ತಮ್ಮ ಹುಂಬತನಕ್ಕೆ ಹೆಸರಾದವರಾದುದರಿಂದ ಅವರು ಪ್ರಾಚೀನ ಅಂಶಗಳನ್ನು ಹಾಗೇ ಉಳಿಸಿ ಕೊಂಡಿರುವರೆಂಬುದಕ್ಕೆ ಆ ಘಟನೆ ಪೋಷಕವಾಗುತ್ತದೆ.

ಐರಿಷ್ ಮತ್ತು ಭಾರತೀಯ ಅಶ್ವಮೇಧಗಳ ತೌಲನಿಕ ಅಧ್ಯಯನ ಪ್ರಾಚೀನ ಜನಾಂಗಗಳ ಆಶೋತ್ತರಗಳನ್ನು



ಹಾಗೂ ಅವುಗಳ ಈಡೇರಿಕೆಗಾಗಿ ಅವರು ಆಚರಿಸುತ್ತಿದ್ದ ಮಾಂತ್ರಿಕ ಕ್ರಿಯೆಗಳು ಮತ್ತು ಅವುಗಳ ಸಾಂಕೇತಿಕ ಅರ್ಥಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಭಾರತೀಯ ಅಶ್ವಮೇಧ ಯಜ್ಞದ ಆಚರಣೆಯಲ್ಲಿ 'ಮಹಿಷಿ' ಎಂದು ಕರೆಯಲಾದ ಪಟ್ಟದ ರಾಣಿ ಮತ್ತು ಯಜ್ಞದ ಗಂಡು ಕುದುರೆ ಮುಖ್ಯಪಾತ್ರಗಳು. ಬಲಿಯಾದ ಕುದುರೆಯೊಡನೆ ರಾಣಿ ಮಲಗಿ ತನ್ನ ಕಾಲುಗಳಿಂದ ಕುದುರೆಯ ಹಿಂಗಾಲುಗಳನ್ನು ಸುತ್ತಿಕೊಳ್ಳುತ್ತಾಳೆ. ಮತ್ತು ಕುದುರೆಯ ಲಿಂಗವನ್ನು ತನ್ನ ಯೋನಿಯಲ್ಲಿಟ್ಟು ಕೊಳ್ಳುತ್ತಾಳೆ (ಯಜುರ್ವೇದ ೨೩.೨೦). ''ನಾವಿಬ್ಬರೂ ನಮ್ಮ ಕಾಲುಗಳನ್ನು ಹೆಣೆದುಕೊಂಡು ಇಲ್ಲಿ ಮಲಗೋಣ'' (ಆಶ್ವಲಾಯನ ಶ್ರೌತ ಸೂತ್ರ [illegible];

ತೈತ್ತಿರೀಯ ಸಂಹಿತಾ ೭.[illegible]; ವಾಜಸನೇಯಿ ಸಂಹಿತಾ ೨೩.೨೦; ಶತಪಥ ಬ್ರಾಹ್ಮಣ [illegible]). ಕ[illegible] ಶ್ರೌತಸೂತ್ರದ ಭಾಷ್ಯಕಾರನು 'ತಮ್ಮ ಸಂಗಮವನ್ನು ಸಾಧಿಸಲು ಅವರು ಕಾಲುಗಳನ್ನು ಚಾಚುತ್ತಾರೆ' ಎಂದು ವ್ಯಾಖ್ಯಾನಿಸಿದ್ದಾನೆ (೨೦.೬.೧೪-೨೦). ಭಾರತೀಯ ಪೌರಾಣಿಕ ಸಾಹಿತ್ಯ ಕುದುರೆಯ ಕಾಲುಗಳ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದೆ.

ಐರಿಷ್ ಆಚರಣೆಯಲ್ಲಿ ರಾಜನು ತನ್ನ ಪುರುಷತ್ವವನ್ನು ಉಳಿಸಿಕೊಳ್ಳಲು ಕುದುರೆಯ ಮಾಂಸವನ್ನು ತಿಂದು ರಕ್ತವನ್ನು ಕುಡಿಯುತ್ತಾನೆ. ಅದೇ ರೀತಿ ಭಾರತೀಯ ವೈದಿಕ ಸಾಹಿತ್ಯದಲ್ಲಿ ರಾಣಿಯು ತನ್ನ ಗರ್ಭಧಾರಣಾ ಶಕ್ತಿಯನ್ನು ಗಳಿಸಿಕೊಳ್ಳಲು ಗಂಡು ಕುದುರೆಯ ಬೀಜವನ್ನು ಸಾಂಕೇತಿಕವಾಗಿ ಸ್ವೀಕರಿಸುತ್ತಾಳೆ. ಯಜ್ಞದ ಯಜಮಾನ ಪುರೋಹಿತರಿಗೆ ಅನ್ನ ಮತ್ತು ಚಿನ್ನವನ್ನು ನೀಡುತ್ತಾನೆ. ಶತಪಥ ಬ್ರಾಹ್ಮಣ (೧೩.೧.೧.೧-೪) ಅದರ ಸಂಕೇತವನ್ನು ಹೀಗೆ ವಿವರಿಸುತ್ತದೆ: ''ಅಧ್ವರ್ಯು ಅರ್ಚಕರ ಅನ್ನವನ್ನು ಬೇಯಿಸುತ್ತಾನೆ. ಅವನು ಹಾಗೆ ಸಿದ್ಧಪಡಿಸಿದುದು ಬೀಜ. ಕುದುರೆಯನ್ನು ಬಲಿಕೊಟ್ಟಾಗ ಅದರ ಬೀಜ ಅದರಿಂದ ಹೊರಟುಹೋಗಿ ಚಿನ್ನವಾಯಿತು. ಅವನು ಚಿನ್ನವನ್ನು ಅರ್ಚಕರಿಗೆ ಕೊಟ್ಟಾಗ ಅವನು ಕುದುರೆಗೆ ಚಿನ್ನವನ್ನು ಒದಗಿಸುತ್ತಾನೆ. ಅನ್ನದ ಉಂಡೆ ಬೀಜ, ಚಿನ್ನ ಬೀಜ. ಬೀಜದಿಂದ ಅವನು ಕುದುರೆಗೆ ಮತ್ತು ಯಜ್ಞದ ಯಜಮಾನನಿಗೆ ಬೀಜವನ್ನು ಒದಗಿಸುತ್ತಾನೆ.''

ರಾಣಿಯರು ಕುದುರೆಗೆ ಆಹಾರವನ್ನೂ, ''ಬೀಜವಾದ ಅನ್ನವನ್ನೂ'' ಒದಗಿಸುತ್ತಾರೆ (ಆಶ್ವಲಾಯನ ಶ್ರೌತ ಸೂತ್ರ ೨೦.೧೬.೧೯-೨೦). ಯಜ್ಞದ ಆಚರಣೆಯಲ್ಲಿ ಭಾಗವಹಿಸುವ ಪಟ್ಟದ ರಾಣಿಯೂ ಸೇರಿದಂತೆ ನಾಲ್ವರು ರಾಣಿಯರು ಅನ್ನ ಮತ್ತು ಪಾಯಸವನ್ನು ಕುದುರೆಗೆ ಉಣಿಸುತ್ತಾರೆ. ಯಾವ ಹೆಂಡತಿಯು ನೀಡಿದ ಆಹಾರವನ್ನು ಕುದುರೆಯು ತಿನ್ನುತ್ತದೋ ಅವಳಿಗೆ ಪುತ್ರನಾಗಿ [illegible] ಹೊಂದುತ್ತಾನೆ (ಬೌಧಾಯನ ಶ್ರೌತ ಸೂತ್ರ ೧೫.೨೫-೨೬). ಅನ್ನದ [illegible] ಸಂಕೇತವಾಗಿ ಅನೇಕ ವೈದಿಕ [illegible] ಬಳಕೆಯಾಗಿದೆ.

ಅಸ್ಸಾಮಿನ ಸುಗ್ಗಿಯ ಹಬ್ಬದಲ್ಲಿ [illegible] ಅರ್ಪಿಸಲಾಗುವುದು [illegible] ಕುಣಿಯುತ್ತಾ [illegible] ಆರಾಧಿಸಲಾಗುವುದು [illegible]

ಪ್ರೊ॥ ಬಿ. ವಿ. ವೀರಭದ್ರಪ್ಪ

ಮಾತ್ರ ನದಿಯಲ್ಲಿ ಎಸೆಯಲಾಗುವುದು. ತಲೆಯನ್ನು ಮುಂದಿನ ವರ್ಷಕ್ಕಾಗಿ ಹಾಗೆಯೇ ಉಳಿಸಿಕೊಳ್ಳುವರು. ನದಿಯ ದಡದ ಮೇಲೆ ಕುಳಿತು ಎಲ್ಲರೂ ಅನ್ನವನ್ನು ಉಣ್ಣುವರು. ಭತ್ತದ ಸುಗ್ಗಿಯ ಹಬ್ಬದಲ್ಲಿ ಕುದುರೆಯ ದೇಹವನ್ನು ನೀರಿಗೆಸೆದು ತಲೆಯನ್ನು ಹಾಗೇ ಉಳಿಸಿಕೊಳ್ಳುವುದು ಭತ್ತದ ಆತ್ಮವನ್ನು ಉಳಿಸಿಕೊಳ್ಳುವ ಸಂಕೇತವಾಗಿರಬಹುದೆಂದು ವಿದ್ವಾಂಸರು ಭಾವಿಸುತ್ತಾರೆ. ವೈದಿಕ ಯಜ್ಞ ಕುದುರೆಯು ಅದೇ ರೀತಿ ಸಂತಾನ ಮತ್ತು ಸಮೃದ್ಧಿಯ ಆತ್ಮವೆಂದು ಭಾವಿಸಲಾಗುತ್ತದೆ (G.Frazer: *The Golden Bough: A Study in Magic and Religion*, London,1963).

ಅಶ್ವಮೇಧ ಸಾಹಿತ್ಯದ ಉದ್ದಕ್ಕೂ ತಿನ್ನುವ ಮತ್ತು ಸಂಭೋಗಿಸುವ ಕ್ರಿಯೆಗಳು ಸಂವಾದಿಯಾಗಿ ಬರುತ್ತವೆ. ಭಾರತೀಯ ಗಂಡು ಕುದುರೆಗೆ ಆಹಾರ ನೀಡುವುದು ಐರಿಷ್ ಆಚರಣೆಗಿಂತ ಸ್ವಲ್ಪ ಭಿನ್ನವಾಗಿದೆ. ಭಾರತೀಯ ಮತ್ತು ಐರಿಷ್ ಆಚರಣೆ ಗಳೆರಡರಲ್ಲೂ ಗಂಡು ಪಾತ್ರಧಾರಿಗಳಾದ ಭಾರತೀಯ ಕುದುರೆ ಮತ್ತು ಐರಿಷ್ ರಾಜ ಉಣಿಸಲ್ಪಡುತ್ತಾರೆ. ಆದರೆ ಅಶ್ವವನ್ನು ಬಲಿಕೊಟ್ಟದ್ದರಿಂದ ಸಂತಾನ ಲಾಭ ಪಡೆಯುವವರು ಮಾನವ ಪಾತ್ರಧಾರಿಗಳಾದ ಐರಿಷ್ ರಾಜ ಮತ್ತು ಭಾರತೀಯ ರಾಣಿ. ವೈದಿಕ ಆಚರಣೆಯಲ್ಲಿ ಇಬ್ಬರು ಮಾನವ ಪಾತ್ರಧಾರಿಗಳಿದ್ದಾರೆ. ರಾಣಿಯು ಗರ್ಭ ಧರಿಸುವುದು ಕುದುರೆಯನ್ನು ತಿನ್ನುವುದರಿಂದಲ್ಲ, ಕುದುರೆಗೆ ತಿನ್ನಿಸುವುದರಿಂದ. ಭಾರತೀಯ ಆಚರಣೆಯಲ್ಲಿ ನಿಜವಾದ ಫಲಾನುಭವಿ ರಾಜ. ಏಕೆಂದರೆ ಅವನು ಕುದುರೆಯಿಂದ ಶಕ್ತಿ ಪಡೆಯುತ್ತಾನೆ. ರಾಣಿಯ ಸಂತಾನಶಕ್ತಿ ವೃದ್ಧಿಗೊಳ್ಳುವುದು ಸಹ ರಾಜನ ಲಾಭಕ್ಕಾಗಿಯೆ.

ಪಟ್ಟದ ರಾಣಿ ವೈದಿಕ ಆಚರಣೆಯಲ್ಲಿ ಇಬ್ಬರು ಪುರುಷ ನಾಯಕರ ನಡುವೆ ಸಂಧಾನ ಮಾಡುವ ವಿಧಾನವನ್ನು ಉಪನಿಷತ್ತಿನ ಒಂದು ಸಂದರ್ಭದೊಡನೆ ಹೋಲಿಸ ಬಹುದು. ರಾಣಿಯು ಯಜ್ಞಕುದುರೆಯೊಡನೆ ಸಂಯೋಗ ಮಾಡುವುದರಿಂದ ಅದರ ಶಕ್ತಿಯನ್ನು ತನ್ನಲ್ಲಿ ಸೆಳೆದು ಕೊಂಡು ಅದನ್ನು ತನ್ನ ಪತಿಗೆ ವರ್ಗಾಯಿಸುತ್ತಾಳೆ.

ಬೃಹದಾರಣ್ಯಕ ಉಪನಿಷತ್ತಿನ ಈ ಭಾಗವನ್ನು (೬.೪.೧೨) ನೋಡಿ:

''ಒಬ್ಬ ಗೃಹಸ್ಥನ ಹೆಂಡತಿಗೆ ಮತ್ತೊಬ್ಬ ಪ್ರಿಯಕರನಿದ್ದರೆ ಆ ಗೃಹಸ್ಥನು ಬಾಣದಂತಹ ದರ್ಭೆಯ ಕುಡಿಗಳನ್ನು ತುಪ್ಪದಲ್ಲಿ ಅದ್ದಿ ಅವುಗಳನ್ನು ಅಗ್ನಿಗೆ ಹಿಂದು ಮುಂದಾಗಿ ಆಹುತಿ ಕೊಡುತ್ತಾ ತನ್ನ ಹೆಂಡತಿಯ ಪ್ರಿಯಕರನನ್ನು ಉದ್ದೇಶಿಸಿ ಹೀಗೆ ಹೇಳಬೇಕು:

'ನೀನು ನನ್ನ ಹೆಂಡತಿ ಎಂಬ ಅಗ್ನಿಗೆ ವೀರ್ಯವೆಂಬ ಆಹುತಿಯನ್ನು ನೀಡಿದ್ದೀಯ! ನಾನು ನಿನ್ನ ಉಸಿರು, ನಿನ್ನ ಮಕ್ಕಳು, ನಿನ್ನ ಪಶುಗಳು, ನಿನ್ನ ಯಜ್ಞಗಳು, ಒಳ್ಳೆಯ ಕೆಲಸಗಳು ಮತ್ತು ನಿನ್ನ ಆಸೆ ಆಕಾಂಕ್ಷೆಗಳನ್ನೆಲ್ಲಾ ನಿನ್ನಿಂದ ಕಿತ್ತುಕೊಳ್ಳುತ್ತೇನೆ...' ಇದನ್ನು ತಿಳಿದ ಬ್ರಾಹ್ಮಣನು ಯಾವ ಮನುಷ್ಯನಿಗೆ ಶಾಪ ಕೊಡುತ್ತಾನೋ ಅವನು ನಪುಂಸಕನಾಗಿ ಯಾವ ಸದ್ಗುಣಗಳನ್ನೂ ಹೊಂದದೇ ಸಾಯುತ್ತಾನೆ. ಆದ್ದರಿಂದ ಜ್ಞಾನಿಯಾದ ಬ್ರಾಹ್ಮಣನ ಹೆಂಡತಿಯೊಡನೆ ಯಾರೂ ಸರಸವಾಡಬಾರದು.'' ಇಲ್ಲಿ ಸ್ತ್ರೀಯು ತನ್ನ ಪ್ರಿಯಕರನ ಶಕ್ತಿಯನ್ನು ಸೆಳೆದುಕೊಂಡು ತನ್ನ ಗಂಡನಿಗೆ ಅರ್ಪಿಸುವ ಸಾಧನವಾಗಿದ್ದಾಳೆ ಎಂಬುದನ್ನು ಗಮನಿಸಬೇಕು.

ಐರಿಷ್ ಆಚರಣೆ ಮತ್ತು ಭಾರತೀಯ ಆಚರಣೆಗಳು ಪ್ರತ್ಯೇಕವೆಂದು ಕಂಡರೂ ಅವು ಒಂದರಿಂದ ಇನ್ನೊಂದು ಬೆಳವಣಿಗೆ ಹೊಂದಿರಬಹುದು. ಅಥವಾ ಎರಡೂ ಒಂದೇ ಮೂಲದಿಂದ ಕವಲೊಡೆದಿರಬಹುದು. ಐರಿಷ್ ಆಚರಣೆಯು ಮೊದಲು ಉಲ್ಲೇಖವಾದುದು ವೈದಿಕ ಆಚರಣೆ ಉಲ್ಲೇಖವಾದ ಎರಡು ಸಾವಿರ ವರ್ಷಗಳ



ನಂತರವಾದರೂ ಅದರಲ್ಲಿ ಪ್ರಾಚೀನ ಅಂಶ ಅಡಗಿದೆ ಎಂದು ವೆಂಡಿ ಓ ಪ್ಲಹರ್ಟಿ ಅವರು ಅಭಿಪ್ರಾಯ ಪಡುತ್ತಾರೆ. ಅವರು ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಧರ್ಮಗಳ ಇತಿಹಾಸ ಮತ್ತು ಭಾರತೀಯ ಅಧ್ಯಯನಗಳ ಪ್ರಾಧ್ಯಾಪಕರು.

ಭಾರತೀಯ ಅಶ್ವಮೇಧದ ಆಚರಣೆಯ ಆರಂಭದಲ್ಲಿ ಹೆಣ್ಣು ಕುದುರೆಗಳ ಒಂದು ಹಿಂಡನ್ನು ಉತ್ತರ ದಿಕ್ಕಿನ ಒಂದು ಹಟ್ಟಿಯಲ್ಲಿ ಕಾಣದಂತೆ ಇಡಲಾಗಿರುತ್ತದೆ. ಆ ನಂತರ ಅದನ್ನು ಗಂಡು ಕುದುರೆಗೆ ತೋರಿಸಲು ಅದು ಸಂತೋಷದಿಂದ ಕೆನೆಯುತ್ತದೆ. ಹೆಣ್ಣು ಕುದುರೆಗಳು ಪ್ರತಿಯಾಗಿ ಕೆನೆಯುತ್ತವೆ. ಅದು ಶುಭ ಸೂಚನೆಯ ಸಂಕೇತ. ನಂತರ ಹೆಣ್ಣು ಕುದುರೆಗಳನ್ನು ಬಿಡುಗಡೆ ಮಾಡಲಾಗುತ್ತದೆ. ಅಲ್ಲಿಂದ ಅವು ಯಜ್ಞದ ಆಚರಣೆ ಯಿಂದ ಕಣ್ಮರೆಯಾಗುತ್ತವೆ.

ಯಜ್ಞದ ಆಚರಣೆಯಲ್ಲಿ ರಾಜನ ಪಾತ್ರ ಒಂದು ಮುಖ್ಯ ದೃಷ್ಟಿಯಿಂದ ಗಂಡು ಕುದುರೆಯ ತಿರುಗು ಮುರುಗಾದ ಪ್ರತಿಬಿಂಬವಾಗಿದೆ. ಗಂಡು ಕುದುರೆ ಮತ್ತು ಪಟ್ಟದ ರಾಣಿಯ ಸಂಪರ್ಕ ಅಣಕ ಲೈಂಗಿಕ ಸಂಯೋಗದಿಂದ ಏರ್ಪಟ್ಟಿದೆ. ಮರೆ ಮಾಡಿದ ಮತ್ತು ನಂತರ ಬಿಡುಗಡೆಯಾದ ಹೆಣ್ಣು ಕುದುರೆಗಳಿಗೂ ಗಂಡು ಕುದುರೆಗೂ ಯಾವ ರೀತಿ ಸಂಪರ್ಕ ಏರ್ಪಡಲಿಲ್ಲವೋ ಅದೇ ರೀತಿ ರಾಜ ಮತ್ತು ಪ್ರಿಯ ರಾಣಿಯರ ಸಂಪರ್ಕ ಯಜ್ಞದ ಅವಧಿಯಲ್ಲಿ ಲೈಂಗಿಕ ಸಂಯೋಗದಿಂದ ದೂರವಾಗಿರುತ್ತದೆ. ಅಂದರೆ ಆಚರಣೆಯು ಅಪಾಯದ ಸ್ತ್ರೀಯಾದ ಪ್ರಿಯ ರಾಣಿ 'ವಾವತಾ'ಳೊಡನೆ ಲೈಂಗಿಕ ಸಂಪರ್ಕದಿಂದ ರಾಜನನ್ನು ರಕ್ಷಿಸುತ್ತದೆ. ಅವಳ ಸಂಕೇತವೇ ಹೆಣ್ಣು ಕುದುರೆಗಳು. ಗಂಡು ಕುದುರೆಯೊಡನೆ ಮಲಗುವವಳು ಪಟ್ಟದ ರಾಣಿ 'ಮಹಿಷಿ'ಯಾದರೆ ರಾಜನು ಪ್ರಿಯಪತ್ನಿ 'ವಾವತಾ'ಳೊಡನೆ ಮಲಗಿದರೂ ಸಂಪರ್ಕ ಪಡೆಯದೆ ಎಚ್ಚರದಿಂದಿರುತ್ತಾನೆ. ಇಲ್ಲಿ ಸ್ತ್ರೀಯನ್ನು ಎರಡು ವಿಭಾಗವಾಗಿ ಸೀಳಿರುವುದನ್ನು ನಾವು ನೋಡಬಹುದು. ಗಂಡು ಕುದುರೆಯೊಡನೆ ಇರುವವಳು ಫಲಭರಿತ ಸ್ತ್ರೀ ಮಹಿಷಿ, ರಾಜನೊಡನೆ ಹೆಣ್ಣು ಕುದುರೆಯ ಸ್ಥಾನದಲ್ಲಿ ರುವವಳು ಕಾಮ ಪ್ರಚೋದಕ ಸ್ತ್ರೀ ವಾವತಾ. ಈ ಇಬ್ಬರು ಸ್ತ್ರೀಯರು ತಮ್ಮ ಸಾಮಾನ್ಯ ಪಾತ್ರಗಳನ್ನು ಯಜ್ಞದ ಸಂದರ್ಭದಲ್ಲಿ ತಿರುಗುಮುರುಗು ಮಾಡಿ ಕೊಳ್ಳುತ್ತಾರೆ. ಮಹಿಷಿ ಅಥವಾ ಪಟ್ಟದ ರಾಣಿ ಅಶ್ಲೀಲವಾಗಿ ವರ್ತಿಸಿದರೆ ವಾವತಾ ಅಥವಾ ಪ್ರಿಯರಾಣಿ ಶೀಲವತಿಯಾಗಿ ವರ್ತಿಸುತ್ತಾಳೆ.

ಈ ಸಂದರ್ಭವನ್ನು ಶತಪಥ ಬ್ರಾಹ್ಮಣ (೧೩.೪.೧.೯) ಹೀಗೆ ವಿವರಿಸುತ್ತದೆ: ''ಸಂಧ್ಯಾ ಕ್ರಿಯೆಗಳನ್ನು ಮಾಡಿ ಮುಗಿಸಿದ ನಂತರ ರಾಜನು ತನ್ನ ಪ್ರಿಯ ಪತ್ನಿಯೊಡನೆ ಅಗ್ನಿಕುಂಡದ ಸಮೀಪದಲ್ಲಿ ಉತ್ತರ ದಿಕ್ಕಿಗೆ, ಹೆಣ್ಣು ಕುದುರೆಗಳನ್ನು ಇರಿಸಲಾದ ಕೊಟ್ಟಿಗೆಯ ಕಡೆಗೆ, ತಲೆ ಮಾಡಿಕೊಂಡು ಮಲಗುತ್ತಾನೆ. ಅದೇ ಸ್ಥಳದಲ್ಲಿ ಉಳಿದ ಪತ್ನಿಯರೂ ಮಲಗುತ್ತಾರೆ. ಅವನು ತನ್ನ ಪ್ರಿಯ ಪತ್ನಿಯ ತೊಡೆಗಳ ಮೇಲೆ ಮಲಗಿದ್ದರೂ ಅವಳನ್ನು ಅಪ್ಪಿಕೊಂಡಿರುವುದಿಲ್ಲ. ತಾನು ಈ ಆತ್ಮ ಸಂಯಮದಿಂದ ಯಶಸ್ವಿಯಾಗಿ ವರ್ಷದ ಕೊನೆಯನ್ನು ತಲುಪುವೆನೇ ಎಂದು ಚಿಂತಿಸುತ್ತಿರುತ್ತಾನೆ.''

ಗಂಡು ಕುದುರೆಯೂ ದಂಡಯಾತ್ರೆಯ ವರ್ಷದ ಉದ್ದಕ್ಕೆ ಆತ್ಮ ಸಂಯಮದಿಂದ ನಡೆದುಕೊಳ್ಳಬೇಕು. ಯಜ್ಞದ ಅಂತ್ಯದಲ್ಲಿ ಅದರ ಪುರುಷ ಶಕ್ತಿಯೆಲ್ಲಾ ರಾಜನಿಗೆ ವರ್ಗಾವಣೆಯಾಗುತ್ತದೆ. ಈ ಆಚರಣೆಯನ್ನು ಹೋಲುವ ಒಂದು ಕ್ರಿಯೆಯನ್ನು ಭಾರದ್ವಾಜ ಸೂತ್ರ (೧.೫.೧೪) ದಲ್ಲಿ ಕಾಣಬಹುದು. ಒಬ್ಬ ಪುರುಷನು ಮಡಿದಾಗ ಅವನ ದೇಹವನ್ನು ಚಿತೆಯ ಮೇಲಿಟ್ಟ ಸಂದರ್ಭದಲ್ಲಿ ಅವನ ಹೆಂಡತಿಯು ಪಕ್ಕದಲ್ಲಿ ಮಲಗಿ 'ಸಂವೇಶನಾದಿ' ಕ್ರಿಯೆಯಲ್ಲಿ ಭಾಗಿಯಾಗುತ್ತಾಳೆ. ಸತ್ತ ಗಂಡು ಕುದುರೆಯೊಡನೆ ರಾಣಿಯ ಸಂಯೋಗ ಅಥವಾ ಸತ್ತ ಗಂಡನೊಡನೆ ಹೆಂಡತಿ ಮಲಗುವ ಆಚರಣೆ ಬಹು ಪ್ರಾಚೀನವಾದ ಒಂದು ಭಾರತೀಯ ಆಶಯ (motif)ವಾಗಿದೆ.

ಬಿ. ವಿ. ವೀರಭದ್ರಪ್ಪ
ಬಿ-೧೮, ಬಾಪೂಜಿ ವಿದ್ಯಾನಗರ, ದಾವಣಗೆರೆ-೫೭೭ ೦೦೪

ಗಾಂಧೀಜಿಯವರ ಕನಸಿನ 'ರಾಮರಾಜ್ಯ' ನನಸಾಗಲಿಲ್ಲವೇಕೆ?

ಈ ಶತಮಾನ ದಾಖಲಿಸಿದ ಉನ್ನತ ಮತಿಗಳಲ್ಲಿ ಗಾಂಧೀಜಿ ಒಬ್ಬರಾಗಿ ಪರಿಗಣನೆಗೆ ಬರುತ್ತಾರೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಭಾರತದಲ್ಲಿ ಹುರಿಗೊಳ್ಳುತ್ತಾ ನಡೆದಿದ್ದ ಸ್ವಾತಂತ್ರ್ಯ ಚಳುವಳಿಯ ಮೇಲೆ ಅತ್ಯಂತ ಪ್ರಭಾವ ಬೀರಿದ್ದ ಗಾಂಧೀಜಿ ಆ ಚಳುವಳಿಯನ್ನು ದೇಶವ್ಯಾಪಿಯಾಗಿ ಮಾರ್ಪಾಡಿಸುವಲ್ಲಿ ಮತ್ತು ಚಳುವಳಿಯ ಆದ್ಯ ಪ್ರತಿನಿಧಿಯನ್ನಾಗಿ 'ಕಾಂಗ್ರೆಸ್'ನ್ನು ಹೊರ ಹೊಮ್ಮಿಸುವಲ್ಲಿ ನಿರ್ವಹಿಸಿದ ಪಾತ್ರ ಅಪಾರವಾದುದು. ನಮ್ಮ ದೇಶದ ಗ್ರಾಮಾಂತರದ ಜನರ ನಾಡಿಮಿಡಿತಗಳನ್ನು ಅದ್ಭುತವಾಗಿ ಅರಿತುಕೊಂಡಿದ್ದ ಗಾಂಧೀಜಿ ಭಾರತವನ್ನು 'ಉನ್ನತ ಭಾರತೀಯ'ನಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದವರು. ಅವರಿಗಿದ್ದ ಕನಸೆಂದರೆ ಭಾರತವನ್ನು 'ರಾಮರಾಜ್ಯ'ವಾಗಿಸುವುದು. ಆದರೆ ಇಂದೇನಾಗಿದೆ?

ಈ ದೇಶಕ್ಕೆ ಸ್ವಾತಂತ್ರ್ಯ ದೊರೆತು ಅರ್ಧಶತಮಾನವೇ ಉರುಳಿ ಹೋದಾಗ್ಯೂ ಭಾರತ, ಗಾಂಧೀಜಿ ಕನಸಿಸಿದ ರೀತಿಯಲ್ಲಿ ಮಾರ್ಪಾಟಾಗುವುದೊತ್ತಟ್ಟಿಗಿರಲಿ, ಬದಲಿಗೆ ಆ ಮಹಾತ್ಮನ ಕನಸುಗಳಿಗೆ ವ್ಯತಿರೇಕವಾದ ರಾಜ್ಯ ನಿರ್ಮಾಣವಾಗಿದೆ. ಯಾವ ಪಕ್ಷದ ನೇತಾರನಾಗಿ, ಆ ಪಕ್ಷವನ್ನು ತಮ್ಮ ಕನಸುಗಳನ್ನು ಸಾಕಾರಗೊಳಿಸಬಹುದಾದ ರೀತಿಯಲ್ಲಿ ಗಾಂಧೀಜಿ ಕಲ್ಪಿಸಿಕೊಂಡಿದ್ದರೋ, ಆ ಪಕ್ಷವೇ ಈ ದೇಶದ ದೀರ್ಘಾವಧಿ ಆಳ್ವಿಕೆ ನಡೆಸಿದೆ. ಆದಾಗ್ಯೂ ಇಲ್ಲಿ ಇಂದಿಗೂ ಗಾಂಧೀಜಿ ಬೋಧಿಸಿದ 'ಸತ್ಯ' 'ಅಹಿಂಸೆ'ಗಳ ಆಧಾರದ ರಾಮರಾಜ್ಯ ಅಥವಾ ''ಸಕಲ ವರ್ಗದ ಜನರ ಸಾಮರಸ್ಯ'' - ಮಾತುಗಳಲ್ಲಿ ಬಳಸಲು ಮಾತ್ರ ಆನಂದದಾಯಕವಾದ ನುಡಿಗಟ್ಟಾಗಿಯೇ ಉಳಿದುಕೊಂಡಿದೆ.

ಗಾಂಧೀಜಿಯವರ ಸಿದ್ಧಾಂತಕ್ಕೆ ಇಂದೂ ವಿಶ್ವ ಮಾನ್ಯತೆಯಿದೆ. ಭಾರತದಲ್ಲಂತೂ ಗಾಂಧೀಜಿಯವರ ಕುರಿತು ಅವರ ಸಿದ್ಧಾಂತದ ಕುರಿತು ಬಂದ ಬರಹಗಳಿಗೆ ಲೆಕ್ಕವಿಲ್ಲ. 'ಗಾಂಧಿ' ಎಂಬ ಹೆಸರು ಪ್ರತಿ ಭಾರತೀಯ ನಿಗೂ ಗೊತ್ತು. ಹೀಗಿದ್ದಾಗ್ಯೂ ಗಾಂಧೀಜಿಯವರ ಚಿಂತನೆಗಳು ಜನ ಸಮೂಹಗಳ ಮಧ್ಯೆ ಏಕೆ ಆಚರಣೆಗೆ ಬರಲಿಲ್ಲ? ಅಷ್ಟೇ ಅಲ್ಲ, ತಾವು ಗಾಂಧಿವಾದಿಗಳೆಂದು ಹಾಗೂ ಅವರ ಸಿದ್ಧಾಂತವನ್ನು ಆಮೂಲಾಗ್ರವಾಗಿ ಕರಗತ ಮಾಡಿಕೊಂಡಿದ್ದೇವೆಂದೂ ಹೇಳಿಕೊಳ್ಳುವ ಅನೇಕಾನೇಕ ಸುದ್ದಿಗಳಲ್ಲಿರುವ ಮಂದಿಯೂ ಕೂಡ -''ವಾಸ್ತವವಾಗಿ ಗಾಂಧೀವಾದವನ್ನು ಗಾಂಧಿಯಂತಹ ಮಹಾತ್ಮರು ಮಾತ್ರವೇ ಆಚರಿಸಲು ಸಾಧ್ಯ'' ಎಂದು ಖಾಸಗಿಯಾಗಿ ಒಪ್ಪಿಕೊಳ್ಳುತ್ತಾರೆ. ಹಾಗಿದ್ದರೆ, ಗಾಂಧೀಜಿಯವರದು ವಾಸ್ತವಿಕ ನೆಲೆಯಿಂದ ದೂರವಾದ ಅಸಾಧ್ಯಾದರ್ಶವಾದಿ ಸಿದ್ಧಾಂತವೇ? ಅಥವಾ ''ಸಾಮೂಹಿಕ ಆಚರಣೆಯ ನೆಲೆಗೆ ಹೊಂದಿಕೊಳ್ಳಲಾಗದ'' ಕೇವಲ ಸುಂದರ ಭ್ರಮಿಸು ವಿಕೆಗೆ ಮಾತ್ರ ಸೀಮಿತವಾದ ಚಿಂತನೆಯೆ? ಎಂಬುದನ್ನು ವಿಶ್ಲೇಷಿಸುವುದು ನಿಜಕ್ಕೂ ಗಾಂಧೀಜಿಯ ಚಿಂತನಾ ಲಹರಿಯ ಮುಂದುವರಿಕೆಯೇ ಆದೀತು.

ತಮ್ಮ ಸರಳ ಬದುಕಿನ ಸಿದ್ಧಾಂತದೊಂದಿಗೆ ಭಾರತದ ಬಹುಸಂಖ್ಯಾತ ದುಡಿಯುವ ಜನ ಸಮೂಹಗಳೊಂದಿಗೆ ಗುರುತಿಸಿಕೊಳ್ಳುತ್ತಿದ್ದ ಗಾಂಧೀಜಿ ದೇಶದ ಹಲವಾರು ಶ್ರೀಮಂತ ಕುಟುಂಬಗಳಲ್ಲೂ ಹೇರಳವಾದ ಗೌರವ ಪಡೆದುಕೊಂಡಿದ್ದರು. ತಮಗೆ ಅನಿಸಿದ್ದನ್ನು ನೇರವಾಗಿ ವ್ಯಕ್ತಪಡಿಸುತ್ತಿದ್ದ ಗಾಂಧೀಜಿ ತಮಗೆ ಗೊತ್ತಿರದ ವಿಷಯಗಳ ಬಗ್ಗೆ -''ನನಗದರ ಕುರಿತು ಗೊತ್ತಿಲ್ಲ'' ಎಂದೇ ಹೇಳುತ್ತಿದ್ದರು. ಕಪಟತನದ ಸೋಗಿನ ರಾಜಕೀಯ



'ಶೋಷಣೆ'ಯನ್ನು ತೀವ್ರವಾಗಿ ವಿರೋಧಿಸುತ್ತಿದ್ದ ಅವರು ತಮ್ಮ ''ಅಹಿಂಸಾ ದೃಷ್ಟಿಕೋನ''ದಿಂದಲೇ 'ಸಾಮಾಜಿಕ ಶೋಷಣೆ'ಯನ್ನು ಕೊನೆಗಾಣಿಸುವ ಕನಸು ಕಂಡರು. ಶೋಷಣೆಯನ್ನು ಕೊನೆಗಾಣಿಸುವ ಕಾರ್ಯದಲ್ಲಿ ಯಾವ 'ಸಾಧನ'ದೊಂದಿಗೆ ಅದನ್ನು ಕೊನೆಗಾಣಿಸಲಾಗುತ್ತದೆ ಎಂಬುದೇ 'ಅದರ ಭವಿಷ್ಯದ ಫಲವನ್ನು ನಿರ್ಧರಿಸುತ್ತದೆ' ಎಂದು ಬೋಧಿಸಿದ ಗಾಂಧೀಜಿ ''ಶೋಷಕನನ್ನು ಶಿಕ್ಷಿಸುವ ಮೂಲಕ ಅಲ್ಲ'' ಬದಲಿಗೆ ''ಪರಿವರ್ತಿಸುವ'' ಮೂಲಕ ಮಾತ್ರ ಸಾಧಿಸಲ್ಪಡುವ ಬದಲಾವಣೆಯು ''ಚಿರಕಾಲ ಬಾಳಬಲ್ಲದು'' ಎಂದು ಸಮರ್ಥಿಸಿದವರು. ಅವರ 'ಸಮರ್ಥನೆ'ಗಳು ''ವಾಸ್ತವಿಕತೆಗೆ ತೀರಾ ದೂರದಲ್ಲಿ ರುವಂತಹವುಗಳಲ್ಲವೆ?'' ಎಂಬ ಪ್ರಶ್ನೆಗಳಿಗೂ ಉತ್ತರಿಸಿ ರುವ ಗಾಂಧೀಜಿ ''ನೀವಿದನ್ನು ಒಪ್ಪಲೇಬೇಕೆಂದು ನಾನು ನಿಮ್ಮನ್ನು ಬಲಾತ್ಕರಿಸುವದಿಲ್ಲ; ನಾನು ಮಾತ್ರ ಇದಕ್ಕೆ ಬದ್ಧ'' ಎಂದೇ ಉತ್ತರಿಸಿದವರು.

ಅತ್ಯಂತ ದೈವ ಭಕ್ತರಾದ ಗಾಂಧೀಜಿ ಪ್ರಾಚೀನತೆ ಯನ್ನು ಹೊಸ ಅರ್ಥದೊಂದಿಗೆ ಬಿಂಬಿಸಲು ಪ್ರಯತ್ನಿಸಿದವರು. ಈಶೋಪನಿಷತ್‌ನ ''ಈಶಾವಾಸ್ಯ ಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್। ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ [illegible]'' (ಆಳುವ ದೇವರು ಈ ವಿಶ್ವದಲ್ಲಿರುವ [illegible] ವಾಸವಾಗಿರುವನು. ಆದುದರಿಂದ ಎಲ್ಲವನ್ನೂ ತ್ಯಜಿಸಿ ಅವನಿಗೆ ಅರ್ಪಿಸು. ಆಮೇಲೆ ಭೋಗಿಸು. ಇಲ್ಲವೆ ನಿನ್ನ ಪಾಲಿಗೆ ಬಂದುದನ್ನು ನೀನು ಉಪಯೋಗಿಸು. ಬೇರೆಯವರ ಸಂಪತ್ತಿಗೆ ಲೋಭಿಸಬೇಡ) ಎಂಬ ಶ್ಲೋಕವನ್ನು ಸುಖವಾಗಿ ಬದುಕಲು 'ಬಂಗಾರದ ಬೀಗದ ಕೈ' ಎಂದು ವ್ಯಾಖ್ಯಾನಿಸಿದವರು. ತಮ್ಮ ಆಸ್ತಿಕ ಕರುಣಾಮಯಿ ಮನಸ್ಸಿನಿಂದ ಭಾರತವನ್ನು, ಅದರ ಜನಜೀವನದ ಸ್ಥಿತಿಗತಿಗಳನ್ನು ಅಭ್ಯಸಿಸಿದ ಗಾಂಧೀಜಿ ಅವರ ಜೀವಿತಕಾಲದ ಪರಿಸ್ಥಿತಿಗಳಲ್ಲಿ ಜಗತ್ತಿನ ತುಂಬಾ ಹರಡಿ ಕೊಂಡಿದ್ದ 'ವರ್ಗ ಕಲಹ'ವನ್ನು ತಪ್ಪಿಸಲು ಯತ್ನಿಸಿದವರು.

ಮುಖಾಮುಖಿಯಾಗಿ ಬೆಳೆಯುತ್ತಿದ್ದ 'ವರ್ಗ ಕಲಹ'ವನ್ನು ಅವರು 'ಒಂದು ದುರಂತ'ವೆಂದೇ ಕಂಡು ಕೊಂಡರು. ೧೯೪೪ರ ಅಕ್ಟೋಬರ್ ೧೬ರ 'ಹರಿಜನ' ದಲ್ಲಿ ಅವರು ಹೀಗೆ ಬರೆದರು : ''ವರ್ಗ ಕಲಹವನ್ನು ತಪ್ಪಿಸುವುದು ಸಂಪೂರ್ಣ ಸಾಧ್ಯ ಎಂಬ ವಿಶ್ವಾಸವು ನನ್ನಲ್ಲಿ ಬೆಳೆಯುತ್ತಿದೆ. ಅದನ್ನು ತಡೆಯುವುದಕ್ಕೆ ಬದಲು ಕೆರಳಿಸುವದರಲ್ಲಿ ಯಾವ ಸದ್ಗುಣವೂ ಇಲ್ಲ. ಶ್ರೀಮಂತರು ಹಾಗೂ ಶ್ರಮಿಕರಲ್ಲಿ ಕಾಣುವ ಸಂಘರ್ಷ ತೋರಿಕೆಯದು ಮಾತ್ರ. ಶ್ರಮವು ತನ್ನನ್ನು ತಾನು ಸಂಘಟಿಸಿಕೊಳ್ಳುವಷ್ಟು ಬುದ್ಧಿವಂತಿಕೆಯನ್ನು ತೋರಿದರೆ - ಮತ್ತು ಒಬ್ಬ ವ್ಯಕ್ತಿಯಂತೆ ಕಾರ್ಯ ಮಾಡುವುದಕ್ಕೆ ತೊಡಗಿದರೆ - ಹಣಕ್ಕಿಂತ ಹೆಚ್ಚಾಗಿರದಿದ್ದರೂ ಅದರಷ್ಟಾದರೂ ಘನತೆಯನ್ನು ಪಡೆಯುವುದು. ನಿಜವಾದ ಸಂಘರ್ಷ ಇರುವದು ಜ್ಞಾನ ಮತ್ತು ಅಜ್ಞಾನಗಳ ನಡುವೆ. ಈ ಸಂಘರ್ಷವನ್ನು ಉಳಿಸಿಕೊಂಡೇ ಹೋಗುವುದು ಅವಿವೇಕ ಎಂಬುದು ಖಂಡಿತ. ಅಜ್ಞಾನವನ್ನು ಕಿತ್ತೆಸೆಯಲೇಬೇಕು.'' ವಸ್ತುನಿಷ್ಠ ಚಾರಿತ್ರಿಕ ಪ್ರಕ್ರಿಯೆಯಾದ 'ಶ್ರಮ' ಹಾಗೂ 'ಬಂಡವಾಳ' ನಡುವಿನ ವೈರುಧ್ಯವನ್ನು ಹಾಗೂ ಈ 'ವೈರುಧ್ಯದ' ಯಥಾರ್ಥತೆಯನ್ನು ತಮ್ಮ 'ಅಹಿಂಸಾ ದೃಷ್ಟಿಕೋನ'ದಿಂದ ತಳ್ಳಿಹಾಕುವ ಗಾಂಧೀಜಿ, ಈ ಕಾರಣದಿಂದಾಗಿಯೇ 'ವರ್ಗ ಕಲಹ'ವನ್ನು 'ಜ್ಞಾನ' ಮತ್ತು 'ಅಜ್ಞಾನ'ಗಳ ನಡುವಿನ ಸಂಘರ್ಷವೆಂದು ಪುನರ್ ವ್ಯಾಖ್ಯಾನಿಸುವ ನಿಲುವು ತಳೆದವರು. 'ವರ್ಗ ಕಲಹ'ವನ್ನು ತಪ್ಪಿಸುವಲ್ಲಿ ಅವರಿಗಿದ್ದ ಕಾಳಜಿ ಅವರನ್ನು 'ಮಹಾತ್ಮ' ನನ್ನಾಗಿಸಿದುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಆದರೆ, ಅಹಿಂಸಾತ್ಮಕವಾಗಿ ಭಾರತದಲ್ಲಿ 'ಸಮಾಜ ವಾದ'ದ ಕನಸು ಕಂಡಿದ್ದ ಆ ಮಹಾತ್ಮನ ಕನಸುಗಳು ಎಷ್ಟೇ ಪ್ರಯತ್ನಿಸಿದರೂ ಸಾಕಾರಗೊಳ್ಳದೆ ಹೋಗುವುದು ಅವರ 'ವಾದ ಸರಣಿಯ' ದುರಂತವೇ ಸರಿ!

ವ್ಯವಸ್ಥೆಯನ್ನು [illegible]

ಅಯ್ಯಪ್ಪ ಹೂಗಾರ್

...ಧಿಕಾರಾರೂಢ ವರ್ಗಗಳು ಒಡ್ಡುವ ಹಿಂಸೆಗೆ ಪ್ರತಿಯಾಗಿ 'ಕ್ರಾಂತಿಕಾರಿ ಹಿಂಸೆ'ಯ ಅನಿವಾರ್ಯತೆಯನ್ನು ಒಪ್ಪಿಕೊಳ್ಳುತ್ತಾ ಆ ಮೂಲಕವೂ ಕೂಡಾ ಸಮಾಜವಾದದ ನಿರ್ಮಾಣದತ್ತ ಹೊರಟಿದ್ದ ರಷ್ಯಾದ ಬಗ್ಗೆ ಅಲ್ಲಿನ ಬದಲಾವಣೆಗೆ ಕಾರಣವಾದ 'ಬೋಲ್ಷೆವಿಸಂ' ಬಗ್ಗೆಯೂ ಗಾಂಧಿ ಮಾತಾಡಿದ್ದಾರೆ. ತಮಗಿನ್ನೂ 'ಅದನ್ನು ಸರಿಯಾಗಿ ಅರ್ಥೈಸಲು ಸಾಧ್ಯವಾಗಿಲ್ಲ' ಎಂದೇ ಗಾಂಧೀಜಿ ಬರೆಯುತ್ತಾರಾದರೂ 'ಅದು ದೇವರಲ್ಲಿ ವಿಶ್ವಾಸವಿಲ್ಲದಂತಹದು ಮತ್ತು ಹಿಂಸಾಧಾರಿತವಾದುದು, ಆದ್ದರಿಂದಲೇ ಅದು ನನಗೆ ಸರಿಯೆನಿಸುವುದಿಲ್ಲ'' ಎಂದು ತಕ್ಷಣವೇ ಪ್ರತಿಕ್ರಿಯಿಸುತ್ತಾರೆ. 'ಬೋಲ್ಷೆವಿಸಂ'ನ್ನು ಅದು ''ಖಾಸಗಿ ಆಸ್ತಿಯನ್ನು ತೆಗೆದು ಹಾಕುವಂತಹದು,'' ಅರ್ಥಶಾಸ್ತ್ರದ ಪ್ರಕಾರ ತಮಗೆ ತಿಳಿಯುವಂತೆ ಅದನ್ನು ''ಅಸಂಗ್ರಹ ಆದರ್ಶದ ನೈತಿಕ ಪ್ರಯೋಗ'' ಎಂದು ಹೆಸರಿಸುವ ಗಾಂಧೀಜಿ ''ಈ ಧ್ಯೇಯವನ್ನು ಜನರು ಸ್ವಂತ ಇಚ್ಛೆಯಿಂದ ಅಳವಡಿಸಿಕೊಂಡರೆ, ಇಲ್ಲವೆ 'ಶಾಂತಿಯುತವಾಗಿ ಮನವೊಲಿಸುವುದರ' ಮೂಲಕ ಇದನ್ನು ಸ್ವೀಕರಿಸುವಂತೆ ಮಾಡಿದರೆ ಇದಕ್ಕೆ ಪ್ರತಿಯಾಗಿ ಇನ್ನೊಂದಿಲ್ಲ'' ಎಂದು ಸ್ಪಷ್ಟಮಾತುಗಳಲ್ಲಿ ಹೇಳುತ್ತಾರೆ.

ರೈತರನ್ನು ಶೋಷಿಸದಿರುವಂತೆ ಜಮೀನುದಾರರಿಗೆ, ಕಾರ್ಮಿಕರನ್ನು ಶೋಷಿಸದಂತೆ ಗಿರಣಿಗಳ ಮಾಲಿಕರಿಗೆ ಉಪದೇಶಿಸಿದ ಗಾಂಧೀಜಿ ಶ್ರೀಮಂತರಿಗೆ ಧರ್ಮದರ್ಶಿತ್ವದ ಪರಿಕಲ್ಪನೆಯನ್ನು ಕೊಡುವುದರ ಮೂಲಕ ವ್ಯವಸ್ಥೆಯನ್ನು ಚೆಂದಗೊಳಿಸಲು ಯತ್ನಿಸಿದವರು. ದೈಹಿಕ ಶ್ರಮವನ್ನು ಗೌರವಿಸಲು ಬೋಧಿಸಿದ ಗಾಂಧೀಜಿಯವರು ನಿಧನರಾಗಿ ೫೪ ವರ್ಷಗಳು ಉರುಳಿರುವ ಈ ಪರಿಸ್ಥಿತಿಯಲ್ಲಿ ಅಧಿಕಾರಾರೂಢ ವರ್ಗಗಳು ಅವರ ಉಪದೇಶಗಳನ್ನು ವಾಸ್ತವದಲ್ಲಿ ಕಸದ ಬುಟ್ಟಿಗೆ ಎಸೆದಿವೆ!

ವಸಾಹತು ದಾಸ್ಯ, ಸಾಮ್ರಾಜ್ಯಶಾಹಿ ಶೋಷಣೆಯನ್ನು ಅವಿರತವಾಗಿ ವಿರೋಧಿಸಿದ ಗಾಂಧೀಜಿಯವರ ಮೂಲ ಆಶಯಗಳಿಗೆ ವ್ಯತಿರಿಕ್ತವಾಗಿ ಇಂದು ದೇಶವನ್ನು 'ನವ ವಸಾಹತ'ನ್ನಾಗಿ ಮಾಡಲಾಗಿದೆ. ಈ ದೇಶದ 'ಆರ್ಥಿಕ ಸ್ವಾವಲಂಬನೆ'ಯನ್ನು ಅಂತರರಾಷ್ಟ್ರೀಯ ಬಂಡವಾಳದ ನಿಯಂತ್ರಣಕ್ಕೆ ಒಪ್ಪಿಸಲಾಗಿದೆ. ಕೈಗಾರಿಕಾ ಕ್ಷೇತ್ರ ವಿನಾಶದ ಅಂಚಿನಲ್ಲಿದೆ. ಕಾರ್ಮಿಕರ ಬದುಕನ್ನು ದುರ್ಭರಗೊಳಿಸಲಾಗಿದೆ. ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ವ್ಯಾಪಕಗೊಳಿಸಲಾಗಿದೆ. ಉದ್ದಿಮೆ ಪತಿಗಳು ಕಾರ್ಮಿಕರ ನೇಮಕಾತಿ ಮತ್ತು ಹಕ್ಕುಗಳಿಗೆ ಸಂಬಂಧಿಸಿದಂತೆ ಈಗ ಇರುವ ಕಾಯಿದೆಗಳನ್ನು ಇನ್ನೂ ಸರಳಗೊಳಿಸುವ ಹೆಸರಿನಲ್ಲಿ ''ಬೇಕಾದಾಗ ಇಟ್ಟುಕೊ, ಬೇಡದಿದ್ದಾಗ ಹೊರದೂಡು'' ಎಂಬುವ ಮಟ್ಟಕ್ಕೆ ಇಳಿಸಲು ಸನ್ನದ್ಧರಾಗುತ್ತಿದ್ದಾರೆ.

ಗ್ರಾಮಾಂತರದ ವಿಶಾಲ ಜನತೆಯ ಪ್ರಮುಖ ಕಸುಬಾದ ಕೃಷಿಕ್ಷೇತ್ರವನ್ನು ಹಳೆಯ ಜಮೀನ್ದಾರರ ಜೊತೆಗೆ ಹೊಸದಾಗಿ ಸನ್ನದ್ಧಗೊಂಡಿರುವ ಶ್ರೀಮಂತ ರೈತರು ಆಳುತ್ತಿದ್ದಾರೆ. ಬಡ ರೈತಾಪಿ ಮತ್ತು ಕೃಷಿ ಕಾರ್ಮಿಕರನ್ನು ಹಿಂಡಿ ಹಿಪ್ಪೆ ಮಾಡಲಾಗುತ್ತಿದೆ.

ವ್ಯವಸ್ಥೆ ಸಂಪೂರ್ಣವಾದ ಅಧಃಪತನದತ್ತ ಸಾಗಿದೆ. ಗಾಂಧೀಜಿ ಸೂಚಿಸಿದ ಏಳು ಸಾಮಾಜಿಕ ಪಾಪಗಳು ಎಲ್ಲೆಲ್ಲೂ ವಿಜೃಂಭಿಸುತ್ತಿವೆ. ಸರ್ವಧರ್ಮ ಸಮಭಾವದ ಸ್ಥಳದಲ್ಲಿ ಹೊಸರೂಪದ ಕೋಮುವಾದ ತಲೆಯೆತ್ತಿ ಬೆಳೆದಿದೆ. ವಿನಾಶಗೊಳ್ಳಬೇಕಿದ್ದ ಜಾತಿವಾದ ಹೊಸ ರಂಗುಗಳಲ್ಲಿ ಪ್ರತಿಷ್ಠಾಪಿಸಿಕೊಳ್ಳುತ್ತಾ ಸಾಗಿದೆ. ದುರ್ಬಲ ವರ್ಗಗಳ ಮೇಲೆ ಹೀಗೆ ವ್ಯವಸ್ಥಾಬದ್ಧವಾಗಿ 'ಹಿಂಸೆ'ಯನ್ನು ಹೇರುತ್ತಿರುವ ಈ ವ್ಯವಸ್ಥೆಯನ್ನು 'ಅಹಿಂಸಾತ್ಮಕವಾಗಿ' ಬದಲಿಸಲು ಹೇಗೆ ಸಾಧ್ಯ? ಎಂಬ ಪ್ರಶ್ನೆಯು 'ಯಕ್ಷ ಪ್ರಶ್ನೆ'ಯಾಗಿದೆ.

'ಹರಿಜನ'ದ ಮಾರ್ಚ್ ೧೩, ೧೯೩೭ರ ಸಂಚಿಕೆಯಲ್ಲಿ ಕಮ್ಯೂನಿಸಂನ ಕುರಿತು ಗಾಂಧೀಜಿ ಹೀಗೆ ಬರೆಯುತ್ತಾರೆ: ''ಕಟ್ಟ ಕಡೆಯ ವಿಶ್ಲೇಷಣೆಯಲ್ಲಿ ಕಮ್ಯೂನಿಸಂ ಎಂದರೆ ಏನು? ಅದರ ಅರ್ಥ 'ವರ್ಗರಹಿತ ಸಮಾಜ' ಎಂದು. ಇದು ಪ್ರಯತ್ನ ಪಡಲು ಯೋಗ್ಯವಾದ ಆದರ್ಶ. ಅದನ್ನು ದೊರಕಿಸುವಲ್ಲಿ 'ಬಲಪ್ರಯೋಗವನ್ನು ಬಳಕೆಗೆ' ತಂದಾಗ ಮಾತ್ರ ನಾನು ಅಗಲುತ್ತೇನೆ.''

ಬಂಡವಾಳಶಾಹಿ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಮೂಲಾಧಾರವೇ ಹಿಂಸೆ. ಶಾಂತಿಯ ಹೆಸರಿನಲ್ಲಿಯೇ ಅಶಾಂತಿಯನ್ನು ಹಾಗೇ ಉಳಿಯಗೊಡುವುದು ಇದರ ಸಕಲ ತಂತ್ರ-ಕುತಂತ್ರಗಳ ಮರ್ಮ. ಆದರೆ ಬಲ ಪ್ರಯೋಗದ ಮೂಲಕ ಮಿತಿಮೀರಿ ಒತ್ತಲ್ಪಟ್ಟ ಅಣುಗಳು ಕೊನೆಗೊಮ್ಮೆ ಸ್ಫೋಟಿಸುತ್ತವೆ. ಸ್ಫೋಟಿಸಲೇಬೇಕು. ಇದು ನಿಸರ್ಗ ನಿಯಮ, ವಿಜ್ಞಾನ.

ಗಾಂಧೀಜಿಯವರು ಜೀವಿಸಿದ್ದ ಕಾಲದಲ್ಲಿಯೇ ಭಾರತದಲ್ಲಿ ವರ್ಗಕಲಹದಾಧಾರದ ಯಥಾರ್ಥ ಪ್ರಕ್ರಿಯೆಯಾದ 'ಪ್ರಜಾತಂತ್ರ ಕ್ರಾಂತಿ'ಯ ಮುನ್ನಡೆ ಸಾಧಿತವಾಗಿದ್ದರೆ ಅಂತಹ ಸಂಧಿಕಾಲದಲ್ಲಿ ಮಾನವತಾವಾದಿಯಾಗಿದ್ದ ಗಾಂಧೀಜಿ ಯಾವ ಪಕ್ಷ ಸೇರುತ್ತಿದ್ದರೋ - ಈಗಾಗಲೇ ಎಡಪಂಥದಿಂದ ಈ ಕುರಿತು ಸಾಕಷ್ಟು ವ್ಯಾಖ್ಯಾನವಿದೆ - ಆ ಮಾತು ಬೇರೆ.

ಆದರೆ, ಗಾಂಧೀಜಿಯೂ ಕಟ್ಟಕಡೆಯ ವಿಶ್ಲೇಷಣೆಯಲ್ಲಿ 'ಕಮ್ಯೂನಿಸಂ'ನ್ನು 'ಪ್ರಯತ್ನ ಪಡಲು ಯೋಗ್ಯವಾದ ಆದರ್ಶ' ಎಂದು ಒಪ್ಪಿಕೊಂಡಿದ್ದರು ಎಂಬುದನ್ನು ಇಂದು ಈ ವ್ಯವಸ್ಥೆಯನ್ನು ವಿರೋಧಿಸುವ ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಹಾಗೆಯೇ ಈ ಆದರ್ಶದ ಸಾಧನೆಯನ್ನು ಮಾಡಿ ಮುಗಿಸುವ ಪ್ರಕ್ರಿಯೆಯಲ್ಲಿ, ಅದರ ಅಂತಿಮ ಹಂತದಲ್ಲಿ, ಗಾಂಧೀಜಿ ಸೂಚಿಸಿದ 'ಸಾಧನ'ವು 'ಅಸಾಧ್ಯಾದರ್ಶ'ವಾದುದಾಗಿದೆ ಎಂಬುದನ್ನೂ.

ಅಯ್ಯಪ್ಪ ಹೂಗಾರ್
ನಂ.೮/೧, ಎರಡನೆ ಮಹಡಿ, ಮೊದಲನೆ ಮುಖ್ಯರಸ್ತೆ,
ವಿನಾಯಕ ನಗರ - ಮೈಸೂರು

(೩೮ನೇ ಪುಟದಿಂದ)

''ಹೌದೋ ಮಗ, ಅವರು ಹೇಳುತಿದ್ರು...... ಜನ ಗುಳೇ ಒಗೋವಾಗ ಕೈಯಾಗ ಕೋಲೂರಿಕೆಂಡು ಮೆಲ್ಲ ಮೆಲ್ಲಗೆ ನಡೀತಿದ್ರಂತೆ. ಬರೀ ಮೈಯಿ. ಬರೀ ಕಾಲು.... ಬಿಸ್ಲಾಗ ನಡೆದೂ ನಡೆದೂ ಸುಸ್ತಾಗಿ ಸತ್ತು ಬಿದ್ರಂತೆ. ಇನ್ನೂ ಒಂದಿಷ್ಟು ಪ್ರಾಣ ಇರೋವಾಗ್ಲೆ ನರೀ ನಾಯಿ ಹರಕೊಂಡು ತಿಂದ್ವಂತೆ! ಹದ್ದು ಕೊಕ್ಕಿನಿಂದ ಕುಕ್ಕಿ ಕುಕ್ಕಿ ಇರೋ ಒಂದಿಷ್ಟು ಮಾಂಸ ತಿಂದ್ವಂತೆ.....!!''

''ಅಯ್ಯಯ್ಯಪ್ಪಾ! ಅಯ್ಯಯ್ಯಪ್ಪಾ!! ....''

''ಅಯ್ಯೋ ಅಂದ್ರಿಲ್ಲ, ಅಪ್ಪಾ ಅಂದ್ರಿಲ್ಲ..... ಸುಮ್ನೆ ಚಟಪಟ ಸತ್ತು ಬಿದ್ರು..... ಹೆಣಾ ಹೂಳೋರೇ ಇಲ್ಲ. ಎಲ್ಲಿ ನೋಡಿದ್ರೂ ಹೆಣಾ ಹೆಣಾ ಹೆಣಾ......''

''ಅವ್ವಾ ಈ ಕತೆ ಸಾಕ್ಬುಡು.....'' ಎಂದಿದ್ದ ದೇವೇಂದ್ರಪ್ಪ.

''ನೀನು ಕೇಳ್ದೆ ಅಂತ ಹೇಳಿದ್ನೋ ಮಗ, ಬ್ಯಾಡಾದ್ರೆ ಬಿಟ್ಟಾ ಬಿಟ್ಟೆ'' ಎಂದು ಸುಮ್ಮನಾಗಿದ್ದಳು ದೇವೇಂದ್ರಪ್ಪನ ತಾಯಿ. ಕೇಳುವುದಕ್ಕೆ ಭೀಕರವಾಗಿದ್ದ ಆ ದೊಡ್ಡ ಬರದ ಸಾವಿನ ಸಂಗತಿಯನ್ನು ಕೇಳಲಾರದೆ ಸಾಕು ಮಾಡೆಂದಿದ್ದ. ಇದನ್ನು ಕೇಳಿದ ಮೇಲೆ ನಾಲ್ಕಾರು ದಿನ ಕನಸಿನಲ್ಲಿ ಹೆಣಗಳ ರಾಶಿಗಳನ್ನೇ ಕಂಡು ಚಿಟ್ಟನೆ ಚೀರಿಕೊಂಡು ಅತ್ತಿದ್ದ. ಅಂಥ ಬರ ಬೀಳಲು ಏನು ಕಾರಣ? ಬರ ಬಿದ್ದಾಗ ಪರಿಹಾರ ಕಾರ್ಯ ಯಾರು ಕೈಕೊಳ್ಳಬೇಕು? ಎಂಬ ಮುಂತಾದ ಪ್ರಶ್ನೆಗಳು ಅವನ ಮನಸ್ಸಿನಲ್ಲಿ ಆಗ ಕಿಂಚಿತ್ತೂ ಹೊಳೆದಿರಲಿಲ್ಲ. ಆದರೆ ಅಂಥ ಒಂದು ಪರಿಸ್ಥಿತಿ ಉಂಟಾಗಿತ್ತು ಎಂಬುದನ್ನು ಅವನು ಮರೆತಿರಲಿಲ್ಲ. ಅಂಥ ಪರಿಸ್ಥಿತಿ ಮತ್ತೆ ಬರಬಾರದೆಂಬುದು ಅವನ ಇಂದಿನ ಆಸೆ. ಅವ್ವ ಅಂದು ನಿಲ್ಲಿಸಿದ್ದ ಆ ವಾಸ್ತವ ಕತೆಯನ್ನು ಎಷ್ಟೋ ದಿನಗಳ ನಂತರ ಮತ್ತೆ ನೆನಪು ಮಾಡಿಕೊಂಡು ಹುಡುಗ ದೇವೇಂದ್ರಪ್ಪ ಕೇಳಿದ್ದ:

''ಅವ್ವಾ .... ಅಷ್ಟೊಂದು ಜನ ಉಣ್ಣಾಕ ಇಲ್ದೆ ಸತ್ರು, ಅಂದೆಲ್ಲಾ, ಯಾರನ್ನ ಒಂದು ತುತ್ತು ಮುದ್ದೆ, ಒಂದು ತುಣುಕು ರೊಟ್ಟಿ ಕೊಡಲಿಲ್ಲೇನು?''

''ಎಲ್ಲಾರೂ ಉಪಾಸ ಬಿದ್ದು ಸಾಯುವಾಗ ಯಾರಿಗೆ ಯಾರು ಆಗ್ತಾರಪ್ಪ?''

''ಸೌಕಾರ್ರು, ಸರ್ಕಾರ ಏನಾರ ಮಾಡಲಿಲ್ವ?''

ದೇವೇಂದ್ರಪ್ಪನ ತಾಯಿ ತನ್ನ ತಾಯಿಯಿಂದ ಕೇಳಿದ್ದ ಸಂಗತಿ ಹೇಳಿದ್ದಳು.

''ಯಾರೋ ಒಬ್ಬ ಪುಣ್ಯಾತ್ಮರು ಬಳ್ಳಾರ್ಯಾಗ ಅನ್ನಛತ್ರ ಗಂಜಿ ಕೇಂದ್ರ ಇಟ್ಟಿದ್ರಂತೆ..... ಅವರ ಎಸರೇನೊ ..... ಅಮ್ತಾರೆ .....ಸಕ್ರಿ ಕರಡೆಪ್ನೋರಂತೆ. ಆ ಪುಣ್ಯಾತ್ಮರು ಒಬ್ರೇ ತಿಂಗಳುಗಟ್ಲೇ ಗಂಜಿ ಅಂಚಿದರಂತೆ. ಮೂರು ಸಾವಿರ ಜನರಿಗೆ ಗಂಜಿ ಕೊಟ್ರಂತೆ......''

''ಸರ್ಕಾರ ಏನಾರ ಮಾಡಿತ್ತೇನು?''

''ಏನೋ ಅಪ್ಪ, ಆದೆಲ್ಲ ನಮ್ಮಂತೋರಿಗೆ ಹ್ಯಂಗ ತ್ಶಿಳೀಬೇಕು.''

ಕೋ. ಚೆನ್ನಬಸಪ್ಪ
ನಂ. ೧೨೭, ರಾಜಾಜಿನಗರ, ವೆಸ್ಟ ಆಫ್ ಕಾರ್ಡ್‌ರೋಡ್,
ಬೆಂಗಳೂರು-೫೬೦ ೦೮೬



ಮಾದಕ ದ್ರವ್ಯಗಳ ರಾಜಕಾರಣ

ಮನುಷ್ಯ ಆಯಾಸ ಪರಿಹಾರಕ್ಕೆ, ಮನೋಲ್ಲಾಸಕ್ಕೆ, ಮೋಜಿಗೆ ತನ್ನ ಹುಡುಕಾಟದಲ್ಲಿ ಮಾದಕ ವಸ್ತುಗಳನ್ನು ಕಂಡುಕೊಂಡ. ಅಮಲೇರಿಸುವ, ಕ್ಷಣಿಕ ಸುಖ ನೀಡುವ ಮದ್ಯ, ಗಾಂಜಾ, ಅಫೀಮು ಮೊದಲಾದ ಅನೇಕ ಮಾದಕ ವಸ್ತುಗಳ ಸೇವನೆ ಬಹುಬೇಗ ಹರಡಿತು. ಅವುಗಳ ತಯಾರಿಕೆ, ಮಾರಾಟ ಲಾಭದಾಯಕ ದಂಧೆಯಾಯಿತು. ಇದರಿಂದ ರಾಜ್ಯ ಬೊಕ್ಕಸಕ್ಕೆ ಹಣ ತುಂಬಿಸಲು ಅನುಕೂಲವಾದ್ದರಿಂದ ಈ ದಂಧೆಗೆ ರಾಜಾಶ್ರಯವೂ ದೊರೆಯಿತು. ಈಗಲೂ ಅದು ಮುಂದುವರಿಯುತ್ತಿದೆ. ರಾಜ್ಯಾದಾಯದಲ್ಲಿ ಇದರ ಪಾಲು ಗಣನೀಯ. ಆಳರಸರು ಅಮಾಯಕ ಜನರನ್ನು ಮರುಳುಮಾಡಲು, ಅವರನ್ನು ಅಧೀನದಲ್ಲಿರಿಸಿಕೊಳ್ಳಲು ಮಾದಕ ಪೇಯಗಳನ್ನು ಬಳಸಿಕೊಂಡರು. ಮಾದಕ ಪೇಯಗಳ ಆಮಿಷಕ್ಕೆ ಬಲಿಯಾಗಿ ರಾಜ್ಯಗಳನ್ನು ಕಳೆದುಕೊಂಡವರ ಕತೆಗಳು ಇತಿಹಾಸದ ಪುಟಗಳಲ್ಲಿ ಕಂಡುಬರುತ್ತವೆ. ಮಾದಕ ಪೇಯಗಳನ್ನು ನೀಡಿ ಯುದ್ಧದಲ್ಲಿ ತೊಡಗಲು ಯೋಧರನ್ನು ಹುರಿದುಂಬಿಸು ತ್ತಿದ್ದುದು ತಿಳಿದಿರುವ ವಿಷಯ. ಎದುರಾಳಿಗಳನ್ನು ವಂಚಿಸಿ ಬಲೆಗೆ ಹಾಕಿಕೊಳ್ಳಲು ಮಾದಕ ವಸ್ತುಗಳು ಸುಲಭ ಸಾಧನ. ಹೀಗೆ ಹಿಂದಿನಿಂದಲೂ ಮಾದಕ ವಸ್ತುಗಳು ನಾನಾ ಬಗೆಯಲ್ಲಿ ಒಂದು ಉಪಯುಕ್ತವಾದ ಅಸ್ತ್ರವಾಗಿ ಬಳಕೆಯಾಗುತ್ತಿವೆ. - [illegible]

[illegible] ಮಾದಕ ದ್ರವ್ಯ ಅಫೀಮಿನ ಮಾರಾಟ [illegible] ರಾಷ್ಟ್ರವೊಂದು ಯುದ್ಧ [illegible] ಒಂದು [illegible]. ಇದು [illegible] ಸುಮಾರು ಇನ್ನೂರು ವರ್ಷಗಳ ಹಿಂದೆ. "ಅಫೀಮು ಯುದ್ಧ" ಎಂದೇ ಹೆಸರುವಾಸಿಯಾಗಿರುವ ಈ ಯುದ್ಧ ನಡೆದದ್ದು ಬ್ರಿಟಿಷರು ಮತ್ತು ಚೀಣೀಯರ ಮಧ್ಯೆ. ಚೀಣದಿಂದ ಚಹ, ರೇಷ್ಮೆ ಹಾಗೂ ಇತರ ವಸ್ತುಗಳನ್ನು ಖರೀದಿಸಿ ವ್ಯಾಪಾರದಲ್ಲಿ ತೊಡಗಿದ್ದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಗೆ ಹಣ ಪಾವತಿ ಮಾಡುವುದಕ್ಕೆ ಅಫೀಮು ರಫ್ತು ಮಾಡುವುದು ಸುಲಭೋಪಾಯವಾಗಿ ಕಂಡಿತು. ಚೀಣೀಯರು ಅಫೀಮು ಸೇವನೆಗೆ ಬಲಿಯಾದರು. ಪಾಳೆಗಾರಿ ವ್ಯವಸ್ಥೆ ಹೊಂದಿದ್ದ ಚೀಣಾದಲ್ಲಿ ಅಫೀಮು ವ್ಯಾಪಾರ ಹುಲುಸಾಗಿ ಬೆಳೆದು ದೇಶದ ಸಂಪತ್ತು ಸೂರೆಯಾಗತೊಡಗಿತು. ಇದನ್ನು ತಡೆಯಲು ಚೀಣಾದ

ಸೀಯಾರ್ಕೆ

ಸಾಮ್ರಾಟ ಅಫೀಮು ಮಾರಾಟದ ಮೇಲೆ ನಿಷೇಧ ವಿಧಿಸಿದ. ಚೀಣೀ ಬಂದರುಗಳಲ್ಲಿ ಇಳಿದಿದ್ದ ಅಫೀಮು ತುಂಬಿದ ಪೆಟ್ಟಿಗೆಗಳಿಗೆ ಬೆಂಕಿ ಹಾಕಿಸಿದ. ಈ ಘಟನೆ ಇಂಗ್ಲಿಷರನ್ನು ರೊಚ್ಚಿಗೆಬ್ಬಿಸಿತು. ಇಂಗ್ಲಿಷರು ಚೀಣಾದ ಮೇಲೆ ಯುದ್ಧ ಸಾರಿದರು. ಬ್ರಿಟಿಷರಿಗೆ ಇತರ ಐರೋಪ್ಯ ದೇಶಗಳ ಹಾಗೂ ಅಮೆರಿಕದ ಬೆಂಬಲವೂ ಇತ್ತು. ಯುದ್ಧದಲ್ಲಿ ಸೋಲನ್ನನುಭವಿಸಿದ ಚೀಣಾದ ಸಾಮ್ರಾಟ ಇಂಗ್ಲಿಷರು ಹಾಕಿದ ಷರತ್ತುಗಳಿಗೆ ಒಪ್ಪಿ ಚೀಣಾದಲ್ಲಿ ಅಫೀಮು ಮಾರಾಟಕ್ಕೆ ಅನಿರ್ಬಂಧವಾದ ಪರವಾನಗಿ ನೀಡಬೇಕಾಯಿತು. ಅಷ್ಟೇ ಅಲ್ಲದೆ ವ್ಯಾಪಾರದಲ್ಲಿ ಇತರ ರಿಯಾಯಿತಿಗಳನ್ನು ಪಡೆದುಕೊಂಡ ಇಂಗ್ಲಿಷರು ಯುದ್ಧ ಪರಿಹಾರಕ್ಕಾಗಿ ಚೀಣಾಗೆ ಸೇರಿದ ಹಾಂಗ್‌ಕಾಂಗ್ ದ್ವೀಪವನ್ನು ಪಡೆದುಕೊಂಡರು. ಆ ನಂತರ ಚೀಣಾದಲ್ಲಿ ಅಫೀಮಿನ ಬಳಕೆ ಸಂಪೂರ್ಣವಾಗಿ ನಿಷೇಧಗೊಂಡದ್ದು ಕ್ರಾಂತಿ ಸಂಭವಿಸಿ ಚೀಣೀ ಜನತಾ ಗಣರಾಜ್ಯ ಸ್ಥಾಪನೆಗೊಂಡ ನಂತರವೇ. ಮತ್ತೆ ಹಾಂಗ್‌ಕಾಂಗ್ ದ್ವೀಪ ಚೀಣಾಗೆ ಸೇರ್ಪಡೆಯಾದ್ದು ಇತ್ತೀಚೆಗೆ ಅಷ್ಟೆ.

ಇಪ್ಪತ್ತನೆಯ ಶತಮಾನದಲ್ಲಿ ಪರಂಪರಾಗತವಾದ ಮಾದಕ ವಸ್ತುಗಳ ಜೊತೆಗೆ ಇತರ ಹಲವು ಹೊಸ ಹೊಸ ರಾಸಾಯನಿಕ ವಸ್ತುಗಳು ಸೇರಿಕೊಂಡಿವೆ. ಮಾದಕ ದ್ರವ್ಯಗಳ ವ್ಯಾಪಾರ ವಹಿವಾಟು ಸಾವಿರಾರು [illegible] ಎಲ್.ಎಸ್.ಡಿ. ಮಾರ್ಫಿನ್, ಬ್ರೌನ್ ಶುಗರ್, ಕ್ರ್ಯಾಕ್, ಮಾರಿಜುವಾನ ಮೊದಲಾದಂಥ ಮಾದಕ ದ್ರವ್ಯಗಳ ಸೇವನೆಯ ಚಟಕ್ಕೀಡಾದವರ ಸಂಖ್ಯೆ ಅಪಾರವಾಗಿ ಹೆಚ್ಚಿದ್ದು, ಅದು ಬೃಹತ್ ಸಾಮಾಜಿಕ ಸಮಸ್ಯೆಯಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಸಮಸ್ಯೆಯನ್ನು [illegible] ಕೈಗೊಂಡಿದ್ದರೂ ಅವುಗಳ ಕಳ್ಳ ಸಾಗಾಣಿಕೆ ಮುಂದುವರಿಯುತ್ತಲೇ ಇದೆ. ಇದಕ್ಕೆ ಮುಖ್ಯ ಕಾರಣ ಇದರಲ್ಲಿ ತೊಡಗಿರುವ ದೊಡ್ಡ ಪ್ರಮಾಣದ ಹಣ. ಇದರ ವ್ಯಾಪಾರದ ಜಾಲ ಒಂದು ವಿಶಿಷ್ಟವಾದ ಭೂಗತ ಜಗತ್ತನ್ನೇ ಸೃಷ್ಟಿಸಿದೆ. ಈ ದಂಧೆ ನಡೆಸುವ ಮಾಫಿಯಾ ತಂಡಗಳು ರಾಜಕಾರಣಿಗಳ ಜೊತೆ ಸಂಬಂಧ ಹೊಂದಿದ್ದು [illegible] ಹಾಗೂ ರಕ್ಷಣೆ ಪಡೆದುಕೊಂಡಿವೆ. ಈ ಮಾದಕ ವಸ್ತುಗಳ ವ್ಯಾಪಾರಗಾರರು ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡುವವರೊಂದಿಗೂ ಸಂಬಂಧ ಹೊಂದಿದ್ದಾರೆ. ಇದಲ್ಲದೆ ಈ ಜಾಲ ಕೆಲವು ಶ್ರೀಮಂತ ರಾಷ್ಟ್ರಗಳ ಕೈಯಲ್ಲಿ ರಾಜಕೀಯ ದಾಳವೂ ಆಗಿದೆ.

ಆಧುನಿಕ ಮಾದಕ ದ್ರವ್ಯಗಳಿಗೆ ಮುಖ್ಯವಾದ ಮಾರುಕಟ್ಟೆ ಅಮೆರಿಕ ಹಾಗೂ ಪಶ್ಚಿಮ ಯುರೋಪಿನ ರಾಷ್ಟ್ರಗಳು. ಇತರ ದೇಶಗಳಲ್ಲಿ ಇಲ್ಲವೆಂದೇನಲ್ಲ, ಆದರೆ, ದೊಡ್ಡ ಪ್ರಮಾಣದಲ್ಲಿ ವ್ಯವಹಾರ ನಡೆಯುವುದು, ಹಣ ಬರುವುದು ಈ ದೇಶಗಳಿಂದಲೇ. ಮಾರಿಜುವಾನ, ಕ್ರ್ಯಾಕ್, ಬ್ರೌನ್ ಶುಗರ್, ಏಂಜಲ್ ಡಸ್ಟ್ ಮೊದಲಾದವುಗಳಿಗೆ ಮೂಲವಸ್ತು ಕಕಾವೊ ಗಿಡದ ಕಾಯಿ. ಗಸಗಸೆಕಾಯಿ



ಗಾಂಜಾಗಿಡ

ಗಿಡವನ್ನೇ ಹೋಲುತ್ತದೆ ಇದು. ಈ ಕಾಯಿಯನ್ನು ಗೀರಿದಾಗ ಸುರಿಯುವ ದ್ರವದಿಂದ ನಾನಾ ಬಗೆಯ ಮಾದಕ ವಸ್ತುಗಳು ತಯಾರಾಗುತ್ತವೆ. ಅಂತರರಾಷ್ಟ್ರೀಯ ಒಪ್ಪಂದಕ್ಕನುಸಾರವಾಗಿ ಈ ಗಿಡ ಬೆಳೆಸುವುದನ್ನು ನಿಷೇಧಿಸಲಾಗಿದೆ. ಔಷಧ ತಯಾರಿಕೆಗೆ ಮಾತ್ರ ಸರಕಾರಿ ನಿಯಂತ್ರಣದಲ್ಲಿ ನಿಯಮಿತ ಪ್ರಮಾಣದಲ್ಲಿ ಬೆಳೆಸಲು ಅವಕಾಶವಿದೆ. ಆದರೆ ಅಕ್ರಮವಾಗಿ ಥಾಯ್‌ಲೆಂಡ್, ಫಿಲಿಪೀನ್ಸ್, ಕೊಲಂಬಿಯ, ಲೆಬನಾನ್, ಅಫ್ಘಾನಿಸ್ತಾನ್ ಮೊದಲಾದ ಕಡೆಗಳಲ್ಲಿ ಇದನ್ನು ಬೆಳೆಯುತ್ತಾರೆ. ಇಲ್ಲಿ ತಯಾರಾಗುವ ಮಾದಕ ದ್ರವ್ಯಗಳು ನಾನಾ ಬಗೆಯಲ್ಲಿ ರಹಸ್ಯವಾಗಿ ವಿವಿಧ ದೇಶಗಳಿಗೆ ರವಾನೆಯಾಗುತ್ತವೆ. ಅಮೆರಿಕದ ಮಾಫಿಯಾ ತಂಡಗಳು ಮಾದಕ ವಸ್ತುಗಳ ತಯಾರಿಕೆ ಮತ್ತು ವಿತರಣೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿವೆ.

ಭಾರಿ ಪ್ರಮಾಣದಲ್ಲಿ ಈ ಅಕ್ರಮ ವ್ಯವಹಾರ ನಡೆದಿದ್ದು ಅತ್ಯಂತ ಲಾಭದಾಯಕವಾಗಿರುವುದರಿಂದ, ಇದರಲ್ಲಿ ತೊಡಗಿರುವ ಮಾಫಿಯಾ ತಂಡಗಳು ಪ್ರಬಲಗೊಂಡಿವೆಯಷ್ಟೇ ಅಲ್ಲದೆ ರಾಜಕೀಯ ಪ್ರಭಾವವನ್ನು ಹೊಂದಿವೆ. ನಮ್ಮ ದೇಶದಲ್ಲಿ ಲಿಕ್ಕರ್ ಲಾಬಿ ಪ್ರಭಾವಶಾಲಿಯಾಗಿರುವಂತೆಯೇ ಮಾದಕದ್ರವ್ಯ ವ್ಯವಹಾರದಲ್ಲಿ ತೊಡಗಿರುವ ಕಾರ್ಟೆಲ್‌ಗಳು ಅಮೆರಿಕದ ರಾಜಕೀಯ ವಲಯಗಳಲ್ಲಿ ಪ್ರಭಾವಶಾಲಿಯಾಗಿವೆ. ಈ ಮಾಫಿಯಾ ತಂಡಗಳನ್ನು ಅಮೆರಿಕದ ಕುಖ್ಯಾತ ಗೂಢಚರ್ಯೆ ಸಂಸ್ಥೆ ಸಿ.ಐ.ಎ. ಅವಶ್ಯವಿದ್ದಾಗ ವಿಧ್ವಂಸ ಚರ್ಯೆಗಾಗಿ ಬಳಸಿಕೊಂಡಿದೆ. ಶೀತಯುದ್ಧ ಕಾಲದಲ್ಲಿ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ವಿಧ್ವಂಸ ಚರ್ಯೆಗಳನ್ನು ನಡೆಸಲು, ವಿದ್ರೋಹಿಗಳನ್ನು ಬೆಂಬಲಿಸಲು ಈ ಮಾಫಿಯಾ ತಂಡಗಳನ್ನು ಬಳಸಿಕೊಂಡಿತು. ರಾಷ್ಟ್ರೀಯ ವಿಮೋಚನಾ ಚಳುವಳಿಗಳನ್ನು ದುರ್ಬಲಗೊಳಿಸಲು ವಿದ್ರೋಹಿ ತಂಡಗಳಿಗೆ ಬೇಕಾದ ಶಸ್ತ್ರಾಸ್ತ್ರಗಳನ್ನು, ಹಣವನ್ನು ಮಾಫಿಯಾ ತಂಡಗಳ ಮೂಲಕವಾಗಿ ಸಿ.ಐ.ಎ. ಒದಗಿಸಿದೆ. ಸಿ.ಐ.ಎ. ನೇರವಾಗಿ ಹಸ್ತಕ್ಷೇಪ ಮಾಡಲಾಗದ ಕಡೆ ಮಾದಕದ್ರವ್ಯ ಮಾಫಿಯಾಗಳು ದುಷ್ಕೃತ್ಯಗಳನ್ನು ನಡೆಸಿವೆ. ನಿಕರಾಗುವಾದ ಘಟನೆಗಳು ಇದಕ್ಕೆ ಒಂದು ಉದಾಹರಣೆ. ಅಮೆರಿಕ ತನ್ನ 'ಹಿತ್ತಲು' ಎಂದು ಪರಿಗಣಿಸಿರುವ ದಕ್ಷಿಣ ಅಮೆರಿಕದ ದೇಶಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಅಮೆರಿಕ ಮಾದಕ ದ್ರವ್ಯಗಳ ಅಸ್ತ್ರವನ್ನೂ ಬಳಸುತ್ತದೆ. ಕ್ಯೂಬಾದಲ್ಲಿ ಮಾದಕ ದ್ರವ್ಯಗಳ ವಿತರಣೆ ನಡೆಸಿ ವಿಧ್ವಂಸ ನಡೆಸಲು ಪ್ರಯತ್ನಗಳು ನಡೆಯುತ್ತಲೇ ಇವೆ.

ಅಮೆರಿಕ ತನ್ನ ಮರ್ಜಿಗೆ ಅನುಸಾರವಾಗಿ ನಡೆದುಕೊಳ್ಳದಿರುವವರ ಮೇಲೆ ಸೇಡು ತೀರಿಸಿಕೊಳ್ಳಲು ಮಾದಕ ದ್ರವ್ಯಗಳ ಅಸ್ತ್ರವನ್ನು ಉಪಯೋಗಿಸಿದೆ. ೧೯೮೯ರಲ್ಲಿ ಪನಾಮಾದಲ್ಲಿ ನಡೆದ ಘಟನೆ ಅದಕ್ಕೆ ಒಂದು ಉದಾಹರಣೆ. ಪನಾಮಾದಲ್ಲಿ ಅಧಿಕಾರದಲ್ಲಿದ್ದ ಜನರಲ್ ನೊರೀಗ ಮತ್ತು ಅಮೆರಿಕ ಸರಕಾರದ ಮಧ್ಯೆ ವಿರಸ ಉಂಟಾಯಿತು. ನೊರೀಗ ಅಮೆರಿಕದ ಒತ್ತಾಯಗಳಿಗೆ ಮಣಿಯದೆ ಸ್ವತಂತ್ರ ನೀತಿ ಅನುಸರಿಸತೊಡಗಿದ. ಅದನ್ನು ಸಹಿಸದ ಅಮೆರಿಕ ಮಾದಕ ದ್ರವ್ಯಗಳ ಕಳ್ಳ ಸಾಗಾಣಿಕೆಗೆ ನೊರೀಗ ಪ್ರೋತ್ಸಾಹ ಕೊಡುತ್ತಿದ್ದಾನೆಂದು ಆಪಾದಿಸಿತು. ಅಮೆರಿಕಾಗೆ ನೊರೀಗ ಕುಮ್ಮಕ್ಕಿನಿಂದ ಹೇರಳವಾಗಿ ಮಾದಕ ದ್ರವ್ಯಗಳು ರವಾನೆಯಾಗುತ್ತಿವೆ ಎಂಬ ನೆಪವೊಡ್ಡಿ ಅಮೆರಿಕ ಸೇನಾ ಕಾರ್ಯಾಚರಣೆ ನಡೆಸಿತು. ಅಮೆರಿಕದ ಸೇನೆ ಪನಾಮಾವನ್ನು ಆಕ್ರಮಿಸಿಕೊಂಡು ನೊರೀಗನನ್ನು ಬಂಧಿಸಿ, ಅಮೆರಿಕದಲ್ಲಿ ವಿಚಾರಣೆ ನಡೆಸಿ ಅವನಿಗೆ ಶಿಕ್ಷೆ ನೀಡಿತು. ಅಮೆರಿಕದ ಈ ಚರ್ಯೆ ಸ್ವತಂತ್ರ ಸಾರ್ವಭೌಮ ರಾಷ್ಟ್ರವೊಂದರ ಮೇಲೆ ನಡೆಸಿದ ದುರಾಕ್ರಮಣವಾಗಿತ್ತು. ಪ್ರಪಂಚದ ಪ್ರಜಾಪ್ರಭುತ್ವ ರಾಷ್ಟ್ರಗಳು ಅಮೆರಿಕದ ಈ ಚರ್ಯೆಯನ್ನು ಖಂಡಿಸಿದುವು. ಅಂತರರಾಷ್ಟ್ರೀಯ ಒತ್ತಾಯಕ್ಕೆ ಮಣಿದು ಅಮೆರಿಕ ತನ್ನ ಸೇನೆಯನ್ನು ವಾಪಸ್ಸು ಕರೆಸಿಕೊಂಡಿತು.

ಈಗಲೂ ಮಾದಕ ದ್ರವ್ಯಗಳ ಹಾವಳಿ, ಸಾಮಾಜಿಕ ದುಷ್ಪರಿಣಾಮ ಒಂದು ಬಗೆಯಾದರೆ, ಅದರಲ್ಲಿ ತೊಡಗಿರುವ ಹಣ ಇನ್ನೊಂದು ಬಗೆಯ ಸಮಸ್ಯೆ ಒಡ್ಡಿದೆ. ಮಾದಕ ದ್ರವ್ಯಗಳ ಕಳ್ಳ ಸಾಗಾಣಿಕೆಯ ರಾಜಕೀಯ ಪರಿಣಾಮವನ್ನು ಇಂದು ಆಫ್ಘಾನಿಸ್ತಾನದಲ್ಲಿ ಕಾಣಬಹುದು. ಈ ಅಕ್ರಮ ವ್ಯವಹಾರ ಒಂದು ವಿಷವರ್ತುಲವಾಗಿದೆ. ಸಾಮಾಜಿಕವಾಗಿ, ರಾಜಕೀಯವಾಗಿ ಮಾದಕ ದ್ರವ್ಯಗಳ ಹಾವಳಿಯನ್ನು ಎದುರಿಸಬೇಕಾಗಿದೆ.

ಸೀಯಾರ್ಕೆ

೮೪೯, ೬ನೇ ಕ್ರಾಸ್, ೧ನೇ ಮೇನ್, ಬನಶಂಕರಿ ೩ನೇ ಹಂತ
೩ನೇ ಫೇಜ್, ೩ನೇ ಬ್ಲಾಕ್, ಕತ್ರಿಗುಪ್ಪೆ, ಬೆಂಳೂರು- ೮೫

ಬ್ರಾಹ್ಮಣ್ಯವನ್ನು ತೊರೆದ ದುಡಿಮೆಗಾರ ವಸಂತರಾವ್ ಕುಗ್ವೆ

ವಸಂತ್ ಹುಟ್ಟಿದ್ದು ಸೊರಬ ತಾಲ್ಲೂಕಿನ ಹರಿಶಿ ಮುಂಗಳೂರು ಎಂಬಲ್ಲಿ. ಇವರ ತಂದೆಗೆ ಐದು ಜನ ಮಕ್ಕಳು. ಇವರು ನಾಲ್ಕನೆಯವರು. ತುಂಬಾ ಬಡತನದ ವೈದಿಕ ಬ್ರಾಹ್ಮಣ ಕುಟುಂಬ. ಚಿಕ್ಕಂದಿನಲ್ಲಿ ವಸಂತ್ ದನ ಮೇಯಿಸುವ ಕೆಲಸ ಮಾಡಿ ಶಾಲೆಗೆ ಹೋಗುತ್ತಿದ್ದರು. ನಂತರ ಓದಲು ಸಾಗರಕ್ಕೆ ಭಾವನ ಮನೆಗೆ ಬಂದರು. ಅಲ್ಲಿಯೂ ಬಡತನ. ಸಾಗರದ ಶಿವಲಿಂಗಪ್ಪ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ವರೆಗೆ ಓದು. ಪರೀಕ್ಷೆಯಲ್ಲಿ ಫೇಲು.

ಆನಂತರ ಅನಂತಪುರದ ಹೋಟೆಲೊಂದರಲ್ಲಿ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಸಂಬಳಕ್ಕೆ ಸಪ್ಲೈಯರ್ ಕೆಲಸ. ಬಳಗದವರು ಹೀಯಾಳಿಸಿದಾಗ ಅವಮಾನವಾಗಿ ದಾಂಡೇಲಿಗೆ ಓಡಿ ಹೋದರಂತೆ. ಅಲ್ಲಿಯೂ ಹೋಟೆಲ್ ಸಪ್ಲೈಯರ್ ಕೆಲಸವೇ. ನಂತರ ಸರ್ಕಾರಿ ಕೆಲಸವೊಂದಕ್ಕೆ ಅರ್ಜಿ ಗುಜರಾಯಿಸಿದರು. ಸ್ಮಾರಕ ರಕ್ಷಣಾ ಸಿಬ್ಬಂದಿಯಲ್ಲಿ ಒಂದು ಚಿಕ್ಕ ಕೆಲಸ ಸಿಕ್ಕಿತು. ೧೭ ವರ್ಷ ವಯಸ್ಸಿನ ಬ್ರಾಹ್ಮಣ ಯುವಕ ವಸಂತನಿಗೆ ಸಂತೆಬೆನ್ನೂರಿನಲ್ಲಿ ಮಸೀದಿ ಕಾಯುವ ಕೆಲಸ ಸಿಕ್ಕಿತು. ತಿಂಗಳಿಗೆ ೧೫೦ ರೂ. ಸಂಬಳ. ಹಂಗಾಮಿಯಾಗಿ ಅಲ್ಲಿ ಎರಡು ವರ್ಷ ಕೆಲಸ ಮಾಡಿದ ಮೇಲೆ, ಕೆಳದಿಯ ಮ್ಯೂಸಿಯಂಗೆ ವರ್ಗಾವಣೆ. ಕೆಳದಿಯಲ್ಲೂ ಎರಡು ವರ್ಷ ಕೆಲಸ ಮಾಡಿದರು. ಆನಂತರ, ಅದು ಖಾಯಂ ಆಗದೆ ಸೂಪಾ ಪ್ರಾಜೆಕ್ಟ್‌ನಲ್ಲಿ ವೆಲ್ಡಿಂಗ್ ಕೆಲಸ ಸಿಕ್ಕಿತು. ಪ್ರಾಜೆಕ್ಟ್ ಮುಗಿಯಿತು. ಮತ್ತೆ ನಿರುದ್ಯೋಗಿಯಾಗಿ ಸಾಗರಕ್ಕೆ ಬಂದರು. ೧೯೭೬ರಿಂದ ೮೦ರವರೆಗೆ ದತ್ತಾ ಹಾಲಿನ ಡೈರಿಯಲ್ಲಿ ಹಾಲು ಹಂಚುವ ಕೆಲಸಕ್ಕೆ ಸೇರಿದರು. ಸ್ವಂತ ದುಡಿಮೆ ಮಾಡುವ ಹಂಬಲ ಪುಟಿದೇಳುತ್ತಿತ್ತು. ಆದರೆ ಬಂಡವಾಳ ಇರಲಿಲ್ಲ. ಹಲವು ಶ್ರೀಮಂತ ಬ್ರಾಹ್ಮಣರಲ್ಲಿ ಸಾಲ ಕೇಳಿದಾಗ 'ನಮ್ಮನೆಯಲ್ಲೇ ಜೀತ ಮಾಡಿಕೊಂಡಿರು' ಎಂಬ ಉತ್ತರ ಸಿಕ್ಕಿತು. ಬಹಳ ನೊಂದರು. ಯಾಕೋ ಏನೋ 'ಈ ಬ್ರಾಹ್ಮಣ ಸಮಾಜದಿಂದಲೇ ದೂರವಾಗಬೇಕು' ಎಂದೆನ್ನಿಸತೊಡಗಿತು. 'ನಾನು ಮಾಡಿಕೊಂಡರೆ ಅಂತರ್ಜಾತೀಯ ವಿವಾಹವನ್ನೇ' ಎಂದು ನಿಶ್ಚಯಿಸಿಬಿಟ್ಟರು. ಅದೇ ಹಾಲಿನ ಡೈರಿಗೆ ಕೆಲಸಕ್ಕೆ ಬರುತ್ತಿದ್ದ ಲಕ್ಷ್ಮಿ ಎಂಬ ದೀವರ ಜನಾಂಗದ ಹುಡುಗಿಯನ್ನು ಮದುವೆಯಾಗಬೇಕೆಂದು ನಿರ್ಧರಿಸಿದರು. ಹೋಗಿ ಆಕೆಯ ತಂದೆತಾಯಿಯರನ್ನು ಕೇಳಿದಾಗ ಈ ಬ್ರಾಹ್ಮಣನನ್ನು ನಂಬಲು ಅವರು ಹಿಂದೆ ಮುಂದೆ ನೋಡಿದರು. ಆನಂತರ, ಅದೇ ಹಳ್ಳಿ - ಕುಗ್ವೆಯ ಶಿವಾನಂದ ಎಂಬ ಪ್ರಗತಿಪರ ಯುವಕನ ಬೆಂಬಲದಿಂದ ಲಕ್ಷ್ಮಿಯ ತಂದೆತಾಯಿಯರನ್ನು ಒಪ್ಪಿಸಿದರು. ಈ ಮದುವೆ ಸುಲಭವೇನೂ ಆಗಿರಲಿಲ್ಲ. ಕೆಲವು ಬ್ರಾಹ್ಮಣರು ಗೂಂಡಾಗಳನ್ನು ಬಿಟ್ಟು ವಸಂತ್‌ನನ್ನು ಹೆದರಿಸಿದರು. ಒಮ್ಮೆ ಆಟೋ ಒಂದರಲ್ಲಿ ಎತ್ತಿಹಾಕಿಕೊಂಡು ಹೋಗಿ 'ಅಂತರ್ಜಾತೀಯ ವಿವಾಹ ಬೇಡ'ವೆಂದು ಒತ್ತಾಯ ಹೇರಿದರು. ಆಗ ಕುಗ್ವೆ ಶಿವಾನಂದ - ಇವರೂ ದೀವರ ಜನಾಂಗದವರೇ - ಈಗಲೂ ಪ್ರಗತಿಪರ ಚಳುವಳಿಗಳಲ್ಲಿ ಗುರುತಿಸಿ ಕೊಂಡವರು - ಇವರು ವಸಂತ್‌ನಿಗೆ ತಮ್ಮ ಮನೆಯಲ್ಲಿ ಆಶ್ರಯವಿತ್ತರು. ಶಿವಾನಂದ್ ಮನೆ ವಸಂತರ ಅಡಗು ತಾಣವಾಯಿತು. ಧರ್ಮಪ್ಪ ಎಂಬ



ಮಗಳು ಸವಿತಾ, ಪತ್ನಿ, ಮಗ ಸುಭಾಷ್ ಮತ್ತು ವಸಂತ್‌ರಾವ್ ಕುಗ್ವೆ

ಎಂ.ಎಲ್.ಎ.ಯ ನೇತೃತ್ವದಲ್ಲಿ ದೊಡ್ಡ ಪಂಚಾಯಿತಿಯೇ ನಡೆಯಿತು. ಆ ಪಂಚಾಯಿತಿಗೆ ವಸಂತ್ ಅವರು ಈಡಿಗ ಹಾಸ್ಟೆಲ್ಲಿನ ಶಾಂತಪ್ಪ, ನಾರಾಯಣ ಮತ್ತು ಶಿವಾನಂದರ ಜೊತೆಗೆ ಹೋದರು. ಅಲ್ಲಿ ಘರ್ಷಣೆಯಾಗಿ ಹೊಡೆದಾಟ ಬಡಿದಾಟವೇ ಆಯಿತು. ಆದರೂ ವಸಂತ್ ದೃಢವಾಗಿ ನಿಂತರು. ಸೊರಬದಲ್ಲಿ ರಿಜಿಸ್ಟರ್ಡ್ ಮದುವೆ ಆದರು. ಆಗ ದಲಿತ ಸಂಘರ್ಷ ಸಮಿತಿಯ ಹುಟ್ಟಿನ ಆರಂಭದ ದಿನಗಳು. ದ. ಸಂ. ಸ.ನವರು ರಿಸೆಪ್ಷನ್ ಇಟ್ಟುಕೊಂಡಿದ್ದರು. ದಲಿತ ಮುಖಂಡ ಬಿ. ಕೃಷ್ಣಪ್ಪ ಅಭಿನಂದಿಸಿ, ಹರಸಿದರು. ಆದರೆ, ಮುಂದಿನ ಆರು ತಿಂಗಳು ವಸಂತ್ ಒಂಟಿಯಾಗಿ ಓಡಾಡಲಾರದ ಪರಿಸ್ಥಿತಿ ನಿರ್ಮಾಣವಾಗಿತ್ತು. ಶಿವಾನಂದ್ ಕುಗ್ವೆ ಎಡೆಬಿಡದೆ ಜೊತೆಕೊಟ್ಟರು.

ಮದುವೆಯೇನೋ ಆಯಿತು...... ಆದರೆ ನಿಲ್ಲಲು ನೆಲೆಯಿಲ್ಲ. ಕೆಲಸ ಹುಡುಕಿಕೊಂಡು ಹೊಸಂಗಡಿಗೆ ಹೋದರು. ಅಲ್ಲಿ ಖಾಸಗಿ ಕಂಪೆನಿಯೊಂದರಲ್ಲಿ ಕೆಲಸ ಸಿಕ್ಕಿತು. ಆದರೆ ಊರಿನಲ್ಲಿ ಗುಲ್ಲೆದ್ದಿತು.....'ಹುಡುಗಿಯನ್ನು ಬಿಟ್ಟು ಹೋದ' ಎಂದು ನಿಂದಿಸಲಾರಂಭಿಸಿದರು. ಸಾಗರಕ್ಕೆ ವಾಪಸ್ ಬಂದು ಲಂಕೇಶ್ ಪತ್ರಿಕೆಯ ಏಜೆಂಟರಾಗಿ ದುಡಿಯಲಾರಂಭಿಸಿದರು. ನಂತರ ಪ್ರಜಾವಾಣಿಯ ನ್ಯೂಸ್ ಏಜೆಂಟ್ ಆಗಿಯೂ ಕೆಲಸ ಮಾಡಿದರು. 'ನಾನು ದಲಿತ ಸಂಘರ್ಷ ಸಮಿತಿ ಮತ್ತು ಸಮುದಾಯ ಸಂಘಟನೆಗಳಿಂದ ಬೆಳೆದೆ, ಗಟ್ಟಿಯಾದೆ' ಎಂದು ವಸಂತ್ ಹೇಳಿಕೊಳ್ಳುತ್ತಾರೆ.

ಹಲವು ಗೆಳೆಯರ ಸಹಾಯದಿಂದ ಕುಗ್ವೆ ಗ್ರಾಮದಲ್ಲಿ ಸಣ್ಣಮನೆ ಕಟ್ಟಿಕೊಂಡು ಟೈಲರ್ ಅಂಗಡಿ ಮಾಡಿದರು. ಈಗಿರುವ ಪುಟ್ಟ ಮನೆಗೆ ಮೊದಲು ಹಾಕಿದ್ದ ಮರದ ಬುಡದಲ್ಲಿ, ಮಳೆ, ಗಾಳಿ, ಚಳಿಯಲ್ಲಿ ಕಳೆದ ದಿನಗಳನ್ನು ವಸಂತ್ ಜ್ಞಾಪಿಸಿಕೊಳ್ಳುತ್ತಾರೆ.

ಕೆಲವರ್ಷಗಳ ಹಿಂದೆ ಹೆಗ್ಗೋಡಿನಲ್ಲಿ ಆರಂಭಿಸಲಾದ ಕೌಶಲ್ಯ ಕಾರ್ಪೆಂಟರಿ ವರ್ಕ್‌ಶಾಪ್‌ನಲ್ಲಿ ಬಡಗಿಯ ಕೆಲಸ ಕಲಿತರು. ಸ್ವಯಂ ಉದ್ಯೋಗ ಯೋಜನೆಯಡಿ ಬ್ಯಾಂಕ್‌ನಿಂದ ೧.೫೦,೦೦೦ ರೂ. ಸಾಲ ಪಡೆದು 'ಕೌಶಲ್ಯ'ವನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು ಕುಗ್ವೆ ಗ್ರಾಮಕ್ಕೆ ಮನೆಯ ಪಕ್ಕದಲ್ಲೇ ವರ್ಗಾಯಿಸಿಕೊಂಡರು. ಈ ಸಾಲ ತೀರಿಸಲು ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಬ್ಯಾಂಕ್‌ನವರು ವರ್ಕ್‌ಶಾಪನ್ನು ಹರಾಜು ಹಾಕುವ ಸ್ಥಿತಿಯೂ ಬಂದಿತ್ತು. ತಮ್ಮ ಮನೆಯ ಪಕ್ಕದ, ಸಣ್ಣ ತುಂಡು ಭೂಮಿಯನ್ನು ಇದಕ್ಕಾಗಿ ಮಾರಬೇಕಾಯಿತು.

ಈಗ ವಸಂತ್ ದಿನವಿಡೀ ದುಡಿಯುವ, ಕುರ್ಚಿ ಮೇಜು ಬಾಗಿಲು ಕಿಟಕಿಗಳನ್ನು ಮಾಡುವ, ಮರಗೆಲಸ ಮಾಡುವ ನಿಷ್ಣಾತ ಬಡಗಿ. ಎರಡು ಮಕ್ಕಳು - ಸವಿತಾ ಮತ್ತು ಸುಭಾಷ್. ಸುಭಾಷ್ ಈಗಷ್ಟೇ ಮಿಲಿಟರಿ ಸೇರಿದ್ದಾನೆ. ಸವಿತಾ ೧೦ನೆಯ ತರಗತಿಯಲ್ಲಿ ಓದುತ್ತಿದ್ದಾಳೆ. ವಸಂತ್ ತಮ್ಮ ಬಿಡುವಿನ ಸಮಯದಲ್ಲಿ ಲೋಹಿಯಾ, ಮಾರ್ಕ್ಸ್, ಅಂಬೇಡ್ಕರರ ಕೃತಿಗಳನ್ನು ಅಧ್ಯಯನ ಮಾಡುತ್ತಾರೆ. ಪ್ರಗತಿಪರ ಸಂಘಟನೆಗಳ ಕಾರ್ಯಕ್ರಮಗಳಲ್ಲಿ ತಮಟೆ ಬಾರಿಸುತ್ತ ಕ್ರಾಂತಿಗೀತೆಗಳನ್ನು ಹಾಡುತ್ತಾರೆ. ಮದುವೆಯ ನಂತರ ತಮ್ಮ ಓದಿನ ಮತ್ತು ಶಿವಾನಂದ ಕುಗ್ವೆಯವರ ಪ್ರಭಾವದಿಂದ ಜನಿವಾರ ಕಿತ್ತು ವರದಾ ನದಿಗೆ ಎಸೆದಿದ್ದನ್ನು ಈಗಲೂ ಜ್ಞಾಪಿಸಿಕೊಳ್ಳುತ್ತಾರೆ.

ಸಾಗರದಂತಹ ಪ್ರದೇಶದಲ್ಲಿ [illegible] ಸಂಘಟನೆಯನ್ನು ಮಾಡುವ [illegible] ಪ್ರಗತಿಪರವಾದ ಬಲಿಷ್ಠ ಸಂಘಟನೆ [illegible] ಕೊರತೆ [illegible] ಯುವಕರಿಗೆ [illegible] ಧೈರ್ಯ ಕೊಡಬಲ್ಲರು?

[illegible]

ಸೂಫಿ ಕತೆಗಳು

ರಕ್ತಸ್ನಾನದ ಚಿಕಿತ್ಸೆ

ಬಿ. ಗಂಗಾಧರ ಮೂರ್ತಿ

''ಮಹಾ ಪುರುಷರ ಸಂಪರ್ಕ ದೊರೆತ ಒಂದೇ ಒಂದು ಕಾರಣದಿಂದ ಅವರ ಕೃಪಾದೃಷ್ಟಿಗೆ ನೇರವಾಗಿ ಪಾತ್ರರಾಗಿಯೋ ಪರೋಕ್ಷ ಪರಿಣಾಮವಾಗಿಯೋ ಪಾವನರಾದವರ ಹಲವಾರು ಕತೆಗಳನ್ನು ಕೇಳಿದ್ದೇವೆ. ಹೀಗೆ ಸೋಜಿಗವೆಂಬಂತೆ ಪರಿವರ್ತನೆ ಪಡೆದವರಲ್ಲಿ ಅಲ್ಪರೂ ಇದ್ದಾರೆ. ಅಧಮರೂ ಇದ್ದಾರೆ. ಹಾಗೇಯೇ ಮುಗ್ಧರೆನಿಸಿಕೊಳ್ಳುವ ಮಕ್ಕಳೂ ಇವೆ. ಇದು ಪವಾಡವೇ ಸರಿ. ಇವರ ರಹಸ್ಯವಾದರೂ ಏನು?'' ಎಂಬುದಾಗಿ ಒಬ್ಬ ವ್ಯಕ್ತಿಯು ಮೌಲಾನಾ ಬಹೌದೀನ್ ನಕ್ಷಬಂದ್ ಅವರನ್ನು ಕೇಳಿದ.

ಮೌಲಾನಾ ಅವರು ಆ ವ್ಯಕ್ತಿಯ ಪ್ರಶ್ನೆಗೆ ಉತ್ತರವಾಗಿ ''ಆಧ್ಯಾತ್ಮಿಕ ಅರಿವು ನಮ್ಮೆಲ್ಲರಿಗೂ ದೊರಕುವ ಬಗೆಯೇ ಹೀಗೆ. ಪರೋಕ್ಷ ಮಾರ್ಗದಲ್ಲಿ ಕೂಡ ಅದು ಹೇಗೆ ಪವಾಡ ಸದೃಶ ಪರಿವರ್ತನೆಯನ್ನು ತರಬಲ್ಲದು ಎಂಬುದಕ್ಕೆ ನಿದರ್ಶನವಾಗಿರುವ ಈ ಕತೆಯನ್ನು ಕೇಳು'' ಎಂದು ಹೇಳತೊಡಗಿದರು.

ಬೈಜಾಂತಿಯಮ್ ಮಹಾ ಸಾಮ್ರಾಜ್ಯದ ಕಾಲದಲ್ಲಿನ ಕತೆ ಇದು. ಆ ಮಹಾ ಸಾಮ್ರಾಜ್ಯದ ಚಕ್ರವರ್ತಿಗಳಲ್ಲೊಬ್ಬನಿಗೆ ಭಯಾನಕ ರೋಗವೊಂದು ತಗುಲಿ ಅವನು ಹಾಸಿಗೆ ಹಿಡಿದ. ಯಾವ ವೈದ್ಯನಿಗೂ ಅದನ್ನು ಗುಣಪಡಿಸುವುದಾಗಲಿಲ್ಲ. ಚಕ್ರವರ್ತಿಯು ಈ ರೋಗವನ್ನು ಗುಣಪಡಿಸಬಲ್ಲ ವೈದ್ಯರ ಪತ್ತೆಗಾಗಿ ಪ್ರಪಂಚದ ಎಲ್ಲ ದೇಶಗಳಿಗೂ ರಾಯಭಾರಿಗಳನ್ನು ಕಳುಹಿಸಿದ. ಪ್ರಭುಗಳನ್ನು ಪೀಡಿಸುತ್ತಿದ್ದ ರೋಗದ ಗುಣಲಕ್ಷಣಗಳ ವಿವರಗಳ ಸಹಿತ ಅವರು ಸುತ್ತಾಡತೊಡಗಿದರು. ಹಾಗೆ ದೇಶಾಂತರಿಗಳಾದ ರಾಯಭಾರಿಗಳಲ್ಲಿ ಒಬ್ಬನು ಎಲ್-ಘಜಾಲಿ ಎಂಬ ಮಹಾನ್ ಸೂಫಿ ಸಂತನು ಸ್ಥಾಪಿಸಿದ್ದ ಮದರಸಾಕ್ಕೆ ಬಂದನು. ಪೂರ್ವದೇಶಗಳ ಪ್ರಖ್ಯಾತ ಸೂಫಿ ಸಂತರಲ್ಲಿ ಎಲ್-ಘಜಾಲಿಯೂ ಒಬ್ಬನಾಗಿದ್ದನು. ಅವನ ಖ್ಯಾತಿಯು ಚಕ್ರವರ್ತಿಯ ಕಿವಿಗೂ ಬಿದ್ದಿತ್ತು. ಮದರಸಾಕ್ಕೆ ಆಗಮಿಸಿದ ರಾಯಭಾರಿಯಿಂದ ವಿಷಯ ತಿಳಿದುಕೊಂಡ ಎಲ್-ಘಜಾಲಿಯು ತನ್ನ ಶಿಷ್ಯರಲ್ಲಿ ಒಬ್ಬನನ್ನು ಕರೆದು ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ಪ್ರಯಾಣ ಬೆಳೆಸುವಂತೆ ಆಜ್ಞಾಪಿಸಿದ.

ಗುರುಗಳ ಆಜ್ಞೆಯಂತೆ ಶಿಷ್ಯನಾದ ಎಲ್-ಆರಿಫನು ಕಾನ್‌ಸ್ಟಾಂಟಿನೋಪಲ್ ನಗರವನ್ನು ತಲುಪಿದ. ಅವನನ್ನು ಗೌರವಾದರಗಳಿಂದ ಆಸ್ಥಾನಕ್ಕೆ [illegible] ನಂತರ ಚಕ್ರವರ್ತಿಯನ್ನು ಭೇಟಿಮಾಡಿಸ [illegible] ತನ್ನ [illegible] ಗುಣಪಡಿಸುವಂತೆ ಚಕ್ರವರ್ತಿಯು ಅವನನ್ನು [illegible] ಅವರಿಗೆ ಯಾವ [illegible] ಚಿಕಿತ್ಸೆ [illegible] ಎಂಬುದನ್ನು ಎಲ್- ಆರಿಫ್ ವಿಚಾರಿಸಿಕೊಂಡ. ಹಾಗೆಯೇ ಮುಂದಿನ ದಿನಗಳಲ್ಲಿ ಯಾವ ರೀತಿಯ ಚಿಕಿತ್ಸೆ ಪಡೆಯಲು ಚಕ್ರವರ್ತಿಯು ಉತ್ಸುಕನಾಗಿದ್ದಾನೆ ಎಂಬುದನ್ನೂ ಕೇಳಿ ತಿಳಿದುಕೊಂಡ. ಆ ನಂತರ ರೋಗಿಯಾದ ಅವನನ್ನು ಪರೀಕ್ಷಿಸಿ ನೋಡಿದ.

ಹೀಗೆ ವಿಚಾರಣೆಗಳೂ ತಪಾಸಣೆಗಳೂ ಮುಗಿದ ಬಳಿಕ ಚಕ್ರವರ್ತಿಯ ರೋಗಕ್ಕೆ ನೀಡಬೇಕಾದ ಚಿಕಿತ್ಸೆಯ ಬಗ್ಗೆ ಆಸ್ಥಾನದಲ್ಲಿ ಬಹಿರಂಗ ಹೇಳಿಕೆ ನೀಡುವುದಾಗಿ ತನ್ನ ಇಚ್ಛೆಯನ್ನು ಪ್ರಕಟಪಡಿಸಿದ. ಅದಕ್ಕಾಗಿ ಸಮಸ್ತ ಆಸ್ಥಾನಿಕರ ಸಭೆ ಸೇರಿಸಬೇಕೆಂದು ಕೇಳಿಕೊಂಡ.

ಚಕ್ರಾಧಿಪತ್ಯದ ಸಮಸ್ತ ಆಸ್ಥಾನಿಕರನ್ನೂ ಕರೆಸಲಾಯಿತು. ಸಭೆಯು ಪ್ರಾರಂಭವಾಯಿತು. ಸೂಫಿಯು ಅವರನ್ನು ಉದ್ದೇಶಿಸಿ- ''ಶ್ರದ್ಧಾ ಚಿಕಿತ್ಸೆಗೆ ದೈವಾನುಗ್ರಹವಿರುತ್ತದೆ. ಆ ಚಿಕಿತ್ಸೆಯನ್ನು ನೀಡಿದರೆ ಪ್ರಭುಗಳು ಗುಣಮುಖರಾಗುತ್ತಾರೆ'' ಎಂಬ ಸಲಹೆಯನ್ನು ಮುಂದಿಟ್ಟ.



''ಪ್ರಭುಗಳಿಗೆ ಆ ಚಿಕಿತ್ಸೆಯನ್ನು ನೀಡಿದೆವು. ಕಾಯಿಲೆಯನ್ನು ಗುಣಪಡಿಸುವ ಅದರ ಪ್ರಭಾವ ಅವರ ಮೇಲೆ ಎಳ್ಳಷ್ಟೂ ಆಗಲಿಲ್ಲ'' ಎಂದೊಬ್ಬ ಕ್ರೈಸ್ತ ಪಾದ್ರಿಯು ತಾನು ನಡೆಸಿದ ವಿಫಲ ಪ್ರಯತ್ನದ ಬಗ್ಗೆ ಹೇಳಿದ.

''ಹಾಗಾದರೆ ಅಪರಿಹಾರ್ಯ ಎಂದು ತೋರುವ ಈ ಕಾಯಿಲೆಗೆ ನನ್ನ ಬಳಿ ಒಂದು ಚಿಕಿತ್ಸೆಯೇನೋ ಇದೆ. ಇಡೀ ಭೂಮಂಡಲದ ಮೇಲೆ ಈ ಕಾಯಿಲೆಯನ್ನು ಗುಣಪಡಿಸುವ ಮತ್ತಾವ ಚಿಕಿತ್ಸೆಯೂ ನನಗೆ ಕಂಡು ಬಂದಿಲ್ಲ. ಚಕ್ರವರ್ತಿಯ ಪ್ರಾಣ ಉಳಿಯಬೇಕಾದರೆ ಇದರ ಹೊರತು ಅನ್ಯಮಾರ್ಗವಿಲ್ಲ. ಈ ಚಿಕಿತ್ಸೆ ಯಾವುದು ಎಂಬುದನ್ನು ಹೇಳಲೇಬೇಕಾದ ಜರೂರು ಪರಿಸ್ಥಿತಿಯಲ್ಲಿ ನಾನು ನಿಂತಿದ್ದೇನೆ ಎಂಬುದು ನಿಜ. ಆದರೆ ಅದನ್ನು ಹೇಳಬಾರದೆಂಬ ತೀರ್ಮಾನ ನನ್ನದು. ಏಕೆಂದರೆ ಈ ಚಿಕಿತ್ಸೆಯು ಅಷ್ಟೊಂದು ಭಯಾನಕವಾದ್ದು'' ಎಂದು ಎಲ್-ಆರಿಫ್ ಸೂಫಿ ಎಚ್ಚರಿಕೆ ನೀಡಿದ.

ಆಸ್ಥಾನಿಕರು ಬಲವಾಗಿ ಪಟ್ಟುಹಿಡಿದು ಆ ಚಿಕಿತ್ಸೆಯು ಯಾವುದೆಂದು ತಿಳಿಸುವಂತೆ ಅವನನ್ನು ಒತ್ತಾಯಿಸ ತೊಡಗಿದರು. ಅವನು ಸಮ್ಮತಿಸಲಿಲ್ಲ. ಕೇಳಿದಷ್ಟು ನಗ ನಾಣ್ಯ ಕೊಡುತ್ತೇವೆಂದರು. ಬಾಯಿಬಿಡಲಿಲ್ಲ. ದಂಡಿಸುವುದಾಗಿ ಬೆದರಿಸಿದರು. ಜಗ್ಗಲಿಲ್ಲ. ಕೊನೆಯ ಪ್ರಯತ್ನವಾಗಿ ವಿನಮ್ರತೆಯಿಂದ ಬೇಡಿಕೊಂಡರು. ಸೂಫಿಯು ಒಪ್ಪಿದ. ಮುಂದುವರೆದು ಅವನು- ''ಪ್ರಭುಗಳಿಗೆ ಬಡಿದಿರುವ ಈ ರಣ ಕಾಯಿಲೆಯನ್ನು ಗುಣಪಡಿಸಬೇಕಾದರೆ ಏಳು ವರ್ಷಕ್ಕೂ ಕಿರಿಯ ವಯಸ್ಸಿನ ನೂರಾರು ಮಕ್ಕಳನ್ನು ಕೊಂದು ಆ ರಕ್ತದಲ್ಲಿ ಅವರಿಗೆ ಸ್ನಾನ ಮಾಡಿಸಬೇಕು'' ಎಂದು ಸಭೆಗೆ ತಿಳಿಸಿದ.

ಅವನ ಈ ಮಾತುಗಳನ್ನು ಕೇಳಿ ಎಲ್ಲರೂ ದಿಗ್ಭ್ರಮೆಗೊಳಗಾದರು. ಕೆಲಕಾಲ ಯಾರಿಗೂ ಏನೂ ಹೇಳಲೂ ತೋಚದಂತಾಯಿತು. ದಿಗ್ಭ್ರಮೆ ಮತ್ತು ಆತಂಕದಿಂದ ಚೇತರಿಸಿಕೊಂಡ ಬಳಿಕ ಈ ಭಯಾನಕ ಚಿಕಿತ್ಸೆಯ ಸಾಧಕ ಬಾಧಕಗಳನ್ನು ಕುರಿತು ಚಿಂತಿಸಿದರು. ಪ್ರಭುಗಳ ಜೀವ ಉಳಿಸುವ ದೃಷ್ಟಿಯಿಂದ ಈ ಚಿಕಿತ್ಸೆಯು ಅಷ್ಟೊಂದು ದುಬಾರಿಯೇನಲ್ಲ ಎಂಬ ತೀರ್ಮಾನಕ್ಕೆ ಬಂದರು. ದೇಶ ಭಾಷೆಗಳು ಗೊತ್ತಿಲ್ಲದ ಯಾವನೋ ಪರದೇಶಿಯ ಮಾತು ಕೇಳಿ ಇಂತಹ ಬರ್ಬರ ಕೃತ್ಯವೆಸಗುವ ಹಕ್ಕು ಯಾರಿಗೂ ಇಲ್ಲ ಎಂದೇನೋ ಕೆಲವರು ಹೇಳಿದರು ನಿಜ. ಆದರೆ ಹೆಚ್ಚಿನ ಸಂಖ್ಯೆಯ ಆಸ್ಥಾನಿಕರಿಗೆ ಚಕ್ರವರ್ತಿಯ ಬಗ್ಗೆ ಅತೀವವಾದ ಗೌರವಾದರಗಳಿದ್ದವು. ಪ್ರಭುವು ದೈವದಂತೆ ಪೂಜನೀಯನೆಂದೇ ಅವರು ನಡೆದುಕೊಂಡಿದ್ದರು. ಪ್ರಭುಗಳ ಜೀವ ಉಳಿಸಲು ಯಾವ ಬೆಲೆಯನ್ನಾದರೂ ತೆರಲು ಸಿದ್ಧರಾಗಬೇಕು ಎಂಬುದು ಅವರ ಅಭಿಮತವಾಗಿತ್ತು.

ಅಮಾಯಕ ಮಕ್ಕಳ ರಕ್ತ ಹರಿಸಿ ಅದರಲ್ಲಿ ಸ್ನಾನ ಮಾಡುವ ಇಚ್ಛೆ ಪ್ರಭುಗಳಿಗೆ ಸುತರಾಂ ಇರಲಿಲ್ಲ. ಆದರೆ ಬಹುತೇಕ ಎಲ್ಲ ಆಸ್ಥಾನಿಕರೂ ಚಕ್ರವರ್ತಿಯನ್ನು ಒತ್ತಾಯ ಪಡಿಸತೊಡಗಿದರು. ''ಈ ವಿಷಯದಲ್ಲಿ ನಮ್ಮ ತೀರ್ಮಾನವನ್ನು ಧಿಕ್ಕರಿಸುವ ಹಕ್ಕು ಮಹಾಪ್ರಭುಗಳಿಗಿಲ್ಲ. ಇಷ್ಟೊಂದು ಸಂಖ್ಯೆಯ ಮಕ್ಕಳ ಹತ್ಯೆಯಷ್ಟೇ ಏಕೆ! ಸಹಸ್ರಾರು ಸಂಖ್ಯೆಯಲ್ಲಿ ಪ್ರಜೆಗಳ ಪ್ರಾಣ ತೆತ್ತಾದರೂ ನಿಮ್ಮನ್ನು ರಕ್ಷಿಸುವುದು ನಮ್ಮ ಕರ್ತವ್ಯ. ನಮ್ಮೆಲ್ಲರ ಪ್ರಾಣಗಳಿಗಿಂತ ಈ ಚಕ್ರಾಧಿಪತ್ಯಕ್ಕೆ ನಿಮ್ಮ ಪ್ರಾಣವು ಅಮೂಲ್ಯವಾದ್ದು'' ಎಂದೆಲ್ಲಾ ತಮ್ಮ ಸ್ವಾಮಿ ಭಕ್ತಿಯ ಕವಾಯತು ಮಾಡತೊಡಗಿದರು.

ಚಕ್ರವರ್ತಿಯು ಅನ್ಯಮನಸ್ಕನಾಗಿ ಎಲ್ಲರ ಒತ್ತಾಯಕ್ಕೆ

ಮಣಿಯಬೇಕಾಯಿತು. ಪ್ರಭುಗಳ ಆಯುರಾರೋಗ್ಯವನ್ನು ಸಂರಕ್ಷಿಸುವ ಯೋಜನೆಯು ಸಿದ್ಧಗೊಂಡಿತು. ಬೈಜಾಂತಿಯಮ್ ಚಕ್ರಾಧಿಪತ್ಯದ ಏಳು ವರ್ಷ ವಯೋಮಿತಿಯೊಳಗಿನ ಎಲ್ಲ ಮಕ್ಕಳನ್ನೂ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ಎತ್ತಿಹಾಕಿಕೊಂಡು ಬರಬೇಕೆಂಬ ಆದೇಶವು ಹೊರಟಿತು.

ಚಕ್ರವರ್ತಿಯು ತನ್ನ ಜೀವ ಉಳಿಸಿಕೊಳ್ಳುವ ಸಲುವಾಗಿ ತಮ್ಮ ಕಂದಮ್ಮಗಳನ್ನು ಬಲಿ ತೆಗೆದುಕೊಳ್ಳಲು ಉದ್ಯುಕ್ತನಾಗಿರುವನೆಂದು ತಾಯಂದಿರು ಕಳವಳಗೊಂಡರು. ಕರುಳ ಕುಡಿಗಳನ್ನು ಕಳೆದುಕೊಳ್ಳುವಂತಾದ ಇವರಲ್ಲಿ ಕೆಲವರು ಅತ್ಯುಗ್ರವಾಗಿ ಚಕ್ರವರ್ತಿಯನ್ನು ಶಪಿಸಿದರು. ಮತ್ತೆ ಕೆಲವರು ಚಕ್ರವರ್ತಿ ಶೀಘ್ರಗುಣವಾದರೆ ಈ ಹತ್ಯಾಕಾಂಡ ನಿಂತು ತಮ್ಮ ಮಕ್ಕಳ ಪ್ರಾಣ ಉಳಿದಂತಾಗುತ್ತದೆ. ತಮ್ಮ ಮಕ್ಕಳು ಬಲಿಯಾಗುವ ಮುಂಚೆ ಅವನು ಗುಣಮುಖನಾಗಲೆಂದು ದೇವರಲ್ಲಿ ಪ್ರಾರ್ಥಿಸಿದರು.

ಒಂದೆರಡು ದಿನಗಳು ಹೀಗೆ ಕಳೆದವು. ಯಾವುದೇ ಕಾರಣಕ್ಕೂ ಮುದ್ದು ಮಕ್ಕಳ ಹತ್ಯಾಕಾಂಡದಂತಹ ಬರ್ಬರ ಕೃತ್ಯಕ್ಕೆ ಪ್ರಜಾಪಾಲಕನಾದ ತಾನು ಅವಕಾಶ ನೀಡಬಾರದು ಎಂಬ ಅಂತಃಕರಣದ ಭಾವನೆಯು ಚಕ್ರವರ್ತಿಯ ಅಂತರಾಳದಲ್ಲಿ ಮೊಳೆಯತೊಡಗಿತು. ಮಾನಸಿಕ ತೊಳಲಾಟದಿಂದ ಹಗಲು ರಾತ್ರಿ ನಿದ್ರೆ ಬಾರದಾಯಿತು. ಕೊನೆಗೊಂದು ದಿನ ''ನನ್ನ ಪ್ರಾಣ ಹೋದರೂ ಸರಿ. ಅಮಾಯಕ ಮಕ್ಕಳನ್ನು ನನಗಾಗಿ ಬಲಿ ಕೊಡುವುದನ್ನು ನೋಡಲಾರೆ'' ಎಂದು ನಿರ್ಧರಿಸಿ ಘೋಷಿಸಿಬಿಟ್ಟ.

ಉತ್ಕಟ ಸ್ಥಿತಿಯು ಸ್ಫೋಟಗೊಂಡಿತ್ತು. ದಿನ ಕಳೆದಂತೆ ಅವನು ಗುಣಮುಖನಾಗತೊಡಗಿದ. ಕೆಲವೇ ದಿನಗಳಲ್ಲಿ ಹಿಂದಿನಂತೆ ಆರೋಗ್ಯವಂತನಾದ. ಜನತೆಗೆ ಈ ಸೋಜಿಗದ ಸಂಗತಿಯ ಮರ್ಮವು ತಿಳಿಯದಂತಾಗಿತ್ತು. ಕೆಲವರು, ''ಪ್ರಭುಗಳು ಸಂಭವಿಸಬಹುದಾಗಿದ್ದ ಅಮಾಯಕ ಮಕ್ಕಳ ಕೊಲೆಯ ಪಾತಕವನ್ನು ನಿವಾರಿಸಿಕೊಂಡು ಪುಣ್ಯ ಸಂಚಯಿಸಿದಂತಾಯಿತು. [illegible] ದಿಂದಲೇ ಅವರ ಭಯಾನಕ ಕಾಯಿಲೆಯು ಗುಣವಾಯಿತು'' ಎಂದರು. ಮತ್ತೆ ಕೆಲವರು ''ಹೆತ್ತವರ ಆರ್ತನಾದವನ್ನು ಆಲಿಸಿಕೊಂಡ ಭಗವಂತನೇ ಪ್ರಭುಗಳ ಕಾಯಿಲೆಯನ್ನು ಗುಣಪಡಿಸಿದ'' ಎಂದರು.

ಚಕ್ರವರ್ತಿಯು ಗುಣಮುಖನಾಗಲು ಏನು ಕಾರಣವಿದ್ದಿರಬಹುದು ಎಂದು ಸೂಫಿ ಎಲ್ - ಆರಿಫ್‌ನನ್ನು ಕೇಳಲಾಗಿ ಅವನು ''ಚಕ್ರವರ್ತಿಗೆ ದೈವದಲ್ಲಿ ನಂಬಿಕೆ ಇರಲಿಲ್ಲ. ಆದ್ದರಿಂದ ಆ ಜಾಗದಲ್ಲಿ ಅವನಿಗೆ ಮತ್ತಾವುದಾದರೂ ಒಂದು ಆಸರೆ ಇರಲೇಬೇಕಿತ್ತು. ಅಮಾಯಕ ಮಕ್ಕಳ ಹತ್ಯಾಕಾಂಡದ ವಿಚಾರದಲ್ಲಿ ಅವನ ಮನಸ್ಸು ಉತ್ಕಟವಾಗಿ ಚಿಂತನೆಗೆ ತೊಡಗಲು ಸಾಧ್ಯವಾದದ್ದು ಇದರಿಂದಲೇ. ಅದೇ ರೀತಿಯಲಿ ಪ್ರಭುಗಳು ಗುಣಮುಖರಾಗದಿದ್ದರೆ ನಮ್ಮ ಮಕ್ಕಳಿಗೆ ಉಳಿಗಾಲವಿಲ್ಲ, ಅವರು ಅತ್ಯಂತ ಶೀಘ್ರವಾಗಿ ಗುಣಮುಖರಾಗಲಿ ಎಂಬುದು ತಾಯಂದಿರ ಜೀವ ತಾರಕ ಆಕಾಂಕ್ಷೆಯಾಗಿತ್ತು. ಈ ಆಕಾಂಕ್ಷೆಯ ಜೀವತಾರಕ ಸಂದರ್ಭವು ಚಕ್ರವರ್ತಿಯ ಮನಸ್ಸಿನ ಮೇಲೆ ಅಗಾಧ ಪ್ರಭಾವ ಬೀರಿದ್ದಷ್ಟೇ ಅಲ್ಲ ಅವರ ಅಂತಿಮ ನಿರ್ಧಾರವನ್ನೂ ಪ್ರೇರೇಪಿಸಿತು'' ಎಂದು ಹೇಳಿದ.

ಬೈಜಾಂತಿಯಮ್ ಪ್ರಜೆಗಳಲ್ಲಿ ಕುಹಕಿಗಳಿಗೇನೂ ಕೊರತೆಯಿರಲಿಲ್ಲ. ಈ ಸೂಫಿಯು [illegible] ಧರ್ಮವನ್ನು ನಿರಸನಗೊಳಿಸಲು [illegible] ಸೈತಾನನೆಂದು ದೂಷಿಸಿದರು. [illegible] ಹಾತೊರೆಯುತ್ತಿರುವ ಧರ್ಮ ಭಂಜಕ ಮುಸಲ್ಮಾನನೆಂದು ಹೀಗಳೆದರು. ಅರಳುವ ನಮ್ಮ ಯುವಜನಾಂಗವನ್ನು ಚಿಗುರಿನಲ್ಲೇ ಚಿವುಟಿಹಾಕಬೇಕೆಂಬ ದುರುದ್ದೇಶವೇ ಇರಬೇಕು. ಇಲ್ಲದಿದ್ದರೆ ನಮ್ಮ ಚಕ್ರವರ್ತಿಯ ಕಾಯಿಲೆಗೆ ನಮ್ಮ ಮಕ್ಕಳ ರಕ್ತದಿಂದಲೇ ಚಿಕಿತ್ಸೆ ನೀಡಬೇಕೆಂದು ಏಕೆ ಹೇಳಿದ? ನಮ್ಮ ಮಕ್ಕಳನ್ನು ಯುವಕರಾಗುವವರೆಗೂ ಬೆಳೆಯಬಿಟ್ಟರೆ ಅವು ಇಸ್ಲಾಂ ಧರ್ಮಕ್ಕೆ ಎದುರಾಳಿಗಳಾಗಿ ನಿಂತುಬಿಡುತ್ತಾರೆ. ಅಲ್ಲವೇ? ಈ ಸೂಫಿಯು ಕುತಂತ್ರ ಬುದ್ಧಿಯವನು ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೇ? ಎಂಬುದಾಗಿ ಕೋಮುವಾದಿಗಳು ಭಾವಾವೇಶದ ಪ್ರಚಾರವನ್ನು ಕೈಗೊಂಡರು. ತಮ್ಮ ಪ್ರಾರ್ಥನೆಯನ್ನು ಕಿವಿಗೊಟ್ಟು ಆಲಿಸಿದ ಭಗವಂತನ ಮಹಿಮೆಯಿಂದಲೇ ಪ್ರಭುಗಳು ಗುಣಮುಖರಾದರು ಎಂಬ [illegible] ಪಾದ್ರಿಗಳು ನಿರತರಾದರು.

ಚಕ್ರವರ್ತಿಯು ಸಂಪೂರ್ಣವಾಗಿ ಗುಣಮುಖನಾದ. ಎಲ್-ಘಜಾಲಿಗೂ ಈ ವಿಷಯವನ್ನು ತಿಳಿಸಲಾಯಿತು. ಅವನು-''ನಮ್ಮ ಕಾರ್ಯಸಾಧನೆಗಾಗಿ ನಾವು ಅನುಸರಿಸುವ ಮಾರ್ಗಗಳು ಹಲವಾರು ಇರುತ್ತವೆ. [illegible] ನಾವು ನಿರೀಕ್ಷಿಸುವ ಫಲವನ್ನು ನೀಡಬಲ್ಲ ಮಾರ್ಗವನ್ನು ನಾವು ಆಯ್ಕೆ ಮಾಡಿಕೊಳ್ಳಬೇಕು. ಆಗ ಮಾತ್ರ ನಮ್ಮ ಉದ್ದೇಶ ಕೈಗೂಡುತ್ತದೆ'' ಎಂಬುದಾಗಿ [illegible]

[illegible] ತನ್ನದೇ ಮಾರ್ಗದಿಂದ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡಿದ್ದ. ಚಕ್ರವರ್ತಿಯ ಕಾಯಿಲೆಗೆ ಅನನ್ಯವಾದ ಚಿಕಿತ್ಸೆಯ ಸಲಹೆ ನೀಡಿ ಅವನನ್ನು ಗುಣಮುಖನನ್ನಾಗಿ ಮಾಡಿದ ವೈದ್ಯನೆಂದು ಹೆಸರು ಗಳಿಸಿ ಅವರ ನಡುವೆ ಎತ್ತರದ ವ್ಯಕ್ತಿಯಾಗಿ ಮೂಡಿಬಂದಿದ್ದ. ಇದು ನಮ್ಮೆಲ್ಲರನ್ನೂ ಚಕಿತಗೊಳಿಸುವ ಸಂಗತಿಯಾಗಿ ತೋರುತ್ತದೆ [illegible] ಕರೆಯಲಾಗುವ ಸೂಫಿಗಳು ಅನುಸರಿಸುವ ಮಾರ್ಗವೂ [illegible]

[illegible]

ಹೊಸತು ಎಚ್‌ಎಮ್‌ಟಿ ಲೇಖನ ಸ್ಪರ್ಧೆ

ವಿಡಂಬನೆ, ಲಲಿತ ಪ್ರಬಂಧ, ಮತ್ತು ಪ್ರವಾಸ ಕಥನ - ಈ ಯಾವುದೇ ಸಾಹಿತ್ಯ ಪ್ರಕಾರದಲ್ಲಿ, 'ಹೊಸತು' ಸಂಪಾದಕರು ಅತ್ಯುತ್ತಮವೆಂದು ಪರಿಗಣಿಸುವ ಒಂದು ಬರಹಕ್ಕೆ ಸಾರ್ವಜನಿಕ ಉದ್ದಿಮೆಗಳಲ್ಲಿ ಪ್ರತಿಷ್ಠಿತ ಸಂಸ್ಥೆಯಾದ ಎಚ್‌ಎಮ್‌ಟಿ ಪ್ರತಿ ತಿಂಗಳೂ ಒಂದು ಕೈಗಡಿಯಾರವನ್ನು ಬಹುಮಾನವಾಗಿ ನೀಡುವ ಮೂಲಕ ಲೇಖಕರನ್ನು ಪ್ರೋತ್ಸಾಹಿಸಲು ಮುಂದೆ ಬಂದಿದೆ ಎಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಲೇಖನಗಳು 'ಹೊಸತು' ಸಂಚಿಕೆಯ ಸುಮಾರು ಎರಡು ಮುದ್ರಿತ ಪುಟಗಳಷ್ಟಾಗುವಷ್ಟಿದ್ದು (ಸುಮಾರು ಒಂದು ಸಾವಿರ ಪದಗಳು) ನಮ್ಮ ಪತ್ರಿಕೆಗೆಂದೇ ಬರೆದವಾಗಿರಬೇಕು. ಬೇರೆಲ್ಲೂ ಪ್ರಕಟವಾಗಿರಕೂಡದು. ಪ್ರವಾಸ ಲೇಖನದೊಂದಿಗೆ ಅದಕ್ಕೆ ಸಂಬಂಧಿಸಿದ [illegible] ಛಾಯಾಚಿತ್ರಗಳನ್ನು ಕಳಿಸಬಹುದು. [illegible] ಹಾಳೆಯ ಒಂದೇ ಮಗ್ಗುಲಿನಲ್ಲಿ [illegible] ಅಕ್ಷರಗಳಲ್ಲಿರಬೇಕು. ಅಸ್ವೀಕೃತ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಸಾಕಷ್ಟು ಅಂಚೆ ಚೀಟಿ ಅಂಟಿಸಿದ ಸ್ವ ವಿಳಾಸ ಬರೆದ ಲಕೋಟೆ ಲಗತ್ತಿಸಿರಬೇಕು. ಲಕೋಟೆಯ ಮೇಲೆ 'ಹೊಸತು - ಎಚ್‌ಎಮ್‌ಟಿ ಲೇಖನ ಸ್ಪರ್ಧೆಗಾಗಿ' ಎಂದು ನಮೂದಿಸಿರಬೇಕು. ಬಹುಮಾನದ ಬಗ್ಗೆ ಪತ್ರವ್ಯವಹಾರಕ್ಕೆ ಅವಕಾಶವಿಲ್ಲ. ಆಯಾ ತಿಂಗಳ ಏಳನೆಯ ತಾರೀಖಿನೊಳಗೆ ನಮಗೆ ತಲುಪಿದ ಲೇಖನಗಳನ್ನು ಪರಿಶೀಲಿಸಿ, ಆಯ್ಕೆಯಾದ ಲೇಖನವನ್ನು ಮುಂದಿನ ತಿಂಗಳ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ವಿಜೇತರಿಗೆ ಎಚ್‌ಎಮ್‌ಟಿ ಸಂಸ್ಥೆಯವರು ಬಹುಮಾನ ನೀಡುವ ವ್ಯವಸ್ಥೆ ಮಾಡುತ್ತಾರೆ. ಒಂದೇ ಸಂಚಿಕೆಯಲ್ಲಿ ಮೂರೂ ಪ್ರಕಾರಗಳ ಬರಹಗಳು ಪ್ರಕಟವಾದಾಗ ಅವುಗಳ [illegible] ಬಹುಮಾನವೆಂಬುದನ್ನು [illegible]

ಹೊಸತು ಪದ ಹೊಸೆತ

೧	೨	■	೩		೪	■	೫	೬
೭				■	೮			
೯		■		■		■	೧೦	
■	■	೧೧		೧೨			■	■
೧೩		■	೧೪			■	೧೫	೧೬
	■	■	■		■	■	■	
೧೭		೧೮	■		■	೧೯		
	■	೨೦					■	
೨೧			■		■	೨೨		

ಅಡ್ಡ

೧. ರೆಕ್ಕೆಯಿಲ್ಲದ ಪಕ್ಷಿಯನ್ನು ಕೇಳುವ ಅಂಗ!

೩. ಆರು ಷಟ್ಪದಿಗಳಲ್ಲಿ ಆರು ಚರಣಗಳುಳ್ಳ ಪದ್ಯಜಾತಿ.

೫. ವೇದ ಮಂತ್ರಗಳನ್ನು ಪಠಿಸುವ ಬ್ರಾಹ್ಮಣ.

೭. ಗಾಂಧೀಜಿಯವರ ಕನಸಿನ ಇದು ನನಸಾಗಲಿಲ್ಲ.

೮. ಈ ಮಾದಕ ದ್ರವ್ಯದ ಪಾನೀಯದಲ್ಲಿ ವೃಕ್ಷವೇ ಇದೆ!

೯. ಕೆಳಭಾಗದಲ್ಲಿ ಕಂಡ ಮಟ್ಟ ನೆಲ.

೧೦. ಭಕ್ತರನ್ನು ಪಾಲಿಸುವ ಮಲ್ಲಿಕಾರ್ಜುನ.

೧೧. ರಾಜ್ಯದ ವ್ಯವಹಾರದಲ್ಲಿ ಚತುರನಾದವನು.

೧೩. ಸಿಮೆಂಟ್ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿರುವ ದೇಶ.

೧೪. ಕೆಲಸಕ್ಕೊಂದು ಸಾಮಗ್ರಿ.

೧೫. ಇಂಥಾ ವಿಧಾನದಲ್ಲಿ ಒಂದು ನ್ಯೂಟ್ರಾನ್‌ನಿಂದ ಯುರೇನಿಯಂ ಕೇಂದ್ರವನ್ನು ಒಡೆಯಬಹುದು.

೧೭. 'ಪ್ರತಿಯೊಂದು' ಒಟ್ಟಾಗಿ, ಬೇರೆ ಬೇರೆಯಾಗಿದೆ.

೧೯. ಕಾಂತಿ ತೋರುವ ಬ್ರಹ್ಮಪುತ್ರ.

೨೦. ಕಲರ್ ಟಿ.ವಿ.ಯಲ್ಲಿ ಬಳಸುವ ಮುಖ್ಯವಾದ ಮೂರು ಬಣ್ಣಗಳಲ್ಲಿ ಎರಡನ್ನು ಹೆಸರಿಸಿ.

೨೧. ಒಂದು ಬಗೆಯ ಪದ್ಯಜಾತಿಯಲ್ಲಿ ಕಂಡ ಕಿರಿ ಕಿರಿ!

೨೨. ಕಾರ್ಯ ನಿರ್ವಹಣಾ ಉಪಕರಣಗಳ ಕೆಲಸವನ್ನು ಬಲ್ಲವ.

ಲಂಬ

೧. ಬಡಕಲು ಶರೀರದವ ಖಂಡಿತಾ 'ಬೇಡ'

೨. ನಿಷ್ಕಳಂಕವಾದದ್ದು ಪವಿತ್ರವೂ ಆಗಿದೆ.

೩. ಗಣಿತದಲ್ಲಿ ಭಾಗಿಸಲ್ಪಡುವ ಮತ್ತು ಭಾಗಿಸುವ ಸಂಖ್ಯೆ.

೪. ಅಲಂಕಾರದ ಒಡವೆ ಇಲ್ಲದಿರುವುದು.

೫. ಸಾವಿರ ಹತ್ಯೆಯಲ್ಲಿ ಅಗಲಿಕೆಯ ನೋವಿದೆ.

೬. ಮುಂದಕ್ಕೆ ಚಲಿಸಿ ಹರಡುವಿಕೆ.

೧೨. ಎಲ್ಲಕ್ಕೂ ಮೂಲ ಪ್ರೇರಕ ವ್ಯಕ್ತಿಗೆ ಗಂಡಸಿನ ಮೇಲಿನ ನೆಪವೇ ಆಗಿದೆ!

೧೩. ವೇಗವಾಗಿ ಶಾಖವನ್ನು ವರ್ಗಾಯಿಸುವ ವಿಧಾನ.

೧೬. ಪ್ರತಿಯೊಂದು ಆಮ್ಲದಲ್ಲಿರುವ ಸಾಮಾನ್ಯ ಅನಿಲ.

೧೮. ಅನೇಕ ಹಳೆಯ ವಾದ್ಯಗಳಲ್ಲೊಂದು ತುತ್ತೂರಿ.

೧೯. ರಕ್ತಪರಿವರ್ತನೆ ಕಂಡು ಹಿಡಿದ ಹಾರ್ವೆ.

ಜ. ಮಲ್ಲಿಕಾರ್ಜುನ
ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಸಂಸ್ಥೆ, ಜಿಂದಾಲ್ ನಗರ,
ತುಮಕೂರು ರಸ್ತೆ, ಬೆಂಗಳೂರು - ೫೬೦ ೦೭೩.

ಮೇ ತಿಂಗಳ ಹೊಸತು ಪದಹೊಸೆತದ ಸರಿಯುತ್ತರ

ಕಾ	ರ್ಮಿ	ಕ	ಮಾ	ಲೀ	ಕ	■	ಮಾ	ರ್ಕ್ಸ್
ಸೂ	■	ಲ್ಪ	■	■	ಳ್ಳ	■	ನ	■
ರು	■	ನಾ	■	■	ತ	ಪ್ರೋ	ಪ	ನ
■	ಸಂ	ಬ	ಳ	ದಿ	ನ	■	ತಾ	■
■	■	ನ	■	ವಾ	■	■	ವಾ	■
ಜಾ	ಕಿ	ವೇ	ತ	ನ	■	ಮೋ	ದಿ	ನ
ಲ	■	ತ್ವ	■	■	■	■	■	ಫೋ
ಕ	ಟೀ	ರ	ದಾ	ಸ	■	ಸಂ	ಗ	ಮ
ಪು	■	ದು	■	ರಿ	ಕಾ	ಪ್ತ	■	ಣ

ಮೂರು ವರ್ಷದ ಚಂದಾ ನೀಡುವವರಿಗೆ ನವಕರ್ನಾಟಕ ಪ್ರಕಾಶನದ ಎಲ್ಲ ಪುಸ್ತಕಗಳ ಮೇಲೆ 20% ರಿಯಾಯಿತಿ ನೀಡಲಾಗುವುದು. ಈ ರಿಯಾಯಿತಿ ಚಂದಾ ಅವಧಿ ಮುಗಿಯುವವರೆಗೆ ಮಾತ್ರ.

ಹೊಸತು ಚಂದಾ ವಿವರಗಳು

ವಾರ್ಷಿಕ ಚಂದಾ	...	*ರೂ. 100/-*
ಎರಡು ವರ್ಷಗಳಿಗೆ	...	*ರೂ. 180/-*
ಮೂರು ವರ್ಷಗಳಿಗೆ	...	*ರೂ. 250/-*

ತಿಂಗಳ ಪತ್ರಿಕೆ **ಹೊಸತು**

ಚಂದಾ ನವೀಕರಿಸುವವರಿಗೆ ಸೂಚನೆ

'ಹೊಸತು' ಪತ್ರಿಕೆ ಹೊತ್ತು ತರುವ ಲಕೋಟೆಯ ಮೇಲೆ ನಿಮ್ಮ ಈಗಿನ ಚಂದಾ ರಸೀದಿ ಸಂಖ್ಯೆ ಹಾಗೂ ಚಂದಾ ಅವಧಿ ಇರುವುದನ್ನು ಗಮನಿಸಿ. ಚಂದಾ ನವೀಕರಿಸುವಾಗ ನಿಮ್ಮ ವಿಳಾಸದ ಸಹಿತ ಲಕೋಟೆ ಮೇಲಿರುವ ಆ ಮಾಹಿತಿಯನ್ನು ಕತ್ತರಿಸಿ ಕಳಿಸಿಕೊಡಿ. ಇಲ್ಲವೇ ಚಂದಾ ರಸೀದಿ ಸಂಖ್ಯೆ ತಿಳಿಸಿ.

ದಿನಾಂಕ : ....

ವ್ಯವಸ್ಥಾಪಕರು
ಹೊಸತು', 15, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಅಂಚೆ ಪೆಟ್ಟಿಗೆ ಸಂಖ್ಯೆ 5159, ಬೆಂಗಳೂರು- 560 001

ಪ್ರಿಯರೇ,

ಇದರೊಂದಿಗೆ ಹೊಸತು ಪತ್ರಿಕೆಗಾಗಿ *ಮೂರು/ಎರಡು/ಒಂದು ವರ್ಷದ ಚಂದಾ ಹಣ *ರೂ 250/180/100 ಕ್ಕೆ ಹೊಸತು' ಹೆಸರಿನಲ್ಲಿ ಡಿ.ಡಿ./ಎಂ.ಒ. ಕಳಿಸುತ್ತಿದ್ದೇನೆ (ಡಿ.ಡಿ./ಎಂ.ಒ. ಸಂಖ್ಯೆ.............. ದಿನಾಂಕ....................). ಹಣ ತಲುಪಿದ ಕೂಡಲೇ ನನ್ನ ಚಂದಾವನ್ನು ನವೀಕರಿಸಿಕೊಂಡು / ನೋಂದಾಯಿಸಿಕೊಂಡು ಅಧಿಕೃತ ರಸೀದಿ ಕಳಿಸಿಕೊಡಿ. ಕೆಳಗಿರುವ ನನ್ನ ವಿಳಾಸಕ್ಕೆ ಪತ್ರಿಕೆ ಕಳಿಸಿಕೊಡಿ. (*ಬೇಡವಾದುದನ್ನು ಹೊಡೆದು ಹಾಕಿ)

ಹೆಸರು / ವಿಳಾಸ

....

....

....

....

ಸಹಿ

ಈಗಿನ ಚಂದಾ ರಸೀದಿ ಸಂಖ್ಯೆ :
ಚಂದಾ ಅವಧಿ :

(ಹೊಸದಾಗಿ ಚಂದಾದಾರರಾಗ ಬಯಸುವವರೂ ಈ ನಮೂನೆಯನ್ನೇ ಬಳಸಬಹುದು)

ನಿಸರ್ಗವ ನಂಬಿ ರಾರಾಜಿಸಿದ ಕಲಾ ನಿಸ್ಸೀಮ

ಕಲಾವಿದ ಪಿ. ಆರ್. ತಿಪ್ಪೇಸ್ವಾಮಿ



ಹುಟ್ಟು ಆಕಸ್ಮಿಕ, ಸಾವು ನಿಶ್ಚಿತವೆಂಬ ಸೂಕ್ತಿ ಬಾಳಿನುದ್ದಕ್ಕೂ ಬೊಟ್ಟು ತೋರಿ ಎಚ್ಚರಿಸುತ್ತಲೇ ಇರುತ್ತದೆ. ಆದರೆ ಅನಿರೀಕ್ಷಿತವಾಗಿ ಬರುವ ಕಾಕತಾಳೀಯ ಸಾವಿಂದ ದಿಗ್ಭ್ರಮೆಯಾಗುತ್ತದೆ ಎಂಬುದಕ್ಕೆ ಪಿ. ಆರ್. ತಿಪ್ಪೇಸ್ವಾಮಿ ದಿವಂಗತರಾದ ಬಗೆ ಒಂದು ನಿದರ್ಶನ.

ಎಂ.ಟಿ.ವಿ. ಆಚಾರ್ಯ ಪ್ರಶಸ್ತಿ ಪುರಸ್ಕೃತ ತಿಪ್ಪೇಸ್ವಾಮಿಯವರು ಮೈಸೂರಿನ ಭರಣಿ ಗ್ಯಾಲರಿಯಲ್ಲಿ ಯೋಜಿಸಿದ್ದ ಹಿರಿಯ ಕಲಾವಿದರ ಶಿಬಿರ ಮತ್ತು ಕಲಾ ಪ್ರದರ್ಶನವನ್ನು ಅದೇ ಸಂಸ್ಥೆ ಯೋಜಿಸಿದ್ದ ಸಮಯದಲ್ಲಿ ಹುರುಪಿನಿಂದ ಓಡಾಡಿಕೊಂಡು ಇರಬೇಕಾದವರು ನರ್ಸಿಂಗ್ ಹೋಂಗೆ ದಾಖಲಾಗಿದ್ದರು. ಏಪ್ರಿಲ್ ೪ರಂದು ಸಂವಾದ ನಡೆಸಿಕೊಡಬೇಕಾಗಿದ್ದ ಅವರನ್ನು ಕಾಣಲು ಹೋಗಿದ್ದ ನನ್ನನ್ನೂ ಸಂಸ್ಥೆಯ ಕಾರ್ಯದರ್ಶಿ ಶ್ರೀ ಎಲ್. ಶಿವಲಿಂಗಪ್ಪ ಅವರನ್ನೂ ಹೃದಯ ತಜ್ಞ ಡಾ॥ ಡಿ. ಟಿ. ಸುಭಾಷ್ ಕೂರಿಸಿ ಮಾತನಾಡಿ ತಿಪ್ಪೇಸ್ವಾಮಿಯವರು ತುಂಬಾ ಸೂಕ್ಷ್ಮದಲ್ಲಿ ಪ್ರಾಣಭಯದಿಂದ ಪಾರಾಗಿದ್ದಾರೆ, ಮುಂದೆ ಎಚ್ಚರಿಕೆಯಿಂದ ಇರುವಂತೆ ಹೇಳಿ, ಎಂದಿದ್ದರು. ಆದರ ೭ರಂದೇ ''ಭರಣಿ'' ನಕ್ಷತ್ರದಲ್ಲೇ ಕಲಾದಿಗಂತದಲ್ಲಿ ಅವರು ಕಣ್ಮರೆಯಾದುದು ನಿಜಕ್ಕೂ ವಿಚಿತ್ರ. ಸಮಾರಂಭದ ಕೊನೆಯ ದಿನ ೯ರಂದು ಪ್ರೊ॥ ಎಚ್ಚೆಸ್ಕೆ ಅವರ ಸಮ್ಮುಖದಲ್ಲಿ ಕಲಾವಿದರಿಂದ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಯುವುದೆಂದು ಯಾರೂ ನೆನಸಿರಲಿಲ್ಲ.

ಶ್ರದ್ಧಾಂಜಲಿಯಲ್ಲಿ. ಪ್ರೊ॥ ಎಚ್ಚೆಸ್ಕೆಯವರು ತಿಪ್ಪೇಸ್ವಾಮಿಯವರು ಕಲೆ, ಸಾಹಿತ್ಯ, ಜಾನಪದ, ಸಂಘಟನೆ ಹೀಗೆ ಒಂದು ರೀತಿಯಲ್ಲಿ ''ಚತುರ್ಮುಖ ಬ್ರಹ್ಮ''ನಾಗುವ ಹಾದಿಯಲ್ಲಿ ಮುನ್ನಡೆಯುತ್ತಿದ್ದರು ಎಂದು ಶ್ಲಾಘಿಸಿದರು. ಎಂ.ಟಿ.ವಿ. ಆಚಾರ್ಯ ನೆನಪಿನ ೧೯೯೮ರ ಒಂದು ಸಮಾರಂಭದಲ್ಲಿ ''ಪಂಚಮುಖಿ'' ಎಂದು ನುಡಿದಿದ್ದಾಗ ಕಲಾ ಪ್ರಿಯನೊಬ್ಬ ''ಚತುರ್ಮುಖ ಬ್ರಹ್ಮ'' ಎಂದು ಹೇಳಿದ್ದ ನೀವು ಈಗ ಮತ್ತೊಂದು ಮುಖ ಸೇರಿಸಿದ್ದೇಕೆ ಎಂದು ಪ್ರಶ್ನಿಸಿದ್ದ. ಅದಕ್ಕೆ ಎಚ್ಚೆಸ್ಕೆಯವರು ಕಲಾವಿದ ತಿಪ್ಪೇಸ್ವಾಮಿಯವರ ಗುಣಗಳ ಸಮೀಪವಾದಂತೆಲ್ಲಾ ಹೀಗೆ ಒಂದೊಂದು ಮುಖ ಹೆಚ್ಚುತ್ತಾ ಹೋಗಬಹುದು ಎಂದಿದ್ದರು. ಈ ನುಡಿಗಟ್ಟಿನ ಚೌಕಟ್ಟಿನಲ್ಲಿ ಪಿ. ಆರ್. ತಿಪ್ಪೇಸ್ವಾಮಿಯವರನ್ನು ಇಟ್ಟು ವಿಮರ್ಶಿಸಿದರೆ ಅವರ ಸರ್ವತೋಮುಖವಾದ, ವಯಸ್ಸಿಗೆ ಮೀರಿದ ದೈತ್ಯಶಕ್ತಿಯ, ಕಲಾ ಪ್ರಗತಿಪರ ಕಾರ್ಯಗಳು ಅಚ್ಚರಿಗೊಳಿಸುತ್ತವೆ.

ಪಟೇಲ್ ದಿ॥ ಜಿ. ರುದ್ರಪ್ಪ ಮತ್ತು ದಿ॥ ಲಕ್ಷ್ಮಮ್ಮನವರ ಹಿರಿಯ ಮಗನಾಗಿ ಚಿತ್ರದುರ್ಗ ಜಿಲ್ಲೆಯ ಹರ್ತಿಕೋಟೆಯಲ್ಲಿ ೧೧ನೇ ಆಗಸ್ಟ್ ೧೯೨೮ರಂದು ಜನಿಸಿದ ತಿಪ್ಪೇಸ್ವಾಮಿಯವರಿಗೆ ಕಲಾ ಶಿಕ್ಷಕ ಗುರುಸಿದ್ದಪ್ಪ ಅವರಿಂದ ಕಲಾ ಸ್ಫೂರ್ತಿ, ಸಾಹಿತಿ ಹೊಯ್ಸಳರಿಂದ ಸಾಹಿತ್ಯ ಸ್ಫೂರ್ತಿ ಸಿಕ್ಕಿದ್ದು. ಅಕಸ್ಮಾತ್ತಾಗಿ ಮನೆಗೆ ಬಂದ ಶ್ರೀ ಎಸ್. ನಿಜಲಿಂಗಪ್ಪ ಅವರಿಗೆ ಗೋಡೆಯಲ್ಲಿ ತಗುಲಿ ಹಾಕಿದ್ದ ತಿಪ್ಪೇಸ್ವಾಮಿ ರಚಿಸಿದ್ದ ಗಾಂಧಿ ಚಿತ್ರದಿಂದ ಸಂತೋಷವಾಗಿ ಚಾಮರಾಜೇಂದ್ರ ಕಲಾ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಣದ ಅವಕಾಶ ಸಿಕ್ಕಿದ್ದು:- ಇವೆಲ್ಲಾ ಬಾಲ ಪ್ರತಿಭಾಂಶದ ಒಂದು ಘಟ್ಟವಾದರೂ ಸುಪ್ತವಾಗಿದ್ದ ಚೈತನ್ಯದ ಸ್ಫುರಣೆ ಎಂದರೆ ಸೂಕ್ತವಾದೀತು.

ಚಾಮರಾಜೇಂದ್ರ ಚಿತ್ರಕಲಾ ಶಾಲೆಯಲ್ಲಿ ಮೊದಲು ಭೇಟಿಯಾದ ಶ್ರೀ ವೈ. ಸುಬ್ರಹ್ಮಣ್ಯರಾಜು ಅವರಿಂದ ನಾವು ಕಾಣುವ ವಸ್ತುಗಳ ಅಂಗಾಂಗ ರಚನೆಯ ಮೂಲಪಾಠದ ನಂತರ ನಿಸರ್ಗ ಚಿತ್ರಕಲಾ ಖ್ಯಾತಿಯ ಶ್ರೀ ಎಸ್. ನಂಜುಂಡಸ್ವಾಮಿ ಅವರ ಬಳಿ ಪಟ್ಟ ಶಿಷ್ಯತ್ವ ಪಡೆದರು. ಗುರು ಸಲಹೆಯಂತೆ ನಿಸರ್ಗ ಚಿತ್ರ ರಚನೆಯ ವೈವಿಧ್ಯತೆಯನ್ನು ತನ್ನದಾಗಿಸಿಕೊಂಡರು. ಖ್ಯಾತ ಕಲಾವಿದರಾದ ಕೆ. ವೆಂಕಟಪ್ಪನವರು ಹೋದೆಡೆಯಲ್ಲೆಲ್ಲಾ ನಿಸರ್ಗ ಚಿತ್ರ ರಚಿಸಲು ಹಾಳೆಯ ನಾಲ್ಕನೆಯ ಒಂದು ಭಾಗವನ್ನು ಬಳಸುವ ತಂತ್ರವನ್ನು ಹೇಳಿಕೊಟ್ಟರು. ಇವೆಲ್ಲ ಜ್ಞಾನ ಸಂಗ್ರಹಗಳ ಪ್ರತಿಫಲವೇ ಡಾ॥ ಜೀ. ಶಂ. ಪರಮಶಿವಯ್ಯನವರು ''ಚಿತ್ರ ರಚನೆಗಾಗಿ ಅಖಂಡ ಭಾರತ ಯಾತ್ರೆ ಕೈಗೊಂಡು ಭಾರತೀಯ ಸಂಸ್ಕೃತಿ, ಇತಿಹಾಸ, ನಿಸರ್ಗ ಸಂಪತ್ತಿನ ಅಧ್ಯಯನವನ್ನು ಇಷ್ಟು ವ್ಯಾಪಕವಾಗಿ ನಡೆಸಿದ ಕಲಾವಿದ ಮತ್ತೊಬ್ಬನಿಲ್ಲ. ನಿಷ್ಠೆಯಿಂದ, ಶ್ರದ್ಧೆಯಿಂದ, ಸಾಹಸದಿಂದ ನಿಸರ್ಗ ಚಿತ್ರಗಳನ್ನು ರಚಿಸಿದವರು ವಿರಳವೆಂದೇ ಹೇಳಬೇಕು,'' ಎಂಬ ನಲ್ನುಡಿಗೆ ತಿಪ್ಪೇಸ್ವಾಮಿಯವರನ್ನು ಪಾತ್ರವಾಗಿಸಿತು. ಖ್ಯಾತ ಕಲಾವಿದ ಸುಬ್ರಹ್ಮಣ್ಯರಾಜು ಅವರೂ ತಿಪ್ಪೇಸ್ವಾಮಿಯವರ ನಿಸರ್ಗ ಚಿತ್ರಗಳನ್ನು ನೋಡಿದರೆ ವಿದೇಶಿ ನಿಸರ್ಗ ಕಲಾವಿದ ಗಿಲ್‌ಬರ್ಟ್‌ನ ನೆನಪಾಗುತ್ತದೆ ಎಂದು ಪ್ರಶಂಸಿಸಿದ್ದರು. ರಚನಾ ಪೂರ್ವದಲ್ಲಿ ಬರೆದ [illegible] ಛಾಯಾಚಿತ್ರಗಳನ್ನು ಬಿಟ್ಟರೆ ಅವರು ಹೆಚ್ಚಾಗಿ ಮಲೆನಾಡ ನಿಸರ್ಗ ಚಿತ್ರಗಳು, ಗುಡಿ-ಗೋಪುರಗಳು, ಕೋಟೆ-ಕೊತ್ತಲ ರಚಿಸುವಲ್ಲಿ ನಿಷ್ಣಾತರಾದರು. [illegible] ಚಿತ್ರಗಳಿಗೆ ಅವಕಾಶ ಕೊಡದೆ ನಿಸರ್ಗದಲ್ಲಿ ನಿತ್ಯ ವಸಂತವನ್ನು, ಗುಡಿ-ಗೋಪುರಗಳಲ್ಲಿ [illegible] ತನ್ಮಯತೆಯನ್ನು, ಕೋಟೆ ಕೊತ್ತಲಗಳಲ್ಲಿ ಪ್ರೇಕ್ಷಣೀಯ ವೀಕ್ಷಣಾ ಸೊಬಗನ್ನು ತಮ್ಮ ಕಲಾ ಕೃತಿಗಳಲ್ಲಿ ತಂದಿದ್ದಾರೆ. ಚಿತ್ರಗಳನ್ನು ನೋಡಿದೊಡನೆ ತಿಪ್ಪೇಸ್ವಾಮಿಯವರ ಚಿತ್ರವೆಂದು ಹೇಳುವ ಪಡಿಯಚ್ಚಿನ ಶೈಲಿಯಿಂದ ಹಿಂದೆ. ಬಾದಾಮಿ, ಪಟ್ಟದಕಲ್ಲು, ಬಿಜಾಪೂರ, ಚಿತ್ರದುರ್ಗ, ಕಾರವಾರ, ಬೀದರ, ತಲಕಾಡು, ಶೃಂಗೇರಿ, ಶ್ರೀ ಚೆನ್ನಕೇಶವ ದೇವಾಲಯ, ಆದಿಚುಂಚನಗಿರಿ, ತೀರ್ಥಹಳ್ಳಿ, ಆಗುಂಬೆ, ಧರ್ಮಸ್ಥಳ, ದೆಹಲಿ, ಆಗ್ರಾ, ಕನ್ಯಾಕುಮಾರಿ, ಮೊದಲಾದ ಲೆಕ್ಕಕ್ಕೆ ನಿಲುಕದಷ್ಟು ಚಿತ್ರಗಳನ್ನು ರಚಿಸಿದ್ದರು. ಆದರೆ ಪೆನುಗೊಂಡದ (ಆಂಧ್ರ) ಶ್ರೀ ಕೃಷ್ಣದೇವರಾಯನ ಅರಮನೆ ''ಗಗನ ಮಹಲ್'' ''ನಮ್ಮ ತಿಪ್ಪೇಸ್ವಾಮಿ ಮಲೆನಾಡಿಗೂ ನಮ್ಮ ಮನೆಗೂ ನಡುವೆ ಕಿಂಡಿ ಕೊರದಂತಿದೆ'' ಎಂಬ ಕುವೆಂಪು ಅವರ ಮೆಚ್ಚುಗೆಗೆ ಪಾತ್ರವಾಗಿ ''ಕವಿ ಶೈಲದಿಂದ ಕುಂದಾದ್ರಿಗೆ'' ಎಂದು ಕುವೆಂಪು ಅವರು ಕವನ ಬರೆಯುವಷ್ಟು ಸ್ಫೂರ್ತಿಯಾದ ''ಕವಿಶೈಲದ '' ಚಿತ್ರಗಳು ಇವರಿಗೆ ಪೂರ್ಣ ತೃಪ್ತಿಯಿತ್ತ ಚಿತ್ರಗಳಾಗಿವೆ. ಹಣದ ಹಂಬಲವಿಲ್ಲದೆ ಕಾಡು-ಮೇಡುಗಳೆನ್ನದೆ ಬಿಡದೆ ಓಡಾಡಿ ಆತ್ಮತೃಪ್ತಿಗಾಗಿ ರಚಿಸಲು ಅರಸಿ ಹೋಗುತ್ತಿದ್ದುದೇ ಹೆಚ್ಚು.

ಒಬ್ಬ ಅಂಚೆಯವನನ್ನು ಮೆಚ್ಚಿ ತನ್ನ ಕಲಾಕೃತಿಯನ್ನು ಕೊಟ್ಟಿರುವ ಉದಾರಿಗಳಾಗಿರುವ ತಿಪ್ಪೇಸ್ವಾಮಿಯವರ ಚಿತ್ರಗಳು ನಾಡಿನ ಉದ್ದಗಲಕ್ಕೂ ಹಂಚಿಹೋಗಿವೆ. ಕವಿ ಕುವೆಂಪು, ದ.ರಾ.ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಅ.ನ.ಕೃ., ಬಿ. ಶಿವಮೂರ್ತಿ ಶಾಸ್ತ್ರಿ ಮುಂತಾದ ಹಿರಿಯರು ಇವರ ಕಲಾಕೃತಿಗಳನ್ನು ಪಡೆದುಕೊಂಡಿದ್ದರು. ದೆಹಲಿ ಮಿಲಿಟರಿ ಅತಿಥಿ ಗೃಹ, ಜಗನ್ಮೋಹನ ಅರಮನೆ, ಲಂಡನ್ನಿನ ಆಲ್ಬರ್ಟ್ ಮ್ಯೂಸಿಯಂ ಮುಂತಾದ ನೂರಾರು ಕಡೆ ಈ ಕಲಾವಿದರ ಕೃತಿಗಳಿವೆ. ಕೃತಿಗಳಲ್ಲಿ ಅವನ್ನೆಲ್ಲ ಮೌಲಿಕವಾದುವುಗಳೆಂದು ಹೆಸರಿಸಬಹುದು.

ಪಟೇಲರಾಗಿ ಸುಖೀ ಜೀವನ ಸಾಗಿಸಬಹುದಾಗಿದ್ದ ತಿಪ್ಪೇಸ್ವಾಮಿಯವರು ಕಲೆಯ ಹಂಬಲಿಸಿ ಹರ್ತಿಕೋಟೆಯಿಂದ [illegible]

ಪಿ. ಎಂ. ರಾಜನ್

ಕಾರ್ಪಣ್ಯಗಳಲ್ಲಿ ಸಿಲುಕಿದರು. ಆದರೂ ಪಟ್ಟು ಬಿಡದೆ ಚಿತ್ರ ಕಲಾಭ್ಯಾಸದೊಡನೆ ವಿದ್ಯಾಭ್ಯಾಸದತ್ತ ಗಮನ ಹರಿಸಿ ಬಿ.ಎ. ಪದವಿ ಪಡೆದರು. ಕಾಲೇಜಿನ ದಿನಗಳಲ್ಲೇ ಇವರು ಹೊರಡಿಸುತ್ತಿದ್ದ "ಕಲಾಕ್ಷೇತ್ರ" ಪತ್ರಿಕೆಯಿಂದ ಹಾಗೂ "ಚಿತ್ರಶಿಲ್ಪ ಅಕಾಡೆಮಿ" ಮೂಲಕ ತಿಂಗಳಿಗೊಮ್ಮೆ ಗಾಂಧಿ ಪರಿಷತ್ತಿನ ಸಭಾಂಗಣದಲ್ಲಿ ನಡೆಯುತ್ತಿದ್ದ ಚಿತ್ರ ಅಥವಾ ಶಿಲ್ಪ ಪ್ರದರ್ಶನ, ಅದಕ್ಕನುಗುಣವಾದ ತಜ್ಞರ ಉಪನ್ಯಾಸಗಳಿಂದ ಒಳ್ಳೆಯ ಸಂಘಟಕರಾಗಿದ್ದರು. ಕಾಲೇಜಿನ ದಿನಗಳಲ್ಲಿ ಕೆ. ಎಚ್. ರಂಗನಾಥ, ಬಿ. ಎಲ್. ಗೌಡ, ಜೆ. ಎಚ್. ಪಟೇಲ್, ಎಸ್. ಎಂ. ಕೃಷ್ಣ ಮುಂತಾದವರ ಸಮಕಾಲೀನರಾಗಿದ್ದವರು ಶ್ರೀ ತಿಪ್ಪೇಸ್ವಾಮಿ.

ಜಾನಪದ ಕ್ಷೇತ್ರದಲ್ಲಿ ಆ ಕಾಲದಲ್ಲಿ ಕೇಳಿಬರುತ್ತಿದ್ದ ಕರೀಂಖಾನ್‌ರನ್ನು ಬಿಟ್ಟರೆ ಬಹು ಪ್ರಚಲಿತವಾಗಿ ಕೇಳಿ ಬರುತ್ತಿದ್ದ ಡಾ॥ ಜೀ. ಶಂ. ಪ., ಶ್ರೀ. ಕ. ರಾ. ಕೃ., ಶ್ರೀ ಎಂ. ಎಸ್. ನಂಜುಂಡರಾವ್ ಇವರೊಡಗೂಡಿ ಪಿ. ಆರ್. ತಿಪ್ಪೇಸ್ವಾಮಿಯವರು ಜಾನಪದ ಸಾಹಿತ್ಯ ಸಂಗ್ರಹ, ಕಲೆ-ಕಲಾವಸ್ತುಗಳ ಸಂಗ್ರಹ ಕಾರ್ಯ ಮಾಡಿದ್ದು ಅವಿಸ್ಮರಣೀಯ. ಅಲ್ಲದೆ ಜಾನಪದ ವಸ್ತುಗಳನ್ನು ಸಂಗ್ರಹಿಸಿ ವಿಶ್ವವಿದ್ಯಾನಿಲಯದಲ್ಲಿ ಒಂದು ವಿಶಿಷ್ಟ ನಿಧಿಯನ್ನು ಸ್ಥಾಪಿಸಲು ಕಾರಣರಾದ ಇವರ ಸೇವೆ ಅಪಾರ. ಇದರ ಫಲವಾಗಿ ಡಾ॥ ಹಾ. ಮಾ. ನಾಯಕ ಮತ್ತು ಪ್ರೊ॥ ದೇ. ಜ. ಗೌ. ತಿಪ್ಪೇಸ್ವಾಮಿಯವರನ್ನು ಕ್ಯುರೇಟರಾಗಿ ಮಾಡಿದರು. ಹದಿನಾಲ್ಕು ವರ್ಷಗಳ ಕಾಲ ನಿರಂತರವಾಗಿ ಅವರು ಸುತ್ತದ ಊರಿಲ್ಲ, ಏರದ ಅಟ್ಟಗಳಿಲ್ಲ, ಬರಿಗೈನಲ್ಲಿ ಬಂದ ದಿನಗಳಿಲ್ಲ. ಇಲ್ಲಿ ಜಾನಪದ, ಸಾಹಿತಿಗಳ ವಸ್ತುಗಳು, (ಕುವೆಂಪು ಅವರಿಂದ ಲಂಕೇಶ್‌ವರೆಗಿನ ಬಟ್ಟೆ ಬರೆ, ಬಳಸುತ್ತಿದ್ದ ಸಲಕರಣೆಗಳು, ಕೈಬರಹಗಳೂ ಸೇರಿದಂತೆ), ಕಲಾವಿಭಾಗ (ತಿಪ್ಪೇಸ್ವಾಮಿಯವರ ಕೃತಿಗಳು ಸೇರಿದಂತೆ), ಎಂಬ ಮೂರು ಮನಸೆಳೆವ ವಿಭಾಗಗಳಿದ್ದು ತೇಲುವ ಇಟ್ಟಿಗೆ, ಜನರಲ್ ಕಾರಿಯಪ್ಪ ಅವರ ಉಡುಪು, ಕೊಡಗಿನ ಗೌರಮ್ಮನವರ ಮನೆಯಲ್ಲಿ ಮಹಾತ್ಮಾ ಗಾಂಧಿ ಬಿಟ್ಟು ಹೋದ ಸ್ನಾನದ ಸಾಬೂನು, ಜವಾಹರಲಾಲ್ ನೆಹರು ಅವರ ಮೂಲ ಸಹಿ ಮತ್ತು ಲೋಕಸಭಾ ಸದಸ್ಯರ ಸಹಿಗಳಿರುವ ಭಾರತದ ಸಂವಿಧಾನ ಮೊದಲಾದವು ವಿಶೇಷ ಗಮನ ಸೆಳೆಯುತ್ತವೆ. ಅಲ್ಲದೆ ತಿಪ್ಪೇಸ್ವಾಮಿಯವರಲ್ಲಿದ್ದ ಸಜ್ಜನಿಕೆ, ಸಹೃದಯತೆ, ಜನಪ್ರಿಯತೆಯಿಂದಾಗಿ ಇಡೀ ಏಷ್ಯಾದಲ್ಲೇ ದೊಡ್ಡ ಜಾನಪದ ವಸ್ತುಸಂಗ್ರಹಾಲಯ ಎಂಬ ಹೆಸರನ್ನು ತಂದುಕೊಟ್ಟರು ಎಂಬ ಡಾ॥ ಹಾ. ಮಾ. ನಾಯಕರ ಶ್ಲಾಘ್ಯನುಡಿಗೆ ಪಾತ್ರರಾದರು.

ಚಲಿಸುವ ವಸ್ತು ಸಂಗ್ರಹಾಲಯಗಳ ವಿಶ್ವಕೋಶ

ಡಾ॥ ಹಾ. ಮಾ. ನಾಯಕರು ಹೇಳುವಂತೆ "ಎಂಥ ಮನಸ್ಸನ್ನಾದರೂ ತಿರುಗಿಸಬಲ್ಲ ನಯವಿನಯ, ತನ್ನ ಕೆಲಸದಲ್ಲಿ ಅದ್ವಿತೀಯ ತನ್ಮಯತೆ, ಹೊಲ ಉಳುವ ರೈತನಾಗಲಿ, ಸಾಹಿತಿಯಾಗಲಿ, ಮಠಪತಿಯಾಗಲಿ, ಕುಲಪತಿಯಾಗಲಿ, ನೀರಿಲ್ಲದ ಕಡೆ ನೀರೆತ್ತುವ ಸಾಹಸಿ ತಿಪ್ಪೇಸ್ವಾಮಿ." ಧರ್ಮಸ್ಥಳ ಹಾಗೂ ಮೈಸೂರು ಜಾನಪದ ವಸ್ತುಸಂಗ್ರಹಾಲಯಗಳಲ್ಲಿ ಇವರ ಒಟ್ಟು ಐದು ಸಾವಿರ ರೇಖಾಚಿತ್ರಗಳಿರುವುದು ನಮ್ಮನ್ನು ಚಕಿತಗೊಳಿಸುತ್ತದೆ. ಇಲ್ಲಿರುವಾಗಲೇ ಆತ್ಮೀಯ ಮಿತ್ರರಾದ ಚಿತ್ರಕಲಾ ಪರಿಷತ್ತಿನ ಎಂ. ಎಸ್. ನಂಜುಂಡರಾಯರಿಂದ ಬೆಳ್ಳೂರಿನ ಖ್ಯಾತ ಭುವನೇಶ್ವರಿ ಸೂತ್ರದ ಗೊಂಬೆ ಮೇಳದ ಬಿ. ಎಸ್. ಪುಟ್ಟಶ್ಯಾಮಾಚಾರ್ ಮತ್ತು ಎ. ಎಸ್. ರಾಮೇಗೌಡರ ತಂಡದ ಮುಖಂಡರಾಗಿ ತಿಪ್ಪೇಸ್ವಾಮಿಯವರು ೧೯೮೮ರಲ್ಲಿ ಫ್ರಾನ್ಸ್‌ನ ಅವಿಗ್ನಾನ ದಲ್ಲಿ ಜರುಗಿದ ರಾಮಾಯಣ ಉತ್ಸವದಲ್ಲಿ ಪಾಲ್ಗೊಂಡು ಜಯಪ್ರದರಾಗಿ ಬಂದುದು ಕೋಡು ಮೂಡಿಸುವ ಸಂಗತಿ. ಹಿತೈಷಿಗಳಾದ ಡಾ॥ ಹಾ. ಮಾ. ನಾಯಕರು ಫ್ರಾನ್ಸ್‌ಗೆ ಹೋಗಿ ಹಿಂದಿರುಗುವವರೆಗೂ ಎಲ್ಲವನ್ನೂ ಟಿಪ್ಪಣಿ ಬರೆದಿಟ್ಟುಕೊಳ್ಳಿ ಎಂದು ಸೂಕ್ತ ಸಲಹೆಯಿತ್ತರಂತೆ. ಆ ಅಮೂಲ್ಯ ಸಲಹೆಯ ಫಲವಾಗಿಯೇ "ಕಲಾವಿದ ಕಂಡ ಫ್ರಾನ್ಸ್" (ಜಾನಪದ ಪ್ರವಾಸ ಸಾಹಿತ್ಯ) ಕೃತಿ ರೂಪವಾಗಿ ಬರಲು ಸಾಧ್ಯವಾಯಿತು. ಚಲಿಸುವ ವಸ್ತು ಸಂಗ್ರಹಾಲಯಗಳ ವಿಶ್ವಕೋಶದಂತಿರುವುದರಿಂದಲೇ ತಿಪ್ಪೇಸ್ವಾಮಿಯವರು ಅಲ್ಲಿ ಸಾಕಷ್ಟು ಹೊಸ ಬೆಳಕನ್ನು ಚೆಲ್ಲುವ ವಿಷಯಗಳ ಸಂಗ್ರಹಿಸಿದ್ದರು.

ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿ ಅವಿಸ್ಮರಣೀಯ ಸೇವೆ

ಲಲಿತಕಲಾ ಅಕಾಡೆಮಿ ಸಲಹಾ ಸಮಿತಿಯೇ ಇರದ ಕಾಲದಲ್ಲಿ ೧೯೯೧ ನವೆಂಬರ್‌ನಲ್ಲಿ ಸರ್ಕಾರ ತಿಪ್ಪೇಸ್ವಾಮಿಯವರನ್ನು ಅಕಾಡೆಮಿ ಅಧ್ಯಕ್ಷರನ್ನಾಗಿ ನೇಮಿಸಿತು. ಇವರೇ ಆರು ತಿಂಗಳು "ಅಕಾಡೆಮಿ" ಆಗಿದ್ದರು. ಪುನರ್ ರಚಿತ ಅಕಾಡೆಮಿ ಕಾರ್ಯಕ್ರಮ ೧೯೯೨ರ ಮೇ ತಿಂಗಳಲ್ಲಿ ಆರಂಭವಾಯಿತು. ಅಕಾಡೆಮಿ ನವ ಚೇತನದಿಂದಾಗಿ ಗಡಿನಾಡು ಪ್ರದೇಶ ಸೇರಿದಂತೆ ರಾಜ್ಯದೆಲ್ಲೆಡೆಗಳಲ್ಲೂ ಕಲಾ ಕೃತಿಗಳ ಪ್ರದರ್ಶನಗಳು ನಡೆದುವು. ಎಲ್ಲಾ ಐತಿಹಾಸಿಕ ದೇವಸ್ಥಾನಗಳ ವಿಡಿಯೋ ಚಿತ್ರಣ, ಕೆ. ಕೆ. ಹೆಬ್ಬಾರ್ ಕುರಿತ ಸಾಕ್ಷ್ಯಚಿತ್ರ ಮೊದಲಾದುವು ನಡೆದವು. ಕಲಾವಿದರ ಪರಿಚಯಿಸುವ ಪುಸ್ತಕ ಮಾಲೆ ಪ್ರಾರಂಭವಾಯಿತು. ಸರ್ಕಾರ ಕೊಡಲಿದ್ದ ಯಾವ ಭೋಗ-ಭಾಗ್ಯ ಆಡಂಬರಗಳಿಗೂ ತಲೆಬಾಗದೆ ಅವರು ನಿರ್ವಹಿಸಿದ ಕಾರ್ಯ ಸ್ಮರಣೀಯವಾದುದು. ಅಕಾಡೆಮಿ ಪ್ರಾರಂಭವಾದ ೨೮ ವರ್ಷಗಳಲ್ಲಿ ೨೯ ಪುಸ್ತಕಗಳ ಪ್ರಕಟಿಸಿದ್ದರೆ ತಿಪ್ಪೇಸ್ವಾಮಿಯವರು ತಮ್ಮ ಅಧಿಕಾರಾವಧಿಯ ೩ ವರ್ಷಗಳಲ್ಲಿ ಕಾಪಿಕಲೆಯ ಪುಸ್ತಕವಲ್ಲದೆ ಇತರೆ ೪೮ ಪುಸ್ತಕಗಳನ್ನು ಪ್ರಕಟಿಸಿ ಕರ್ತವ್ಯ ಸಾಧನೆಯಲ್ಲಿ ರಾರಾಜಿಸಿದ್ದರು. ಇವರ ಕಾಲದಲ್ಲಿ ಸಿಮ್ಲಾದಲ್ಲಿ ನಡೆದ ಕಲಾ ಪ್ರದರ್ಶನ, ರಾಷ್ಟ್ರ ಮಟ್ಟದ ಗ್ರಾಫಿಕ್ ಕಲಾ ಪ್ರದರ್ಶನ, ಛಾಯಾಚಿತ್ರವೂ ಅಕಾಡೆಮಿಯ ಒಂದು ಭಾಗವಾದದ್ದು, ರಾಜ್ಯಮಟ್ಟದ ಫೋಟೋಗ್ರಫಿ ಪ್ರದರ್ಶನ, ರಾಜ್ಯದ ಭಿತ್ತಿ ಚಿತ್ರಗಳನ್ನು ವಿಡಿಯೋ ಚಿತ್ರಣ ಮಾಡಿದ್ದು, ಹೀಗೆ ಸಾಕಷ್ಟು ಗಮನೀಯ ಕಾರ್ಯಗಳೊಡನೆ ವೆಂಕಟಪ್ಪ ಪ್ರಶಸ್ತಿ ಸ್ಥಾಪನೆಯಾದುದು ತಿಪ್ಪೇಸ್ವಾಮಿಯವರ ಕಾಲದಲ್ಲೆ. ಬೆಳೆದು ಬಂದ ಭಾರತೀಯ ಚಿತ್ರಕಲೆ, ಕಲೋಪಾಸಕರು, ಶಿಲ್ಪ ಸಂಕುಲ ಮುಂತಾದವು ನೆನಪಲ್ಲಿ ಉಳಿಯುವ ಪುಸ್ತಕಗಳು.

ಕಲಾವಿದರ ಕ್ಷೇಮ ಪಾಲಕ

ಧರ್ಮಸ್ಥಳದಲ್ಲಿರುವಂತೆ ಸುತ್ತೂರಿನ ಮಠದಲ್ಲೂ ಒಂದು ಅಪೂರ್ವ ವಸ್ತುಸಂಗ್ರಹಾಲಯವನ್ನು ಶ್ರೀ ತಿಪ್ಪೇಸ್ವಾಮಿಯವರು ಆಗುಮಾಡಿಕೊಟ್ಟಿದ್ದಾರೆ. ಇಂತಹ ನಮ್ಮ ತಿಪ್ಪೇಸ್ವಾಮಿಯವರು ಕಳೆದ ೪೫ ವರ್ಷಗಳಿಂದ ಇದ್ದ ಅವರ ಮೈಸೂರಿನ ಮನೆ ಒಂದು ರೀತಿ "ಕ್ಷೇಮ ಪಾಲಕ" ನೆಲೆಯಾಗಿತ್ತು. ಜಾತಿ-ಮತ-ಭೇದವ ಎಂದೂ ಸಹ ಲೆಕ್ಕಿಸದ ತಿಪ್ಪೇಸ್ವಾಮಿಯವರು ಸಾಕಷ್ಟು ಬಡವಿದ್ಯಾರ್ಥಿ ಗಳಿಗೆ ಕಾಲೇಜಿನ ಫೀಸನ್ನೂ ಕೊಟ್ಟು ವಿದ್ಯಾದಾನ ಮಾಡಿದ್ದಾರೆ. ಪ್ರತಿದಿನ ನಾನಾ ರೀತಿಯ ಸಮಸ್ಯೆಗಳ ಪರಿಹಾರಕ್ಕೆ ಅವರ ಬಳಿ ಬರುತ್ತಿದ್ದವರು ನಿರಾಸೆಯಾಗಿ ತೆರಳುತ್ತಿದ್ದುದು ಅತಿ ವಿರಳ. ಯಾರನ್ನೇ ಆಗಲಿ ತಟ್ಟನೆ ತೆಗಳಿ ನಂತರ ಪಶ್ಚಾತ್ತಾಪ ಪಡುವ ಒಂದು ದೌರ್ಬಲ್ಯವನ್ನು ಬಿಟ್ಟರೆ ಪ್ರತಿಯೊಬ್ಬರ ಕಷ್ಟಕ್ಕೂ ಮರುಗಿ ಮುಂದಾಗುವ ಕರುಣಾಮಯಿಯಾಗಿದ್ದರು ಅವರು. ತಿಂಗಳ ಖರ್ಚಿಗೆ ಬರುತ್ತಿದ್ದ ೧೫೦೦ರೂ. ಗೌರವ ಧನವನ್ನು ೩ವರ್ಷ ಸಂಗ್ರಹಿಸಿ ೫೪ ಸಾವಿರ ಬ್ಯಾಂಕಿನಲ್ಲಿ ಡಿಪಾಸಿಟ್ ಇಟ್ಟು ಊರಲ್ಲಿ ಮಕ್ಕಳಿಗೆ ರಂಗಮಂದಿರ ನಿರ್ಮಿಸಲು ಉದ್ದೇಶಿಸಿದ್ದುದು ಈಗ ಕೈಗೂಡಬೇಕಾಗಿದೆ.

ತೈಲ ಮುಗಿವಲ್ಲಿ ಜ್ಯೋತಿ ಪ್ರಕಾಶಿಸುವಂತೆ ಅವರ ಬಾಳ ಸಂಜೆಯಲ್ಲಿ ಆಚಾರ್ಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ವೆಂಕಟಪ್ಪ ಪ್ರಶಸ್ತಿ ಪುರಸ್ಕಾರಗಳೊಡನೆ ಸೆನೆಟ್ ಸದಸ್ಯತ್ವ ಬಂದುದು, ರಾಜ್ಯಪಾಲರಿಗೆ ತಿಪ್ಪೇಸ್ವಾಮಿಯವರನ್ನು ಪರಿಚಯಿಸುವಾಗ ಅವರು ಮೊದಲೇ ಗೊತ್ತೆಂದಾಗ ಆದ ಹರ್ಷ ಮತ್ತು ರಾಷ್ಟ್ರಕವಿ ಪ್ರತಿಷ್ಠಾನವು ಕುವೆಂಪು ಅವರ ಮನೆಯನ್ನು ಸ್ಮಾರಕವಾಗಿಸಲು ಯೋಜಿಸಿರುವ ಕಾರ್ಯಕ್ಕೆ ಮಾರ್ಗದರ್ಶಕರನ್ನಾಗಿ ಪೂರ್ಣಚಂದ್ರ ತೇಜಸ್ವಿ ಆಹ್ವಾನಿಸಿದ್ದು ಇವೆಲ್ಲಾ ಹೃದಯ ತುಂಬಿಬರುವಂತಾಗಿಬಿಟ್ಟಿತು.

ಋತುಭೇದಗಳಿಂದ ನಿಸರ್ಗ ನೆಲೆಗಳು ಬದಲಾದರೂ ನಿತ್ಯ ನಿಸರ್ಗ ವಸಂತವನ್ನೇ ಚಿತ್ರಿಸಿರುವ ಪಿ. ಆರ್. ತಿಪ್ಪೇಸ್ವಾಮಿ ನಮ್ಮನ್ನಗಲಿದ್ದರೂ ನಿಸರ್ಗವಿರುವತನಕ ಅವರ ನೆನಪು ಅನಂತ ಹಸಿರಾಗಿರುತ್ತದೆ.

ಪಿ. ಎಂ. ರಾಜನ್
೨೫೦, ತ್ಯಾಗಮಾರ್ಗ, ಸಿದ್ಧಾರ್ಥನಗರ, ೧ನೇ ಹಂತ, ಮೈಸೂರು- ೧

ಏಪ್ರಿಲ್ ತಿಂಗಳ ಪ್ರಶ್ನೆಗೆ ಉತ್ತರ

ಒಂದು ಸಂಖ್ಯಾ ಶ್ರೇಣಿಯ ಮೊದಲಿನ ಕೆಲವು ಸಂಖ್ಯೆಗಳನ್ನು ಕೊಟ್ಟು ಮುಂದಿನ ಸಂಖ್ಯೆಗಳು ಯಾವುವೆಂದು ಊಹಿಸಿ ಪಡೆಯಬೇಕಾದ ಪ್ರಶ್ನೆಗಳು ಓದುಗನ ವಿಶ್ಲೇಷಣಾ ಶಕ್ತಿಯನ್ನು ಕೆಣಕಿ ರಂಜಿಸುವ ಸಾಲಿನಲ್ಲಿ ಮುಖ್ಯ ಸ್ಥಾನವನ್ನು ಹೊಂದಿವೆ. ಅಂತಹ ಸಂಖ್ಯಾ ಶ್ರೇಣಿಗಳು, ನಿರ್ದಿಷ್ಟ ನಿಯಮಗಳಿಗನುಗುಣವಾಗಿ ಕಾಲಾನುಸಾರ ನಡೆಯುವ ಪ್ರಾಕೃತಿಕ ಘಟನೆಗಳನ್ನು ಗಣಿತೀಯವಾಗಿ ಬಿಂಬಿಸುವ ಉಪಯುಕ್ತತೆಯನ್ನು ಹೊಂದಿರುವ ಅನೇಕ ಸಂದರ್ಭಗಳುಂಟು. ಇಂತಹ ಸಂಖ್ಯಾ ಶ್ರೇಣಿಗಳಲ್ಲಿ 'ಫಿಬೋನಾಚಿ' ಶ್ರೇಣಿ ಎಂದು ಹೆಸರಾಂತ ಕೆಳಗಿನ ಒಂದು ಶ್ರೇಣಿಯು ಅಗ್ರಮಾನ್ಯವಾದುದು.

(ಅ) ೧, ೧, ೨, ೩, ೫, ೮, ೧೩,.........

ಶ್ರೇಣಿ (ಅ)ನಲ್ಲಿ ಮೊದಲಿನ ಎರಡು ಸಂಖ್ಯೆಗಳು ದತ್ತ ಸಂಖ್ಯೆಗಳು. ಶ್ರೇಣಿಯ ಮೂರನೆಯ ಮತ್ತು ಮುಂದಿನ ಸಂಖ್ಯೆಗಳನ್ನು ಒಂದು ನಿರ್ದಿಷ್ಟ ನಿಯಮಕ್ಕನುಸಾರವಾಗಿ ಬರೆದುಕೊಂಡು ಹೋಗಬಹುದು. ಈ ಶ್ರೇಣಿಯ ಸಂದರ್ಭದಲ್ಲಿ ಆ ನಿಯಮ ಯಾವುದೆಂದು ವಿಶ್ಲೇಷಿಸಿ ಪಡೆಯುವುದು ಸುಲಭ!

ಏಪ್ರಿಲ್ ತಿಂಗಳಿನಲ್ಲಿ ನಾವು ಕೇಳಿರುವ ಪ್ರಶ್ನೆಯ ಹಿನ್ನೆಲೆಯಲ್ಲಿ ಕಾನ್‌ವೇ ಶ್ರೇಣಿ ಎಂಬ ಹೆಸರಿನಲ್ಲಿ ಇತ್ತೀಚೆಗೆ ಗಮನ ಸೆಳೆದಿರುವ ಶ್ರೇಣಿ ಇದೆ. ಈ ಶ್ರೇಣಿಯ ರಚನೆಯ ನಿಯಮವನ್ನು ವಿಶ್ಲೇಷಿಸಿ ಪಡೆಯುವಲ್ಲಿ ಸಫಲರಾದವರು, ವಿಶ್ಲೇಷಣಾ ಶಕ್ತಿಯನ್ನು ಅಗಾಧ ಪ್ರಮಾಣದಲ್ಲಿ ಹೊಂದಿದ್ದಾರೆಂಬುದರಲ್ಲಿ ಸಂಶಯವಿಲ್ಲ!

ಈ ಶ್ರೇಣಿಯ ಮೊದಲನೆಯ ಸಂಖ್ಯೆ '೧'ದತ್ತವೆಂದು ಪರಿಗಣಿಸಿ ಶ್ರೇಣಿಯ ಮುಂದಿನ ಪ್ರತಿಯೊಂದು ಸಂಖ್ಯೆಯನ್ನು ಅದರ ಹಿಂದಿನ ಸಂಖ್ಯೆಯಿಂದ ಪಡೆಯುವ ನಿರ್ದಿಷ್ಟ ನಿಯಮವೇನೆಂದು ಪ್ರಶ್ನೆ ಕೇಳಲಾಗಿತ್ತು. ಈ ನಿಯಮವನ್ನು ಸ್ಪಷ್ಟಪಡಿಸಲು ಒಂದು ಉದಾಹರಣೆ ಸಾಕು.


ಉದಾಹರಣೆಗೆ, ಶ್ರೇಣಿಯ ಐದನೆಯ ಸಂಖ್ಯೆಯನ್ನು ಗಮನಿಸಿ. ಆ ಸಂಖ್ಯೆಯ ಆರಂಭದಲ್ಲಿ ಅಂಕಿ '೧' ಇದೆ. ಈ ಅಂಕಿಯು ಅಲ್ಲಿಂದ ಮುಂದೆ ಎಡಬಿಡದೆ ಎಷ್ಟು ಬಾರಿ ಪುನರಾವರ್ತಿಸಲ್ಪಟ್ಟಿದೆ? '೩'ಬಾರಿ ಸರಿಯಷ್ಟೆ? ಇದನ್ನು ಸೂಚ್ಯವಾಗಿ (೩,೧)ಎಂದು ನೋಂದಾಯಿಸೋಣ. ಇದಾದ ನಂತರ ಶ್ರೇಣಿಯ ಐದನೆಯ ಸಂಖ್ಯೆಯಲ್ಲಿ ಬರುವ ಅಂಕಿ '೨'. ಅಲ್ಲಿಂದ ಇದು ಎಷ್ಟು ಬಾರಿ ಎಡಬಿಡದೆ ಪುನರಾವರ್ತಿತವಾಗಿದೆ? '೨'ಬಾರಿ ಸರಿಯಷ್ಟೇ? ಇದನ್ನು ಸೂಚ್ಯವಾಗಿ (೨, ೨) ಎಂದು ನೋಂದಾಯಿಸಬಹುದು. ಇದಾದ ನಂತರ ಬರುವ ಅಂಕಿ'೧'. ಅದು ಎಡಬಿಡದೆ ಒಂದು ಬಾರಿ ಮಾತ್ರ ಬಂದಿದೆ. ಸೂಚ್ಯವಾಗಿ (೧, ೧) ಎಂದು ನೋಂದಾಯಿಸಬಹುದು. ಹೀಗೆ ನೋಂದಾಯಿಸಿದ ಎಲ್ಲ ಜೊತೆಗಳನ್ನೂ ಮೊದಲಿನಿಂದ ಆರಂಭಿಸಿ ಪಾಳಿಯಂತೆ ಒಂದರ ಪಕ್ಕದಲ್ಲೊಂದರಂತೆ ಇಟ್ಟು ರಚಿಸಿದ ಸಂಖ್ಯೆಯೇ ಕಾನ್‌ವೇ ಶ್ರೇಣಿಯ ಆರನೆಯ ಸಂಖ್ಯೆ! ಮೇಲಿನಂತೆ ಮುಂದುವರಿದರೆ ಶ್ರೇಣಿಯ ಒಂಭತ್ತನೆಯ ಸಂಖ್ಯೆ (ಆವರಣಗಳನ್ನು ಅಳಿಸಿ ಹಾಕಿದ ನಂತರ)ಯನ್ನು ಕೆಳಕಂಡಂತೆ ಕೊಡಬಹುದು:

(೩ ೧) (೧ ೩) (೧ ೨) (೧ ೧) (೧ ೩) (೧ ೨) (೨ ೧)

ಶ್ರೇಣಿಯ ಹತ್ತನೆಯ ಸಂಖ್ಯೆ:

(೧ ೩) (೨ ೧) (೧ ೩) (೧ ೧) (೧ ೨) (೩ ೧) (೧ ೩) (೧ ೧) (೨ ೨) (೧ ೧).

ಈ ತಿಂಗಳ ಹೊಸ ಪ್ರಶ್ನೆ



ಬಿಳಿ ಅಥವಾ ಕೆಂಪು ರತ್ನದ ಹರಳುಗಳನ್ನು (ಅವೆಲ್ಲ ಒಂದೇ ಗಾತ್ರ, ಆಕಾರ ಹೊಂದಿವೆಯೆಂದುಕೊಳ್ಳೋಣ) ಚಿತ್ರ (೧)ರಲ್ಲಿ ತೋರಿಸಿರುವ ಚಿನ್ನದ ಕಟ್ಟಡದ ಖಾಲಿ ಮನೆಗಳಲ್ಲಿ ಕೂರಿಸಿ, ಮೂರು ಹರಳುಗಳ ಒಂದು ಪದಕವನ್ನು ಮಾಡಬಹುದು.

ಈ ರೀತಿ ಮಾಡಬಹುದಾದ ವಿಭಿನ್ನ ಪದಕಗಳ ಸಂಖ್ಯೆ ಎಂಟು (ಇದನ್ನು ಸಾಧಿಸಿ!). ಕೆಂಪು ಹರಳುಗಳನ್ನು ಕೂರಿಸಿರುವ ಸ್ಥಳವನ್ನು ಅಂಕಿ ಒಂದರಿಂದಲೂ ಬಿಳಿ ಹರಳುಗಳನ್ನು ಕೂರಿಸಿರುವ ಸ್ಥಳವನ್ನು ಅಂಕಿ ಸೊನ್ನೆಯಿಂದಲೂ ಪ್ರತಿನಿಧಿಸಿದಾಗ ಮೇಲೆ ಹೇಳಿದ ಎಂಟು ವಿಭಿನ್ನ ಪದಕಗಳನ್ನು ಕೆಳಗೆ ಕಂಡಂತೆ ಸೂಚ್ಯವಾಗಿ ತೋರಿಸಬಹುದು:

(೧) (೧, ೧, ೧) (೫) (೦, ೧, ೧)
(೨) (೧, ೧, ೦) (೬) (೦, ೧, ೦)
(೩) (೧, ೦, ೧) (೭) (೦, ೦, ೧)
(೪) (೧, ೦, ೦) (೮) (೦, ೦, ೦).

ಈಗ ಚಿತ್ರ (೨)ರಲ್ಲಿ ತೋರಿಸಿರುವ ಖಾಲಿಜಾಗಗಳಲ್ಲಿ ಬಿಳಿ ಅಥವಾ ಕೆಂಪು ಹರಳುಗಳನ್ನು ಕೂರಿಸಿ ಎಂಟು ಹರಳುಗಳ ಒಂದು ರತ್ನ ಖಚಿತ ಬಳೆಯನ್ನು ಮಾಡಬಹುದಷ್ಟೆ? ಅಂತಹ ಒಂದು ಬಳೆಯಲ್ಲಿರುವ ಹರಳುಗಳನ್ನು ಅಲ್ಲಿಯ ಯಾವುದಾದರೊಂದು ಹರಳಿನಿಂದ ಆರಂಭಿಸಿ, ಪ್ರದಕ್ಷಿಣಾ ದಿಕ್ಕಿನಲ್ಲಿ ಮುಂದುವರೆದು ಸಾಧ್ಯವಿರುವ ಎಲ್ಲ ಅಕ್ಕ ಪಕ್ಕದ ಮೂರು ಹರಳುಗಳ ಗುಂಪನ್ನು ಕ್ರಮವಾಗಿ ವೀಕ್ಷಿಸಿದಾಗ ಎಂಟು ಗುಂಪುಗಳನ್ನು ವೀಕ್ಷಿಸಿದಂತಾಗುತ್ತದೆ. ಅಂತಹ ಪ್ರತಿಗುಂಪನ್ನು ಮೂರು ಹರಳುಗಳ ಒಂದು ಪದಕವೆಂದು ಪರಿಗಣಿಸಬಹುದು.

ಪ್ರಶ್ನೆ : ಮೇಲೆ ವೀಕ್ಷಿಸಿದ ಎಂಟು ಗುಂಪುಗಳು ಕ್ರಮವಾಗಿ ಹಿಂದೆ ಹೇಳಿದ ಎಂಟು ವಿಭಿನ್ನ ಪದಕಗಳನ್ನು ಪ್ರತಿನಿಧಿಸುವಂತೆ (ಈ ಹಿಂದೆ ನೋಂದಾಯಿಸಿದ ಅನುಕ್ರಮವನ್ನೇ ಅನುಸರಿಸಬೇಕೆಂದೇನೂ ಇಲ್ಲ) ಹರಳುಗಳನ್ನು ಎಂಟು ಖಾಲಿ ಜಾಗದಲ್ಲಿ ಕೂರಿಸಬೇಕು. ಇದನ್ನು ಹೇಗೆ ಮಾಡಬೇಕು? (ಎಂದಿನಂತೆ ಬಿಳಿಹರಳುಗಳನ್ನು ಅಂಕಿ ಸೊನ್ನೆಯಿಂದಲೂ ಕೆಂಪು ಹರಳನ್ನು ಅಂಕಿ ಒಂದರಿಂದಲೂ ಪ್ರತಿನಿಧಿಸಿ ಬಳೆಯ ಚಿತ್ರವನ್ನು ಬಿಡಿಸಿ ತೋರಿಸುವುದು ಉತ್ತರವನ್ನು ಬರೆಯಲು ಒಂದು ಅನುಕೂಲ ಮಾರ್ಗ).

ವಿಶ್ವ ಬ್ಯಾಂಕ್ ಅಧ್ಯಯನ – ಏಷ್ಯಾ ಬಗ್ಗೆ


ಏಷ್ಯಾಖಂಡದ ಪರಿಸರ ಮಾಲಿನ್ಯ ಸಮಸ್ಯೆಯ ಬಗ್ಗೆ ವಿಶ್ವ ಬ್ಯಾಂಕ್ ಅಧ್ಯಯನ ನಡೆಸಿ ತುರ್ತಾಗಿ ಗಮನಿಸಬೇಕಾದ ವಿಷಯಗಳನ್ನು ಪಟ್ಟಿ ಮಾಡಿದೆ. ಅದರಲ್ಲಿ ಬಹುಮುಖ್ಯವಾದ ಕಳಕಳಿಗಳು ಎರಡು :

(ಅ) **ನಗರ ಪ್ರದೇಶದ ವಾಯುಮಾಲಿನ್ಯ** : *ಕೈಗಾರಿಕೆಗಳು ಹೊರಬಿಡುವ ವಿಷಪೂರಿತ ನಿಷ್ಪ್ರಯೋಜಕ ವಸ್ತುಗಳು, ಅವು ಉತ್ಪಾದಿಸುವ ಅನಿಯಂತ್ರಿತ ವಿಷಪೂರಿತ ವಿವಿಧ ಗ್ಯಾಸ್‌ಗಳು, ಕಳಪೆ ತಂತ್ರಜ್ಞಾನದ ಮೋಟಾರ್ ವಾಹನಗಳು, ಸೀಸ ತುಂಬಿದ ಪೆಟ್ರೋಲ್ ಬಳಕೆ. ಇವ್ಯಾವುವೂ ಅನಿವಾರ್ಯವಲ್ಲ ... ನಿರ್ವಹಿಸಬಲ್ಲಂಥವು, ತಡೆಯಬಲ್ಲಂಥವು. ತಡೆಯುವ ಕಾರ್ಯಕ್ರಮಕ್ಕೆ ರಾಷ್ಟ್ರದ ಉತ್ಪಾದನೆಯ ಶೇ. ೧ರಷ್ಟು ವೆಚ್ಚ ಸಾಕು. ತಡೆ ಹಿಡಿಯುವ ಕಾರ್ಯಕ್ರಮ ಹಾಕಿಕೊಳ್ಳದಿದ್ದರೆ ಆಗುವ ಆರ್ಥಿಕ ನಷ್ಟ ತೀರಾ ದುಬಾರಿಯಾದುದು.*

(ಆ) **ನೀರಿನ ನಿರ್ವಹಣೆ** : *ಪ್ರಾಕೃತಿಕ ಜಲಸಂಪತ್ತನ್ನು ಮಾಲಿನ್ಯಗೊಳಿಸದೆ, ಮಿತವಾಗಿ ಉಪಯೋಗಿಸುವುದು ಕುಡಿಯುವ ನೀರಿನ ಸಮಸ್ಯೆ: ಸಾಂಪ್ರದಾಯಿಕ ಪದ್ಧತಿಗೆ ಒತ್ತು ಕೊಡಬೇಕು. ಕೆರೆಕಟ್ಟೆಗಳ ಮರುಸ್ಥಾಪನೆ ... ಭೂಗರ್ಭದ ನೀರಿನ ನಿಕ್ಷೇಪವನ್ನು ದುರ್ವ್ಯಯ ಮಾಡುತ್ತಿರುವುದನ್ನು ತಪ್ಪಿಸಿ, ವೈಜ್ಞಾನಿಕವಾಗಿ ಆ ನಿಕ್ಷೇಪಕ್ಕೆ ... ಮಳೆ ನೀರು ಪುನಃ ಹರಿಸುವ ತಾಂತ್ರಿಕ ಕ್ರಮಗಳ ಅಗತ್ಯ, ಸಾಧ್ಯತೆಯನ್ನು ಹೇಳಿದ್ದಾರೆ.*

ಇವೆರಡೂ ಕ್ಷೇತ್ರಗಳಲ್ಲಿ ಫಲಪ್ರದ ಕಾರ್ಯಕ್ರಮಕ್ಕೆ ತಗಲುವ ವೆಚ್ಚ ತೀರಾ ಕಡಿಮೆ. ಹಾಗಾಗದಿದ್ದರೆ ಆರೋಗ್ಯ ಕೆಟ್ಟು ಆಗುವ ನಷ್ಟ ತುಂಬಲಾರದಷ್ಟು ದೊಡ್ಡದಾಗಬಹುದು. ಸಾಮಾಜಿಕ ಶಾಂತಿ ಕೆಡಬಹುದು. ಇಂದಿನ ಪರಿಸ್ಥಿತಿ ಹಾಗೇ ಮುಂದುವರೆದರೆ, ಕುಡಿಯುವ ನೀರಿಗಾಗಿ ಹೊಡೆದಾಟ, ಯುದ್ಧ ಆದೀತು ಎಂದು ಎಚ್ಚರ ನೀಡಿದೆ.

ಸಪ್ತರ್ಷಿಗಳ ಸೊಬಗು




ಖಗೋಳ ವಿಜ್ಞಾನದಲ್ಲಿ ಏಳು ಎಂಬ ಸಂಖ್ಯೆಗೆ ಅದು ಹೇಗೋ ಮಹತ್ವ ಸಿಕ್ಕಿಬಿಟ್ಟಿದೆ. ಉತ್ತರದಲ್ಲಿ ಕಾಣುವ ಏಳು ನಕ್ಷತ್ರಗಳ ಗುಂಪು ಇದಕ್ಕೆ ಉತ್ತಮ ಉದಾಹರಣೆ. ಈ ವಿನ್ಯಾಸವು ವಿವಿಧ ಸಂಸ್ಕೃತಿಗಳಲ್ಲಿ ಮೂಡಿಸಿರುವ ಕಲ್ಪನೆಗಳು ವೈವಿಧ್ಯಮಯವಾಗಿವೆ. ತಳ್ಳುವ ಗಾಡಿ, ಕುದುರೆಗಾಡಿ, ಬಡಿಸುವ ಸೌಟು, ನೇಗಿಲು, ಚಹಾ ಕಾಯಿಸುವ ಪಾತ್ರೆ..... ಹೀಗೆ ಅನೇಕ ಹೆಸರುಗಳಿವೆ. ಕರ್ನಾಟಕದ ಜಾನಪದ ಲೋಕ ಇದನ್ನು 'ಅಜ್ಜಿಯ ಮಂಚ' ಎಂದು ಕರೆಯಿತು. ಇವೆಲ್ಲ ಕಲ್ಪನೆಗಳಲ್ಲಿ ಅತಿ ಸರಳ ಎನ್ನಿಸಿಕೊಳ್ಳುವುದು ''ಸಪ್ತರ್ಷಿ ಮಂಡಲ'' ಎಂಬುದು. ಇದನ್ನೇ ಹೋಲುವ ''ಏಳು ಬುದ್ಧಿವಂತರು'', ''ಏಳು ಕವಿಗಳು'' ಎಂದು ಅರ್ಥ ಬರುವ ಹೆಸರುಗಳು ಕೆಲವು ಪ್ರಾಂತಗಳಲ್ಲಿ ಬಳಕೆಯಲ್ಲಿವೆ.

ಈ ನಕ್ಷತ್ರಗಳು ಸೂಚಿಸುವ ಸಪ್ತರ್ಷಿಗಳೆಂದರೆ - ಕ್ರತು, ಪುಲಹ, ಪುಲಸ್ತ್ಯ, ಅತ್ರಿ, ಅಂಗೀರಸ, ವಸಿಷ್ಠ ಮತ್ತು ಮರೀಚಿ. ಆರನೆಯ ನಕ್ಷತ್ರಕ್ಕೊಂದು ಕ್ಷೀಣ ಸಂಗಾತಿ ಇದೆ. ಇದಕ್ಕೆ ಅರುಂಧತಿ ಎಂಬ ಹೆಸರಿದೆ.

ಪಾಶ್ಚಾತ್ಯರಲ್ಲಿ ಇದು ಕರಡಿ ಎನ್ನಿಸಿಕೊಂಡಿದೆ. ದೊಡ್ಡ ಕರಡಿ (ದಿ ಗ್ರೇಟ್ ಬೇರ್, ಅರ್ಸ ಮೇಜರ್) ಎಂಬುದಿದರ ಹೆಸರು. ಹಾಗಾದರೆ ಸಣ್ಣ ಕರಡಿಯೊಂದು ಇರಬೇಕಲ್ಲವೆ? ಧ್ರುವ ನಕ್ಷತ್ರವೂ ಸೇರಿರುವ ದೊಡ್ಡ ಕರಡಿಯನ್ನೇ ಹೋಲುವ ಇನ್ನೊಂದು (ಕ್ಷೀಣ ನಕ್ಷತ್ರಗಳ) ಗುಂಪು ಸಣ್ಣ ಕರಡಿ. ಲಘು ಸಪ್ತರ್ಷಿ ಮಂಡಲ, ಅರ್ಸ ಮೈನರ್, ಲಿಟಲ್ ಬೇರ್, ಇವು ಅದರ ಹೆಸರುಗಳು. ಕ್ಷೀಣವಾದ ಈ ನಕ್ಷತ್ರ ಪುಂಜವನ್ನು ಗುರ್ತಿಸುವುದು ಸುಲಭವೇನಲ್ಲ. ಇವೆರಡರ ನಡುವೆ ಹಾದುಹೋಗಿರುವ ನಕ್ಷತ್ರ ಪುಂಜವೇ ಡ್ರಾಕೋ (ಸುಯೋಧನ).

ಖಗೋಳ ವಿಜ್ಞಾನದ ಯಾವುದೇ (ಇಂಗ್ಲಿಷ್) ಪುಸ್ತಕವನ್ನು ತೆಗೆದು ನೋಡಿದಾಗ ಸಪ್ತರ್ಷಿ ಮಂಡಲದ ವೈವಿಧ್ಯಮಯ ಉಪಯೋಗಗಳ ವಿವರಣೆ ದೊರಕುತ್ತದೆ. ಮೊದಲೆರಡು (ಕ್ರತು, ಪುಲಹ) ನಕ್ಷತ್ರಗಳನ್ನು ಸೇರಿಸಿ ಎಳೆದ ಕಾಲ್ಪನಿಕ ಗೆರೆ ಧ್ರುವ ನಕ್ಷತ್ರವನ್ನು ಮುಟ್ಟುತ್ತದೆ. ಕ್ಷೀಣವಾದ ಧ್ರುವ ನಕ್ಷತ್ರವನ್ನು ಗುರುತಿಸಲು ಈ ಉಪಾಯವನ್ನು ಎಲ್ಲ ಪುಸ್ತಕಗಳೂ ಸೂಚಿಸುತ್ತವೆ. ಆದರೆ ಈ ಅವಕಾಶ ನಮಗೆ ವರ್ಷವಿಡೀ ದೊರಕುವುದಿಲ್ಲ. ಉದಾಹರಣೆಗೆ, ಎರಡು ತಿಂಗಳ ಹಿಂದೆ ಸಂಜೆಯ ಆಕಾಶದಲ್ಲಿ ಸಪ್ತರ್ಷಿ ಮಂಡಲದ ಸುಳಿವೇ ಇರಲಿಲ್ಲ.



ಐರೋಪ್ಯರಿಗೆ, ಕೆನಡಾ ಮತ್ತು ಅಮೇರಿಕದ ಉತ್ತರ ಭಾಗದವರಿಗೆ ಸಪ್ತರ್ಷಿ ಮಂಡಲದ ಇನ್ನೊಂದು ಅನುಕೂಲವನ್ನು ಇಂಗ್ಲಿಷ್ ಪುಸ್ತಕಗಳಲ್ಲಿ ವಿವರಿಸಿರುತ್ತಾರೆ. ಇಡೀ ರಾತ್ರಿ ಕಾಣಸಿಗುವ ಈ ನಕ್ಷತ್ರಪುಂಜದ ವಿನ್ಯಾಸದಿಂದ ರಾತ್ರಿಯ ಸಮಯವನ್ನು ಕಂಡು ಹಿಡಿಯಬಹುದು.


ವಾಸ್ತವವಾಗಿ ಸಪ್ತರ್ಷಿ ಮಂಡಲದ ಈ ಏಳು ನಕ್ಷತ್ರಗಳು ನಕ್ಷತ್ರಪುಂಜದ ಒಂದು ಭಾಗ ಮಾತ್ರ. ಕರಡಿಯನ್ನು ಕಲ್ಪಿಸಿಕೊಂಡಲ್ಲಿ ಅದರ ಹಿಂಭಾಗದ ಅರ್ಧವನ್ನು ಮಾತ್ರ ಇವು ಸೂಚಿಸುತ್ತವೆ. ಕರಡಿಯ ಡೊಂಕಾದ ಬಾಲಕ್ಕೊಂದು ಕಥೆ ಕಲ್ಪಿಸಲಾಗಿದೆ. ಈ ಬಾಲದ ಜಾಡನ್ನು ದಕ್ಷಿಣಕ್ಕೆ ವಿಸ್ತರಿಸಿ ಗೆರೆ ಎಳೆದರೆ ಅದು ಸ್ವಾತಿ ಎಂಬ ಕೆಂಪುನಕ್ಷತ್ರ ಮತ್ತು ಚಿತ್ತಾ ಎಂಬ ನೀಲಿ ನಕ್ಷತ್ರದ ಮೂಲಕ ಹಾಯುತ್ತದೆ. ಈ ಹಾದಿಯಲ್ಲಿ ಕರಡಿಯ ಬಾಲ ಮತ್ತು ಸ್ವಾತಿಯ ನಡುವೆ ಗ್ಯಾಲಕ್ಸಿಯೊಂದನ್ನು ದುರ್ಬೀನಿನಿಂದ ನೋಡಬಹುದು. ಉತ್ತರ ಕಿರೀಟ ಹಾಗೂ ಹಸ್ತಾ ಪುಂಜಗಳನ್ನು ಗುರುತಿಸುವುದು ಸುಲಭ. ಉತ್ತರ ಕಿರೀಟಿಗೆ ಕರೋನ ಬೋರಿಯೊಲಿಸ್ ಎಂಬ ಹೆಸರಿದೆ. ಹಸ್ತಾ ಪುಂಜಕ್ಕೆ ಕಾರ್ವಸ್ ಎಂಬ ಹೆಸರಿದೆ. ವಾಸ್ತವವಾಗಿ ಕಾರ್ವಸ್ ಎಂದರೆ ಕಾಗೆ ಎಂದಾಗುತ್ತದೆ. ಆದರೆ ಇದು ಹಸ್ತವನ್ನು ಹೋಲುವುದು ನಿಜ. ಆದ್ದರಿಂದ ಹಸ್ತಾ ಎಂಬ ಹೆಸರು ಈ ನಕ್ಷತ್ರ ಪುಂಜಕ್ಕೆ (ಶ್ರೀಯುತ ಜಿ. ಟಿ. ನಾರಾಯಣರಾಯರ 'ನಕ್ಷತ್ರ ವೀಕ್ಷಣೆ' ಪುಸ್ತಕದಲ್ಲಿರುವಂತೆ) ಒಪ್ಪವಾಗಿದೆ. ಇನ್ನೊಂದು ಕ್ಷೀಣ ನಕ್ಷತ್ರ ಪುಂಜ ಹೈಡ್ರಾ (ಅಜಗರ), ಇದರ ಮೇಲೆ ಕುಳಿತ ಕಾಗೆ (ಕಾರ್ವಸ್) ಮತ್ತು ಒಂದು ಚಹಾ ಬಟ್ಟಲು (ಕ್ರೇಟರ್: ಕಂದರ).

ಸೂರ್ಯಾಸ್ತವಾಗುವಾಗ ಪಶ್ಚಿಮದಲ್ಲಿ ಮಿಥುನ ದಿಗಂತದಂಚಿನಲ್ಲಿ ಕಾಣುತ್ತದೆ. ಅದರ ಪೂರ್ವಕ್ಕೆ ಕ್ಷೀಣವಾದ ಕಟಕ, ಸಿಂಹ - ನೆತ್ತಿಯ ಮೇಲೆ ಕನ್ಯಾ, ಇನ್ನೂ ಪೂರ್ವಕ್ಕೆ ಕ್ಷೀಣವಾದ ತುಲಾ, ಪೂರ್ವ ದಿಗಂತದಂಚಿನಲ್ಲಿ ವೃಶ್ಚಿಕದ ಸುಳಿವು ಕಾಣುತ್ತದೆ. ವೃಶ್ಚಿಕದ ಗುರುತು ಸಿಗುವುದು ಕೆಂಪು ನಕ್ಷತ್ರ ಜ್ಯೇಷ್ಠಾದ ಸಹಾಯದಿಂದ. ಹುಣ್ಣಿಮೆಯ ಚಂದ್ರ ಈ ನಕ್ಷತ್ರದ ಪಕ್ಕವೇ ಕಾಣುವುದರಿಂದ ಈ ತಿಂಗಳ ಹೆಸರೂ ಜ್ಯೇಷ್ಠಾ. ಹುಣ್ಣಿಮೆ ಎಂಬ ಘಟನೆ ನಡೆಯುವುದು ೧೭ರ ಬೆಳಗಿನ ಝಾವ ೩ಗಂಟೆ ೫೭ ನಿಮಿಷಕ್ಕೆ.

ಕಳೆದ ತಿಂಗಳು ''ರಜಾ'' ತೆಗೆದುಕೊಂಡಿದ್ದ ಗ್ರಹಗಳು ಈಗ ಮತ್ತೆ ನಮ್ಮ ನೋಟಕ್ಕೆ ಸಿಲುಕುವಂತೆ ಚಲಿಸತೊಡಗಿವೆ. ಜೂನ್ ೪ರ ಸಂಜೆ ಬಾಲಚಂದ್ರನನ್ನು ದಿಗಂತದಂಚಿನಲ್ಲಿ ಹುಡುಕಿ. ಮಿಥುನರಾಶಿಯಲ್ಲಿ ಚಂದ್ರನ ಪಕ್ಕಕ್ಕೆ ಕಾಣುವ ಗ್ರಹವೇ ಬುಧ. - ಹೀಗೆ ಜೂನ್ ಮೊದಲವಾರವಿಡೀ ಬುಧ ಗ್ರಹವನ್ನು ನೋಡುವುದು ಸಾಧ್ಯ - ಆಕಾಶ ಶುಭ್ರವಾಗಿದ್ದರೆ ಮಾತ್ರ!

ಇನ್ನೆರಡು ಗ್ರಹಗಳು ಗುಂಪಿನಿಂದ ಹೊರಬಿದ್ದು ಬೆಳಗಿನ ಝಾವ ಪೂರ್ವದಿಗಂತದಂಚಿನಲ್ಲಿ ಕಾಣಿಸಿಕೊಳ್ಳುತ್ತವೆ. ಸಂಧ್ಯಾ ಪ್ರಕಾಶ ಹಾಗೂ ಮೋಡಗಳ ಕಾರಣ ಗುರು ಮತ್ತು ಶನಿಯನ್ನು ಗುರುತಿಸುವುದು ಕಷ್ಟವಾಗುವುದು. ಜೂನ್ ೨೮ರಂದು ಬೆಳಗಿನ ಝಾವ ಬಾಲಚಂದ್ರನ ಪಕ್ಕದಲ್ಲಿ ಇವುಗಳನ್ನು ಕಾಣಬಹುದು.

ಸೂರ್ಯ ತನ್ನ ಹಾದಿಯ ಉತ್ತರದ ತುದಿಯನ್ನು ಮುಟ್ಟುವುದು ಜೂನ್೨೧ರಂದು. ಅತಿ ದೀರ್ಘವಾದ ಹಗಲಿನ ದಿನ ಅದು. ಸೂರ್ಯ ಅಂದಿನಿಂದ ಏಡಿಯಂತೆ ಹಿಂದು ಹಿಂದಾಗಿ ನಡೆಯಲು ಆರಂಭಿಸುವುದರಿಂದ ಆ ರಾಶಿಗೆ ಕಟಕ (ಏಡಿ) ಎಂಬ ಹೆಸರು ಬಂದಿತು ಎಂಬುದೊಂದು ಊಹೆ. ''ಹಿಂದು ಹಿಂದಾಗಿ'' ಎಂಬುದರ ವ್ಯಾಖ್ಯೆ ದಕ್ಷಿಣಕ್ಕೆ ಎಂದು. ಖಗೋಳ ವೈಜ್ಞಾನಿಕವಾಗಿ ಇದು ದಕ್ಷಿಣಾಯನದ ಆರಂಭ.



ಡಾ|| ಬಿ.ಎಸ್. ಶೈಲಜಾ
ಜವಹರಲಾಲ್ ನೆಹರು ತಾರಾಲಯ, ಹೈಗ್ರೌಂಡ್ಸ್, ಶ್ರೀ ಟಿ. ಚೌಡಯ್ಯ ರಸ್ತೆ, ಬೆಂಗಳೂರು - ೫೬೦ ೦೦೧




ಸರ್ಕಾರ
ಶಿಕ್ಷಕರು




ಭ್ರಷ್ಟ ಅಧಿಕಾರಿಗಳ ಮನೆ ಮೇಲೆ ಧಾಳಿ ಮಾಡಿದಂತೆಯೇ ಎಲ್ಲಾ ಮಂತ್ರಿ, ಎಂ ಎಲ್‌ಎ ಗಳ ಮನೆಗಳ ಮೇಲೂ ಧಾಳಿ ಮಾಡಿ ಅಂತ ಜನ ಒತ್ತಾಯ ಮಾಡ್ತಿದ್ದಾರೆ ಸಾರ್......






ಮಹಾತ್ಮ ಗಾಂಧಿಯವರ ವಿಚಾರಗಳನ್ನು, ನಾವು ಅಂದ್ರೆ, ರಾಜಕಾರಣಿಗಳು ಅಕ್ಷರಷಃ ಪಾಲಿಸ್ತೇವೆ ಅಂತ ಹೇಳ್ಕೊಳ್ಳೋಕೆ ಹೆಮ್ಮೆ ಆಯ್ತದೆ



ದೇಶದಲ್ಲಿ ಬರಗಾಲ ಅಂತ ಬೊಂಬಡಾ ಹೊಡ್ಕೋತಾ ಇದಾರೆ. ಆದರೆ ನಾನು ಒಂದು ದಿನವೂ ಬರಗಾಲ ಅನ್ನೋದನ್ನ ನೋಡ್ಲೇ ಇಲ್ವಲ್ರೀ!



ಈಗ ನಾವು ಚನ್ನಾಗಿ ಆಡಿದ್ರೂ, ಜನ ನಂಬಲ್ಲವಲ್ಲ

ಕ್ರೌರ್ಯ-ಒಂದು ಮಾನಸಿಕ ವಿಶ್ಲೇಷಣೆ

ಡಾ|| ಸಿ. ಆರ್. ಚಂದ್ರಶೇಖರ್

ಹಿಂದೆಂದಿಗಿಂತಲೂ ಈಗ ಮನುಷ್ಯ ಹೆಚ್ಚು ಕ್ರೂರಿಯಾಗುತ್ತಿದ್ದಾನೆಯೇ ? ಮನೆಯೊಳಗೆ, ಮನೆಯ ಹೊರಗಡೆ, ಸಮಾಜದ ಎಲ್ಲೆಡೆ ಕ್ರೌರ್ಯ ಹೆಚ್ಚುತ್ತಿದೆಯೇ ? ಪ್ರತಿನಿತ್ಯ. ಸುದ್ದಿ ಪತ್ರಿಕೆಗಳನ್ನು ಓದುವ ನಮಗೆಲ್ಲ ಈ ಪ್ರಶ್ನೆಗಳು ಕಾಡುತ್ತವೆ. ಬಸ್ಸಿಗೇ ಬೆಂಕಿಹಚ್ಚಿ ಅಮಾಯಕ ಮುಗ್ಧ ಜನರನ್ನು ಜೀವಂತ ಸುಡುವ ಪ್ರತಿಭಟನಾಕಾರರಿದ್ದಾರೆ. ಮಾರುಕಟ್ಟೆಯಲ್ಲಿ, ಜನನಿಬಿಡ ಪ್ರದೇಶಗಳಲ್ಲಿ ರೈಲು ಬಸ್ಸುಗಳಲ್ಲಿ ಬಾಂಬ್ ಸಿಡಿಸಿ, ಜನರ ಮಾರಣಹೋಮ ಮಾಡುವ ಭಯೋತ್ಪಾದಕರಿದ್ದಾರೆ. ಸೆರೆಯಲ್ಲಿರುವ ಒಬ್ಬಿಬ್ಬ ಅಂತಹ ಭಯೋತ್ಪಾದಕರನ್ನು ಬಿಡಿಸಿಕೊಳ್ಳುವ ಸಲುವಾಗಿ, ನೂರಾರು ಜನಸಾಮಾನ್ಯರನ್ನು ಒತ್ತೆಯಾಳಾಗಿಟ್ಟುಕೊಂಡು, ಇಡೀ ದೇಶವನ್ನು ಹೆದರಿಸುವ ವಿಮಾನ ಅಪಹರಣಕಾರರಿದ್ದಾರೆ. ಕ್ಷುಲ್ಲಕ ಕಾರಣಕ್ಕಾಗಿ ಮತೀಯ ಗಲಭೆ ಎಬ್ಬಿಸಿ ನೂರಾರು ಜನರ ಪ್ರಾಣಗಳೊಂದಿಗೆ ಚೆಲ್ಲಾಟವಾಡುವ ಮತಾಂಧರಿದ್ದಾರೆ. ಸಪ್ತಪದಿ ತುಳಿದು, ಧರ್ಮೇ ಚ, ಅರ್ಥೇ ಚ, ಕಾಮೇ ಚ, ನಿನ್ನನ್ನು ಜೀವನ ಸಂಗಾತಿಯನ್ನಾಗಿ ನೋಡಿಕೊಳ್ಳುವೆನೆಂದು, ಸಾಕ್ಷಿಗಳ ಮುಂದೆ ಪ್ರಮಾಣ ಮಾಡಿ ಆನಂತರ ಆಕೆಯನ್ನು ಹೊಡೆದು, ಬಡಿದು ಸಾಯಿಸುವ ಗಂಡಂದಿರಿದ್ದಾರೆ. ಒಡವೆ, ವರದಕ್ಷಿಣೆ, ಆಸ್ತಿ ತರಲಿಲ್ಲವೆಂದು ಸೊಸೆಯ ಮೇಲೆ ಸೀಮೆ ಎಣ್ಣೆ ಸುರಿದು ಸುಡುವ ಅತ್ತೆ ಮಾವಂದಿರಿದ್ದಾರೆ. ಕಾಮವನ್ನು ಹತ್ತಿಕ್ಕಲಾರದೆ ಅಥವಾ ಯಾರದೋ ಮೇಲಿನ ದ್ವೇಷಕ್ಕಾಗಿ ಹೆಂಗಸರು ಮತ್ತು ಮಕ್ಕಳ ಮೇಲೆ ಲೈಂಗಿಕ ಅತ್ಯಾಚಾರ ಮಾಡುವ ವ್ಯಕ್ತಿಗಳಿದ್ದಾರೆ. ಪುಡಿಕಾಸು ಕೊಟ್ಟು, ದಿನಕ್ಕೆ ಹನ್ನೆರಡರಿಂದ ಹದಿನಾರು ಗಂಟೆಗಳ ಕಾಲ ನೌಕರರನ್ನು, ಮಕ್ಕಳನ್ನು ದುಡಿಸುವ ಮಾಲೀಕರಿದ್ದಾರೆ. ಮಾಡಿದ ಸಣ್ಣ ತಪ್ಪಿಗೆ ಅಥವಾ ತಪ್ಪಾಗಿದೆಯೋ ಇಲ್ಲವೇ ಎಂದು ಪರಿಶೀಲಿಸದೇ, ವ್ಯಕ್ತಿಗೆ ಬರೆ ಹಾಕುವ, ಕೈಕಾಲು ಮುರಿಯುವ, ರಕ್ತ ಸುರಿಯುವಂತೆ ಹೊಡೆಯುವ ಕ್ರೂರಿಗಳಿದ್ದಾರೆ. ಆರೋಪಿಯ ಬಾಯಿ ಬಿಡಿಸಲು, ಚಿತ್ರಹಿಂಸೆ ಮಾಡಿ, ಲಾಕಪ್‌ನಲ್ಲೇ ವ್ಯಕ್ತಿ ಕೊನೆಯುಸಿರೆಳೆಯುವಂತೆ ಅಥವಾ ಜೀವನಪರ್ಯಂತ ಅಂಗವಿಕಲನಾಗುವಂತೆ ಮಾಡುವ ಪೊಲೀಸರಿದ್ದಾರೆ. ದೀನದಲಿತರು ತಿನ್ನುವ ಅನ್ನವನ್ನು ಕಸಿದುಕೊಂಡು ಅವರನ್ನು ಬೀದಿಪಾಲು ಮಾಡುವ ಧನಿಕರಿದ್ದಾರೆ. ನಿರ್ಗತಿಕರ ಗುಡಿಸಲುಗಳಿಗೆ ಬೆಂಕಿಹಚ್ಚಿ ಅವರ ನೆಲವನ್ನು ಕಬಳಿಸುವ ನೆಲದಾಹಿಗಳಿದ್ದಾರೆ. ದೇವರು, ಹರಕೆಯ ಹೆಸರಿನಲ್ಲಿ ಮುಗ್ಧ ಪ್ರಾಣಿಗಳ ತಲೆ ಕತ್ತರಿಸಿ ಕುತ್ತಿಗೆ ಸೀಳಿ ರಕ್ತದೋಕುಳಿಯಾಡುವ ಭಕ್ತಾದಿಗಳಿದ್ದಾರೆ.

ಹೀಗೆ ಕ್ರೌರ್ಯದ ಮುಖಗಳು ಅಸಂಖ್ಯಾತ. ಕ್ರೌರ್ಯದ ಮೂಲ ವರ್ಣನಾತೀತ. ಸುತ್ತಮುತ್ತ ಕಣ್ಣಾಡಿಸಿ ನೋಡಿದರೆ ಕ್ರೌರ್ಯದ ವಿಶ್ವರೂಪದರ್ಶನವಾಗುತ್ತದೆ. ಅದನ್ನು ನೋಡ ತಾನಾಗೆ ಕಣ್ಣುಗಳು ಮುಚ್ಚಿಕೊಳ್ಳುತ್ತವೆ. ಹೃದಯದ ಬಡಿತ ನಾಗಾಲೋಟ ಹೂಡುತ್ತದೆ, ದೇಹ ಕಂಪಿಸುತ್ತದೆ. ಎಲ್ಲ ಪ್ರಾಣಿಗಳಿಗೆ ಹೋಲಿಸಿದರೆ ತಾನೇ ಉತ್ತಮ ಎಂದು ಗರ್ವಪಡುವ ಮನುಷ್ಯ ಏಕಿಷ್ಟು ಕ್ರೌರ್ಯವನ್ನು ತೋರಿಸುತ್ತಾನೆ? ಇದನ್ನು ತಪ್ಪಿಸಲು ಸಾಧ್ಯವಿಲ್ಲವೆ? ಈ ಕ್ರೌರ್ಯದ ಹುಟ್ಟು, ಆಯಾಮಗಳನ್ನು ವಿವರಿಸಲು ಸಾಧ್ಯವೆ?

ಕ್ರೌರ್ಯದ ಹಿನ್ನೆಲೆಯಲ್ಲಿ ಅನೇಕ ನಕಾರಾತ್ಮಕ ಭಾವನೆಗಳು ಕೆಲಸ ಮಾಡುತ್ತವೆ: ಭಯ, ಕೋಪ, ಅಸಹನೆ, ಮತ್ಸರ, ದುಃಖ, ಕೀಳರಿಮೆ, ಅಹಂಕಾರ, ಅಜ್ಞಾನ, ಅತಿಯಾದ ಲೈಂಗಿಕ ಬಯಕೆಗಳು, ಇತ್ಯಾದಿ. ಅಪಾಯದ ಭಯಕ್ಕೊಳಗಾದ ವ್ಯಕ್ತಿ ಕ್ರೂರಿಯಾಗುತ್ತಾನೆ. ಬೊಗಳುತ್ತಿರುವ ನಾಯಿ, ಹುಚ್ಚು ನಾಯಿ ಇರಬೇಕು; ಅದು ಕಚ್ಚಿದರೆ ತನಗೆ ಹುಚ್ಚು ಹಿಡಿಯುತ್ತದೆ ಎಂಬ ಭಯದಿಂದ ಒಂದು ಸಾಧಾರಣ ನಾಯಿಯನ್ನು ಆತ ನಿಷ್ಕರುಣೆಯಿಂದ ಬಡಿದು ಕೊಲ್ಲುತ್ತಾನೆ. ಪರಮತೀಯರು ತಮಗೆ ಅಪಾಯವನ್ನುಂಟು ಮಾಡಬಹುದೆಂಬ ಭಯದಿಂದ ಆ ಮತಕ್ಕೆ ಸೇರಿದವರ ಮೇಲೆ ದಾಳಿ ಮಾಡಲು, ಕೊಲ್ಲಲು ಸಿದ್ಧನಾಗುತ್ತಾನೆ. ತಮಗೆ ಸೇರಿದ ಹಣ, ವಸ್ತುಗಳನ್ನು ಕದಿಯಬಹುದೆಂಬ ಭಯದಿಂದ ವ್ಯಕ್ತಿಯನ್ನು ಜನ ಸಾಯಬಡಿಯುತ್ತಾರೆ.

ನಿರಾಶೆ, ಅನ್ಯಾಯಗಳು ಕೋಪಕ್ಕೆ ಮೂಲ. ಅಗತ್ಯಗಳು ಪೂರೈಕೆಯಾಗದಿದ್ದಾಗ, ಕಷ್ಟ ಸೋಲುಗಳಿಂದ ನಿರಾಶೆಯುಂಟಾಗುತ್ತದೆ. ಪಕ್ಷಪಾತ, ತಾರತಮ್ಯ, ನೀತಿ ನಿಯಮಗಳ ಉಲ್ಲಂಘನೆಯಂತಹ ಅನ್ಯಾಯಗಳಾದಾಗ ಕೋಪ, ಸಹಜ ಭಾವನೆಯಾಗಿ ಹುಟ್ಟುತ್ತದೆ. ಕೋಪದಿಂದ ಸೇಡು, ದ್ವೇಷ ಹುಟ್ಟುತ್ತದೆ. ದೇಹದಲ್ಲಿ ಹೆಚ್ಚು ಅಡ್ರಿನಲಿನ್ ಮತ್ತು ಕಾರ್ಟಿಸಾಲ್ ರಾಸಾಯನಿಕಗಳು ಸ್ರವಿಸಲ್ಪಟ್ಟು, ದೇಹ ಹೋರಾಟಕ್ಕೆ, ಆಕ್ರಮಣಕ್ಕೆ ಸಜ್ಜಾಗುತ್ತದೆ. ವಿವೇಚನೆ ಹಾಳಾಗುತ್ತದೆ. ಸರಿನಿರ್ಧಾರ ಕೈಗೊಳ್ಳುವ ಶಕ್ತಿ ಕುಗ್ಗುತ್ತದೆ. ಕೋಪ, ಸೇಡು, ದ್ವೇಷ ಭಾವನೆಗಳಿಗೆ ಸಿಕ್ಕ ವ್ಯಕ್ತಿ ಅತ್ಯಂತ ಕ್ರೂರಿಯಾಗುತ್ತಾನೆ. ಹಿಂಸಾಚಾರದಲ್ಲಿ ತೊಡಗುತ್ತಾನೆ. ಕೋಪ, ದ್ವೇಷಗಳ ಬೆಂಕಿಗೆ ಯಾರನ್ನಾದರೂ ನಿಷ್ಕರುಣೆಯಿಂದ ಬಲಿಕೊಡುತ್ತಾನೆ. ತನಗೆ ನಿರಾಶೆ, ಅನ್ಯಾಯವನ್ನುಂಟುಮಾಡಿದ ವ್ಯಕ್ತಿಯನ್ನಷ್ಟೇ ಅಲ್ಲ, ಅವನ ಕುಟುಂಬ, ಜನ, ಜನಾಂಗದ ಮೇಲೆ ಕ್ರೌರ್ಯವನ್ನು ಪ್ರಕಟಿಸುತ್ತಾನೆ.

ತನಗಿಲ್ಲದ್ದು ಇನ್ನೊಬ್ಬರಿಗೆ ಇದೆ, ತನಗೆ ಸಿಗದಿದ್ದುದು ಮತ್ತೊಬ್ಬರಿಗೆ ಸಿಕ್ಕಿದೆ, ತನಗೆ ಮಾತ್ರ ಕೊರತೆ, ಇತರರಿಗೆ ಸಮೃದ್ಧಿಯಾದಾಗ ಯಾರದೇ ಮನಸ್ಸಿನಲ್ಲಿ ಹುಟ್ಟುವ ಭಾವನೆ 'ಮತ್ಸರ', ಆಡು ಭಾಷೆಯಲ್ಲಿ ಹೊಟ್ಟೆಕಿಚ್ಚು! ಇದೂ ಕೂಡ ನಮ್ಮನ್ನು ಕ್ರೂರಿಯನ್ನಾಗಿ ಮಾಡುತ್ತದೆ. ದಾಯಾದಿ ಮತ್ಸರದಿಂದ, ಪಾಂಡವರ ವಿಚಾರದಲ್ಲಿ ದುರ್ಯೋಧನ ಎಷ್ಟೊಂದು ಕ್ರೂರಿಯಾಗುತ್ತಾನೆ ಎಂಬುದನ್ನು ಮಹಾಭಾರತ ಕಥೆ ಹೇಳುತ್ತದೆ. ವೃತ್ತಿ ಮಾತ್ಸರ್ಯದಿಂದ ಒಬ್ಬ ಇನ್ನೊಬ್ಬನಿಗೆ ಕಷ್ಟ ಕೊಡಲು, ಅವನ ಕೀರ್ತಿ-ಸಂಪತ್ತನ್ನು ನಾಶಮಾಡಲು, ಅವನು ಮತ್ತು ಅವನ ಮನೆಯವರಿಗೆ ದೈಹಿಕವಾಗಿ ಮಾನಸಿಕವಾಗಿ ನೋವು ಕೊಡಲು ಸಿದ್ಧನಾಗುತ್ತಾನೆ.

ಕೆಲವು ಸಲ ಸಹಿಸಲಸಾಧ್ಯವಾದ, ಅನಿರೀಕ್ಷಿತ ದುಃಖ ಕ್ರೌರ್ಯಕ್ಕೆ ಎಡೆಮಾಡಿಕೊಡಬಹುದು. ಸಾವಿನ ದುಃಖದಿಂದ, ರೊಚ್ಚಿಗೆದ್ದು ಜನ ಕ್ರೌರ್ಯ ಪ್ರದರ್ಶನ ಮಾಡುವುದು ಅಸಾಮಾನ್ಯವೇನಲ್ಲ.

ಕೀಳರಿಮೆಯಿಂದ ಜರ್ಝರಿತನಾದ ವ್ಯಕ್ತಿ, ತನಗಿಂತ ಸ್ವಲ್ಪ ಉತ್ತಮವಾಗಿರುವವರ ಪಾಲಿಗೆ ಕ್ರೂರಿಯಾಗುವುದು ಸಾಮಾನ್ಯ. ಹೆಂಡತಿಗಿಂತ ಕಡಿಮೆ ವಿದ್ಯಾಭ್ಯಾಸ ಮಾಡಿದ, ಕಡಿಮೆ ಬುದ್ಧಿ ಚತುರತೆಯ ಹಾಗೂ ಕಡಿಮೆ ಸಂಪಾದನೆ ಮಾಡುವ ಗಂಡ, ತನ್ನ ಅವ್ಯಾಹತ ಟೀಕೆ-ಟಿಪ್ಪಣಿ, ದೂಷಣೆಗಳಿಂದ ಆಕೆಯನ್ನು ಚುಚ್ಚಿ, ನೋಯಿಸಿ ಸಮಾಧಾನಪಟ್ಟುಕೊಳ್ಳಬಹುದು. ಪಾಠದಲ್ಲಿ ಹಿಂದುಳಿದಿರುವ, ನೋಡಲು ಅನಾಕರ್ಷಕವಾಗಿರುವ, ತಂದೆ ತಾಯಿ ಶಿಕ್ಷಕರಿಂದ ಹೀನಾಯಕ್ಕೆ ಒಳಗಾದ ವಿದ್ಯಾರ್ಥಿ, ತರಗತಿಯ ಇತರ ಉತ್ತಮ ವಿದ್ಯಾರ್ಥಿಗಳ ಮೇಲೆ ದೈಹಿಕವಾಗಿ, ಮಾನಸಿಕವಾಗಿ ದಾಳಿಮಾಡಿ, ನೋವನ್ನುಂಟುಮಾಡಬಹುದು.

ಕೀಳರಿಮೆಗೆ ವಿರುದ್ಧವಾದ ಅಹಂಕಾರ ಅಥವಾ ಉತ್ತಮಿಕೆಯ ಗರ್ವ ಮನುಷ್ಯ ಕ್ರೂರಿಯಾಗಲು ಪ್ರೇರಣೆ ನೀಡಬಹುದು; ಅಹಂಕಾರದ ಮದದಿಂದ, ಇತರರ ಭಾವನೆ-ಅನಿಸಿಕೆಗಳಿಗೆ ಬೆಲೆ ಕೊಡದೆ, ಅವರನ್ನು ತೀವ್ರವಾಗಿ ನೋಯಿಸಬಹುದು.

ಅತಿಯಾದ ಲೈಂಗಿಕ ಬಯಕೆ, ಕಾಮನೆಗಳು, ಲೈಂಗಿಕ ಅತ್ಯಾಚಾರ, ಕ್ರೌರ್ಯಕ್ಕೆ ಕಾರಣವಾಗುತ್ತವೆ. ತಮ್ಮ ಲೈಂಗಿಕ ಸುಖಕ್ಕೆ ಪ್ರಾಧಾನ್ಯತೆ ಕೊಡುವ ಈ ವ್ಯಕ್ತಿಗಳು ಬಲಾತ್ಕಾರ ಮಾಡಲು ಹೇಸುವುದಿಲ್ಲ. ವಿಕೃತ ಕಾಮಿ, ತನ್ನ ಸಂಗಾತಿಗೆ ನೋವು ಕೊಟ್ಟು, ಲೈಂಗಿಕ ಸುಖವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

ಈ ನಕಾರಾತ್ಮಕ ಭಾವನೆಗಳ ಜೊತೆಗೆ, ಸಕಾರಾತ್ಮಕ ಭಾವನೆಗಳ ಕೊರತೆ ಕ್ರೌರ್ಯಕ್ಕೆ ಪ್ರೇರಣೆ ನೀಡಬಹುದು. ಬಾಲ್ಯದಲ್ಲಿ ತಂದೆ ತಾಯಿ ಸೋದರ ಸೋದರಿಯರ ಪ್ರೀತಿ, ಮಮತೆಗಳಿಂದ ವಂಚಿತರಾದವರು, ಅತಿ ಶಿಸ್ತು ಶಿಕ್ಷೆ, ತಿರಸ್ಕಾರ, ಉಪೇಕ್ಷೆಗಳಿಗೆ ಒಳಗಾದವರು, ಬೆಳೆಯುವಾಗ ಮತ್ತು ಆ ನಂತರ ಕ್ರೂರಿಗಳಾಗಬಹುದು. ಪ್ರೀತಿ-ಮಮತೆ ಪಡೆಯದ ಅವರು, ಅವನ್ನು ಇತರರಿಗೆ ಕೊಡಲು ಹಾಗೂ ಇತರರ ನೋವು, ಅನಿಸಿಕೆಗಳನ್ನು ಅರ್ಥಮಾಡಿಕೊಳ್ಳಲು ವಿಫಲರಾಗಬಹುದು. ದಯೆ,

ಕರುಣೆ, ಅನುಕಂಪಗಳನ್ನು ಮಾನವೀಯ ಗುಣಗಳೆಂದು ನಾವು ಹೇಳುತ್ತೇವೆ. ಇವನ್ನು ಪ್ರಕಟಿಸಲು, ಅನುಭವಿಸಲು ಮಕ್ಕಳಿಗೆ ತರಪೇತಿ ನೀಡಬೇಕು. ದುರ್ಬಲರು, ಅಸಹಾಯಕರು, ರೋಗಿಗಳು, ಅಂಗವಿಕಲರು, ಸಣ್ಣವರು, ಮೂಕಪ್ರಾಣಿಗಳಿಗೆ ದಯೆ, ಅನುಕಂಪ ತೋರುವುದು, ಅವರಿಗೆ ನೆರವಾಗುವುದು, ಶಿಕ್ಷಣದ ಒಂದು ಅವಿಭಾಜ್ಯ ಅಂಗವಾಗಬೇಕು.

ಅತಿ ಆಸೆ, ದುರಾಶೆ, ಎಲ್ಲವನ್ನು ಬಾಚಿಕೊಂಡು ಸಂಗ್ರಹಿಸುವ ಬಯಕೆ, ಅತಿಸ್ವಾರ್ಥ ಮನುಷ್ಯನನ್ನು ಕ್ರೂರಿಯನ್ನಾಗಿ ಮಾಡುತ್ತದೆ. ಹೆಚ್ಚು ಆಹಾರ, ಹೆಚ್ಚು ವಸ್ತುಗಳು, ಅಧಿಕ ಹಣ-ಸಂಪತ್ತನ್ನು ಕೂಡಿಹಾಕುವ ವ್ಯಕ್ತಿ, ಅವನ್ನು ಇತರರಿಂದ ಕಸಿಯುವ ಕ್ರೌರ್ಯಕ್ಕೆ ಇಳಿಯುತ್ತಾನೆ. ತನ್ನ ಖಜಾನೆ ಭರ್ತಿಯಾದರೆ ಸಾಕು, ಉಳಿದವರು ಉಪವಾಸವಿರಲಿ, ಸಾಯಲಿ ಎನ್ನುತ್ತಾನೆ. ಅವರ ಹಸಿವು, ನೋವು, ಆಕ್ರಂದನ ಅವನ ಮನಸ್ಸನ್ನು ತಟ್ಟುವುದೇ ಇಲ್ಲ.

ತೀವ್ರ ಅಭಾವ, ಕೊರತೆಯೂ, ಮನುಷ್ಯರನ್ನು ಕ್ರೂರಿಗಳನ್ನಾಗಿ ಮಾಡಬಲ್ಲದು. ಹಸಿವಿನಿಂದ ಕಂಗೆಟ್ಟ ಜನ, ಸ್ವಲ್ಪ ಆಹಾರ ಸಿಕ್ಕಿದಾಗ ಇತರರನ್ನು ಮರೆತು, ಅವರನ್ನು ದೂರ ತಳ್ಳಿ, ಹೊಡೆದೋಡಿಸಿ, ಆ ಆಹಾರವನ್ನು ಕಬಳಿಸುವ ವರ್ತನೆಯನ್ನು ಕಾಣಬಹುದು.

ಅತಿಸ್ವಾರ್ಥ, ಖುಷಿ ಪಡಲು ಯಾವ ಅಡ್ಡ ಮಾರ್ಗವನ್ನಾದರೂ ತುಳಿಯಲು ಸಿದ್ಧರಾಗುವುದು, ನೀತಿ-ನಿಯಮಗಳಿಗೆ, ನೈತಿಕ ಮೌಲ್ಯಗಳಿಗೆ ಕವಡೆಯಷ್ಟು ಬೆಲೆಯನ್ನೂ ಕೊಡದಿರುವುದು, ನಯವಂಚಕತನ, ಇತರರ ನೋವು ನರಳಿಕೆಗಳಿಗೆ ಕಿವುಡಾಗುವುದು, ಇವೆಲ್ಲಾ 'ಸೈಕೋಪ್ಯಾತಿಕ್ ಪರ್ಸನಾಲಿಟಿ ಡಿಸಾರ್ಡರ್'ನ ಪ್ರಮುಖ ಲಕ್ಷಣ. ಇದೊಂದು ವ್ಯಕ್ತಿತ್ವ ದೋಷದ ಕಾಯಿಲೆ. ಈ ಡಿಸಾರ್ಡರ್‌ನಿಂದ ಬಳಲುವವರು ಸಹಜವಾಗಿ ಕ್ರೂರಿಗಳಾಗಿರುತ್ತಾರೆ. ತಮ್ಮ ಸುಖ-ಸ್ವಾರ್ಥ ಸಾಧನೆಗೆ ಎಂತಹ ಕ್ರೌರ್ಯವನ್ನಾಗಲೀ ಪ್ರದರ್ಶಿಸುತ್ತಾರೆ.

೨೩ನೇ ಜೊತೆ ವರ್ಣತಂತುಗಳನ್ನು 'ಲೈಂಗಿಕ ವರ್ಣತಂತು'ಗಳೆನ್ನುತ್ತಾರೆ. ಈ ಜೊತೆ x x ಆದರೆ ಮಗು ಹೆಣ್ಣಾಗುತ್ತದೆ. x y ಆದರೆ ಮಗು ಗಂಡಾಗುತ್ತದೆ. x y ಜೊತೆಗೆ y ಇದ್ದರೆ, ಆ ವ್ಯಕ್ತಿ ಅತ್ಯಂತ ಕ್ರೂರ ಸ್ವಭಾವವನ್ನು ಬೆಳೆಸಿಕೊಳ್ಳುತ್ತಾನೆ. ಅತ್ಯಂತ ಕ್ರೂರವಾದ ಅಪರಾಧಗಳನ್ನು ಮಾಡುತ್ತಾನೆ ಎಂಬುದು ಅಧ್ಯಯನಗಳಿಂದ ತಿಳಿದುಬರುವ ವಿಚಾರ.

ಮಿದುಳಿನ ಫ್ರಿಫ್ರಾಂಟಲ್ ಲೋಬ್, ಟೆಂಪೊರಲ್ ಲೋಬ್‌ಗಳಿಗೆ ಹಾನಿಯಾದರೆ, ಆ ರೋಗಿಗಳಲ್ಲೂ ಅತಿ ಆಕ್ರಮಣಶೀಲತೆ, ಕೋಪ ಕ್ರೌರ್ಯ ಕಂಡುಬರಬಹುದು. ಲಿಂಬಿಕ್ ವ್ಯವಸ್ಥೆಯಲ್ಲಿ ಹುಟ್ಟುವ ಭಾವನೆಗಳ ಮೇಲೆ ಹತೋಟಿ ಸಾಧಿಸುವುದು ಫ್ರಿಫ್ರಾಂಟಲ್ ಲೋಬ್‌ನ ಕೆಲಸ. ಆ ಭಾಗ ಹಾನಿಗೀಡಾದಾಗ, ವ್ಯಕ್ತಿ ಅತ್ಯಲ್ಪ ಕಾರಣಗಳಿಗೇ ಭಾವೋದ್ವೇಗಗಳಿಗೆ ಒಳಗಾಗಿ ಕ್ರೌರ್ಯವನ್ನು ಪ್ರಕಟಿಸಬಹುದು.

ತೀವ್ರ ಮಾನಸಿಕ ರೋಗವಾದ ಪೆರನಾಯ್ಡ್ ಸ್ಕಿಜೋಫ್ರೀನಿಯಾದಲ್ಲಿ ರೋಗಿಗೆ ಅವಾಸ್ತವಿಕವಾದ, ನಿಜವಲ್ಲದ ಅನೇಕ ತಪ್ಪು ನಂಬಿಕೆಗಳು – ಡೆಲ್ಯೂಶನ್ಸ್ – ಇರುತ್ತವೆ. ಹೆಂಡತಿ ಅಥವಾ ಗಂಡನ ಶೀಲದ ಬಗ್ಗೆ ಸಂಶಯ, ನೆರೆಹೊರೆ-ಸಹೋದ್ಯೋಗಿಗಳು ತನ್ನ ವಿರುದ್ಧ ಇದ್ದಾರೆ ಎಂಬ ಅನುಮಾನ, ತನ್ನನ್ನು ಮುಗಿಸಲು ಯಾರೋ ಸಂಚು ಮಾಡುತ್ತಿದ್ದಾರೆ ಎಂಬ ಸಂಶಯ ಅವರನ್ನು ಕಾಡುತ್ತದೆ. ಈ ಸಂಶಯ ಅನುಮಾನಗಳಿಂದಾಗಿ, ಈ ರೋಗಿಗಳು ಸಂಬಂಧಪಟ್ಟವರ ಮೇಲೆ ಆಕ್ರಮಣ ಮಾಡಬಹುದು. ಕ್ರೌರ್ಯವನ್ನು ತೋರಿಸಬಹುದು. ಇದು ಸಂಶಯವೇ ಪ್ರಧಾನವಾದ ಮತ್ತೊಂದು ಮಾನಸಿಕ ಕಾಯಿಲೆಯಾದ 'ಡೆಲ್ಯೂಶನಲ್ ಡಿಸಾರ್ಡರ್'ನಲ್ಲೂ ಕಾಣಿಸಿಕೊಳ್ಳಬಹುದು.

ಆಲ್ಕೋಹಾಲ್, ಗಾಂಜಾ, ಅಫೀಮು, ಇತರ ನಿಶೆ ಮತ್ತು ಭ್ರಮೆಯನ್ನುಂಟುಮಾಡುವ ಮಾದಕ ವಸ್ತುಗಳನ್ನು ಸೇವಿಸುವವರು [illegible] ಕಾರಣಗಳಿಗಾಗಿ ಕ್ರೂರಿಗಳಾಗಿ ವರ್ತಿಸಬಲ್ಲರು. ಈ ಮಾದಕ ವಸ್ತುಗಳನ್ನು [illegible], ಅವುಗಳ ನಿಶೆಯಲ್ಲಿದ್ದಾಗ ಮನಸ್ಸಿನ [illegible] ಕಳೆದುಕೊಂಡು, ಅದುಮಿಟ್ಟ ಭಾವೋದ್ವೇಗಗಳು ಹೊರಬಂದು ಕ್ರೂರ ವರ್ತನೆಯಲ್ಲಿ ತೊಡಗಬಹುದು. ಇಲ್ಲವೇ ಈ ವಸ್ತುಗಳಿಗೆ ಚಟ ಬೆಳೆಸಿಕೊಂಡ ವ್ಯಕ್ತಿ ಆ ವಸ್ತುಗಳನ್ನು ಸಂಪಾದಿಸಲು, ಯಾವುದೇ ಹೀನ ಅಪರಾಧ ಕ್ರೌರ್ಯಕ್ಕೆ ಸಿದ್ಧನಾಗುತ್ತಾನೆ. ಆ ವಸ್ತುವನ್ನು ಸೇವಿಸದೇ ಹೋದಾಗ ಉಂಟಾಗುವ, [illegible] 'ವಿತ್‌ಡ್ರಾಯಲ್ ಸಿಂಪ್ಟಮ್ಸ್' ಅಂದರೆ ಹಿಂದೆಗೆತದ ರೋಗಲಕ್ಷಣಗಳಿಂದ ರೋಸಿಹೋಗಿ ಅವುಗಳಿಂದ ಪಾರಾಗಲು ಆತ ಏನು ಮಾಡಲೂ ಸಿದ್ಧನಾಗುತ್ತಾನೆ. ಮನೆಯವರು, ಸುತ್ತಮುತ್ತಲಿನವರು, ಅಪರಿಚಿತರು ಅವನ ಕ್ರೌರ್ಯಕ್ಕೆ ಬಲಿಯಾಗಬಹುದು.

ಕಾಲೇಜಿನಲ್ಲಿ ಕಂಡುಬರುವ ರ‍್ಯಾಗಿಂಗ್, ಕ್ರೌರ್ಯದ ಮತ್ತೊಂದು ಮುಖ. ವ್ಯಕ್ತಿತ್ವ ದೋಷ, ಬಾಲ್ಯದಲ್ಲಿ ಪ್ರೀತಿ-ಮಮತೆಯಿಂದ ವಂಚಿತರಾದವರು, ಅತಿಶಿಸ್ತು ಶಿಕ್ಷೆಗೆ ಒಳಪಟ್ಟವರು, ಪದೇ ಪದೇ ನಿರಾಶೆಗೆ ಒಳಪಟ್ಟವರು, ಮಾದಕ ವಸ್ತು ವ್ಯಸನಿಗಳಲ್ಲಿ ಈ ಕ್ರೌರ್ಯ ಕಂಡುಬರುತ್ತದೆ. ಮಾನಸಿಕವಾಗಿ ಅಸ್ವಸ್ಥರಾದ ಇವರಿಗೆ ಚಿಕಿತ್ಸೆಯ ಅಗತ್ಯವಿದೆ.

ಕ್ರೌರ್ಯಕ್ಕೆ ಒಳಗಾದ ವ್ಯಕ್ತಿ ಮುಂದೊಂದು ದಿನ ಇತರರ ಮೇಲೆ ಅಂತಹುದೇ ಕ್ರೌರ್ಯವನ್ನು ಪ್ರಕಟಿಸುವುದು ಮನಸ್ಸಿನ ವೈಚಿತ್ರ್ಯಗಳಲ್ಲಿ ಒಂದು! ಅತ್ತೆಯಿಂದ ಹಿಂಸಿಸಲ್ಪಟ್ಟ ಸೊಸೆ, ಮುಂದೆ ತಾನು ಅತ್ತೆಯಾದಾಗ ತನ್ನ ಸೊಸೆಯನ್ನು ಹಿಂಸಿಸುತ್ತಾಳೆ. ತಂದೆ ತಾಯಿಯಿಂದ ವಿಪರೀತ ಕ್ರೌರ್ಯಕ್ಕೆ ತುತ್ತಾದ ಮಗು, ಬೆಳೆದು ದೊಡ್ಡವನಾದ ಮೇಲೆ ಅದೇ ಕ್ರೌರ್ಯವನ್ನು ತನ್ನ ಮಕ್ಕಳ ಮೇಲೆ ತೋರಿಸುತ್ತಾನೆ!

ದೇಶ ದೇಶಗಳ ನಡುವೆ, ರಾಷ್ಟ್ರ ರಾಷ್ಟ್ರಗಳ ನಡುವೆ ಪರಸ್ಪರ ಅಪನಂಬಿಕೆ, ಭಯ, ಮತ್ಸರಗಳಿದ್ದರೆ, ಯುದ್ಧದ ರೂಪದಲ್ಲಿ ಕ್ರೌರ್ಯ ವಿಜೃಂಭಿಸುತ್ತದೆ. ಸಾವಿರಾರು, ಲಕ್ಷಾಂತರ ಜನರು ಹಿಂಸೆ-ಕ್ರೌರ್ಯಕ್ಕೆ ಬಲಿಯಾಗುತ್ತಾರೆ. ಪ್ರಪಂಚದ ಚರಿತ್ರೆಯಲ್ಲಿ ಎಷ್ಟೊಂದು ಯುದ್ಧಗಳು ನಡೆದುಹೋಗಿವೆ! ವಿಜ್ಞಾನದ ಪ್ರಗತಿಯಿಂದ ಕ್ರೌರ್ಯದ ತೀವ್ರತೆಯನ್ನು ಹಲವುಪಟ್ಟು ಹೆಚ್ಚಿಸುವ ಮಾರಕ ಶಸ್ತ್ರಾಸ್ತ್ರಗಳು ಎಲ್ಲೆಡೆ ಲಭ್ಯವಿವೆ. ಕ್ರೌರ್ಯದ ಕಿಚ್ಚಿನ ಕೆನ್ನಾಲಿಗೆ ಜೀವಕೋಟಿಯನ್ನು ಜೀವಂತ ಸುಡಲು ಸಜ್ಜಾಗಿದೆ.

ನಕಾರಾತ್ಮಕ ಭಾವನೆಗಳೇ ಕ್ರೌರ್ಯಕ್ಕೆ ಮೂಲಕಾರಣ ಎಂದಾದ ಮೇಲೆ, ಕ್ರೌರ್ಯದ ನಿವಾರಣೆಗೆ ನಾವು ಭಯ, ಕೋಪ, ದುಃಖ, ಮತ್ಸರ, ಕೀಳರಿಮೆಗಳನ್ನು ಹತೋಟಿಯಲ್ಲಿಡಬೇಕು. ಸರಳ ತೃಪ್ತ ಜೀವನದಿಂದ [illegible] ನಮ್ಮ ಆಸೆ, ನಿರೀಕ್ಷೆ, ಅಗತ್ಯಗಳನ್ನು ತಗ್ಗಿಸಿಕೊಳ್ಳಬೇಕು. ನಕಾರಾತ್ಮಕ ಭಾವನೆಗಳ ಜಾಗದಲ್ಲಿ ಪ್ರೀತಿ, [illegible] ದಯೆ, ಅನುಕಂಪಗಳನ್ನು [illegible] ಕ್ರೌರ್ಯಕ್ಕೆ [illegible]

[illegible]

[illegible]

ಅಂಡಮಾನಿನ ಕೆಲವು ಜನ

ಡಾ॥ ರಹಮತ್ ತರೀಕೆರೆ

ಚಿಡಿಯಾಟಾಪಿನ ಡ್ರೈವರ್

ಅಂಡಮಾನಿನ ನಮ್ಮ ನೆನಪಿನಲ್ಲಿ ಉಳಿದಿರುವ ವ್ಯಕ್ತಿಗಳಲ್ಲಿ ಪೋರ್ಟ್ ಬ್ಲೇರಿನಿಂದ ಚಿಡಿಯಾಟಾಪು ಎಂಬ ಜಾಗಕ್ಕೆ ಹೋಗುವಾಗ ಕಂಡ ಡ್ರೈವರ್ ಕೂಡ ಒಬ್ಬ. ನನ್ನ ಜೀವಮಾನದಲ್ಲಿ ಅಷ್ಟೊಂದು ಜೀವಂತಿಕೆ ಮಿಡಿಯುವ ಮನುಷ್ಯನನ್ನು ಕಂಡೇ ಇಲ್ಲವೆನ್ನಬಹುದು. ಏನಿಲ್ಲವೆಂದರೂ ೪೦ ಕಿ.ಮೀ. ಪ್ರಯಾಣದಲ್ಲಿ ಆ ಬಸ್ಸಿಗೆ ೪೦ ಸ್ಟಾಪುಗಳಿದ್ದವು. ನಮ್ಮ ಮಲೆನಾಡು ಅಥವಾ ಕರಾವಳಿಯಲ್ಲಿದ್ದಂತೆ ಮೊಳಕ್ಕೊಂದು ಮನೆ ಮತ್ತು ಮಾರಿಗೊಂದು ಸ್ಟಾಪು ಇದ್ದವು. ಆತ ಬಸ್ಸು ನಿಲ್ಲಿಸಲು, ಸ್ಟಾರ್ಟು ಮಾಡಲು ಒಮ್ಮೆಯೂ ಬೇಸರ ಮಾಡುತ್ತಿರಲಿಲ್ಲ. ಸ್ಟೇರಿಂಗ್ ತಿರುಗಿಸುವುದು, ಬ್ರೇಕು ಒತ್ತುವುದು, ಗೇರು ಹಾಕುವುದು - ಎಲ್ಲವನ್ನೂ ಲೀಲಾಜಾಲವಾಗಿ ಒಂದು ಕಲೆಯಂತೆ ಮಾಡುತ್ತಿದ್ದ. ಲವಲವಿಕೆ ಎಂಬುದು ಅವನ ಕೆಲಸಗಳಲ್ಲಿ ಚಿಮ್ಮುತ್ತಿದ್ದವು. ಆತ ದಾರಿಯುದ್ದಕ್ಕೂ ಇರುವ ಮನೆಗಳ ಸದಸ್ಯನಾಗಿ ಹೋದಂತಿದ್ದ. ಅದರಲ್ಲೂ ದಟ್ಟ ಕಾಡಿನ ಒಳಗೆ ಚೆಲ್ಲಿಕೊಂಡಿದ್ದ ಮನೆಗಳಿಗೆ ನಾಗರಿಕ ಜಗತ್ತಿನ ಜತೆ ಆ ಏಕೈಕ ರಸ್ತೆಯೂ ಬಸ್ಸೂ ಆತನೂ ಸೇರಿ ಕೊಂಡಿಯಾಗಿದ್ದರು. ೩೦ ವರ್ಷ ದಾಟಿದ ಆತ ನೋಡಲು ಲಕ್ಷಣವಾಗಿದ್ದ. ಅದರಲ್ಲೂ ಹೆಂಗಳೆಯರಿಗೆ ಅತ್ಯಂತ ಪ್ರಿಯನಾಗಿದ್ದ ಎಂದು ನನ್ನ ನಂಬಿಕೆ. ಅನೇಕ ಗಿಡ ಮರಗಳ ನಡುವೆ ಇರುವ ಮನೆಯ ಕಡೆ, ಹುಡುಕುವ ಕಣ್ಣಿಂದ ನೋಡುತ್ತ ಹಾರನ್ ಮಾಡುತ್ತ ಮಿಂಚಿನಂತೆ ಬಸ್ಸನ್ನು ಬಳುಕಿಸಿ ಓಡಿಸುತ್ತಿದ್ದ. ಅವನಿಗೆ ಈ ಕಾಡುಮನೆಗಳಲ್ಲಿ ಕೆಲವಾದರೂ ಪ್ರೀತಿಸುವ ಜೀವಿಗಳು ಇರಬಹುದು ಅನಿಸಿತು. ಜತೆಗೆ ಪೋರ್ಟ್ ಬ್ಲೇರಿನಲ್ಲಿ ಅವರ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದ ಅನಿಸುತ್ತದೆ. ಡ್ರೈವಿಂಗ್ ಚಕ್ರದ ಸುತ್ತಮುತ್ತ ಪೇಪರು ಹೂವು, ಮೀನು, ಹಾಲಿನ ಕ್ಯಾನು, ಅಂಗಡಿ ಸಾಮಾನು, ಮಕ್ಕಳ ಸ್ಕೂಲುಬ್ಯಾಗು, ಅಂಚೆಪತ್ರಗಳು ತುಂಬಿಹೋಗಿರುತ್ತಿದ್ದವು. ಪ್ರತಿ ಸ್ಟಾಪಿನಲ್ಲಿ ಬಸ್ಸು ನಿಂತಾಗ ಅವು ಸಂಬಂಧಪಟ್ಟವರಿಗೆ ವಿತರಣೆಯಾಗುತ್ತಿದ್ದವು. ಕೆಲವು ಮನೆಗಳವರು ಚಿಕ್ಕ ಹುಡುಗರನ್ನು ಕಳಿಸಿ ಡೆಲಿವರಿ ಪಡೆಯುತ್ತಿದ್ದರು. ಅವನು ಥೇಟ ಆಲನಹಳ್ಳಿಯವರ ಪರಸಂಗದ ಗೆಂಡೆತಿಮ್ಮನನ್ನು ನೆನಪಿಸುತ್ತಿದ್ದ. ಎಲ್ಲ ಕಂಡರೆ, ಪ್ರಯಾಣಿಕರನ್ನು ಸಾಗಿಸುವುದು ಬಹುಶಃ ಈ ಬಸ್ಸಿಗೆ ಎರಡನೇ ಪ್ರಾಮುಖ್ಯದ ಕೆಲಸವಾದಂತಿತ್ತು. ತನ್ನ ಕೆಲಸವನ್ನು ತನ್ಮಯವಾಗಿ ಮಾಡುತ್ತಿದ್ದ ಅವನು ಇಲ್ಲದೆಹೋದರೆ, ಆ ಭಾಗದ ಜನ ಲಕ್ವಾ ಹೊಡೆದಂತೆ ನಿಷ್ಕ್ರಿಯರಾಗುತ್ತಾರೇನೋ ಎಂಬಷ್ಟು ಅನಿವಾರ್ಯವಾಗಿದ್ದ. ಅವನು ಬಸ್ಸಿನಲ್ಲಿ ಕೂತು ಪಡೆಯುತ್ತಿದ್ದ, ಕೊಡುತ್ತಿದ್ದ ನಮಸ್ಕಾರಗಳಿಗೆ ಲೆಕ್ಕವಿರಲಿಲ್ಲ. ಡ್ರೈವರನ ಜನಪ್ರಿಯತೆ ಕಂಡು ಯಾರಿಗಾದರೂ ಅಸೂಯೆ ಬರಬೇಕು. ನಮಗಂತೂ ಬಂತು.

ಹಲಧರ್

ನಾವು ದಿಗ್ಲಿಪುರದ ಬಸ್‌ಸ್ಟ್ಯಾಂಡಿನಲ್ಲಿ ಕಾಳಿಘಾಟಿನ ಬಸ್ಸಿಗಾಗಿ, ಕಾಯುವುದಕ್ಕೆ ಮಿತಿಯೇ ಇಲ್ಲದಂತೆ ಕಾಯುತ್ತಾ ನಮಗೆ ಹೊಸದಾದ ಬಂಗಾಳಿ ಪರಿಸರವನ್ನು ನೋಡುತ್ತಾ ನಿಂತಿರುವಾಗ, ಊರಿಗೆ ಹೊಸಬರಾದ ನಮ್ಮನ್ನು ಅನೇಕರು ಮಿಕಿ ಮಿಕಿ ನೋಡುತ್ತಿದ್ದರು. ಒಬ್ಬ ಮುದುಕ ಬಾನು ಹಾಗೂ ಅರುಣ ಅವರ ಕಡೆ ಸುಮ್ಮನೆ ನೋಡುತ್ತಿದ್ದ. ಅವರು ಅವನನ್ನು ಕಂಡು ಮುಗುಳುನಗೆ ನಕ್ಕರೋ ಇಲ್ಲವೋ, ಹತ್ತಿರ ಬಂದು ಬಂಗಾಳಿ ಬೆರೆಸಿದ ಹಿಂದಿಯಲ್ಲಿ ಏನೇನೋ ಕೇಳಲಾರಂಭಿಸಿದ. ನಾವೂ ಹತ್ತಿರ ಹೋದೆವು.

ಅವನ ಪ್ರಶ್ನೆ : ನಿಮಗೆ ಮಕ್ಕಳು ಇಲ್ಲವೇ?

ಅರುಣ-ಬಾನು : ಇದ್ದಾರೆ.

ಆತ : ಎಷ್ಟು ?

ಅರುಣ: ನನಗೆ ಒಂದು ; ಇವರಿಗೆ ಎರಡು.

ಆತ : ಅವರನ್ನು ಯಾಕೆ ಬಿಟ್ಟು ಬಂದಿರಿ?

ಬಾನು: ದೂರದ ಪ್ರಯಾಣ. ಹೊಸ ಜಾಗ. ಕಷ್ಟವಾಗಬಹುದು ಅಂತ ಮನೆಯಲ್ಲೇ ಬಿಟ್ಟು ಬಂದಿವಿ.

ಆತ : ಈಗ ಕಷ್ಟ ಅನಿಸಿತೆ?

ಅರುಣ-ಬಾನು: ಇಲ್ಲ.

ಆತ : ಹಾಗಾದರೆ ನೀವು ಬಿಟ್ಟು ಬಂದಿದ್ದು ತಪ್ಪು ತಾನೆ? ಮಕ್ಕಳನ್ನು ಬಿಟ್ಟು ಈ ಗಂಡಂದಿರನ್ನು ಕಟ್ಟಿಕೊಂಡು ಯಾಕೆ ಬಂದಿರಿ? ಇವರು ನಿಮ್ಮನ್ನು ಬಿಟ್ಟು ಅಲ್ಲಿ ಇಲ್ಲಿ ತಿರುಗುತ್ತಾರೆ, ಮಕ್ಕಳನ್ನು ಯಾರು ತಿರುಗಿಸುತ್ತಾರೆ .... ನಿಮಗೆ ಕ್ಷಮೆಯೇ ಇಲ್ಲ.



ಪಾನಿಘಾಟಿನಲ್ಲಿ ಆಂಧ್ರದ ಬೆಸ್ತರ ಹೆಂಗಸು

ಅರುಣ: ನಿಮಗೆ ಮೊಮ್ಮಕ್ಕಳಿದ್ದಾರಾ? ಇದ್ದರೆ ಅವರನ್ನೇಕೆ ನೀವು ಬಿಟ್ಟು ಬಂದಿರಿ?

ಆತ : ನಾನು ಬಿಟ್ಟು ಬರುವವನೇ? ಅವರೆಲ್ಲ ರಜೆಗಾಗಿ ಬಂಗಾಳಕ್ಕೆ ಹೋಗಿದ್ದಾರೆ.

-ಹೀಗೆ ಬೇಜವಾಬ್ದಾರಿ ತಂದೆ ತಾಯಿಯರ ವಿರುದ್ಧವಾಗಿಯೂ, ಅನ್ಯಾಯಕ್ಕೆ ಒಳಗಾಗುವ ಮಕ್ಕಳ ಪರವಾಗಿಯೂ ಮಾತುಕತೆ ನಡೆಯಿತು. ಗುರುತು ಪರಿಚಯ ಇಲ್ಲದ ಊರಿನಲ್ಲಿ ನಮ್ಮನ್ನು ಕೇಳುವವನೊಬ್ಬ ಇದ್ದಾನಲ್ಲಾ. ಅದರಲ್ಲೂ ಮನೆಯಲ್ಲಿ ಅತ್ತೆ ಮಾವರ ಕಾಟ ಇಲ್ಲದೆ ಸೊಕ್ಕಿರುವ ಇವರಿಗೆ ಸರಿಯಾದ ಮಾವ ಸಿಕ್ಕ ಎಂದು ನಮಗೆ ಸಂತೋಷವಾಯಿತು. ನಾವು ಅವನ ಜೊತೆ ಸೇರಿಕೊಂಡು ''ನಾವು ಮಕ್ಕಳನ್ನು ಕರೆದುಕೊಂಡು ಬರಬೇಕು ಅಂತಲೇ ಇದ್ದೆವು. ಇವರೇ ಬೇಡ ಅಂದವರು'' ಎಂದು ಚಾಡಿ ಹೇಳಿದೆವು. ''ನೋಡಿದಿರಾ, ನೀವು ಮಾಡಿದ್ದು ಸರಿಯಲ್ಲ'' ಎನ್ನುತ್ತ ಬಾಯಿ ತುಂಬ ತುಂಬಿಕೊಂಡಿದ್ದ ತಾಂಬೂಲರಸ ತುಳುಕಾಡಿ ಅಂಗಿ ಮೇಲೆಲ್ಲಾ ಚೆಲ್ಲಾಡುವಂತೆ ನಕ್ಕ. ''ನೀವು ಪಾನ್ ಬೀಡಾ ತಿನ್ನುತ್ತೀರಾ? ಇಲ್ಲವಾ? ಹೇ, ಮದುವೆಯಾದವರು ತಿನ್ನಲೇಬೇಕು'' ಎಂದು ಓಡಿ ಹೋಗಿ, ನಮಗೆಲ್ಲಾ ಬೀಡಾ ತಂದುಕೊಟ್ಟ. ಸಿಗರೇಟ್ ಸೇದುತ್ತಿದ್ದ ಜಯ್‌ಗೆ ಅದು ಒಳ್ಳೆಯದಲ್ಲ ಎಂದು ಬೈದು, ನಾಟಿ ಬೀಡಿ ಕೊಟ್ಟು ಸೇದಿಸಿದ. ಅವನ ಹೆಸರು ಹಲಧರ್. ಕಾಳಿಘಾಟಿನ ಮುಂದೆ ಇರುವ ರಾಂಪುರ ಎಂಬ ಊರಿನ ಸಣ್ಣ ರೈತ ಅವನು. ಕೊಂಚ ಅತಿಯೆನಿಸುವಂತೆ ಮಾತನಾಡುತ್ತಿದ್ದ ಎನ್ನುವುದನ್ನು ಬಿಟ್ಟರೆ, ಬಹಳ ದಿಲ್‌ದಾರ್ ಮನುಷ್ಯ. ಬಸ್ಸು ಬರುವ ತನಕ ಅದೂ ಇದೂ ಗಳಹುತ್ತಿದ್ದ ಅವನ ಮಗುವಿನಂತಹ ಮನಸ್ಸು, ಹೊಸಬರೊಂದಿಗೆ ಸಂಕೋಚವಿಲ್ಲದೆ ಮೇಲೆ ಬಿದ್ದು ಬೆರೆಯುವ ಗುಣ, ನನಗಂತೂ ಸತ್ತ ಅಪ್ಪನ ನೆನಪೇ ಬಂದಿತು. '' ಇರುವುದೊಂದೇ'' ಬಸ್ಸು ಬಂದಿತು. ಅಲ್ಲಿದ್ದವರು ಮೂರು ಬಸ್ಸು ಜನ. ಹಲಧರ್ ಯೋಧನಂತೆ ಕಿಟಕಿಯಿಂದ ನುಗ್ಗಿ ತನ್ನ ಶಾಲು ಹಾಸಿ ನಮಗೆಲ್ಲ ಸೀಟು ಹಿಡಿದುಕೊಟ್ಟ; ಜೀವನದಲ್ಲಿ ನಾವು ಮತ್ತೆಂದೂ ಭೇಟಿಯಾಗುವುದಿಲ್ಲ ಎಂದು ಗೊತ್ತಿದ್ದರೂ, ಮನುಷ್ಯರು ತೋರುವ ನಿರ್ವ್ಯಾಜ ಚೂರು ಪ್ರೀತಿಯನ್ನು ಏನೆಂದು ತಿಳಿಯಬೇಕೋ ಗೊತ್ತಿಲ್ಲ, ನಾವಂತೂ ಅನುಭವಿಸಿದೆವು. ಅದರ ಪಸೆಯನ್ನು ಹೃದಯದೊಳಗಿಟ್ಟುಕೊಂಡು ತಂದೆವು. ದಿಗ್ಲಿಪುರದ ನದಿ ಕಾಲ್ಪಾಂಗ್ ನೋಡಲು ಬಂದ ನಮಗೆ, ಅದರ ಬತ್ತುರೂಪ ಕಂಡು ನಿರಾಶೆಯಾಗಿತ್ತು. ಆದರೆ ಹಲಧರನಂತಹ ಎಷ್ಟೋ ಜನರು, ಮಾನವ ಹೃದಯದೊಳಗೆ ಅನಂತಕಾಲದಿಂದ ಹರಿಯುತ್ತಿರುವ ಪ್ರೀತಿಯ ಜಲಧಾರೆಯಲ್ಲಿ ಮೀಯಿಸಿ, 'ಅದು ಎಂದಿಗೂ ಬತ್ತದ ನದಿ' ಎಂದು ಮನಗಾಣಿಸಿದರು.

ಸೆವೆಂತ್ ಅಡ್ವೆಂಟಿಸ್ಟ್ ಪಾದ್ರಿ

ಇಡೀ ಅಂಡಮಾನಿನಲ್ಲಿ ನಾವು ಕಂಡ ಆತ್ಮ ವಿಶ್ವಾಸ ಕಳಕೊಂಡಂತಿರುವ ಸಮುದಾಯಗಳಲ್ಲಿ ಕೆರೈನರದೂ ಒಂದು. ಇವರು ಮೂಲತಃ ಬರ್ಮಾದ ಬೆಸ್ತ ಬುಡಕಟ್ಟಿನವರು. ಮಂಗೋಲಿಯನ್ ಜನಾಂಗದವರಿಗೆ ಇರುವಂತೆ ಸಣ್ಣಕಣ್ಣು ಉಬ್ಬಿದ ಕೆನ್ನೆ, ಅರಿಶಿಣದ ಬಣ್ಣ. ಮುಗ್ಧರಾದ ಕೆರೈನರು ಮಹಾ ಶ್ರಮಜೀವಿಗಳು. ಅವರ ಮುಖ ನೋಡಿದರೆ, ಅದು ಒಂದು ಬಗೆಯ ಅಮಾಯಕತೆಯಲ್ಲಿ ಮೂಡಿದಂತೆ ಕಾಣುತ್ತದೆ. ಇವರನ್ನು ಬ್ರಿಟಿಷರು ತಮ್ಮ ವಸಾಹತುವೇ ಆಗಿದ್ದ ಬರ್ಮಾದಿಂದ ೧೯೨೫ರ ಸುಮಾರಿಗೆ ಬೇರೆ ಬೇರೆ ಊಳಿಗದ ಕೆಲಸಗಳಿಗಾಗಿ ತಂದು ನೆಲೆಗೊಳಿಸಿದರು ಎನ್ನಲಾಗುತ್ತದೆ. ಬರ್ಮಾದಲ್ಲಿ ತಮಗೆ ತೊಂದರೆ ಕೊಡುತ್ತಿದ್ದ ಬಂಡುಕೋರರನ್ನು ಅಥವಾ ಕೈದಿಗಳನ್ನು ಬ್ರಿಟಿಷರು ಆಸ್ಟ್ರೇಲಿಯಾ ದ್ವೀಪಗಳಿಗೆ ತಂದು ಒಗೆದಂತೆ, ಇವರನ್ನೂ ಒಗೆದ ಹಾಗೇ ಕಾಣುತ್ತದೆ. ಅವರಿಗೆ ಸರಕಾರ ವಾಸಿಸಲು ಕ್ಯಾಂಪುಗಳನ್ನು ನಿರ್ಮಿಸಿಕೊಟ್ಟಿದೆ ; ಶಾಲೆ ರಸ್ತೆ ಮುಂತಾದ ಅನುಕೂಲಗಳನ್ನು ಮಾಡಿಕೊಟ್ಟಿದೆ, ನಿಜ. ಆದರೆ ಯಾಕೋ ಏನೋ ಕೆರೈನರನ್ನು ನೋಡಿದರೆ, ಅವರು ಅಂಡಮಾನಿನಲ್ಲಿ ಅಧಿಕಾರ ಭಾವದಿಂದ ನೆಲೆಸಿರುವಂತೆ ತೋರಲಿಲ್ಲ. ಬ್ರಿಟಿಷರು ಜನರನ್ನು ಅವರ ತಾಯಿನಾಡುಗಳಿಂದ ಕಿತ್ತು ಬೇರೆ ಬೇರೆ ಕಡೆ ನೆಲೆಸುವಂತೆ ಮಾಡಿದರು. ಜನ ವ್ಯಾಪಾರಿಗಳಾಗಿ ಹೋದ ಕಡೆ ಅಷ್ಟೊಂದು ಐಡೆಂಟಿಟಿ ಸಮಸ್ಯೆ ಬಂದಂತಿಲ್ಲ. ಉದಾ : ದಕ್ಷಿಣ ಆಫ್ರಿಕಾ. ಆದರೆ ಕೂಲಿಕಾರ ವರ್ಗವಾಗಿ ಹೋದ ಕಡೆಯಲ್ಲೆಲ್ಲ ಅಭದ್ರತೆಯಿಂದ ಆ ಸಮುದಾಯಗಳು ಬಿಡುಗಡೆಯಾಗಲೇ ಇಲ್ಲ. ಉದಾ: ಫಿಜಿ ದ್ವೀಪದಲ್ಲಿ. ಆದರೆ ಮಾರಿಶಸ್‌ನಲ್ಲಿ ಪರಿಸ್ಥಿತಿ ಬೇರೆ ಇರಬಹುದು. ಕೆರೈನರಲ್ಲಿಯಂತೂ ಬೇರು ಕಳೆದುಕೊಂಡ ಗಿಡಗಳಂತೆ,

ಯಾರದೋ ಮುಲಾಜಿನಲ್ಲಿ ಬದುಕುವವರಲ್ಲ. ಇರುವಂತಹ ಅಳುಕು ಆವರಿಸಿರುವುದು ಸತ್ಯ. ಅವರ ಕ್ಯಾಂಪುಗಳಿಗೆ ಕೈದಿಗಳಿಗೆ ಕೊಟ್ಟಂತೆ ನಂಬರುಗಳನ್ನು ಕೊಟ್ಟಿರುವ ಸಂಸ್ಕೃತಿಹೀನ ನಾಮಕರಣವಂತೂ ನಮಗೆ ಇಷ್ಟವಾಗಲಿಲ್ಲ.

ನಾವು ಮಾಯಾಬಂದರಿನಲ್ಲಿ ಇರುವಾಗ ಕರ್ಮಟಾಂಗ್ ಎಂಬ ಕಡಲ ಕಿನಾರೆಗೆ ಹೋಗಬೇಕಾಗಿತ್ತು. ಅದು ಅಂಡಮಾನಿನ ಅಪೂರ್ವ ಆಮೆಗಳು ಸಂತಾನೋತ್ಪತ್ತಿ ಮಾಡುವ ಜಾಗ ಕೂಡ. ಅಲ್ಲಿಗೆ ಹೋದಾಗ ಇವರ ಕ್ಯಾಂಪಿಗೂ ಹೋದೆವು. ಬಸ್ಸಿನ ತುಂಬ ಮಂಗೋಲಿಯನ್ ಮುಖಲಕ್ಷಣದ ಮುದ್ದು ಹುಡುಗರು ತುಂಬಿಕೊಂಡಿದ್ದರು. ಕೆರೈನ್ ಭಾಷೆ ಕೇಳಲು ಚೀನಿ ಭಾಷೆಯಂತೆಯೇ ಚಿಂಗ್ ಚಾಂಗ್ ಎಂದು ಸಂಗೀತಮಯವಾಗಿದೆ. ನಾವು ಅಲ್ಲಿಗೆ ಹೋದಾಗ ಒಬ್ಬ ಕೆರೈನ್ ತರುಣ ಎದುರಿಗೆ ಸಿಕ್ಕ. ಅವನು ಗಾಳ ಬಲೆ ಕೈಲಿ ಹಿಡಿದು ಕಡಲಿಗೆ ಹೋಗುತ್ತಿದ್ದ. ಅರುಣ ಜಾನು ಅವನನ್ನು ತಡವಿಕೊಂಡು ''ಏ ಕ್ಯಾ ಹೈ? ಇಸ್ಮೆ ಮಚ್ಚಿ ಕೈಸಾ ಮಿಲತಾ ಹೈ?'' ಎಂದು ವಿಚಾರಣೆ ಸುರುಮಾಡಿದರು. ಅವನಿಗೆ ಹಿಂದಿ ಸರಿಯಾಗಿ ಬಾರದು. ಜತೆಗೆ ಸೊಂಟಕ್ಕೆ ಒಂದು ನಿಕ್ಕರು ಬಿಟ್ಟರೆ ಬರಿ ಮೈಯಲ್ಲಿದ್ದ ಆ ಸುಂದರ ತರುಣ, ಈ ಹೆಂಗಸರ ಎದುರು ನಿಂತು ಹೆಚ್ಚು ಮಾತಾಡಲು ಸಂಕೋಚ ಪಟ್ಟಂತಿದ್ದ. ಅವನು ಏನು ಹೇಳಿದನೋ ಇವರೇನು ಕೇಳಿಸಿಕೊಂಡರೋ, ಅಂತೂ ಅವನು ಒಮ್ಮೆ ಬಿಡುಗಡೆಯಾದ. ಅವನ ನಿಟ್ಟುಸಿರು ಅಲೆಗಳ ಘೋಷದಲ್ಲಿ ನಮಗೆ ಕೇಳಿರಲಿಕ್ಕಿಲ್ಲ.

ಕೆರೈನರು ಬೌದ್ಧಧರ್ಮೀಯರು. ಅದರ ಸ್ವರೂಪ ಯಾವ ರೀತಿಯದು ಎಂದು ಅರಿಯಲು ನಮಗೆ ಅವಕಾಶ ಸಿಗಲಿಲ್ಲ. ಕೆರೈನರ ಬಗ್ಗೆ ಹೆಚ್ಚು ತಿಳಿಯಲು ನಮಗೆ ಸಾಧ್ಯವಾಗಿದ್ದು ಒಬ್ಬ ತರುಣ ಧರ್ಮ ಪ್ರಚಾರಕನಿಂದ. ೨೦ ವರ್ಷದ ಈತ ನನಗೆ ಬಸ್ಸಿನಲ್ಲಿ ಪರಿಚಯವಾದ. ಈತ ವಾಸ್ತವವಾಗಿ ಕಾಲೇಜು ಕಲಿಯುತ್ತಿರುವ ಒಬ್ಬ ವಿದ್ಯಾರ್ಥಿ. ಸೆವೆಂತ್ ಡೇ ಅಡ್ವೆಂಟಿಸ್ಟ್ ಎಂಬ ಚರ್ಚು, ಬೇಸಿಗೆ ರಜೆಯಲ್ಲಿ ಧರ್ಮಪ್ರಚಾರ ಮಾಡಲು ಮುಂಬೈಯಿಂದ ಕೆರೈನರ ವಸತಿಗೆ ಇವನನ್ನು ಕಳಿಸಿಕೊಟ್ಟಿತ್ತು. ಅವನಿಗೆ ನಿಜವಾಗಿಯೂ ಕ್ರೈಸ್ತಮತ ಪ್ರಚಾರದಲ್ಲಿ ಹೆಚ್ಚಿನ ಆಸಕ್ತಿ ಇದ್ದಂತೆ ಕಾಣಲಿಲ್ಲ. ಹರೆಯದ ಈ ಹುಡುಗ ಮುಂಬೈ ಕಾಲೇಜು ಹುಡುಗರ ಎಲ್ಲ ಶೋಕಿಗಳನ್ನು ಹೊಂದಿದ್ದ. ಬಸ್ಸು ನಿಂತಲ್ಲೆಲ್ಲಾ ಪೆಪ್ಸಿ ಕುಡಿಯುವುದು, ಚೂಯಿಂಗಂ ಅಗಿಯುವುದು ಮಾಡುತ್ತ ಜಾಲಿಯಾಗಿದ್ದ. ತರುಣ ಪಾದ್ರಿಯ ಜರ್ಕಿನ್ ಜಾಕೆಟುಗಳು, ವೇಷಭೂಷಣಗಳು, ಕೆರೈನರಿಗೆ ಸಾಕ್ಷಾತ್ ಏಸುಕ್ರಿಸ್ತನೇ ಅವತರಿಸಿದಂತೆ ಅನಿಸಿರಬೇಕು. ೩ ತಿಂಗಳ ಕೆರೈನರ ಹಳ್ಳಿಗಳಲ್ಲಿ ಪಡೆದ ಅನುಭವಗಳು ಮಾತ್ರ, ಅವನನ್ನು ಅವರ ಅಭಿಮಾನಿಯಾಗಿ ಮಾಡಿದ್ದವು. ಈ ಅಭಿಮಾನಕ್ಕೆ ಜಿಂಕೆಮಾಂಸ ಕಾರಣವಿರಬೇಕು. ಕೆರೈನರು ಒಳ್ಳೆ ಶಿಕಾರಿಗಳು. ಜಿಂಕೆಮಾಂಸ ಎಂದರೆ ಅವರಿಗೆ ತುಂಬ ಇಷ್ಟ. ಜಿಂಕೆಮಾಂಸವಿಲ್ಲದ ಕೆರೈನ್ ಮನೆಯೇ ಇಲ್ಲವೆಂದು ತರುಣ ಪಾದ್ರಿ ಹೇಳಿದ.

ನಾನು ಕಿರಿಯ ಪಾದ್ರಿಗೆ ಕೇಳಿದೆ: ಎಷ್ಟು ಕೆರೈನರು ಕ್ರೈಸ್ತ ಮತಕ್ಕೆ ಒಲಿದರು?

ಅವನು ಹೇಳಿದ: ಅಯ್ಯೋ ಇಲ್ಲಾರಿ. ಅವರು ಧಂಡಿಯಾಗಿ ಪ್ರೀತಿ ತೋರಿಸುತ್ತಾರೆ. ಆದರೆ ಕ್ರೈಸ್ತ ಮತದ ಬಗ್ಗೆ ಮಾತ್ಡಾಡಿದರೆ ಏನೂ ಗೊತ್ತಾಗದವರಂತೆ ಇದ್ದುಬಿಡುತ್ತಾರೆ. ಅವರಿಗಿಂತ ರಾಂಚಿವಾಲಾಗಳೇ ವಾಸಿ.

ನಾನು: ಕೆರೈನ್ ಹೆಂಗಸರು ಹೇಗೆ?

ಅವನು: ಬಹಳ ಒಳ್ಳೆಯವರು. ಗಟ್ಟಿಗರು. ಅವರಷ್ಟು ಕೆಲಸ ಗಂಡಸರೇ ಮಾಡುವುದಿಲ್ಲ. ಆದರೆ ತಂಬಾಕು ಬಹಳ ಸೇದುತ್ತಾರೆ. ಇದು ಬಿಡಿಸಲಾಗದ ಚಟ. ಹೊಸ ಧರ್ಮದ ಬಗ್ಗೆ ಅವರಲ್ಲಿ ಕೆಲಸ ಮಾಡುವುದು ಕಷ್ಟ.

ರಾಂಚಿವಾಲಾಗಳು ಎಂದರೆ ಬಿಹಾರಿನಿಂದ ಬಂದ ವಲಸೆಗಾರ ಕೂಲಿಗಳು. ಅಂಡಮಾನಿನಲ್ಲಿ ಈ ಪದ, ನಾವು ತಮಿಳರನ್ನು ಕೊಂಗರು ಎಂದು ಕರೆವಂತೆ ಬೈಗುಳದ ಶಬ್ದವಾಗಿತ್ತು. ಬಿಜಾಪುರ ರಾಯಚೂರು ಕಡೆಯ ಜನ ಗೋವಾದ ವಾಸ್ಕೊದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೈನ್ಸ್ ಕೆಲಸ, ರಸ್ತೆ ಕೆಲಸ, ತೋಟದ ಕೆಲಸ ಮಾಡುವುದನ್ನು ನಾನು ಕಂಡಿದ್ದೆನೆ. ಆದರೆ ಅಂಡಮಾನಿನ ರಾಂಚಿವಾಲಾಗಳಷ್ಟು ಹತಚೇತನರನ್ನು ಕಂಡಿಲ್ಲ. ದಿಗ್ಲಿಪುರದ ಬಸ್‌ಸ್ಟ್ಯಾಂಡಿನಲ್ಲಿ ಒಬ್ಬ ಬೀಡಿ ಸೇದುತ್ತ ಕುಳಿತ ತರುಣನ ಜತೆ ಮಾತಾಡಿದೆವು. ಅವನು ಬಿಹಾರದವನು. ಅವತ್ತು ಅವನಿಗೆ ಯಾರೂ ಕೂಲಿಗೆ ಕರೆದಿರಲಿಲ್ಲ. ಬುದ್ಧ ಹುಟ್ಟಿದ ನಾಡಿನ ಜನ ಹೊಟ್ಟೆಪಾಡಿಗಾಗಿ ಕೆಲಸ ಹುಡುಕಿಕೊಂಡು ದ್ವೀಪಾಂತರಗಳನ್ನು


ದಿಗ್ಲಿಪುರ

ಅಲೆಯುತ್ತಿದ್ದರು. ಅಲ್ಲಿನ ಭೂಮಾಲಿಕರು ರಾಜಕಾರಣಿಗಳು ಸೇರಿ ನಿರ್ಮಿಸಿರುವ ನರಕದಲ್ಲಿ ಇರಲಾರದೆ ತಪ್ಪಿಸಿಕೊಂಡು ಬಂದಂತಿರುವ ಆ ತರುಣನಿಗೆ, ಈ ಪ್ರವಾಸಿಗರ ಸ್ವರ್ಗದಲ್ಲಿಯೂ ಕೂಲಿ ಸಿಕ್ಕಿರಲಿಲ್ಲ.

ವೋಕರ್

ಅಂಡಮಾನಿನಲ್ಲಿ ನಾವು ಭೇಟಿ ಮಾಡಿದ ವಿದೇಶಿ ಪ್ರವಾಸಿಗರಲ್ಲಿ ಜರ್ಮನಿಯ ವೋಕರ್ ಒಬ್ಬ. ಆತ ನಮಗೆ ರೆಡ್‌ಸ್ಕಿನ್ ದ್ವೀಪಗಳಿಗೆ ಹೋಗುವಾಗ ದೋಣಿಯಲ್ಲಿ ಪರಿಚಯವಾದವನು. ನಾವೆಲ್ಲ ವಂಡೂರಿನ ಸುಪ್ರಸಿದ್ಧ ಹವಳದ ದ್ವೀಪಗಳಿಗೆ ಹೋಗಲು ದೋಣಿ ಕಾಯುತ್ತಿದ್ದಾಗ ಈತ ''ಈ ದೇಶದಲ್ಲಿ ಅದು ಸರಿಯಿಲ್ಲ, ಇದು ಸರಿಯಿಲ್ಲ. ಪ್ರವಾಸಿಗರಿಗೆ ಗೋಳು ಹುಯ್ದುಕೊಳ್ಳುತ್ತಾರೆ'' ಎಂದು ಬಯ್ಯುತ್ತಿದ್ದ. ನಮಗೆ ನಮ್ಮ ಸರಕಾರ, ಅದರ ಅಧಿಕಾರಿಗಳ ಜಾತಕ ಗೊತ್ತಿದ್ದರೂ, ಯಾಕೋ ಏನೋ ಇವನ ಗೊಣಗಾಟದಿಂದ ಕೊಂಚ ದೇಶಾಭಿಮಾನದ ಪಿತ್ತ ಕೆರಳಿದಂತಾಯಿತು. ''ವಿದೇಶಿ ಪ್ರವಾಸಿಗರಿಗೆ ಬೇಕಾದ ಅನುಕೂಲವನ್ನು ನಾವು ಯಾಕೆ ಮಾಡಬೇಕು? ಈ ದೇಶ ನೋಡಬೇಕು ಎಂದಾದರೆ ನೀವು ಇಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಬೇಕು . ನಾವು ನಿಮ್ಮ ದೇಶಗಳಿಗೆ ಬಂದರೆ ಹೀಗೆ ಜೋರು ಮಾಡುತ್ತೇವೇನು? ಈ ದೇಶವನ್ನು ಹಾಳು ಮಾಡಿಹೋದವರು ನೀವು ಯೂರೋಪಿಯನ್ನರಲ್ಲವೇ?'' ಹೀಗೆ ನಾನು ಏಟಾರೋಪು ಹಾಕಿದೆ. ಅವನು ನನ್ನ ಕಡೆ ಸಹಾನುಭೂತಿಯಿಂದ ನೋಡುತ್ತಾ - ''ಇಂಗ್ಲೀಷರು ಆಳಿದ್ದಾರೆ. ಅವರು ಈ ನಾಡನ್ನು ಸಾಕಷ್ಟು ಕೆಡಿಸಿದ್ದಾರೆ. ನಾನು ಒಪ್ಪುತ್ತೇನೆ. ಆದರೆ ಈ ದೇಶವನ್ನು ಅವರು ಬಿಟ್ಟು ಹೋಗಿ ಕೂಡ ದಿನಗಳಾದವು. ನೀವು ಇಂಡಿಯಾದವರು [illegible] ಕೊಳ್ಳುವ ಸ್ವಭಾವದವರು. ಈ ಸರಕಾರಿ ವ್ಯವಸ್ಥೆ ಅದು ನಾಗರಿಕರಿಗೆ ಜವಾಬ್ದಾರಿಯಾಗಿ ಇರಬೇಕು ಅನ್ನುವುದು ಕಲಿಸಿಯೇ ಇಲ್ಲ'' ಎಂದ. ವಿದೇಶಿ ಟೂರಿಸ್ಟರು ಎಂದರೆ ಹುಚ್ಚರಂತೆ ವಿಚಿತ್ರ ವೇಷ ಹಾಕಿಕೊಂಡು ಭಂಗಿ ಸೇದಿಕೊಂಡು ತಿರುಗುವ ದರ್ವೇಸಿಗಳು ಎಂದು ನಮ್ಮ ಸಾಮಾನ್ಯ ಗ್ರಹಿಕೆ. ಇದಕ್ಕೆ ಕಾರಣ ನಮ್ಮ ಹಂಪಿಯ ಅನುಭವಗಳು. ವೋಕರನ ಮಾತು ಕೇಳುವಾಗ, ಈತ ಮಾದಕ ಚಟಗಳಿಗಾಗಿ ಬೀಡುಗಳನ್ನು ಹುಡುಕಿಕೊಂಡು ತಿರುಗುವ ಪ್ರವಾಸಿ ಅಲ್ಲವೆಂದು ತಿಳಿಯಿತು. ಇವನೊಂದಿಗೆ ಚರ್ಚೆ ಮಾಡಬಹುದು ಅನಿಸಿತು. ಅಲ್ಲಿಂದ ನಮ್ಮ ಅವನ ಸ್ನೇಹ ಶುರುವಾಯಿತು.

ವೋಕರ್ ಅಂಡಮಾನಿನ ಪ್ರವಾಸ ಇಲಾಖೆಯ ಮೇಲೆ ಕೋಪಿಸಿಕೊಳ್ಳುವುದಕ್ಕೆ ಕಾರಣವಿತ್ತು. ದ್ವೀಪದಿಂದ ದ್ವೀಪಕ್ಕೆ ಹೋಗಲು ಭಾರತೀಯರಿಗೆ ಏನೂ ಸಮಸ್ಯೆಯಿರಲಿಲ್ಲ. ಆದರೆ ವಿದೇಶಿಯರಿಗೆ ಪ್ರತಿಸಲ ಜಿಲ್ಲಾಧಿಕಾರಿಯಿಂದ ಅನುಮತಿ ಚೀಟಿ ಪಡೆಯಬೇಕಾಗುತ್ತಿತ್ತು. ಅನೇಕ ದ್ವೀಪಗಳಲ್ಲಿ ರಕ್ಷಣಾ ಇಲಾಖೆಯ ನೆಲೆಗಳು ಇರುವುದರಿಂದ ಹಾಗೂ ಭಾರತದ ಮೇನ್‌ಲ್ಯಾಂಡಿಗಿಂತಲೂ ಬೇರೆ ದೇಶಗಳಿಗೆ ಈ ದ್ವೀಪಗಳು ಸಮೀಪ ಇರುವುದರಿಂದ ಈ ನಿಯಮ ಮಾಡಿದ್ದರೆನಿಸುತ್ತದೆ. ಈ ನಿಯಮಗಳಿಂದ ವೋಕರ್ ಕಚೇರಿಗಳನ್ನು ಅಲೆದಲೆದು ಸುಸ್ತಾಗಿದ್ದ. ಬೇಸರ ಅವನನ್ನು ಹಾಗೆ ಮಾತಾಡಿಸಿತ್ತು.

ವೋಕರ್ ಜರ್ಮನಿಯ ಒಬ್ಬ ಹವ್ಯಾಸಿ ಕಲಾವಿದನಾಗಿದ್ದ. ಎರಡು ವರ್ಷ ದುಡಿಯುವುದು, ಹಣ ಉಳಿಸಿ ೩ ತಿಂಗಳು ಜಗತ್ತಿನ ಯಾವುದಾದರೂ ಒಂದು ದೇಶ ತಿರುಗುವುದು ಅವನ ಅಭ್ಯಾಸ. ವೋಕರ್ ಈಜಿಪ್ಟ್, ತುರ್ಕಿ, ಇರಾನ್, ಶ್ರೀಲಂಕಾ, ಚೀನಾ ಹೀಗೆ ಏಶಿಯಾದ ಅನೇಕ ದೇಶಗಳನ್ನು ಸುತ್ತುಹಾಕಿದ್ದ. ಅವನ ಪ್ರಕಾರ ಇಸ್ಲಾಮಿಕ್ ದೇಶಗಳಲ್ಲಿ ಪ್ರವಾಸ ಮಾಡುವುದು ತುಂಬಾ ಕಷ್ಟ. ಅದರಲ್ಲೂ ಅಲ್ಲಿನ ಮೂಲಭೂತವಾದಿಗಳು ವಿದೇಶಿಯರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಹೇಳಬರುವುದಿಲ್ಲ. ಅಲ್ಲಿ ಇಸ್ಲಾಮಿನ ಏಕದೇವತಾವಾದ ಬೇರೆ ಧರ್ಮಗಳನ್ನು ಸಹಿಸದ ಮಟ್ಟಕ್ಕೆ ತಲುಪಿರುವುದರ ಬಗ್ಗೆ ಕಳವಳವಿತ್ತು. ಭಾರತದಲ್ಲಿ ಹೇಗೆ ಎಂದು ಕೇಳಲು, ನಾನಿನ್ನೂ ತಿಳಿದುಕೊಳ್ಳಬೇಕಾಗಿದೆ ಎಂದ. ಅವನ ಪ್ರಿಯವಾದ ದೇಶವೆಂದರೆ ಶ್ರೀಲಂಕಾ. ಅವನು ಬೌದ್ಧ ಧರ್ಮದ ಅಭಿಮಾನಿಯಾಗಿದ್ದ. ಸಿಲೋನಿನಲ್ಲಿ ಅನೇಕ ತಿಂಗಳ ಕಾಲ ಬೌದ್ಧ ಸನ್ಯಾಸಿಗಳ ಜತೆ ಧ್ಯಾನವನ್ನು ಅಭ್ಯಾಸಗೈದಿದ್ದ. ಬೌದ್ಧದೀಕ್ಷೆ ತೆಗೆದುಕೊಳ್ಳುವ ಉದ್ದೇಶವೂ ಅವನಿಗಿತ್ತು.

ರೆಡ್‌ಸ್ಕಿನ್ ನಡುಗಡ್ಡೆ ಹತ್ತಿರ ಬರುತ್ತಿದ್ದಂತೆ, ವೋಕರ್ ನಿರಾಳವಾಗಿ ದೋಣಿಯಲ್ಲೇ [illegible] ಬಿಚ್ಚಿ, ಮಡಚಿ ಬ್ಯಾಗಿನಲ್ಲಿಟ್ಟ. ಅವನ ಬೊಜ್ಜಿಲ್ಲದ ಕೆಂಪನೆಯ ನೀಳದೇಹವನ್ನು ಕಂಡು ದೋಣಿಯಲ್ಲಿದ್ದವರು ಮುಜುಗರದಿಂದಲೇ ಇಷ್ಟಪಟ್ಟು ನೋಡಿದರು. ಅವನ ಸಾಹಸಗುಣ ಎಲ್ಲರಿಗೆ ಬೆರಗು ಮೂಡಿಸಿತು. ಬ್ಯಾಗಿನಿಂದ ಈಜುಡಿಗೆಯನ್ನು ತೆಗೆದು ಹಾಕಿಕೊಂಡ. ಜಲಪಾದಗಳನ್ನು ಕಟ್ಟಿಕೊಂಡ. ಅವನ ಹೊಸ ವೇಷ ದೋಣಿಯಲ್ಲಿದ್ದ ಮಕ್ಕಳಿಗೆ ನಾಟಕೀಯವಾಗಿ ಕಂಡಿತು. ದೋಣಿ ಚಲಿಸುತ್ತಿರುವಾಗಲೇ ನೀರಿಗೆ ಹಾರಲು ಸಿದ್ಧನಾದ ಅವನಿಗೆ ''ಅಪರಿಚಿತವಾದ ನೀರಿನಲ್ಲಿ ಹಾರಲು [illegible]

ದಿಲ್ಲವೇ?'' ಎಂದು ಕೇಳಿದಾಗ ಇದೊಂದು ಮಕ್ಕಳಾಟ ಎಂದು ನಕ್ಕ. ಅವನು ಜಗತ್ತಿನ ಅನೇಕ ಹವಳ ದ್ವೀಪಗಳನ್ನು ಕಂಡವನು. ನೂರಾರು ಮೈಲಿ ಉದ್ದವಿರುವ ಆಸ್ಟ್ರೇಲಿಯಾದ ಸುಪ್ರಸಿದ್ಧ ಹವಳಕೊಲ್ಲಿಗಳಲ್ಲಿ ಡೈವಿಂಗ ಮಾಡಿದವ. ಧಡಂ ಎಂದು ಅವನು ನೀರಿಗೆ ಹಾರಿ, ಮುಳುಗಿ ನಮಗಿಂತ ಮೊದಲೇ ಹವಳದ ಪ್ರಾಣಿಗಳನ್ನು ನೋಡಲು ಆರಂಭಿಸಿದ.

ಇರುಳಿಗರ ತಾತ

ನಾವು ವಿಶಾಖಪಟ್ಟಣಕ್ಕೆ ಮರಳಿ ಬರುವಾಗ ಹರ್ಷವರ್ಧನ [illegible] ಶಿಪ್ಪಿಂಗ್ ಕಾರ್ಪೊರೇಶನ್ನಿನ ಹಡಗಿನಲ್ಲಿ ಬಂದೆವು. ಹಡಗಿನಲ್ಲಿ ನಮ್ಮನ್ನು ಊಟಕ್ಕೆ ಕರೆಯಲು ಬರುತ್ತಿದ್ದ ಒಬ್ಬ ಮುದುಕ, ಯಾಕೋ ಏನೋ ಮನಸ್ಸಿನಲ್ಲಿ ಉಳಿದುಬಿಟ್ಟಿದ್ದಾನೆ. ಹಾಗೆ ಕಂಡರೆ, ಹಡಗಿನ ಕ್ಯಾಬಿನ್ ರೂಮುಗಳಿಗೆ ''ಊಟ ತಯಾರಾಗಿದೆ. ದಯವಿಟ್ಟು ಡೈನಿಂಗ್ ಹಾಲಿಗೆ ಬರಬೇಕು'' ಎಂಬ ಕರೆ ಸ್ಪೀಕರುಗಳಲ್ಲಿ ಬರುತ್ತಿತ್ತು. ಆದರೆ ಹಡಗಿನ ಓಲಾಟಕ್ಕೆ ತಲೆಸುತ್ತು ಬಂದು ಬಹಳ ಜನ ಮಲಗಿಬಿಟ್ಟಿರುತ್ತಿದ್ದರು. ಅಂತಹವರನ್ನು ಎಬ್ಬಿಸಿ ಕರೆದುಕೊಂಡುಹೋಗುವುದು ಈ ಮುದುಕನ ಕೆಲಸ. ನಾವು ಪ್ರೀತಿಯಿಂದ ಇವನಿಗೆ ತಾತಾ ಎಂದು ಹೆಸರಿಟ್ಟಿದ್ದೆವು. ನಾವು ಏನಾದರೂ ಕೇಳಿದರೆ, ತಾತಾ ಅದ್ಯಾವುದೋ ಭಾಷೆಯಲ್ಲಿ ಜವಾಬು ಕೊಡುತ್ತಿತ್ತು. ''ಇವತ್ತು ಊಟ ಬೇಡ'' ಎಂದರೆ, ''ಹಾಗನ್ನಬಾರದು. ಎಷ್ಟು ಸೇರುತ್ತೋ ಅಷ್ಟು ತಿನ್ನುವಿರಂತೆ ಬನ್ನಿ'' ಎಂದು ಸನ್ನೆ ಮಾಡಿ ಎಬ್ಬಿಸಿಕೊಂಡು ಹೋಗುತ್ತಿತ್ತು. ನಮ್ಮನ್ನು ಚಿಕ್ಕ ಮಕ್ಕಳಂತೆ ಅದು ನೋಡಿ ಕೊಳ್ಳುತ್ತಿತ್ತು. ನೀರು ತಂದು ಇಡುವುದು, ಬೆಡ್‌ಶೀಟು ಬದಲಿಸು ವುದು, ಬಟ್ಟೆ ಇಸ್ತ್ರಿಮಾಡಿ ತರುವುದು ಇತ್ಯಾದಿ ರೂಮ್ ಬಾಯ್ ಕೆಲಸಗಳನ್ನು ಕೂಡ ತಾತ ಮಾಡುತ್ತಿತ್ತು. ತಾತನ ಮೌನ ನಿಗೂಢ ವಾಗಿತ್ತು. ಈ ಬಗ್ಗೆ ಡೈನಿಂಗ್ ಹಾಲಿನಲ್ಲಿ ನಮ್ಮ ಟೇಬಲಿಗೆ ಊಟ ಬಡಿಸುವ ವೇಟರನಲ್ಲಿ ವಿಚಾರಿಸಿದಾಗ, ಅವನು ತಾತ್ಸಾರದಿಂದ ''ಅವನೊಬ್ಬ ಇರುಳಿಗ. ಅವನಿಗೆ ಹಿಂದಿ ಇಂಗ್ಲೀಷು ಯಾವುದೂ ಬರುವುದಿಲ್ಲ. ಹೇಗೆ ಕಲಸ ಕೊಟ್ಟರೋ ಗೊತ್ತಿಲ್ಲ'' ಎಂದು ನುಡಿದ. ಇಂಗ್ಲೀಷು ಭಾಷೆ - ಸಂಸ್ಕೃತಿಗಳ ನಾಟಕೀಯ ಅನು ಕರಣೆ ಏನಾದರೂ ಈ ದೇಶದಲ್ಲಿ ಉಳಿದುಕೊಂಡಿರುವ ಜಾಗ ಗಳಿದ್ದರೆ, ಅವುಗಳಲ್ಲಿ ಹಡಗುಗಳದ್ದೂ ಒಂದು. ಇಲ್ಲಿನ ವೈಟರು ಗಳು ಯಾವುದೋ ಯೂರೋಪಿನ ಕ್ಲಬ್ಬುಗಳಲ್ಲಿರುವ ಗತ್ತಿನಲ್ಲಿ, ಟೈ ಕಟ್ಟಿಕೊಂಡು ಇಂಗ್ಲೀಷ್‌ನಲ್ಲಿ ಬಡಿವಾರ ಮಾಡುತ್ತಾ ಓಡಾಡುತ್ತಾರೆ. ಈ ಶಿಷ್ಟಾಚಾರವನ್ನು ಹಡಗಿನಲ್ಲಿ ಪ್ರಯತ್ನ ಪೂರ್ವಕವಾಗಿ ಉಳಿಸಿಕೊಂಡು ಬರಲಾಗಿದೆ. ಪಾಶ್ಚಿಮಾತ್ಯ ಶಿಷ್ಟಾಚಾರಗಳ ತಿಳುವಳಿಕೆ ಇಲ್ಲದವರಿಗೆ ಕ್ಯಾಬಿನ್ ಕ್ಲಾಸುಗಳಲ್ಲಿ ವಿಚಿತ್ರ ಕೀಳರಿಮೆ ಉಂಟುಮಾಡಬಲ್ಲ ವಾತಾವರಣವಿದೆ. ನಮ್ಮಂತಹವರು ಅನುಭವಿಸುವ ಅವಸ್ಥೆಯನ್ನು ಟೈಟಾನಿಕ್ ಸಿನಿಮಾದ ನಾಯಕನೂ ಅನುಭವಿಸುತ್ತಾನಷ್ಟೆ. ಆದರೆ ಅವನು ಒಬ್ಬ ಚೆಲುವೆಗಾಗಿ ಈ ಅಪಮಾನ ಅನುಭವಿಸಿದವನು !

ಇರುಳಿಗ ತಾತನ ಬಾಯಿ ಕಟ್ಟಿರುವುದು ಅವನ ಬುಡಕಟ್ಟು ಹಿನ್ನೆಲೆಯೋ ಇಂಗ್ಲೀಷು ಇಲ್ಲೆಯಾಗಿರುವುದೋ? ಇಂತಹುದೇ ಒಂದು ಅವಸ್ಥೆಯನ್ನು ಪೋರ್ಟ್ ಬ್ಲೇರಿನಲ್ಲಿ ಕೂಡ ಕಂಡೆವು. ಅಂಡಮಾನಿನ ಟೂರಿಸಂ ಇಲಾಖೆಯ ವಿಚಾರಣಾ ಕೌಂಟರಿನಲ್ಲಿ ಮಾತಾಡುವಾಗ, ಒಬ್ಬ ಮಂಗೋಲಿಯನ್ ಮುಖದ ತರುಣನು ತಡವರಿಸಿ ತಡವರಿಸಿ ಇಂಗ್ಲೀಷಿನಲ್ಲಿ ಒದ್ದಾಡುತ್ತಾ ವಿವರಣೆ ಕೊಡಲಾರಂಭಿಸಿದ, ಅವನಿಗೆ ಅದು ಸಾಧ್ಯವಾಗಲಿಲ್ಲ. ಕೊನೆಗೆ ತನ್ನ ಸಹೋದ್ಯೋಗಿಯನ್ನು ಕರೆದು ನಮಗೆ ಉತ್ತರಿಸಲು ಕೇಳಿಕೊಂಡ. ಈ ಸಹೋದ್ಯೋಗಿಯಾದವನು ಬಂದವನೇ, ಸಪ್ಲೇರುಗಳು ತಿಂಡಿಪಟ್ಟಿ ಒದರುವಂತೆ, ಪಟಪಟ ಇಂಗ್ಲೀಷಿನಲ್ಲಿ ನಮಗೆ ಬೇಕಾದ ಮಾಹಿತಿ ಕೊಟ್ಟ. ಹೋಗುವಾಗ ಕಳ್ಳ ದನಿಯಲ್ಲಿ ''ಏನೂ ತಪ್ಪು ತಿಳಿಯಬೇಡಿ. ಆತ ಒಬ್ಬ ನಿಕೋಬಾರಿ'' ಎಂದು ಹೇಳಿದ - ಅವನಿಗೆ ಏಡ್ಸ್ ಕಾಯಿಲೆಯಿದೆ ಎಂಬಂತೆ. ಇಂಗ್ಲೀಷರು ಭಾರತೀಯರನ್ನು ಅಮಾನುಷವಾಗಿ ನಡೆಸಿಕೊಂಡ ಸ್ಮಾರಕಗಳಿ ರುವ ಈ ದ್ವೀಪಗಳಲ್ಲಿ, ಇಂಗ್ಲೀಷು ಬಾರದವರಿಗೆ ಸಿಗುತ್ತಿರುವ ಮರ್ಯಾದೆ ದಂಗುಬಡಿಸಿತು. ಇಂಗ್ಲೀಷಿನಲ್ಲಿ ನಾನೂ ತಾತನೂ ಹೆಚ್ಚು ಕಡಿಮೆ ಒಂದೇ ಹಡಗಿನಲ್ಲಿ ತೇಲುವವರು. ಆದ್ದರಿಂದಲೇ, ತಾತ ಆಪ್ತನಾಗಿರಬೇಕು.


ಮೂರು ದಿನಗಳ ಹಡಗು ಪಯಣ ಮುಗಿಯುತ್ತ ಬರಲು, ನಾವು ಲಗೇಜುಗಳನ್ನು ಕಟ್ಟುವ, ದೂರದಲ್ಲಿ ಕಾಣುತ್ತಿರುವ ಭೂಮಿಯನ್ನು ನೋಡುವ, ಜತೆಗೆ ಎಷ್ಟು ಹೊತ್ತಿಗೆ ಹಡಗನ್ನು ಬಿಟ್ಟು ನೆಲಕ್ಕೆ ಇಳಿದೇವು ಎಂಬ ಗಡಿಬಿಡಿಯಲ್ಲಿ ಮುಳುಗಿದೆವು. ಎಲ್ಲ ಸಿದ್ಧವಾಗಿ ಹಡಗಿನ ತುದಿಗೆ ಬಂದು ಕಾಯುತ್ತಿರುವಾಗ, ದೂರದಲ್ಲಿ ವಿಶಾಖಪಟ್ಟಣದ ಬೆಟ್ಟಗಳು ಭರವಸೆಯಂತೆ ಕಾಣುತ್ತಿ ರುವಾಗ, ತಟ್ಟನೆ ತಾತನ ನೆನಪಾಯಿತು. ''ಛೆ! ಒಂದು ಗುಡ್ ಬೈ ಹೇಳಿ ಬರಲು ಆಗಲಿಲ್ಲವಲ್ಲ'' ಎಂದು ಮತ್ತೆ ನಾವಿದ್ದ ಕೋಣೆಗೆ ಓಡಿಹೋದೆವು. ತಾತಾ ಗಡಿಬಿಡಿಯಿಲ್ಲದೆ, ತನ್ನ ಅದೇ ಪೇಟೆಂಟ್ ಮೌನದಲ್ಲಿ ಬೆಡ್‌ಶೀಟುಗಳನ್ನು ಗಂಟುಕಟ್ಟುತ್ತ ಇತ್ತು. '' ಹೋಗಿ ಬರುತ್ತೇವೆ'' ಎಂದು ಕೈ ಕುಲುಕಿದೆವು. ಅದು ನಕ್ಕು ತಣ್ಣಗೆ ತಲೆಯ ಲ್ಲಾಡಿಸಿತು. ತಾತನ ತುಟಿಯ ಮೇಲೆ ಸುಳಿದ ಸಣ್ಣ ನಗುವಿನಲ್ಲಿ ಅಡಗಿದ್ದು ಸಂತೋಷವೋ ವ್ಯಂಗ್ಯವೋ ಅರ್ಥವಾಗಲಿಲ್ಲ.

ಡಾ|| ರಹಮತ್ ತರೀಕೆರೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬

ಯೋಗ ಪ್ರವೇಶ-೧೧

ಜಿ. ರಾಮಕೃಷ್ಣ





ಮನಸ್ಸನ್ನು ಹರಿದಾಡದಂತೆ ಸ್ವಲ್ಪಮಟ್ಟಿಗೆ ಹಿಡಿದಿಡಲು ಉಜ್ಜಾಯೀ ಹೇಗೆ ಸಹಕಾರಿ ಎಂಬುದನ್ನು ನೋಡಿದ್ದೇವೆ. ಈ ಸ್ಥಿಮಿತತೆಯನ್ನು ಬೇರೊಂದು ರೀತಿಯಲ್ಲಿ ಸಹ ಪಡೆಯಲು ಸಾಧ್ಯ (ಅಂದರೆ, ಇವೆರಡೇ ರೀತಿಗಳು ಎಂದು ಭಾವಿಸಬಾರದು). ಅದಕ್ಕೆ ಉಜ್ಜಾಯೀಯಲ್ಲಿ ಸ್ವಲ್ಪ ಮಾರ್ಪಾಟು ಬೇಕಾಗಬಹುದು, ಅಥವಾ ಅದನ್ನು ಪೂರ್ತಿಯಾಗಿ ಕೈಬಿಟ್ಟು ಅಭ್ಯಾಸದಲ್ಲಿ ತೊಡಗಬಹುದು. ಇದು ಉಸಿರಾಟಕ್ಕೆ ಮಾತ್ರವೇ ಸಂಬಂಧಿಸಿದ್ದಲ್ಲ; ಬದಲಾಗಿ, ಶರೀರದ ಅಂಗಗಳಿಗೆ ಎಷ್ಟು ಸಾಧ್ಯವೋ ಅಷ್ಟು ಶಿಥಿಲತೆ ಅಥವಾ ವಿಶ್ರಾಮ ನೀಡುವಂತಹ ಕ್ರಿಯೆ. ಇದಕ್ಕೆ ಶವಾಸನ ಎಂಬ ಹೆಸರಿದೆ. ಶವದಷ್ಟು ನಿಶ್ಚೇಷ್ಟ ಅಸ್ತಿತ್ವವಿರಬೇಕೆಂಬ ನಿರೀಕ್ಷೆಯಿಂದ ಆ ಹೆಸರು ಬಂದಿದೆ.

ಆಸನಗಳಲ್ಲಿ ಎರಡು ವಿಧ: ಕಾರ್ಯಶೀಲತೆ ಇರುವುವು ಕೆಲವು; ಕಾರ್ಯವಿಹೀನತೆ ಇರುವುವು ಮತ್ತೆ ಕೆಲವು. ಕಾರ್ಯಶೀಲತೆಯ ಆಸನಗಳಲ್ಲಿ ಸ್ಥಿತಿತ್ವವಿರಬಹುದು, ಚಲನೆಯೂ ಇರಬಹುದು. ಕಾರ್ಯವಿಹೀನತೆಯು ಬಹುಶಃ ಪೂರ್ಣವಾಗಿ ಸ್ವಸ್ಥವಾಗಿರಲು ಅಥವಾ ನಿದ್ರಿಸಲು ಉಪಯೋಗಕ್ಕೆ ಬರುವ ಆಸನಗಳಲ್ಲಿ ಇರುತ್ತದೆ. ಉಸಿರಾಟ, ರಕ್ತಚಲನೆ ಮುಂತಾದ ಅನಿವಾರ್ಯ ಸಹಜ ದೇಹಕ್ರಿಯೆಗಳಲ್ಲಿ ಸದಾ ಚಲನೆಯಲ್ಲಿರಬೇಕಾದ ಮಾಂಸಖಂಡಗಳನ್ನುಳಿದು ಮಿಕ್ಕವನ್ನು ಚಲನರಹಿತವನ್ನಾಗಿಸುವುದು ಈ ಆಸನದ ಮೂಲ ಆಶಯ. ಉಸಿರಾಟ ಮುಂತಾದ ಕ್ರಿಯೆಗಳನ್ನು ಸಹ ಸಾವಧಾನವಾಗಿ, ಏಕಪ್ರಕಾರವಾಗಿ, ಇರುವಂತೆ ಮಾಡುವುದು ಈ ಆಸನದ ಉದ್ದೇಶ. ಆಸನಗಳ ಹಿಂದಿನ ವೈಜ್ಞಾನಿಕ ಪ್ರಕ್ರಿಯೆಯನ್ನು ಮುಂದೆ ಚರ್ಚಿಸೋಣ. ಸದ್ಯಕ್ಕೆ ಶವಾಸನದ ಅಭ್ಯಾಸದತ್ತ ಗಮನ ಹರಿಸುವುದು ಉತ್ತಮ.

ಬೆನ್ನಿನ ಮೇಲೆ ಮಲಗಿ ಸ್ನಾಯುಗಳಿಗೆ ಯಥೇಚ್ಛವಾಗಿ ವಿಶ್ರಾಮ ನೀಡಲು ಆಯಾ ಅಭ್ಯಾಸಿಗೆ ಯಾವ ಹಾದಿ ಸುಲಭವೋ ಅದನ್ನು ಆಯ್ಕೆ ಮಾಡಿಕೊಳ್ಳಲು ಅಭ್ಯಂತರವಿಲ್ಲ. ತಲೆಯ ಕೆಳಗೆ ದಿಂಬನ್ನಿರಿಸಿಕೊಳ್ಳಬಾರದು, ಸಮತಟ್ಟಾದ ನೆಲದ ಮೇಲೆ ಮಲಗಬೇಕು (ನೆಲದ ಮೇಲೆ ಏನನ್ನು ಹಾಸಿಕೊಳ್ಳಬಾರದೆಂಬ ನಿಯಮವೇನೂ ಇಲ್ಲ, ಆದರೆ ಅತಿಸುಖದಿಂದ ನಿದ್ದೆ ಬರುವಂತಿರಬಾರದು) ಮತ್ತು ತಲೆಯನ್ನು ಒಂದು ಪಕ್ಕಕ್ಕೆ ವಾಲಿಸಿಕೊಳ್ಳಬೇಕು ಇಲ್ಲವೇ ನೇರವಾಗಿ ಇರಿಸಿಕೊಳ್ಳಬೇಕು. ನಾವು ಸಾಮಾನ್ಯವಾಗಿ ಮಲಗಿದಾಗ ಮಾಂಸಖಂಡಗಳು ಪೂರ್ತಿಯಾಗಿ ವಿಶ್ರಮಿಸಿಕೊಳ್ಳುತ್ತಿರುವುದಿಲ್ಲ. ಹಾಗೆ ಮಾಡಲು ಏಕಾಗ್ರತೆ ಬೇಕು. ಉಸಿರಾಟವು ಅದಕ್ಕೆ ಸಹಕಾರ ನೀಡುತ್ತದೆ. ಉಜ್ಜಾಯೀಯಲ್ಲಿ ಇದ್ದಂತೆ ಇಲ್ಲೂ ಶ್ವಾಸದ ಮೇಲೆ ಗಮನವಿರಿಸಬಹುದು. ಆದರೆ ಕಿಬ್ಬೊಟ್ಟೆಯನ್ನು ಒತ್ತಿ ಶ್ವಾಸವು ಹೊರಬರುವಂತೆ ಯತ್ನಿಸುವುದನ್ನು ಬಿಟ್ಟು ಮಾಮೂಲಿ ಉಸಿರಾಟದಲ್ಲಿ ತೊಡಗಬೇಕು. ಬೇಕಾದರೆ ಹೊಟ್ಟೆಯನ್ನು ಉಬ್ಬಿಸಿ ಅಥವಾ ತಗ್ಗಿಸಿ ಉಸಿರಾಟಕ್ಕೆ ಒಂದು ಲಯವನ್ನು ನೀಡಬಹುದು ಮತ್ತು ಅದನ್ನು ತದೇಕ ಚಿತ್ತದಿಂದ ಗಮನಿಸುತ್ತಿರಬಹುದು. ಏಕಾಗ್ರತೆಯ ಸಾಧನೆಗೆ ಇದೊಂದು ಉಪಯುಕ್ತ ಮಾರ್ಗವೆಂದು ಅಭ್ಯಾಸದಿಂದ ತಿಳಿಯುತ್ತದೆ.

ಕೈ-ಕಾಲುಗಳಲ್ಲಿ ಬಿಗಿ ಮತ್ತು ಜಡತೆ ಇರದಂತೆ ಕ್ರಮೇಣ ಎಲ್ಲವನ್ನೂ ಸಡಿಲಗೊಳಿಸಬೇಕಾದ್ದು ಶವಾಸನದಲ್ಲಿ ಅತ್ಯವಶ್ಯಕ. ಇಡಿಯಾಗಿ ಶರೀರಕ್ಕೆ ಸಡಿಲತೆ ಉಂಟಾಗದಿದ್ದರೆ ಒಂದೊಂದೇ ಭಾಗವನ್ನು ಕೇಂದ್ರೀಕರಿಸಿ (ಉದಾ: ಎಡಗೈ ಬೆರಳುಗಳಿಂದ ಭುಜದವರೆಗೆ, ಆಮೇಲೆ ಬಲಗೈ, ಆಮೇಲೆ ಕಾಲುಗಳು, ಎದೆ, ಕಿಬ್ಬೊಟ್ಟೆ, ಇತ್ಯಾದಿ) ಆಯಾ ಭಾಗದಲ್ಲಿ ಸಡಿಲತೆಯನ್ನು ಹೊಂದುತ್ತಿದ್ದೇನೆಂಬ ಭಾವನೆಗೆ ಒತ್ತುಕೊಡುತ್ತಾ ಅವನ್ನು ಶರೀರದ ಭಾಗಗಳೇ ಅಲ್ಲವೇನೋ ಎಂಬಂತೆ ಕಳೆದುಕೊಳ್ಳುತ್ತಾ ಬರಬಹುದು. ಇದು ಪ್ರಜ್ಞಾಪೂರ್ವಕವಾದ ಕ್ರಿಯೆ. ಅದಕ್ಕೆ ಒತ್ತುಕೊಡದೆ ಕೇವಲ ಆರಾಮವಾಗಿರಬೇಕೆಂಬುದಕ್ಕೆ ಒತ್ತುಕೊಟ್ಟರೆ ನಿದ್ದೆ ಮಾಡಿಬಿಡುವ ಸಂಭವವಿರುತ್ತದೆ. ನಿದ್ದೆಯು ಶವಾಸನವಲ್ಲ. ಇಲ್ಲಿ ಪ್ರಜ್ಞೆಯನ್ನು ಅತಿ ಸೀಮಿತ ವಲಯಕ್ಕೆ ಕೇಂದ್ರೀಕರಿಸುವ ಕ್ರಿಯೆ ಇದೆ. ಮಾಂಸಖಂಡಗಳಿಗೆ ವಿಶ್ರಾಮ ನೀಡುತ್ತಿರುವಾಗಲೇ ಮನಸ್ಸು ಮಸಾಲೆ ದೋಸೆಯ ಬಗ್ಗೆ ಯೋಚಿಸಬಹುದು, ಮನದನ್ನೆಯ ಬಗ್ಗೆ ಜಾಗೃತವಾಗಬಹುದು, ಮನೆಯ ವ್ಯವಹಾರಗಳಲ್ಲಿ ಮಗ್ನವಾಗಬಹುದು. ಅದೆಲ್ಲಾ ಇಲ್ಲದಂತೆ ಮಾಡುತ್ತಾ ಕ್ರಮೇಣ ಉಸಿರಾಟದತ್ತ ಪೂರ್ಣವಾಗಿ ನಿರತರಾಗುವುದು ಶವಾಸನದ ಒಂದು ಭಾಗ. ಒಂದೊಂದೇ ಸ್ನಾಯುವಿನತ್ತ ಗಮನವಿಡುತ್ತಾ ಪೂರ್ಣವಿಶ್ರಾಮ ನೀಡುವತ್ತ ಹೋದರೂ ಬಾಧಕವಿಲ್ಲ. ಎದೆ, ಹೊಟ್ಟೆ, ಕೈಕಾಲುಗಳು ಆ ಕ್ರಮದಲ್ಲಿ ಗಮನಕ್ಕೆ ಬಂದರೆ ಕ್ರಿಯೆಯು ಸ್ವಲ್ಪ ಸುಲಭವಾಗುತ್ತದೆಂದು ನಿಷ್ಣಾತರು ಹೇಳುತ್ತಾರೆ. ಆದರೆ ಅಂತಿಮವಾಗಿ ಪ್ರತಿಯೊಬ್ಬರೂ ತಮ್ಮ ಅನುಕೂಲಕ್ಕೆ ತಕ್ಕಂತೆ ಅಭ್ಯಾಸ ಮಾಡುವುದು ಹಿತ. ಕಟ್ಟಕಡೆಯದಾಗಿ ಮಿದುಳಿನತ್ತ ಕೇಂದ್ರೀಕರಣವಾಗಬೇಕೆಂಬುದರಲ್ಲಿ ಬಹುಶಃ ಭಿನ್ನಾಭಿಪ್ರಾಯವಿರಲಾರದು. ಕೆಲವರಿಗೆ ಕಣ್ಣು ಮುಚ್ಚದೆಯೇ ಇದೆಲ್ಲಾ ಸುಲಭವೆನಿಸಿದರೆ ಕಣ್ಣು ಮುಚ್ಚಬೇಕೆಂಬ ನಿರ್ಬಂಧಕ್ಕೆ ಒಳಗಾಗಬೇಕಾಗಿಲ್ಲ.

ಶವಾಸನದಲ್ಲಿ ಅತಿದೂರ ಹೋಗಿರುವ ವ್ಯಕ್ತಿಯ ಕೈಬೆರಳನ್ನೋ ಮೂಗನ್ನೋ ಕೆನ್ನೆಯನ್ನೋ ಹೊರಗಿನವರು ಮುಟ್ಟಿದರೆ ತಕ್ಷಣದಲ್ಲಿ ಅದರ ಅರಿವು ಆ ವ್ಯಕ್ತಿಗೆ ಬರುವುದಿಲ್ಲ. ಅಥವಾ ಬಂದರೆ, ಬರುತ್ತಿಲ್ಲವೇನೋ ಎಂಬಂತೆ ಅಭ್ಯಾಸವನ್ನು ಮುಂದುವರಿಸಬೇಕು. ಅತಿದೀರ್ಘವಾದ ಉಸಿರಾಟವು ಶವಾಸನಕ್ಕೆ ಅಡ್ಡಿಯೊಡ್ಡುತ್ತದೆಯಾದ್ದರಿಂದ ಅದು ಸ್ವಯಂ ಯಾವ ನಿಟ್ಟಿನಲ್ಲಿರುತ್ತದೋ ಅದೇ ನಿಟ್ಟಿನಲ್ಲಿ ಇರಿಸಬೇಕಾದ್ದು ಸ್ವಾಭಾವಿಕ. ಪ್ರಾರಂಭಕ್ಕೆ ಎರಡು ಮೂರು ನಿಮಿಷಗಳ ಅಭ್ಯಾಸವಿದ್ದರೆ ಬರುಬರುತ್ತಾ ಅದನ್ನು ಹತ್ತು ನಿಮಿಷಗಳವರೆಗೆ ವಿಸ್ತರಿಸಬಹುದು. ವ್ಯಕ್ತಿಯ ಅರಿವಿಲ್ಲದಂತೆ ಉಸಿರಾಟದಲ್ಲಿ ಯಾವುದೋ ಅಕ್ರಮ ನುಸುಳುವ ಸಾಧ್ಯತೆಯು ಕೆಲಕಾಲಾನಂತರ ಉಂಟಾಗುತ್ತದೆ. ಆಗ ಉಸಿರಾಟದಲ್ಲಿ ಒಂದು ಕ್ರಮವನ್ನು ಅನುಸರಿಸಿ ಉಚ್ಛ್ವಾಸ- ನಿಃಶ್ವಾಸಗಳು ಒಂದೇ ಕಾಲಮಿತಿಯಲ್ಲಿರುವಂತೆ ನೋಡಿಕೊಳ್ಳಬೇಕು. ಇದು ಅಲ್ಪ ಅಥವಾ ದೀರ್ಘಕಾಲದ ಪ್ರಶ್ನೆಯಲ್ಲ; ಉಸಿರಾಟದಲ್ಲಿ ಏಕತಾನವಿರಬೇಕೆಂಬುದಷ್ಟೇ ಮುಖ್ಯ. ಮುಂದಿನ ಹಂತದಲ್ಲಿ ದೀರ್ಘಶ್ವಾಸಕ್ಕೆ ಆದ್ಯತೆ ನೀಡಬಹುದು (ಅಂದರೆ, ಅಭ್ಯಾಸ ಆರಂಭಿಸಿದ ಮೂವತ್ತು-ನಲವತ್ತು ದಿನಗಳ ನಂತರ).

ಇದಿಷ್ಟನ್ನೂ ಜಾಗ್ರತೆಯಾಗಿ (ಒಂದೇ ವಾರದಲ್ಲಿ) ಸಿದ್ಧಿಸಿಕೊಳ್ಳಬೇಕೆಂಬ ತವಕ ಮೂಡಿದರೆ ಪ್ರಗತಿಗೆ ಮಾರಕವಾಗುತ್ತದೆ. ಎಲ್ಲಾ ಯಥೋಚಿತವಾಗಿ, ಸಾವಧಾನವಾಗಿ ನಡೆಯಬೇಕು. ಅವಸರ ಮಾಡಿ ಏಕಾಗ್ರತೆ ಸಾಧಿಸ ಹೊರಟರೆ ಅದು ಮರೀಚಿಕೆಯಾಗುತ್ತದೆ. ಮನಸ್ಸಿಗೆ ಏಟು ಬೀಳದಂತೆ ನಿಧಾನವಾಗಿ ಮುನ್ನಡೆಯುವುದು ಯೋಗದ ಪ್ರತಿಯೊಂದು ಕ್ರಿಯೆಯಲ್ಲೂ ಶ್ರೇಯಸ್ಕರ; ಶವಾಸನದಲ್ಲೂ ಅಷ್ಟೆ.

ಈ ರೀತಿ ಹತ್ತು ನಿಮಿಷ ಶವಾಸನ ಮಾಡಿ ನೋಡಿ; ನಿಮ್ಮ ಶರೀರ ಹಗುರವಾಗಿದ್ದು ಮನಸ್ಸು ಉಲ್ಲಾಸದಿಂದ ಇರದಿದ್ದರೆ ಅಭ್ಯಾಸದಲ್ಲಿ ಎಲ್ಲೋ ಎಡವಿದ್ದೀರೆಂದು ತಿಳಿದು ಅದನ್ನು ತಿದ್ದಿಕೊಳ್ಳುವತ್ತ ಮುನ್ನಡೆಯಿರಿ.

''ಶವಾಸನಂ ಶ್ರಾಂತಿಹರಂ ಚಿತ್ತವಿಶ್ರಾಂತಿ ಕಾರಕಮ್'' (೧.೩೨) ಎನ್ನುತ್ತದೆ ಹಠ ಪ್ರದೀಪಿಕೆ.

ಇಹ-ಪರ

ಆತ್ಮ, ದೇವರು, ಪರಲೋಕ, ಕರ್ಮ, ಅದೃಷ್ಟ ಇತ್ಯಾದಿಗಳನ್ನು ಕುರಿತು ಧಾರ್ಮಿಕ ಸಿದ್ಧಾಂತಗಳನ್ನು ಆಧ್ಯಾತ್ಮಿಕ, ಪಾರಮಾರ್ಥಿಕ ಸತ್ಯಗಳೆಂದು ನಂಬಿಸಲು ಎಲ್ಲಾ ಧರ್ಮಗಳು ಹೆಣಗುತ್ತವೆ. ಇಹಲೋಕದ ಇಂದ್ರಿಯಾನುಭವಗಳು ಕ್ಷಣಿಕವೆಂದೂ, ಪರಲೋಕವೇ ಸುಖದ ಪರಮ ಸೋಪಾನವೆಂದೂ ಪ್ರತಿಪಾದಿಸುತ್ತವೆ. ಇಹ-ಪರಗಳೆರಡರ ಪರ–ವಿರೋಧವಾಗಿ ನಮ್ಮ ದಾರ್ಶನಿಕರು ಚರ್ಚಿಸುತ್ತಲೇ ಬಂದಿದ್ದಾರೆ.

ಅವಲೋಕನ, ಪ್ರಯೋಗಗಳ ಸ್ವಾನುಭವದ ಸತ್ಯಾಸತ್ಯತೆಗಳನ್ನು ಈ ಲೋಕದಲ್ಲಿ ಖಚಿತವಾಗಿ ನಿರ್ಧರಿಸಲು ಸಾಧ್ಯವಿದ್ದಂತೆ, ಮತಧರ್ಮದ ಪರಿಕಲ್ಪನೆಗಳನ್ನು ರುಜುಪಡಿಸಲು ಸಾಧ್ಯವಿಲ್ಲ. ಬೆಳಕು ಒಂದು ಸೆಕೆಂಡಿಗೆ ೧,೮೬,೦೦೦ ಮೈಲಿ ವೇಗದಲ್ಲಿ ಚಲಿಸುತ್ತದೆ. ವೈಜ್ಞಾನಿಕ ವಿಧಾನಗಳಿಂದ ಉತ್ತಮ ಫಸಲನ್ನು ಪಡೆಯಬಹುದು. ದೇಹದಲ್ಲಿ ರಾಸಾಯನಿಕ ಕ್ರಿಯೆಗಳು ಏರು-ಪೇರಾದಾಗ ರೋಗಗಳು ಗೋಚರಿಸುತ್ತವೆ. ಅವುಗಳನ್ನು ಆಗ ವೈದ್ಯ ವಿಜ್ಞಾನದ ಮೂಲಕ ಪರಿಹರಿಸಬಹುದು, ಎಂಬ ಇಂಥ ಹಲವು ಅನುಭವಜನ್ಯ ಸತ್ಯಗಳು ಪ್ರಕೃತಿಯ ನಿಗೂಢತೆಯನ್ನು ಬಿಡಿಸುತ್ತಲೇ ಇವೆಯಾದರೂ, ಆತ್ಮವು ದೇಹ ಬಿಟ್ಟು ಪರಲೋಕ ಸೇರುತ್ತದೆ ಎಂಬುದನ್ನಾಗಲೀ, ದೇವರನ್ನು ಆರಾಧಿಸುವ ಮೂಲಕ ಒಳ್ಳೆಯ ಬೆಳೆಯೋ, ದೇಹಾರೋಗ್ಯವೋ ದೊರೆಯುತ್ತದೆಯೆಂದಾಗಲಿ ಪ್ರಮಾಣೀಕರಿಸಲು ಸಾಧ್ಯವೇ? ವ್ಯೋಮದ ಅಂತರಾಳದಲ್ಲಿ ಕೋಟಿ ಸೂರ್ಯ ಪ್ರಭೆಯ ಸೂಪರ್ ನೋವಾಗಳ ಅಸ್ತಿತ್ವವನ್ನು ವಿಜ್ಞಾನಿಗಳು ಸಾಬೀತು ಪಡಿಸಿದಂತೆ ಸ್ವರ್ಗ-ನರಕಗಳ ಅಸ್ತಿತ್ವವನ್ನು ಮಠಗಳಾಗಲೀ ಧರ್ಮಗುರುಗಳಾಗಲೀ ರುಜುವಾತು ಪಡಿಸಲು ಸಾಧ್ಯವೇ?

ಈ ಇಹ-ಪರಗಳ, ಸ್ವರ್ಗ-ನರಕಗಳ ಕಲ್ಪನೆ ಎಲ್ಲಿಂದ ಬಂತು, ಯಾಕಾಗಿ ಬಂತು? ಆತ್ಮ, ಪರಮಾತ್ಮ, ಪರಲೋಕ, ಕರ್ಮ ಇತ್ಯಾದಿ ಧರ್ಮಶ್ರದ್ಧೆಯ ಪರಿಕಲ್ಪನೆಗಳನ್ನು ಮಾನವ ಚರಿತ್ರೆಯ ಯಾವ ಘಟ್ಟದಲ್ಲಿ ಅಳವಡಿಸಲಾಯಿತು? ಇದಕ್ಕಿಂತಲೂ ಹಿಂದೆ ಇದ್ದ ಪರಿಕಲ್ಪನೆಗಳೇನು?

ಭೂಮಿ ಆವಿರ್ಭವಿಸಿ ತಂಪುಗೊಂಡು ಜೀವರಾಶಿ ಕಾಣಿಸಿಕೊಳ್ಳಲು ಕೋಟ್ಯಂತರ ವರ್ಷಗಳು ಬೇಕಾದವು ಎನ್ನುವುದು ವಿಜ್ಞಾನ ಕಂಡುಕೊಂಡ ಸತ್ಯ. ಸಸ್ಯರಾಶಿ-ಪ್ರಾಣಿವರ್ಗದ ನಂತರ ವಾನರನಿಂದ ಮಾನವ ವಿಕಾಸಗೊಂಡ ಪ್ರಕ್ರಿಯೆ ಇದೀಗ ಪ್ರಮಾಣಿತ ಸತ್ಯ. ಮಿದುಳಿನಿಂದ ಆಲೋಚನೆ, ಕೈಗಳಿಂದ ದುಡಿಮೆ ಮಾಡುವುದರ ಮೂಲಕ ಮಾನವ ನಾಗರಿಕನಾದ. ಸಮಷ್ಟಿ ಜೀವನ ನಡೆಸಿದ. ಭಾಷೆ ಕಲಿತ. ಚಿಂತನೆಗೆ ಅನುವಾದ. ಪ್ರಕೃತಿಯಲ್ಲಿ ಬದಲಾಗುವ ಋತುಗಳು ಕೊಡುವ ಫಲ ಮೂಲಾದಿಗಳ, ಬಾಯಾರಿಕೆಯನ್ನು ಇಂಗಿಸುವ ನೀರು-ಮಳೆ, ಹಸಿ ಮಾಂಸದ ರುಚಿ ಹೆಚ್ಚಿಸುವ ಬೆಂಕಿ, ಶರೀರಕ್ಕೆ ಹಿತ ನೀಡುವ ಗಾಳಿ ಇತ್ಯಾದಿಗಳ ಕಾರ್ಯವೈಖರಿಗೆ ಬೆರಗಾದ. ವ್ಯಕ್ತಿಗೆ, ಸಮೂಹಕ್ಕೆ ಪೂರಕವಾದ ಇವುಗಳೇ ಮಹಾಪೂರವಾಗಿ, ಜ್ವಾಲಾಮುಖಿಯಾಗಿ, ಬಿರುಗಾಳಿಯಾಗಿ ಮಾರಕವಾದಾಗ ಇವುಗಳ ಹಿಂದೆ ಏನಿರಬಹುದೆಂದು ಚಿಂತಿಸಿದ. ಪ್ರಕೃತಿಯ ನಿರಂತರ ಸ್ವಭಾವಕ್ಕೆ ವ್ಯತಿರಿಕ್ತವಾಗಿ ಕಾಲ-ಋತುಗಳ ಅಂಕೆಗೆ ಒಳಪಡದೆ ಅನಿಶ್ಚಿತವಾಗಿ ನಡೆಯುವ ಈ ಘಟನೆಗಳ ಹಿಂದೊಂದು ಶಕ್ತಿ ಇದೆಯೆಂದು ಭಾವಿಸಿದ. ಪ್ರಕೃತಿ ವಿಜ್ಞಾನ ಬೆಳೆದಿರದ ಆ ಕಾಲದ ಆದಿಮಾನವ ಮೇಲಿಂದ ಬೀಳುವ ಮಳೆಯ ಆಚೆಗೆ ಒಂದು ಲೋಕವಿದೆಯೆಂದೂ ಭೂಮಿಯ ಒಳಗಿಂದ ಸಿಡಿಯುವ ಜ್ವಾಲಾಮುಖಿಯ ಕೆಳಗೂ ಒಂದು ಲೋಕವಿರಬೇಕೆಂಬ ತನ್ನ ಕಲ್ಪನೆಯಷ್ಟನ್ನೇ ಆಧರಿಸಿ ವಿಕೋಪಗೊಳ್ಳುವ ಬೆಂಕಿ, ಮಳೆ, ಗಾಳಿಗಳನ್ನು ಶಮನಗೊಳಿಸಲು ಹಾಡು, ನೃತ್ಯಗಳನ್ನು, ಮಂತ್ರ, ತಂತ್ರಗಳನ್ನು ರೂಪಿಸಿ ಈ ಶಕ್ತಿಗಳನ್ನು ಶಾಂತಗೊಳಿಸಲು ಸಾಧ್ಯವೆ ಎಂಬ ತರ್ಕಕ್ಕೆ ಇಳಿದ. ಈ ಕಾಲಕ್ಕೆ ನಾಗರಿಕತೆ ತನ್ನ ಮೊದಲ ಹಂತದಲ್ಲಿದ್ದು, ಉತ್ಪಾದನಾ ಸಲಕರಣೆಗಳ ಆವಿಷ್ಕಾರದಿಂದಾಗಿ ಕುಟುಂಬ ಪದ್ಧತಿ, ಆಹಾರ ಸಂಗ್ರಹಣೆ ಇತ್ಯಾದಿಗಳು ಪ್ರಾರಂಭವಾಗಿದ್ದವು. ಉತ್ಪಾದನಾ ಸಲಕರಣೆಗಳ ಒಡೆಯ ಇತರರ ದುಡಿಮೆಯನ್ನು ಬಳಸಿಕೊಂಡು ತನ್ನ ಈ ರೀತಿಯ ಚಿಂತನೆಯಲ್ಲಿ ತೊಡಗಿದ. ಆಹಾರ ಸಂಗ್ರಹಣೆಯಲ್ಲಿದ್ದ ಸಮೂಹ ಪದ್ಧತಿ ಮಾಯವಾಗಿ ಮೆಲ್ಲನೆ ವರ್ಗಗಳು ಸಮಾಜದಲ್ಲಿ ಕಾಣಿಸಿಕೊಂಡವು. ದುಡಿಯುವ ವರ್ಗ ಒಂದಾದರೆ, ದುಡಿಯದೆ ಚಿಂತನೆಯಲ್ಲಿ ಕಳೆಯುವ ಇನ್ನೊಂದು ವರ್ಗ ಪರಲೋಕದ ಕಲ್ಪನೆಯನ್ನು ಶೋಷಣೆಗೆ ಬಳಸಿಕೊಂಡಿತು. ಸ್ವರ್ಗ-ನರಕಗಳೆನ್ನು ವೈಭವೀಕರಿಸುವುದರ ಮೂಲಕ ಪುನರ್ಜನ್ಮ ಹಾಗೂ ಕರ್ಮಸಿದ್ಧಾಂತಗಳನ್ನು ಧರ್ಮಶ್ರದ್ಧೆಯಲ್ಲಿ ಅಳವಡಿಸಿ, ಅದಕ್ಕೆ ಬೇಕಾದ ಮತಧರ್ಮ, ಧರ್ಮಪೀಠ ಇತ್ಯಾದಿಗಳನ್ನು ಆಳುವ ವರ್ಗ ರೂಪಿಸಿತು. ವಿಜ್ಞಾನವು ಧರ್ಮದ ಪರಿಕಲ್ಪನೆಗಳನ್ನು, ಮೂಢನಂಬಿಕೆಗಳನ್ನು ಒಂದೊಂದಾಗಿ ಪ್ರಶ್ನಿಸುತ್ತಾ, ಪ್ರಯೋಗಗಳ ಮೂಲಕ ಸತ್ಯವನ್ನು ಹೊರತಂದಾಗ ಮತಧರ್ಮವು ವಿಜ್ಞಾನವನ್ನು ನಿಂದಿಸುತ್ತಾ ಅವಹೇಳನಕ್ಕೆ ಗುರಿಮಾಡುತ್ತಾ, ಪರಲೋಕದ ಕಲ್ಪನೆಯನ್ನು ಇನ್ನಷ್ಟು ಪ್ರಖರವಾಗಿ ತರುವುದರ ಮೂಲಕ ಮತಾಂಧತೆಯನ್ನು ಬೆಳೆಸುತ್ತಾ ಬಂತು; ಬೆಳೆಸುತ್ತಲೇ ಇದೆ. ಧರ್ಮ ಚಿರಂತನವಾದದ್ದು, ಆದರೆ ವಿಜ್ಞಾನ ಹೀಗಲ್ಲವೆಂದು ಬೋಧಿಸುತ್ತಾ ಮತಧರ್ಮ ಪಂಥಗಳು ನಿರಂತರವಾಗಿ ತಮ್ಮ ವಾದ ಸಿದ್ಧಾಂತಗಳನ್ನು ಬದಲಿಸುತ್ತಲೇ ಇರುತ್ತವೆ. ಧರ್ಮಕ್ಕೆ ಶರಣಾದಲ್ಲಿ ಮಾತ್ರವೇ ವಿಜ್ಞಾನ ಉಳಿಯುತ್ತದೆ ಎನ್ನುವುದು ಇಂದಿನ ಧರ್ಮ ಪೀಠಗಳ ವಾದ. ಈ ವಾದದಲ್ಲಿ ಎಷ್ಟು ಹುರುಳಿದೆಯೆಂಬುದನ್ನು ಮಂಥನ ಮಾಡಿ ತಿಳಿಯಬೇಕು.

– ಆರ್. ಎಸ್. ರಾಜಾರಾಮ್

(ಕೃಪೆ : ಆಕಾಶವಾಣಿ)

ಕಲಾವಿದ ಪಿ. ಆರ್. ತಿಪ್ಪೇಸ್ವಾಮಿಯವರ ವರ್ಣ ಚಿತ್ರಗಳು







ಛಾಯಾಚಿತ್ರ : ಎಂ. ಜಿ. ವಾಸುದೇವ ರಾವ್







ಛಾಯಾಚಿತ್ರ : ಎಲ್. ಶಿವಲಿಂಗಪ್ಪ

RNI Regn. No. 11308/99 **HOSATHU** Kannada Monthly / June 2000 Rs. 10 REGISTERED CPMG/KA/BG-7/2000

Printed by R. S. Rajaram at Navakarnataka Printers, No. 167 & 168, 10th Main, III Phase, Peenya Industrial Area, Bangalore-560 058 and Published by him for Navakarnataka Publications (P) Ltd., Embassy Centre, Crescent Road, P. B. 5159, Bangalore-560 001. Chief Editor : Dr. G. Ramakrishna